# ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ

ಮೇಲಿನ

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ವರದಿ

ಕರ್ನಾಟಕ ಸರ್ಕಾರ

2025ರ ವರದಿ ಸಂಖ್ಯೆ. 13

(ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ–ಸಿವಿಲ್)

## ವಿಷಯಸೂಚಿ


| ಕಂಡಿಕೆ ಸಂಖ್ಯೆ | ವಿಷಯಗಳು | ಪುಟ ಸಂಖ್ಯೆ |
|---|---|---|
| | ಮುನ್ನುಡಿ | vii |
| | ಕಾರ್ಯನಿರ್ವಹಣಾ ಸಾರಾಂಶ | ix |
| | **ಅಧ್ಯಾಯ I – ಅವಲೋಕನ** | |
| 1.1 | ಪರಿಚಯ | 1 |
| 1.2 | ಕರ್ನಾಟಕದಲ್ಲಿ ಎಂ.ಜಿ.ಎನ್.ಆರ್.ಇ.ಜಿ.ಎ ಅನುಷ್ಠಾನ | 1 |
| 1.3 | ಕರ್ನಾಟಕದಲ್ಲಿ ಎಂಜಿಎನ್‌ಆರ್‌ಇಜಿಎಸ್‌ನ ಸಾಂಸ್ಥಿಕ ರಚನೆ | 1 |
| 1.4 | ಎಂ.ಜಿ.ಎನ್.ಆರ್.ಇ.ಜಿ.ಎಸ್ ಪ್ರಕ್ರಿಯೆಯ ಅವಲೋಕನ | 3 |
| 1.5 | ಧನಸಹಾಯದ ಮಾದರಿ | 3 |
| 1.6 | ನಿರ್ವಹಣಾ ಮಾಹಿತಿ ವ್ಯವಸ್ಥೆ –ಎನ್‌ಆರ್‌ಇಜಿಎ ಸಾಫ್ಟ್ | 4 |
| 1.7 | ಜಿಯೋ ಎಂಜಿಎನ್‌ಆರ್‌ಇಜಿಎ – ಭೌಗೋಳಿಕ ಮಾಹಿತಿ ವ್ಯವಸ್ಥೆ ಅನುಷ್ಠಾನ | 4 |
| | **ಅಧ್ಯಾಯ II– ಲೆಕ್ಕಪರಿಶೋಧನಾ ಚೌಕಟ್ಟು** | |
| 2.1 | ಲೆಕ್ಕಪರಿಶೋಧನಾ ಉದ್ದೇಶಗಳು | 5 |
| 2.2 | ಲೆಕ್ಕಪರಿಶೋಧನಾ ಮಾನದಂಡ | 5 |
| 2.3 | ಲೆಕ್ಕಪರಿಶೋಧನಾ ವ್ಯಾಪ್ತಿ ಮತ್ತು ವಿಧಾನ | 6 |
| 2.4 | ಎಂ.ಜಿ.ಎನ್.ಆರ್.ಇ.ಜಿ.ಎಸ್‌ನ ಕುರಿತ ಹಿಂದಿನ ಲೆಕ್ಕಪರಿಶೋಧನೆಯ ಅವಲೋಕನಗಳು | 7 |
| 2.5 | ಸ್ವೀಕೃತಿ | 7 |
| 2.6 | ಅಧ್ಯಾಯಗಳು | 7 |
| | **ಅಧ್ಯಾಯ III– ಯೋಜನೆ ಮತ್ತು ಹಣಕಾಸು ನಿರ್ವಹಣೆ** | |
| 3.1 | ಕಾರ್ಮಿಕ ಬಜೆಟ್ ತಯಾರಿಕೆ | 10 |
| 3.2 | ಎಂ.ಜಿ.ಎನ್.ಆರ್.ಇ.ಜಿ.ಎಸ್‌ನ ಮಾನವ ಸಂಪನ್ಮೂಲದ ಸ್ಥಿತಿಗತಿ | 17 |
| 3.3 | ಸಹೋದ್ಯೋಗಿಗಳ ನೇಮಕದಲ್ಲಿ ಮಹಿಳೆಯರು ಮತ್ತು ವಿಕಲಚೇತನರಿಗೆ ಆದ್ಯತೆಯ ಕೊರತೆ | 17 |
| 3.4 | ಮಾನವ ಸಂಪನ್ಮೂಲ ಸೇವೆಗಳ ಹೊರಗುತ್ತಿಗೆ | 18 |
| 3.5 | ಎಂ.ಜಿ.ಎನ್.ಆರ್.ಇ.ಜಿ.ಎಸ್ ಗಾಗಿ ನಡೆಸಿದ ಸಾಮರ್ಥ್ಯ ವೃದ್ಧಿ ಚಟುವಟಿಕೆಗಳ ಸ್ಥಿತಿಗತಿ | 22 |
| 3.6 | ಆರ್ಥಿಕ ಸ್ಥಿತಿ | 23 |
| 3.7 | ಹಣ ಬಿಡುಗಡೆಯಲ್ಲಿ ವಿಳಂಬ ಮತ್ತು ಬಡ್ಡಿ ಪಾವತಿಸದಿರುವುದು | 24 |
| 3.8 | ಅನುಮತಿಸಲಾಗದ ಆಡಳಿತಾತ್ಮಕ ವೆಚ್ಚಗಳು | 25 |
| 3.9 | ಆಧಾರ್ ಆಧಾರಿತ ಪಾವತಿಗಳ ಸ್ಥಿತಿಗತಿ | 26 |
| 3.10 | ಬಾಕಿ ಇರುವ ಹೊಣೆಗಾರಿಕೆಗಳು | 26 |
| 3.11 | ವೇತನ ಪಾವತಿಯಲ್ಲಿ ವಿಳಂಬ ಮತ್ತು ಪರಿಹಾರಕ್ಕಾಗಿ ವಿಳಂಬಿತ ದಿನಗಳನ್ನು ನ್ಯಾಯಸಮ್ಮತವಲ್ಲದೆ ತಿರಸ್ಕರಿಸುವುದು | 29 |
| | **ಅಧ್ಯಾಯ IV – ಉದ್ಯೋಗ ಸೃಷ್ಟಿ** | |
| 4.1 | ನೋಂದಣಿ ಮತ್ತು ಜಾಬ್ ಕಾರ್ಡ್‌ಗಳ ವಿತರಣೆ | 34 |

| ಕಂಡಿಕೆ ಸಂಖ್ಯೆ | ವಿಷಯಗಳು | ಪುಟ ಸಂಖ್ಯೆ |
|---|---|---|
| 4.2 | ಉದ್ಯೋಗ ಸೃಷ್ಟಿ | 37 |
| 4.3 | ಸಕ್ರಿಯ ಜಾಬ್ ಕಾರ್ಡಗಳು | 38 |
| 4.4 | 100 ದಿನಗಳ ಉದ್ಯೋಗ ಒದಗಿಸದಿರುವುದು | 38 |
| 4.5 | ವಿಶೇಷ ವರ್ಗದ ವ್ಯಕ್ತಿಗಳಿಗೆ ಒದಗಿಸಲಾದ ಉದ್ಯೋಗ | 39 |
| 4.6 | ಎಂ.ಜಿ.ಎನ್.ಆರ್.ಇ.ಜಿ.ಎಸ್‌ನ ಕಾರ್ಮಿಕರಿಗೆ ಯೋಜನೆಯ ಪ್ರಯೋಜನಗಳ ನಿರಾಕರಣೆ | 41 |
| 4.7 | ಮಾಹಿತಿ, ಶಿಕ್ಷಣ ಮತ್ತು ಸಂವಹನ (ಐಇಸಿ) ಚಟುವಟಿಕೆಗಳು | 42 |
| 4.8 | ನಿರುದ್ಯೋಗ ಭತ್ಯೆ ಪಾವತಿಸದಿರುವುದು | 45 |
| | **ಅಧ್ಯಾಯ V– ಕಾಮಗಾರಿಗಳ ಕಾರ್ಯಗತಗೊಳಿಸುವಿಕೆ** | |
| 5.1 | ಕಾಮಗಾರಿಗಳ ಪೂರ್ಣಗೊಂಡ ಸ್ಥಿತಿ | 50 |
| 5.2 | ಒಮ್ಮುಖ ಕಾಮಗಾರಿಗಳ ಅನುಷ್ಠಾನ | 52 |
| 5.3 | ಜಿಲ್ಲಾ/ತಾಲ್ಲೂಕು ಮಟ್ಟದಲ್ಲಿ ತಾಂತ್ರಿಕ ಸಮಿತಿಗಳನ್ನು ರಚಿಸದಿರುವುದು | 63 |
| 5.4 | ಅಂದಾಜುಗಳ ತಯಾರಿಕೆಯಲ್ಲಾದ ವ್ಯತ್ಯಾಸಗಳು | 64 |
| 5.5 | ವೈಯಕ್ತಿಕ ಆಸ್ತಿಗಳನ್ನು ರಚಿಸುವ ಕಾಮಗಾರಿಗಳ ಮೇಲೆ ಅಕ್ರಮ ವೆಚ್ಚ | 66 |
| 5.6 | ಕಾಮಗಾರಿಗಳ ಅಕ್ರಮ ವಿಭಜನೆ | 67 |
| 5.7 | ಮಂಜೂರಾತಿಗಿಂತ ಹೆಚ್ಚಿನ ವೆಚ್ಚ | 69 |
| 5.8 | ಮಂಜೂರಾದ ಅಂದಾಜಿನ ಶೇಕಡಾ ಐದಕ್ಕಿಂತ ಕಡಿಮೆ ವೆಚ್ಚದ ನಂತರವೂ ಪೂರ್ಣಗೊಂಡಿವೆ ಎಂದು ವರದಿಯಾಗಿರುವ ಕಾಮಗಾರಿಗಳು | 69 |
| 5.9 | ಸಾಮಗ್ರಿ ಪಾವತಿಗಾಗಿ ಏಜೆನ್ಸಿಗಳಿಗೆ ಅಕ್ರಮ ವೆಚ್ಚ | 71 |
| 5.10 | ಕೃಷಿ ಸಂಬಂಧಿತ ಕಾಮಗಾರಿಗಳು ಮತ್ತು ನೈಸರ್ಗಿಕ ಸಂಪನ್ಮೂಲ ನಿರ್ವಹಣಾ ಕಾಮಗಾರಿಗಳ ಮೇಲಿನ ವೆಚ್ಚದ ಗುರಿಗಳನ್ನು ಸಾಧಿಸದಿರುವುದು | 71 |
| 5.11 | ಮಿಷನ್ ಅಮೃತ್ ಸರೋವರ್–ಮಾನದಂಡಗಳನ್ನು ಕಡೆಗಣಿಸಿ ಕಾರ್ಯಗತಗೊಳಿಸಿದ ಕಾಮಗಾರಿಗಳು | 72 |
| 5.12 | ಕ್ಲಸ್ಟರ್ ಫೆಸಿಲಿಟೇಶನ್ ಯೋಜನೆಯ ಉದ್ದೇಶಗಳನ್ನು ಸಾಧಿಸದಿರುವುದು | 73 |
| 5.13 | ಉನ್ನತಿ ಯೋಜನೆಯ ಅನುಷ್ಠಾನ | 75 |
| 5.14 | ಪರೀಕ್ಷಾ–ತನಿಖೆ ನಡೆಸಿದ ಕಾಮಗಾರಿಗಳ ಅನುಷ್ಠಾನದಲ್ಲಿ ಇತರ ಅಕ್ರಮಗಳು/ ನ್ಯೂನತೆಗಳು | 76 |
| 5.15 | ಕಾಮಗಾರಿಯ ಸ್ಥಳಗಳಲ್ಲಿ ಸೌಲಭ್ಯಗಳನ್ನು ಒದಗಿಸದಿರುವುದು | 85 |
| | **ಅಧ್ಯಾಯ VI– ಮೇಲ್ವಿಚಾರಣೆ, ಸಾಮಾಜಿಕ ಲೆಕ್ಕಪರಿಶೋಧನೆ ಮತ್ತು ಕುಂದುಕೊರತೆ ಪರಿಹಾರ** | |
| 6.1 | ರಾಜ್ಯ ಉದ್ಯೋಗ ಖಾತರಿ ಮಂಡಳಿಯ ಕಾರ್ಯನಿರ್ವಹಣೆ | 88 |
| 6.2 | ರಾಜ್ಯ ಜಾಗೃತ ಕೋಶದ ರಚನೆ ಮತ್ತು ಅದರ ಕಾರ್ಯನಿರ್ವಹಣೆ | 88 |
| 6.3 | ಗುಣಮಟ್ಟ ನಿರ್ವಹಣಾ ಕಾರ್ಯವಿಧಾನದಲ್ಲಿನ ನ್ಯೂನತೆಗಳು | 89 |
| 6.4 | ಸಾಮಾಜಿಕ ಲೆಕ್ಕಪರಿಶೋಧನೆ | 91 |

| ಕಂಡಿಕೆ ಸಂಖ್ಯೆ | ವಿಷಯಗಳು | ಪುಟ ಸಂಖ್ಯೆ |
|---|---|---|
| 6.5 | ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಮೇಲ್ವಿಚಾರಣಾ ಸಮಿತಿಗಳು (ಡಿಐಎಸ್‌ಎಚ್‌ಎಗಳು) ಮತ್ತು ರಾಜ್ಯ ಮಟ್ಟದ ದಿಶಾ ಸಮಿತಿಗಳ ರಚನೆ | 100 |
| 6.6 | ಕುಂದುಕೊರತೆ ನಿವಾರಣಾ ಕಾರ್ಯವಿಧಾನ | 100 |
| 6.7 | ಸಾರ್ವಜನಿಕ ತನಿಖಾಧಿಕಾರಿ | 101 |
| 6.8 | ಕಾಮಗಾರಿಗಳ ಫಲಿತಾಂಶದ ದೃಷ್ಟಿಕೋನ | 103 |
| 6.9 | ಪರಿಣಾಮದ ಮೌಲ್ಯಮಾಪನ | 103 |
| 6.10 | ಉತ್ತಮ ಉಪಕ್ರಮಗಳು | 104 |
| | **ಅನುಬಂಧಗಳು** | 107 |
| | **ಪದಕೋಶ** | |

## ಅನುಬಂಧಗಳ ಪಟ್ಟಿ



| ಅನುಬಂಧ ಸಂಖ್ಯೆ | ವಿಷಯಗಳು | ಕಂಡಿಕೆ | ಪುಟ ಸಂಖ್ಯೆ |
|---|---|---|---|
| 1.1 | ಎಂಜಿಎನ್‌ಆರ್‌ಇಜಿಎಸ್ ಅನುಷ್ಠಾನಕ್ಕಾಗಿ ವಿವಿಧ ಹಂತಗಳಲ್ಲಿ ಸಾಂಸ್ಥಿಕ ಕಾರ್ಯವಿಧಾನ ಮತ್ತು ಪಾತ್ರಗಳು ಮತ್ತು ಜವಾಬ್ದಾರಿಗಳು | 1.3 | 107 |
| 2.1 | ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಾಗಿ ಮಾದರಿ ಯೋಜನೆ | 2.3 | 109 |
| 2.2 | ಮಾದರಿ ಜಿಲ್ಲೆಗಳು, ತಾಲ್ಲೂಕುಗಳು ಮತ್ತು ಗ್ರಾಮ ಪಂಚಾಯಿತಿಗಳ ವಿವರಗಳನ್ನು ತೋರಿಸುವ ತ:ಖ್ತೆ | 2.3 | 110 |
| 2.3 | ಮಾರ್ಚ್ 2012ಕ್ಕೆ ಕೊನೆಗೊಂಡ ವರ್ಷದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಮೇಲಿನ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಯ (2013ರ ವರದಿ ಸಂಖ್ಯೆ 7–ಕರ್ನಾಟಕ ಸರ್ಕಾರ) ಕುರಿತು ಕರ್ನಾಟಕ ವಿಧಾನಸಭೆಯ ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯ 33ನೇ ವರದಿಯಲ್ಲಿ ಒಳಗೊಂಡಿರುವ ಶಿಫಾರಸುಗಳ ಸಾರಾಂಶ | 2.4 | 111 |
| 3.1 | ಎಮ್‌ಐಎಸ್ ಆರ್2.1.2ರ ಕೆಲಸ ಯೋಜನಾ ದತ್ತಾಂಶಕ್ಕೆ ಹೋಲಿಸಿದಾಗ ಜಿಲ್ಲಾ ಪಂಚಾಯಿಗಳು ಯೋಜಿಸಿದ ಕಾಮಗಾರಿಗಳ ಸಂಖ್ಯೆ ಮತ್ತು ಅಂದಾಜು ಮಾನವ ದಿನಗಳಲ್ಲಿನ ವ್ಯತ್ಯಾಸಗಳು | 3.1.1 | 112 |
| 3.2 | ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ ಪ್ರಸ್ತಾವಿಸಿದ, ಅನುಮೋದಿಸಲಾದ ಮತ್ತು ಉತ್ಪಾದಿಸಲಾದ ಪಿಡಿಗಳು | 3.1.2 | 113 |
| 3.3 | ಯೋಜನೆಗಾಗಿ ಸೂಚಿಸಲಾದ ಕಾಲಮಿತಿ | 3.1.4 | 114 |
| 3.4 | ಜಿಎಸ್‌ಟಿ ಮೇಲಿನ ತಪ್ಪಿಸಬಹುದಾದ ವೆಚ್ಚವನ್ನು ತೋರಿಸುವ ತ:ಖ್ತೆ | 3.4.3 | 115 |
| 3.5 | ನಿಧಿ ಬಿಡುಗಡೆಯಲ್ಲಿ ವಿಳಂಬ ಮತ್ತು ಬಡ್ಡಿ ಪಾವತಿಸದಿರುವುದು (₹36.26 ಕೋಟಿ) | 3.7 | 116 |
| 3.6 | ಎಂ.ಜಿ.ಎನ್.ಆರ್.ಇ.ಜಿ.ಎಸ್‌ಗೆ ಸಂಬಂಧಸಿಲ್ಲದ ಚಟುವಟಿಕೆಗಳಿಗೆ ಅನುಮತಿಸಲಾಗದೆ ಮಾಡಿದ ವೆಚ್ಚದ ವಿವರಗಳು | 3.8.2 | 118 |
| 3.7 | (ಎ) ವೇತನ ಘಟಕಕ್ಕೆ ಸಂಬಂಧಿಸಿದಂತೆ ವಿಫಲ/ತಿರಸ್ಕೃತ ವಹಿವಾಟುಗಳ ಸ್ಥಿತಿ | 3.10 | 119 |
| | (ಬಿ) ನುರಿತ ಮತ್ತು ಅರೆ–ನುರಿತ ವೇತನಗಳು ಸೇರಿದಂತೆ ಸಾಮಗ್ರಿಗಳಿಗೆ ಸಂಬಂಧಿಸಿದಂತೆ ವಿಫಲ/ತಿರಸ್ಕೃತ ವಹಿವಾಟುಗಳ ಸ್ಥಿತಿ | 3.10 | 119 |
| 3.8 | ವೇತನ ಪಾವತಿಗೆ ನಿಗದಿಪಡಿಸಿದ ಕಾಲಮಿತಿ | 3.11 | 120 |
| 3.9 | 400 ಪರೀಕ್ಷಾ–ತನಿಖೆ ನಡೆಸಿದ ಕಾಮಗಾರಿಗಳ 761 ಎನ್‌ಎಮ್‌ಆರ್ ಗಳಲ್ಲಾದ ವಿಳಂಬಿತ ಪರಿಹಾರದ ವಿಶ್ಲೇಷಣೆ | 3.11 | 121 |
| 4.1 | ನೋಂದಾಯಿತ ಕುಟುಂಬಗಳಿಗೆ ನಿಗದಿತ ಜಾಬ್ ಕಾರ್ಡ್ ಗಳನ್ನು ನೀಡದಿರುವುದು | 4.1.2 | 122 |
| 4.2 | ಸಾಮಾಜಿಕ ಅರಣ್ಯಶಾಸ್ತ್ರದ ಡೇಟಾ ಶೀಟ್ ಗಳಲ್ಲಿನ ಅಸಂಗತತೆಗಳ ನಿದರ್ಶನಾತ್ಮಕ ಪ್ರಕರಣಗಳು | 4.6 | 123 |

| ಅನುಬಂಧ ಸಂಖ್ಯೆ | ವಿಷಯಗಳು | ಕಂಡಿಕೆ | ಪುಟ ಸಂಖ್ಯೆ |
|---|---|---|---|
| 4.3 | ಎಂಜಿಎನ್‌ಆರ್‌ಇಜಿಎಸ್ ಫಲಾನುಭವಿಗಳ ಮೂಲಕ ಕಾರ್ಯಗತಗೊಳಿಸಬಹುದಾದ ಚಟುವಟಿಕೆಗಳಿಗಾಗಿ ಏಜೆನ್ಸಿಗಳಿಗೆ ಮಾಡಿದ ಪಾವತಿಗಳ ಗ್ರಾಮ ಪಂಚಾಯಿತಿವಾರು ವಿವರಗಳು | 4.6 | 124 |
| 4.4 | 2019–20ರಿಂದ 2023–24ರ ಅವಧಿಯಲ್ಲಿ ಪರೀಕ್ಷಾ–ತನಿಖೆಗೆ ಒಳಗಾದ ಜಿಲ್ಲೆಗಳಲ್ಲಿ ಯೋಜಿಸಲಾದ ಮತ್ತು ನಡೆಸಲಾದ ಐಇಸಿ ಚಟುವಟಿಕೆಗಳ ಗುರಿಗಳು ಮತ್ತು ಸಾಧನೆಗಳ ವಿವರಗಳು | 4.7.1 | 125 |
| 4.5 | ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ ಉದ್ಯೋಗ ದಿವಸ್ ಆಯೋಜನೆಯ ವಿವರಗಳು | 4.7.2 | 127 |
| 4.6 | ಬೇಡಿಕೆಯ ಮೇರೆಗೆ ಉದ್ಯೋಗ ಒದಗಿಸದಿರುವುದು ಮತ್ತು ಪಾವತಿಸಬೇಕಾದ ನಿರುದ್ಯೋಗ ಭತ್ಯೆಯ ವಿವರಗಳು | 4.8 | 128 |
| 5.1 | ಅಪೂರ್ಣ ಕಾಮಗಾರಿಗಳ ಮೇಲಿನ ವೆಚ್ಚ | 5.1 | 129 |
| 5.2 | ಗೃಹ ಕಾಮಗಾರಿಗಳಲ್ಲಿ ಅಕ್ರಮವಿರುವ ನಿದರ್ಶನಾತ್ಮಕ ಪ್ರಕರಣಗಳು | 5.2.2 | 130 |
| 5.3 | ಪರೀಕ್ಷಾ–ತನಿಖೆ ನಡೆಸಿದ ಗ್ರಾಮ ಪಂಚಾಯಿತಿಗಳಲ್ಲಿ ವಸತಿ ಕಾಮಗಾರಿಗಳ ಮೇಲೆ ಅಕ್ರಮ ವೆಚ್ಚ | 5.2.2 | 137 |
| 5.4 | ಅರೆ ನುರಿತ ಮತ್ತು ನುರಿತ ಕಾರ್ಮಿಕರಿಗೆ ಅವಕಾಶ ಕಲ್ಪಿಸಿದ್ದರೂ ಯಾವುದೇ ವೆಚ್ಚ ಮಾಡದ 37 ಕಾಮಗಾರಿಗಳ ವಿವರ | 5.4.1 | 138 |
| 5.5 | ವಾಸ್ತವಿಕ ವೆಚ್ಚಕ್ಕೆ ಹೋಲಿಸಿದರೆ ವಸ್ತುಗಳ ಅಂದಾಜು ವೆಚ್ಚದಲ್ಲಿ ವ್ಯತ್ಯಾಸಗಳನ್ನು (ಶೇಕಡಾ 50ಕ್ಕಿಂತ ಹೆಚ್ಚು) ಹೊಂದಿರುವ 22 ಕಾಮಗಾರಿಗಳ ವಿವರಗಳು | 5.4.1 | 139 |
| 5.6 | ಸಂಬಂಧಪಟ್ಟ ಎಚ್‌ಎಚ್ ಫಲಾನುಭವಿಗಳು ಕೆಲಸ ಮಾಡದ ವೈಕ್ತಿಗತ ಕಾಮಗಾರಿಗಳ ವಿವರಗಳು | 5.5 | 140 |
| 5.7 | 13 ಗ್ರಾಮ ಪಂಚಾಯಿತಿಗಳಲ್ಲಿ ಕಾಮಗಾರಿಗಳ ವಿಭಜನೆಯನ್ನು ತೋರಿಸುವ ತ:ಖ್ತೆ | 5.6 | 141 |
| 5.8 | ಮಂಜೂರಾದ ವೆಚ್ಚಕ್ಕಿಂತ ಹೆಚ್ಚಿನ ವೆಚ್ಚ ಭರಿಸಿರುವುದು | 5.7 | 143 |
| 5.9 | ಪೂರ್ಣಗೊಂಡಿದೆ ಎಂದು ತೋರಿಸಲಾದ ಕಾಮಗಾರಿಗಳ ಮೇಲಿನ ವೆಚ್ಚ (ವೆಚ್ಚದ ಶೇಕಡಾ 5ಕ್ಕಿಂತ ಕಡಿಮೆ) | 5.8 | 144 |
| 5.10 | ಫಲಾನುಭವಿಗಳ ಬ್ಯಾಂಕ್ ಖಾತೆಗಳ ಬದಲಿಗೆ ಏಜೆನ್ಸಿಗಳಿಗೆ ಪಾವತಿಸಿದ ಪ್ರತಿ ಕಾಮಗಾರಿಗಳ ಸಾಮಗ್ರಿಗಳ ವೆಚ್ಚವನ್ನು ತೋರಿಸುವ ವಿವರಗಳು | 5.9 | 145 |
| 5.11 | 2019–20 ರಿಂದ 2023–24 ರ ಅವಧಿಯಲ್ಲಿ ಕೃಷಿ ಮತ್ತು ಸಂಬಂಧಿತ ಕಾಮಗಾರಿಗಳ ಮೇಲೆ ಶೇಕಡಾ 60 ಕ್ಕಿಂತ ಕಡಿಮೆ ವೆಚ್ಚ ಮಾಡಿದ ಜಿಲ್ಲೆಗಳ ವಿವರಗಳು | 5.10 | 146 |
| 5.12 | ಕ್ಲಸ್ಟರ್ ಫೆಸಿಲಿಟೇಶನ್ ಯೋಜನಾ ಪ್ರಗತಿ ವರದಿ (2023–24) | 5.12 | 147 |
| 5.13 | ಅನಧಿಕೃತ ಮಸ್ಟರ್ ರೋಲ್ ಗಳ ಮೇಲೆ ಪಾವತಿ | 5.14.7 | 149 |
| 5.14 | ಕಾಮಗಾರಿ ಪ್ರಾರಂಭವಾದ ನಂತರ ಮುದ್ರಿಸಲಾದ ಮಸ್ಟರ್ ರೋಲ್ ಗಳ ಮೇಲೆ ಪಾವತಿ | 5.14.7 | 150 |
| 5.15 | ಟೆಂಡರ್ ಕರೆಯದೆ ಸಾಮಗ್ರಿಗಳ ಖರೀದಿ | 5.14.8 | 151 |
| 6.1 | ಎಸ್ ಕ್ಯೂಎಂಗಳಿಗೆ ತವರು ಜಿಲ್ಲೆಗಳ ಅನಿಯಮಿತ ಹಂಚಿಕೆ | 6.3.1 | 152 |

| ಅನುಬಂಧ ಸಂಖ್ಯೆ | ವಿಷಯಗಳು | ಕಂಡಿಕೆ | ಪುಟ ಸಂಖ್ಯೆ |
|---|---|---|---|
| 6.2 | ಎಸ್ ಕ್ಯೂಎಂನಿಂದ ಕಾಮಗಾರಿಗಳ ಪರಿಶೀಲನೆಯಲ್ಲಿನ ಗುರಿಗಳು ಮತ್ತು ಸಾಧನೆಗಳ ವಿವರಗಳು | 6.3.1 | 153 |
| 6.3 | ಕರ್ನಾಟಕದ ಎಸ್‌ಎಯು ನ ಸಾಂಸ್ಥಿಕ ರಚನೆ | 6.4 | 154 |
| 6.4 | ಹಣಕಾಸು ನಿರ್ವಹಣೆ (ಸಾಮಾಜಿಕ ಲೆಕ್ಕಪರಿಶೋಧನಾ ನಿರ್ದೇಶನಾಲಯ) | 6.4.3 | 155 |
| 6.5 | ಸಾಮಾಜಿಕ ಲೆಕ್ಕಪರಿಶೋಧನಾ ಘಟಕಕ್ಕೆ ಹಣ ಬಿಡುಗಡೆಯಲ್ಲಿ ವಿಳಂಬ | 6.4.4 | 156 |
| 6.6 | ಎಸ್.ಎ.ಯು.ಯಿಂದ ವೆಚ್ಚದ ಪರಿಶೀಲನೆ ಮಾಡದಿರುವುದು | 6.4.7 | 157 |
| 6.7 | ರಾಜ್ಯದಲ್ಲಿ ವರದಿಯಾದ ಸಾಮಾಜಿಕ ಲೆಕ್ಕಪರಿಶೋಧನಾ ಪ್ರಕರಣಗಳು (ವರ್ಗವಾರು) | 6.4.8 | 158 |
| 6.8 | ಪಾವತಿಯ ಮೊತ್ತವನ್ನು ಖಾತರಿಪಡಿಸದೆ ಸಾಮಾಜಿಕ ಲೆಕ್ಕಪರಿಶೋಧನಾ ಅವಲೋಕನಗಳನ್ನು ಮುಕ್ತಾಯಗೊಳಿಸಿರುವುದು | 6.4.8 | 159 |
| 6.9 | ಸಾಮಾಜಿಕ ಲೆಕ್ಕಪರಿಶೋಧನೆಯ ಸಂಶೋಧನೆಗಳ ವಸೂಲಾತಿಯಾಗಿ ಸಂಗ್ರಹಿಸಿದ ಡಿಡಿಗಳನ್ನು ಮರು ಮೌಲ್ಯೀಕರಿಸದಿರುವುದು | 6.4.8 | 160 |
| 6.10 | ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ ನಡೆದ ಜಿಲ್ಲಾ ಮಟ್ಟದ ದಿಶಾ ಸಮಿತಿ ಸಭೆಗಳ ವಿವರ | 6.5 | 161 |
| 6.11 | ಮೇಲ್ಮನವಿ ಪ್ರಾಧಿಕಾರವು ವಿಲೇವಾರಿ ಮಾಡಿದ ಪ್ರಾತಿನಿಧ್ಯಗಳ (ಮೇಲ್ಮನವಿಗಳು) ವಿವರಗಳು | 6.7 | 162 |

## ಮುನ್ನುಡಿ

1. 31 ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷದ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ಈ ವರದಿಯನ್ನು ಭಾರತದ ಸಂವಿಧಾನದ ಅನುಚ್ಛೇದ 151(2)ರ ಅಡಿಯಲ್ಲಿ ರಾಜ್ಯ ಶಾಸಕಾಂಗದಲ್ಲಿ ಮಂಡಿಸಲು ಕರ್ನಾಟಕ ರಾಜ್ಯಪಾಲರಿಗೆ ಸಲ್ಲಿಸಲು ಸಿದ್ಧಪಡಿಸಲಾಗಿದೆ

2. 2019–20ರಿಂದ 2023–24ರ ಅವಧಿಯನ್ನು ಒಳಗೊಂಡ ವರದಿಯು 'ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ'ಯ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಫಲಿತಾಂಶಗಳನ್ನು ಒಳಗೊಂಡಿದೆ.

3. ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಹೊರಡಿಸಿದ ಲೆಕ್ಕಪರಿಶೋಧನಾ ಮಾನದಂಡಗಳಿಗೆ ಅನುಗುಣವಾಗಿ ಲೆಕ್ಕಪರಿಶೋಧನೆಯನ್ನು ನಡೆಸಲಾಗಿದೆ.

4. ಈ ಭಾಷಾಂತರಿಸಿದ ವರದಿಯಲ್ಲಿನ ಯಾವುದೇ ಸಂದೇಹಗಳಿಗೆ ಆಂಗ್ಲ ಭಾಷಾ ಆವೃತ್ತಿಯೇ ಅಧಿಕೃತವೆಂದು ಪರಿಗಣಿಸಬೇಕು.

# ಕಾರ್ಯನಿರ್ವಹಣಾ ಸಾರಾಂಶ

## ಕಾರ್ಯನಿರ್ವಹಣಾ ಸಾರಾಂಶ

### ನಾವು ಈ ವಿಷಯವನ್ನು ಏಕೆ ಆರಿಸಿದೆವು?

ಉದ್ಯೋಗ ಸೃಷ್ಟಿ ಕಾರ್ಯಕ್ರಮಗಳು ಬಡತನವನ್ನು ಕಡಿಮೆ ಮಾಡಲು ಸರ್ಕಾರದ ಉಪಕ್ರಮಗಳ ಪ್ರಮುಖ ಅಂಶವಾಗಿದೆ. ಭಾರತ ಸರ್ಕಾರ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ, 2005 ಅನ್ನು ಜಾರಿಗೆ ತಂದಿತು (ಸೆಪ್ಟೆಂಬರ್ 2005), ತರುವಾಯ ಅಕ್ಟೋಬರ್ 2009ರಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ (ಎಂ.ಜಿ.ಎನ್.ಆರ್.ಇ.ಜಿ) ಎಂದು ಮರುನಾಮಕರಣ ಮಾಡಿತು. ಕೌಶಲ್ಯರಹಿತ ದೈಹಿಕ ಕೆಲಸ ಮಾಡಲು ಸ್ವಯಂಪ್ರೇರಿತರಾಗಿ ಕಾರ್ಯನಿರ್ವಹಿಸುವ ವಯಸ್ಕ ಸದಸ್ಯರ ಪ್ರತಿ ಕುಟುಂಬಕ್ಕೆ ಪ್ರತಿ ಹಣಕಾಸು ವರ್ಷದಲ್ಲಿ ಕನಿಷ್ಠ 100 ದಿನಗಳ ಖಚಿತ ವೇತನ ಉದ್ಯೋಗವನ್ನು ಒದಗಿಸುವ ಮೂಲಕ ದೇಶದ ಗ್ರಾಮೀಣ ಪ್ರದೇಶಗಳಲ್ಲಿನ ಕುಟುಂಬಗಳ ಜೀವನೋಪಾಯ ಭದ್ರತೆಯನ್ನು ಹೆಚ್ಚಿಸುವುದು ಕಾಯಿದೆ ಉದ್ದೇಶವಾಗಿತ್ತು.

ಕರ್ನಾಟಕ ಸರ್ಕಾರವು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ, 2005ರಡಿಯಲ್ಲಿ ಅಗತ್ಯವಿರುವ 'ಕರ್ನಾಟಕ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ'ಯನ್ನು ಅಧಿಸೂಚಿಸಿತು (ಫೆಬ್ರವರಿ 2007). ಅಕ್ಟೋಬರ್ 2009ರಿಂದ, ಈ ಯೋಜನೆಯನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ಎಂ.ಜಿ.ಎನ್.ಆರ್.ಇ.ಜಿ.ಎಸ್) ಎಂದು ಮರುನಾಮಕರಣ ಮಾಡಲಾಯಿತು, ಇದು ಕಾಯಿದೆಯ ಅನುಸೂಚಿ–1 ರಲ್ಲಿ ನಿಗದಿಪಡಿಸಿರುವ ಕನಿಷ್ಠ ವಿಶಿಷ್ಟತೆಗಳನ್ನು ಒದಗಿಸಿತ್ತು.

ಈ ಕೆಳಗಿನ ಅಂಶಗಳನ್ನು ನಿರ್ಧರಿಸಲು "ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ"ಯ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಜೂನ್ 2024ರಿಂದ ಸೆಪ್ಟೆಂಬರ್ 2024ರವರೆಗೆ ನಡೆಸಲಾಯಿತು. (i) ಸಂಬಂಧಿತ ನಿಯಮಗಳು ಮತ್ತು ನಿಬಂಧನೆಗಳಿಗೆ ಬದ್ಧವಾಗಿದ್ದು ಯೋಜನಾ ಪ್ರಕ್ರಿಯೆ ಮತ್ತು ಹಣಕಾಸು ನಿರ್ವಹಣಾ ಅಭ್ಯಾಸಗಳು ಕಾಯಿದೆಯ ಗುರಿಗಳನ್ನು ಸಾಧಿಸಲು ಸಮರ್ಪಕವಾಗಿ ಸಜ್ಜಾಗಿವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು; (ii) ಉದ್ಯೋಗಾವಕಾಶಗಳಿಗೆ ನ್ಯಾಯಯುತ ಅವಕಾಶವನ್ನು ನೀಡಲಾಯಿತೆ, ಜೊತೆಗೆ ಉದ್ಯೋಗವನ್ನು ಸಮರ್ಪಕವಾಗಿ ಸೃಷ್ಟಿಸಲಾಯಿತೆ, ಅದು ಸಾಮಾಜಿಕ ರಕ್ಷಣೆ ಮತ್ತು ಜೀವನೋಪಾಯದ ಭದ್ರತೆಗೆ ಕಾರಣವಾಯಿತೆ; (iii) ಇತರ ಕಾರ್ಯಕ್ರಮಗಳು/ಯೋಜನೆಗಳೊಂದಿಗೆ ಒಮ್ಮುಖತೆಯನ್ನು ಖಚಿತಪಡಿಸಿಕೊಂಡು ನಿಯಮಗಳು ಮತ್ತು ನಿಬಂಧನೆಗಳಿಗೆ ಅನುಸಾರವಾಗಿ ಬಾಳಿಕೆ ಬರುವ ಮತ್ತು ಉಪಯುಕ್ತ ಸ್ವತ್ತುಗಳನ್ನು ರಚಿಸಿ ನಿರ್ವಹಿಸಲಾಯಿತೆ; ಮತ್ತು (iv) ಸೂಕ್ತ ಮತ್ತು ಸಮರ್ಪಕ ಮೇಲ್ವಿಚಾರಣೆ, ಸಾಮಾಜಿಕ ಲೆಕ್ಕಪರಿಶೋಧನೆ ಮತ್ತು ಕುಂದುಕೊರತೆ ಪರಿಹಾರ ವ್ಯವಸ್ಥೆಗಳು ಜಾರಿಯಲ್ಲಿದ್ದವೆ ಮತ್ತು ಹೆಚ್ಚಿನ ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ಸಾಧಿಸಲು ಯೋಜಿಸಿದಂತೆ ಕಾರ್ಯನಿರ್ವಹಿಸುತ್ತಿದ್ದವೆ.

### ನಾವು ಏನನ್ನು ಕಂಡುಹಿಡಿದೆವು?

**ಯೋಜನೆ ಮತ್ತು ಹಣಕಾಸು ನಿರ್ವಹಣೆ**

ಕಾರ್ಮಿಕ ಆಯವ್ಯಯದ ತಯಾರಿಕೆಯಲ್ಲಿ ತಳಮಟ್ಟದ ವಿಧಾನವನ್ನು ಅನುಸರಿಸದ ಕಾರಣ ಎಂ.ಜಿ.ಎನ್.ಆರ್.ಇ.ಜಿ.ಎಸ್ ಅಡಿಯಲ್ಲಿ ಉದ್ಯೋಗದ ಬೇಡಿಕೆಯ ಮೌಲ್ಯಮಾಪನದ ಕೊರತೆಯಿದ್ದಿತು. ಉದ್ಯೋಗದ ಬೇಡಿಕೆಯ ಪ್ರಮಾಣ ಮತ್ತು ಸಮಯವನ್ನು ನಿರ್ಣಯಿಸಲು ಜಾಬ್ ಕಾರ್ಡ್ ಹೊಂದಿರುವವರ ತಳಮಟ್ಟದ ಸಮೀಕ್ಷೆಯನ್ನು ನಡೆಸಿರಲಿಲ್ಲ, ಇದು ವಾಸ್ತವಿಕ ಅಭಿವೃದ್ಧಿ ಯೋಜನೆಗಳ ತಯಾರಿಕೆಯ ಮೇಲೆ ಪರಿಣಾಮ ಬೀರಿತು. ಈ ನ್ಯೂನತೆಗಳು ಗ್ರಾಮ ಪಂಚಾಯಿತಿ ಮಟ್ಟದಲ್ಲಿ

ಕ್ರೋಢೀಕರಿಸಲ್ಪಟ್ಟ ಅನುಮೋದಿತ ಕಾರ್ಮಿಕ ಆಯವ್ಯಯದಲ್ಲಿ ಮಾನವ ದಿನಗಳಾಗಿ ದಾಖಲಾದ ಉದ್ಯೋಗದ ಬೇಡಿಕೆಯಲ್ಲಿ ದೊಡ್ಡ ವ್ಯತ್ಯಾಸಕ್ಕೆ ಕಾರಣವಾಯಿತು. ಮೇಲಿನ ನ್ಯೂನತೆಗಳ ಹೊರತಾಗಿ, ಪಂಚಾಯತ್ ರಾಜ್ ಸಂಸ್ಥೆಗಳ ವಿವಿಧ ಹಂತಗಳಲ್ಲಿ ಕಾರ್ಮಿಕ ಆಯವ್ಯಯ ಸಲ್ಲಿಕೆಯಲ್ಲಿ ವಿಳಂಬವಿದ್ದಿತು.

ಗುತ್ತಿಗೆ ನೇಮಕಾತಿಗಾಗಿನ ರಾಜ್ಯದ ಮೀಸಲಾತಿ ನೀತಿಯನ್ನು ಅನುಸರಿಸದೆ ಯೋಜನೆಗೆ ಗುತ್ತಿಗೆ ಸಿಬ್ಬಂದಿಯ ನೇಮಕಾತಿಯನ್ನು ಮಾಡಿದ್ದು ಕಾರ್ಯಾಚರಣಾ ಮಾರ್ಗಸೂಚಿ, 2013ರಲ್ಲಿ ಕಲ್ಪಿಸಿದಂತೆ ಮಹಿಳೆಯರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಂಗವಿಕಲ ವ್ಯಕ್ತಿಗಳು ಇತ್ಯಾದಿಗಳಿಗೆ ಅಸಮರ್ಪಕ ಪ್ರಾತಿನಿಧ್ಯ ನೀಡುವಲ್ಲಿ ಪರಿಣಮಿಸಿತು.

ಯೋಜನೆಯಡಿ ಹೊರಗುತ್ತಿಗೆ ಮಾನವ ಸಂಪನ್ಮೂಲದ ಕೊರತೆ ಇದ್ದಿತು. ಹೊಸ ಟೆಂಡರ್ ಕರೆಯದೆ ಮಾನವ ಸಂಪನ್ಮೂಲ ಸೇವೆಗಳ ಹೊರಗುತ್ತಿಗೆಯ ಒಪ್ಪಂದಗಳನ್ನು ಅನಧಿಕೃತವಾಗಿ ವಿಸ್ತರಿಸಲಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದಲ್ಲದೆ, ಇತರ ಜಿಲ್ಲೆಗಳಲ್ಲಿ ಸೇವೆಗಳನ್ನು ಒದಗಿಸುವ ಮಾನವ ಸಂಪನ್ಮೂಲ ಏಜೆನ್ಸಿಗಳ ನಡುವೆ ಗುತ್ತಿಗೆಗಳನ್ನು ಮರು–ನಿಯೋಜಿಸುವಾಗ ಅತ್ಯಂತ ಸ್ಪರ್ಧಾತ್ಮಕ ದರಗಳನ್ನು ಪಡೆಯಲು ವಿಫಲವಾದ ಕಾರಣ ಇಲಾಖೆಯು ಹೆಚ್ಚುವರಿ ಸೇವಾ ಶುಲ್ಕಗಳನ್ನು ಭರಿಸಬೇಕಾಯಿತು. ಸಾಮರ್ಥ್ಯ ವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ನಡೆಸುವಲ್ಲಿ ಕೊರತೆಯನ್ನು ಸಹ ಲೆಕ್ಕಪರಿಶೋಧನೆಯು ಗಮನಿಸಿತು.

2022–23 ಮತ್ತು 2023–24ರ ಅವಧಿಯಲ್ಲಿ ಯೋಜನೆಯ ವೇತನ ಘಟಕದಡಿಯಲ್ಲಿ ವೆಚ್ಚವು ಇಳಿಕೆ ಪ್ರವೃತ್ತಿಯನ್ನು ತೋರಿಸಿತು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ (ಇಲಾಖೆ) ಸಹ ವರ್ಷದ ಕೊನೆಯಲ್ಲಿ ಹಣವನ್ನು ಬಿಡುಗಡೆ ಮಾಡಿದ್ದರಿಂದ ಸಾಮಗ್ರಿ ಘಟಕದಡಿಯಲ್ಲಿ ಬಿಡುಗಡೆಯಾದ ಸಂಪೂರ್ಣ ಮೊತ್ತವನ್ನು ಬಳಸಿಕೊಳ್ಳಲು ವಿಫಲವಾಗಿತ್ತು. ಈ ಯೋಜನೆಗೆ ಕೇಂದ್ರ ಮತ್ತು ರಾಜ್ಯದ ಪಾಲನ್ನು ಬಿಡುಗಡೆ ಮಾಡುವಲ್ಲಿ ರಾಜ್ಯ ಸರ್ಕಾರವು ವಿಳಂಬ ಮಾಡಿದ್ದರಿಂದ ₹36.26 ಕೋಟಿ ದಂಡದ ಬಡ್ಡಿ ಪಾವತಿಸಬೇಕಿತ್ತು. ಯೋಜನೆಯ ಆಡಳಿತಾತ್ಮಕ ಶೀರ್ಷಿಕೆಯಡಿಯಲ್ಲಿ ₹32.78 ಕೋಟಿಗಳ ಅನುಮತಿಸಲಾಗದ ವೆಚ್ಚವನ್ನು ಸಹ ಲೆಕ್ಕಪರಿಶೋಧನೆಯು ಗಮನಿಸಿತು.

84.98 ಲಕ್ಷ ಸಕ್ರಿಯ ಕಾರ್ಮಿಕರಲ್ಲಿ 3.11 ಲಕ್ಷ ಕಾರ್ಮಿಕರ ಖಾತೆಗಳೊಂದಿಗೆ ಆಧಾರ್ ಮ್ಯಾಪಿಂಗ್ ರಾಜ್ಯ ಮಟ್ಟದಲ್ಲಿ ಬಾಕಿ ಉಳಿದಿತ್ತು (ಮಾರ್ಚ್ 2024), ಈ ಕಾರಣದಿಂದಾಗಿ ವೇತನ ಪಟ್ಟಿಗಳನ್ನು ತಯಾರಿಸುವ ಬಗ್ಗೆ ಮತ್ತು ಈ ಸಕ್ರಿಯ ಕಾರ್ಮಿಕರಿಗೆ ಪಾವತಿಗಳ ಬಗ್ಗೆ ಯಾವುದೇ ಭರವಸೆ ನೀಡಲು ಸಾಧ್ಯವಾಗಲಿಲ್ಲ.

ತಿರಸ್ಕರಿಸಲಾದ ಮತ್ತು ನಂತರ ಪುನರುಜ್ಜೀವನಗೊಳಿಸಲಾದ ಆಧಾರ್ ಆಧಾರಿತ ವೇತನ ಮತ್ತು ಸಾಮಗ್ರಿ ವಹಿವಾಟುಗಳಿಗೆ ಸಂಬಂಧಿಸಿದಂತೆ ₹35.10 ಕೋಟಿ ಬಾಕಿ ಇರುವುದನ್ನು ಗಮನಿಸಲಾಗಿತು. ವೇತನ ಪಾವತಿಯಲ್ಲಿನ ವಿಳಂಬಿತ ಪರಿಹಾರದ ಲೆಕ್ಕಾಚಾರವನ್ನು ಭಾಗಶಃ ವಿಳಂಬದ ಆಧಾರದ ಮೇಲೆ ಫಲಾನುಭವಿಗಳಿಗೆ ಅನಾನುಕೂಲವಾಗುವಂತೆ ಮಾಡಲಾಯಿತು. ತಪ್ಪು ಆಧಾರದ ಮೇಲೆ ಕಾರ್ಯಕ್ರಮ ಅಧಿಕಾರಿಗಳು ₹3.29 ಕೋಟಿ ವಿಳಂಬಿತ ಪರಿಹಾರವನ್ನು ತಿರಸ್ಕರಿಸಿರುವುದನ್ನು ಸಹ ಲೆಕ್ಕಪರಿಶೋಧನೆಯು ಗಮನಿಸಿತು.

**ಉದ್ಯೋಗ ಸೃಷ್ಟಿ**

ಮಾರ್ಚ್ 2024ರಲ್ಲಿದ್ದಂತೆ ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸಿದ 34,499 ಫಲಾನುಭವಿಗಳಿಗೆ ಜಾಬ್ ಕಾರ್ಡ್‌ಗಳ ವಿತರಣೆ ಬಾಕಿ ಉಳಿದಿತ್ತು. ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ ಜಾಬ್ ಕಾರ್ಡ್‌ಗಳು ನಿಗದಿತ ನಮೂನೆಗೆ ಬದ್ಧವಾಗಿರಲಿಲ್ಲ ಮತ್ತು ವಿಕಲಚೇತನರಿಗೆ ವಿಶೇಷ ಜಾಬ್ ಕಾರ್ಡ್‌ಗಳನ್ನು ನೀಡಿರಲಿಲ್ಲ ಎಂಬುದನ್ನು ಗಮನಿಸಲಾಯಿತು.

ಎಂ.ಜಿ.ಎನ್.ಆರ್.ಇ.ಜಿ.ಎ ಪ್ರತಿ ಬೇಡಿಕೆಯ ಕುಟುಂಬಕ್ಕೆ 100 ದಿನಗಳ ಉದ್ಯೋಗವನ್ನು ಖಚಿತಪಡಿಸಿದ್ದರೂ, ನೋಂದಾಯಿತ ಕುಟುಂಬಗಳಿಂದ ಉದ್ಯೋಗದ ಬೇಡಿಕೆಯು ಲೆಕ್ಕಪರಿಶೋಧನಾ

ಅವಧಿಯಲ್ಲಿ ನೀಡಲಾದ ಜಾಬ್ ಕಾರ್ಡ್‌ಗಳ ಶೇಕಡಾ 48ಕ್ಕಿಂತ ಅಧಿಕವಾಗಿರಲಿಲ್ಲ. ಇದಲ್ಲದೆ, ಈ ಅವಧಿಯಲ್ಲಿ ಕನಿಷ್ಠ 100 ದಿನಗಳ ಉದ್ಯೋಗವನ್ನು ಒದಗಿಸಿದ ಕುಟುಂಬಗಳ ಸಂಖ್ಯೆ ಕೇವಲ ಶೇಕಡಾ 5 ಆಗಿದ್ದು ಬಹುಪಾಲು ಕುಟುಂಬಗಳಿಗೆ ಕೇವಲ 1ರಿಂದ 30 ದಿನಗಳ ಉದ್ಯೋಗವನ್ನು ಒದಗಿಸಲಾಗಿತ್ತು.

ಅಲೆಮಾರಿ ಬುಡಕಟ್ಟು ಜನಾಂಗದವರು, ಎಚ್‌ಐವಿ ಪಾಸಿಟಿವ್ ವ್ಯಕ್ತಿಗಳು ಮುಂತಾದ ದುರ್ಬಲ ಗುಂಪುಗಳು ಬೇಡಿಕೆ ಸಲ್ಲಿಸಿದ/ಒದಗಿಸಿದ ಉದ್ಯೋಗದ ದತ್ತಾಂಶವನ್ನು ದಾಖಲಿಸಲು ಎನ್.ಆರ್.ಇ.ಜಿ.ಎ ಸಾಫ್ಟ್ ನಲ್ಲಿ ಅವಕಾಶವಿರಲಿಲ್ಲ. ವಸತಿ ಯೋಜನೆಗಳಡಿಯಲ್ಲಿ ನಿರ್ವಹಿಸಲಾದ ವಿಕಲಚೇತನರು ಮತ್ತು ದುರ್ಬಲ ಗುಂಪು ಫಲಾನುಭವಿಗಳ ದತ್ತಾಂಶದ ಲೆಕ್ಕಪರಿಶೋಧನಾ ಪರಿಶೀಲನೆಯು ಎಂ.ಜಿ.ಎನ್.ಆರ್.ಇ.ಜಿ.ಎಸ್ ಅಡಿಯಲ್ಲಿ ಅಂತಹ ಫಲಾನುಭವಿಗಳನ್ನು ಗಮನಾರ್ಹವಾಗಿ ಹೊರಗಿಡಲಾಗಿತ್ತು ಎಂಬುದನ್ನು ಸೂಚಿಸಿತು.

ಯೋಜನಾ ಮಾರ್ಗಸೂಚಿಗಳಿಗೆ ವಿರುದ್ಧವಾಗಿ, ಮಾರಾಟಗಾರರನ್ನು ನೇಮಿಸಿಕೊಳ್ಳಲಾಗಿತ್ತು ಮತ್ತು ಯೋಜನೆಯಡಿ ಹಸ್ತಚಾಲಿತ (ಕಾರ್ಮಿಕ ಆಧಾರಿತ) ಘಟಕಗಳಿಗೆ ಪಾವತಿಸಿದ್ದರ ಪರಿಣಾಮವಾಗಿ ಫಲಾನುಭವಿಗಳಿಗೆ ಉದ್ಯೋಗಾವಕಾಶಗಳನ್ನು ನಿರಾಕರಿಸಲಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಮಾಹಿತಿ ಶಿಕ್ಷಣ ಮತ್ತು ಸಂವಹನ ಚಟುವಟಿಕೆಗಳು ಮತ್ತು ರೋಜ್ಗಾರ್ ದಿವಸ್ ಅನ್ನು ನಡೆಸುವಲ್ಲಿ ಕೊರತೆಯಿದ್ದುದು ಯೋಜನೆಯಡಿ ಹಕ್ಕುಗಳು/ಅರ್ಹತೆಗಳ ಬಗ್ಗೆ ಫಲಾನುಭವಿಗಳಲ್ಲಿ ಅರಿವಿನ ಕೊರತೆ ಉಂಟಾಗುವುದರಲ್ಲಿ ಪರಿಣಮಿಸಿತು.

ಪರೀಕ್ಷಾ-ತನಿಖೆ ನಡೆಸಿದ ಗ್ರಾಮ ಪಂಚಾಯಿತಿಗಳಲ್ಲಿ ಬೇಡಿಕೆ ರಿಜಿಸ್ಟರ್ ನಿರ್ವಹಣೆ ಮಾಡದಿರುವುದು ಮತ್ತು ಕಾರ್ಮಿಕರ ಬೇಡಿಕೆಯನ್ನು ತಪ್ಪಾಗಿ ದಾಖಲಿಸಿದ ಕಾರಣ ಫಲಾನುಭವಿಗಳಿಗೆ ನೀಡಬೇಕಾದ ನಿರುದ್ಯೋಗ ಭತ್ಯೆಯನ್ನು ನಿಖರವಾಗಿ ನಿರ್ಧರಿಸಲು ಸಾಧ್ಯವಾಗಲಿಲ್ಲ. 2019-20ರಿಂದ 2023-24ರ ಅವಧಿಗೆ ಪಾವತಿಸಬೇಕಾದ ₹1.28 ಕೋಟಿ ನಿರುದ್ಯೋಗ ಭತ್ಯೆ ಕೂಡ ಫಲಾನುಭವಿಗಳಿಗೆ ಪಾವತಿಸಲು ಬಾಕಿ ಉಳಿದಿತ್ತು.

**ಕಾಮಗಾರಿಗಳ ಕಾರ್ಯಗತಗೊಳಿಸುವಿಕೆ**

ಒಂದು ವರ್ಷಕ್ಕೂ ಹೆಚ್ಚು ಕಾಲ ಅಪೂರ್ಣವಾಗಿ ಉಳಿದಿರುವ ಗಮನಾರ್ಹ ಸಂಖ್ಯೆಯ ಕಾಮಗಾರಿಗಳನ್ನು ಹೊರತುಪಡಿಸಿ, ಯೋಜನೆಯಡಿ ಹೆಚ್ಚಿನ ಸಂಖ್ಯೆಯ ಅನುಮೋದಿತ ಕಾಮಗಾರಿಗಳನ್ನು ಕೈಗೆತ್ತಿಕೊಂಡಿರಲಿಲ್ಲ. ನಿಗದಿತ ಸಾಂಸ್ಥಿಕ ಬೆಂಬಲದ ಅನುಪಸ್ಥಿತಿ ಮತ್ತು ಸಂಬಂಧಿತ ಇಲಾಖೆಗಳೊಂದಿಗೆ ಸಮನ್ವಯದ ಕೊರತೆಯಿಂದಾಗಿ ಇತರ ಇಲಾಖೆಗಳ ತಾಂತ್ರಿಕ/ಆರ್ಥಿಕ ಸಂಪನ್ಮೂಲಗಳನ್ನು ಬಳಸಿಕೊಂಡು ಎಂ.ಜಿ.ಎನ್.ಆರ್.ಇ.ಜಿ.ಎಸ್ ಕಾಮಗಾರಿಗಳನ್ನು ಒಟ್ಟುಗೂಡಿಸುವುದು ಪರಿಣಾಮಕಾರಿಯಾಗಿರಲಿಲ್ಲ.

**ವಸತಿ ಕಾಮಗಾರಿಗಳಡಿಯಲ್ಲಿ ಈಗಾಗಲೇ ಪೂರ್ಣಗೊಂಡ ಮನೆಗಳಿಗೆ ಪಾವತಿ, ಅನರ್ಹ ಫಲಾನುಭವಿಗಳಿಗೆ ಪಾವತಿ, ನಿರ್ಮಾಣವನ್ನು ಕೈಗೊಳ್ಳದೆ ಪಾವತಿ, ನಿಗದಿತ ಮಿತಿಗಿಂತ ಹೆಚ್ಚಿನ ಪಾವತಿಗಳು ಮುಂತಾದ ಮೋಸದ ವಹಿವಾಟುಗಳನ್ನು ಗಮನಿಸಲಾಯಿತು. ಅಂತೆಯೇ, ಘನತ್ಯಾಜ್ಯ ನಿರ್ವಹಣಾ ಶೆಡ್ ಗಳು, ಚೆಕ್ ಡ್ಯಾಮುಗಳು ಮತ್ತು ಸಾಮಾಜಿಕ ಅರಣ್ಯೀಕರಣದ ಅಡಿಯಲ್ಲಿ ಸಸಿಗಳನ್ನು ಬೆಳೆಸುವುದಕ್ಕೆ ಸಂಬಂಧಿಸಿದ ಪರೀಕ್ಷಾ-ತನಿಖೆ ನಡೆಸಿದ ಕಾಮಗಾರಿಗಳಡಿಯಲ್ಲಿ ನಕಲಿ ದಾಖಲೆಗಳ ಮತ್ತು ಮೋಸದ ಪಾವತಿಗಳನ್ನು ಗಮನಿಸಲಾಯಿತು.**

ಜಿಲ್ಲಾ/ತಾಲ್ಲೂಕು ಮಟ್ಟದಲ್ಲಿ ತಾಂತ್ರಿಕ ಸಮಿತಿಗಳನ್ನು ರಚಿಸದಿರುವುದು ಅವಾಸ್ತವಿಕ ಅಂದಾಜುಗಳನ್ನು ತಯಾರಿಸುವುದು, ಅಸಮರ್ಪಕ ಅನುಷ್ಠಾನ ಮತ್ತು ಕಾಮಗಾರಿಗಳ ಮೇಲೆ ಅಕ್ರಮ ವೆಚ್ಚ ಭರಿಸಿರುವುದು ಮುಂತಾದವುಗಳಲ್ಲಿ ಪರಿಣಮಿಸಿತು. ಈ ಕಾಮಗಾರಿಗಳಲ್ಲಿ, ಫಲಾನುಭವಿಗಳನ್ನು ಕಡ್ಡಾಯವಾಗಿ ನೇಮಿಸಿಕೊಳ್ಳದೆ ವೈಯಕ್ತಿಕ ಫಲಾನುಭವಿಗಳಿಗೆ ಪ್ರಯೋಜನವಾಗುವ ಕಾಮಗಾರಿಗಳನ್ನು ಕಾರ್ಯಗತಗೊಳಿಸಲಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಯೋಜನಾ

ಮಾರ್ಗಸೂಚಿಗಳಲ್ಲಿ ನಿಗದಿಪಡಿಸಿದಂತೆ ಅಂದಾಜುಗಳನ್ನು ಪರಿಷ್ಕರಿಸದ ಕಾರಣ ಮಂಜೂರಾತಿಗಿಂತ ಹೆಚ್ಚಿನ ವೆಚ್ಚವನ್ನು ಭರಿಸಲಾಗಿತ್ತು. ಮಂಜೂರಾದ ಅಂದಾಜಿನ ಶೇಕಡಾ ಐದಕ್ಕಿಂತ ಕಡಿಮೆ ವೆಚ್ಚವಾಗಿದ್ದರೂ ಸಹ ಎನ್.ಆರ್.ಇ.ಜಿ.ಎಸಾಫ್ಟ್ ನಲ್ಲಿ ಕಾಮಗಾರಿಗಳು ಪೂರ್ಣಗೊಂಡಿವೆ ಎಂದು ಸೂಚಿಸಲಾಗಿತ್ತು. ಸರ್ಕಾರದ ಸೂಚನೆಗಳನ್ನು ಉಲ್ಲಂಘಿಸಿ ವೈಯಕ್ತಿಕ ಕಾಮಗಾರಿಗಳಿಗೆ ಸಾಮಗ್ರಿ ವೆಚ್ಚಗಳನ್ನು ಫಲಾನುಭವಿಗಳ ಬದಲಿಗೆ ನೇರವಾಗಿ ಮಾರಾಟಗಾರರಿಗೆ ಪಾವತಿಸಲಾಗಿತ್ತು.

ಎನ್.ಆರ್.ಇ.ಜಿ.ಎಸಾಫ್ಟ್ ಅನ್ನು ಬಳಸದೆ ಮಸ್ಟರ್ ರೋಲ್ ಗಳನ್ನು ಮುದ್ರಿಸುವುದು ಮತ್ತು ಅಂತಹ ತಿದ್ದಿದ ಮಸ್ಟರ್ ರೋಲ್ ಗಳ ಮೇಲೆ ಅನಿಯಮಿತ ಪಾವತಿಗಳಂತಹ ಅಕ್ರಮಗಳನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇಲಾಖಾ ಅಧಿಕಾರಿಗಳೊಂದಿಗೆ ಯೋಜನೆಯಡಿಯಲ್ಲಿ ರಚಿಸಲಾದ ಸ್ವತ್ತುಗಳ ಜಂಟಿ ಭೌತಿಕ ಪರಿಶೀಲನೆಯು ಅವುಗಳ ಅಸ್ತಿತ್ವದಲ್ಲಿರಲಿಲ್ಲ ಅಥವಾ ಆಸ್ತಿಗಳು ನಿಷ್ಕ್ರಿಯವಾಗಿರುವುದನ್ನು ಬಹಿರಂಗಪಡಿಸಿತು.

**ಮೇಲ್ವಿಚಾರಣೆ, ಸಾಮಾಜಿಕ ಲೆಕ್ಕಪರಿಶೋಧನೆ ಮತ್ತು ಕುಂದುಕೊರತೆ ಪರಿಹಾರ**

ಲೆಕ್ಕಪರಿಶೋಧನಾ ಅವಧಿಯಲ್ಲಿ (2019–2024) ಒಮ್ಮೆ ಮಾತ್ರ ಸಭೆ ಸೇರಿದ್ದರಿಂದ ರಾಜ್ಯ ಉದ್ಯೋಗ ಖಾತರಿ ಪರಿಷತ್ (ಎಸ್‌ಇಜಿಸಿ) ಮೂಲಕ ಯೋಜನೆಯ ನಿಗದಿತ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನದ ಕೊರತೆಯಿದ್ದಿತು ಮತ್ತು ಎಸ್‌ಇಜಿಸಿಯ ನಿಗದಿತ ಉಪ-ಸಮಿತಿಗಳು ನಿಷ್ಕ್ರಿಯವಾಗಿದ್ದವು. ರಾಜ್ಯ/ಜಿಲ್ಲೆ/ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಜಾಗೃತ ಘಟಕಗಳನ್ನು ರಚಿಸಿರಲಿಲ್ಲ. ರಾಜ್ಯ ಗುಣಮಟ್ಟ ನಿರ್ವಹಣಾ ಘಟಕ ಮತ್ತು ಜಿಲ್ಲಾ ಗುಣಮಟ್ಟ ಪರಿವೀಕ್ಷಣಾ ಘಟಕಗಳ ರಚನೆಗೆ ಸಂಬಂಧಿಸಿದ ಯೋಜನೆಯ ನಿಬಂಧನೆಗಳನ್ನು ಪಾಲಿಸಿರಲಿಲ್ಲ ಮತ್ತು ಕಾಮಗಾರಿಗಳ ನಿಗದಿತ ತಪಾಸಣೆಯನ್ನು ಕೈಗೊಂಡಿರಲಿಲ್ಲ.

ಸಾಮಾಜಿಕ ಲೆಕ್ಕಪರಿಶೋಧನಾ ಘಟಕವು ನಿರ್ದೇಶಕರ ನೇಮಕಾತಿಯಲ್ಲಿ ಮಾನದಂಡಗಳ ಉಲ್ಲಂಘನೆ, ಸಿಬ್ಬಂದಿಯ ಕೊರತೆ, ಹಣದ ಕೊರತೆ/ಬಿಡುಗಡೆಯಲ್ಲಿ ವಿಳಂಬ ಮತ್ತು ಲೆಕ್ಕಪರಿಶೋಧನೆಗಾಗಿ ದಾಖಲೆಗಳ ಅಲಭ್ಯತೆಯಂತಹ ಸಾಂಸ್ಥಿಕ ದೌರ್ಬಲ್ಯಗಳಿಂದ ಬಳಲುತ್ತಿತ್ತು. ತತ್ಪರಿಣಾಮವಾಗಿ, ಸಾಮಾಜಿಕ ಲೆಕ್ಕಪರಿಶೋಧನೆ ನಡೆಸುವಲ್ಲಿನ ಕೊರತೆಯು 2019–20ರಲ್ಲಿ ಶೇಕಡಾ 1ರಿಂದ 2023–24ರಲ್ಲಿ ಶೇಕಡಾ 57ಕ್ಕೆ ಏರಿಕೆಯಾಗಿತ್ತು. ಸಾಮಾಜಿಕ ಲೆಕ್ಕಪರಿಶೋಧನಾ ಅವಲೋಕನಗಳನ್ನು ಮತ್ತು ಸಾಮಾಜಿಕ ಲೆಕ್ಕಪರಿಶೋಧನೆಯಲ್ಲಿನ ದುರುಪಯೋಗ ಪ್ರಕರಣಗಳ ಅಕ್ರಮಗಳನ್ನು ಇತ್ಯರ್ಥಗೊಳಿಸುವಲ್ಲಿ ದೊಡ್ಡ ಪ್ರಮಾಣದಲ್ಲಿ ಬಾಕಿ ಇರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ನಿಗದಿಪಡಿಸಿದಂತೆ ವರದಿ ಮಾಡುವುದು, ಪರಿಹಾರ ಮತ್ತು ಅನುಸರಣಾ ಕಾರ್ಯವಿಧಾನಗಳು ಅಸ್ತಿತ್ವದಲ್ಲಿಲ್ಲದ ಕಾರಣ ಕುಂದುಕೊರತೆ ಪರಿಹಾರ ಕಾರ್ಯವಿಧಾನವು ಪರಿಣಾಮಕಾರಿಯಾಗಿರಲಿಲ್ಲ. ಎಲ್ಲಾ ಜಿಲ್ಲೆಗಳಲ್ಲಿ ಸಾರ್ವಜನಿಕ ತನಿಖಾಧಿಕಾರಿಗಳನ್ನು ನೇಮಿಸಲಾಗಿದ್ದರೂ, ದೂರುಗಳ ವಿಲೇವಾರಿಯು ಹೆಚ್ಚಿನ ಪ್ರಮಾಣದಲ್ಲಿ (ಶೇಕಡಾ 59) ಬಾಕಿ ಇದ್ದಿತು. ಪರೀಕ್ಷಾ-ತನಿಖೆ ಮಾಡಿದ ಜಿಲ್ಲೆಗಳಲ್ಲಿ ಸಾರ್ವಜನಿಕ ತನಿಖಾಧಿಕಾರಿ ವಿಧಿಸಿದ ದಂಡದ ಶೇಕಡಾ 20ಕ್ಕಿಂತ ಕಡಿಮೆ ಹಣವನ್ನು ವಸೂಲಿ ಮಾಡಲಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆ ಗಮನಿಸಿತು.

**ನಾವು ಏನು ಶಿಫಾರಸು ಮಾಡುತ್ತೇವೆ?**

**ಯೋಜನೆ ಮತ್ತು ಹಣಕಾಸು ನಿರ್ವಹಣೆ**

ಎಂ.ಜಿ.ಎನ್.ಆರ್.ಇ.ಜಿ.ಎಸ್ ಯೋಜನಾ ಪ್ರಕ್ರಿಯೆಯಲ್ಲಿ ಎಲ್ಲಾ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳ ಒಟ್ಟಾರೆ ಭಾಗವಹಿಸುವಿಕೆಯನ್ನು ಖಚಿತಪಡಿಸುವುದಕ್ಕಾಗಿ ಯೋಜನೆಯಲ್ಲಿ ತಳಮಟ್ಟದ ವಿಧಾನವನ್ನು ರಾಜ್ಯ ಸರ್ಕಾರ ಅನುಸರಿಸಬೇಕು. ಮೀಸಲಾತಿ ನೀತಿಯನ್ನು ಅನುಸರಿಸಿ ಎಂ.ಜಿ.ಎನ್.ಆರ್.ಇ.ಜಿ.ಎಸ್ ಅಡಿಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಮತ್ತು ಮಹಿಳೆಯರು ಮತ್ತು ವಿಕಲಚೇತನರಿಗೆ ಸಾಕಷ್ಟು ಪ್ರಾತಿನಿಧ್ಯ ನೀಡಲು ಕ್ರಮ ಕೈಗೊಳ್ಳಬೇಕು.

ಎಂ.ಜಿ.ಎನ್.ಆರ್.ಇ.ಜಿ.ಎಸ್ ಅಡಿಯಲ್ಲಿ ಭರಿಸಿದ ಅಸ್ವೀಕಾರಾರ್ಹ ವೆಚ್ಚವನ್ನು ಮರುಭರ್ತಿ ಮಾಡಲು ರಾಜ್ಯ ಸರ್ಕಾರವು ಕ್ರಮ ಕೈಗೊಳ್ಳಬೇಕು. ಆಧಾರ್ ಆಧಾರಿತ ಪಾವತಿಗಳಿಗೆ ಸಂಬಂಧಿಸಿದಂತೆ ವಿಫಲವಾದ ವಹಿವಾಟುಗಳ ಪುನರ್ ಸೃಷ್ಟಿ ಮತ್ತು ಫಲಾನುಭವಿಗಳಿಗೆ ಮರುಪಾವತಿಯಲ್ಲಿ ಬಾಕಿ ಇರುವ ಪ್ರಕರಣಗಳನ್ನು ಕಡಿಮೆ ಮಾಡಲು ಕ್ರಮ ಕೈಗೊಳ್ಳಬೇಕು. ವಿಫಲವಾದ ವಹಿವಾಟುಗಳು/ಬಾಕಿ ಪಾವತಿಗಳ ಸ್ಥಿತಿಯ ಬಗ್ಗೆ ಫಲಾನುಭವಿಗಳಿಗೆ ಮಾಹಿತಿ ನೀಡಲು ಸ್ವಯಂಚಾಲಿತ ವ್ಯವಸ್ಥೆಗಳನ್ನು ರೂಪಿಸಬಹುದು. ವಿಳಂಬಿತ ಪರಿಹಾರದ ಲೆಕ್ಕಾಚಾರಕ್ಕೆ ಸಂಬಂಧಿಸಿದಂತೆ ಮತ್ತು ವಿಳಂಬಿತ ಪರಿಹಾರವನ್ನು ತಪ್ಪಾಗಿ ತಿರಸ್ಕರಿಸಿರುವುದನ್ನು ಮರುಪರಿಶೀಲಿಸಲು ಸರ್ಕಾರದ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಕ್ರಮ ತೆಗೆದುಕೊಳ್ಳಬೇಕು.

**ಉದ್ಯೋಗ ಸೃಷ್ಟಿ**

ದುರ್ಬಲ ವ್ಯಕ್ತಿಗಳನ್ನು ಗುರುತಿಸಲು ಮತ್ತು ಯೋಜನೆಯಡಿ ಉದ್ಯೋಗವನ್ನು ಒದಗಿಸಲು ವಿವಿಧ ಇಲಾಖೆಗಳೊಂದಿಗೆ ಲಭ್ಯವಿರುವ ದತ್ತಾಂಶವನ್ನು ಬಳಸಿಕೊಳ್ಳಬೇಕು ಮತ್ತು ಇಲಾಖೆಯು ವಿಶೇಷ ಅಭಿಯಾನಗಳನ್ನು ನಡೆಸಬೇಕು. ದತ್ತಾಂಶದಲ್ಲಿನ ವೈಪರೀತ್ಯಗಳನ್ನು ತೆಗೆದುಹಾಕಲು ಅಗತ್ಯ ಕ್ರಮ ಕೈಗೊಳ್ಳಬೇಕು ಮತ್ತು ಯೋಜನೆಯಡಿಯಲ್ಲಿ ಕಾರ್ಮಿಕ ಘಟಕಗಳಿಗೆ ಸೂಕ್ತ ಒತ್ತು ನೀಡಲಾಗಿದೆಯೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಯೋಜನೆಯಡಿಯಲ್ಲಿ ಹಕ್ಕುಗಳು/ಅರ್ಹತೆಗಳ ಬಗ್ಗೆ ಫಲಾನುಭವಿಗಳಲ್ಲಿ ಸಾಕಷ್ಟು ಜಾಗೃತಿ ಮೂಡಿಸಲು ಐಇಸಿ ಚಟುವಟಿಕೆಗಳನ್ನು ಬಲಪಡಿಸಲು ಇಲಾಖೆ ಕ್ರಮ ಕೈಗೊಳ್ಳಬೇಕು. ಗ್ರಾಮ ಪಂಚಾಯಿತಿಗಳು ಕೆಲಸಕ್ಕಾಗಿನ ಬೇಡಿಕೆಯನ್ನು ನಿಖರವಾಗಿ ದಾಖಲಿಸಬೇಕು ಮತ್ತು ಅರ್ಹ ನಿರುದ್ಯೋಗ ಭತ್ಯೆಯನ್ನು ಲೆಕ್ಕ ಹಾಕಲು ಕಾರ್ಮಿಕರ ನೈಜ ಅವಕಾಶದೊಂದಿಗೆ ಹೊಂದಿಸಬೇಕು. ಫಲಾನುಭವಿಗಳಿಗೆ ನಿರುದ್ಯೋಗ ಭತ್ಯೆ ಪಾವತಿಸಲು ಆಯವ್ಯಯ ಹಂಚಿಕೆಯನ್ನು ಒದಗಿಸಲು ರಾಜ್ಯ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಬೇಕು.

**ಕಾಮಗಾರಿಗಳ ಕಾರ್ಯಗತಗೊಳಿಸುವಿಕೆ**

ಇಲಾಖೆಯು ಬಾಕಿ ಇರುವ ಕಾಮಗಾರಿಗಳ ಸ್ಥಿತಿಯನ್ನು ಪರಿಶೀಲಿಸಬೇಕು ಮತ್ತು ಅವುಗಳನ್ನು ಪೂರ್ಣಗೊಳಿಸಲು ಕಾರ್ಯಯೋಜನೆಯನ್ನು ಸಿದ್ಧಪಡಿಸಬೇಕು ಅಥವಾ ಅವುಗಳನ್ನು ಮುಚ್ಚಿ ವಿತ್ತೀಯ ನಷ್ಟಕ್ಕೆ ಹೊಣೆಗಾರಿಕೆಯನ್ನು ನಿಗದಿಪಡಿಸಬೇಕು. ಒಮ್ಮುಖದ ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಎಂ.ಜಿ.ಎನ್.ಆರ್.ಇ.ಜಿ.ಎಸ್ ನಲ್ಲಿ ರೂಪಿಸಲಾದ ಸಾಂಸ್ಥಿಕ ಚೌಕಟ್ಟಿಗೆ ಸರ್ಕಾರ ಬದ್ಧವಾಗಿರಬೇಕು. ಮೋಸದ ಕೆಲಸಗಳು ಮತ್ತು ಮಸ್ಟರ್ ರೋಲ್ ಗಳಲ್ಲಿನ ವ್ಯತ್ಯಾಸಗಳ ಬಗ್ಗೆ ಸರ್ಕಾರ ವಿವರವಾದ ತನಿಖೆ ನಡೆಸಬೇಕು ಮತ್ತು ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ದಂಡನಾ ಕ್ರಮವನ್ನು ಪ್ರಾರಂಭಿಸಬೇಕು.

**ಮೇಲ್ವಿಚಾರಣೆ, ಸಾಮಾಜಿಕ ಲೆಕ್ಕಪರಿಶೋಧನೆ ಮತ್ತು ಕುಂದುಕೊರತೆ ಪರಿಹಾರ**

ರಾಜ್ಯ ಉದ್ಯೋಗ ಖಾತರಿ ಪರಿಷತ್ತನ್ನು ನಿಗದಿತ ರೀತಿಯಲ್ಲಿ ಪುನರ್ ರಚಿಸಬೇಕು ಮತ್ತು ನಿಗದಿತ ಕಾರ್ಯಗಳನ್ನು ನಿರ್ವಹಿಸಬೇಕು. ಎಂ.ಜಿ.ಎನ್.ಆರ್.ಇ.ಜಿ.ಎಸ್ ಅಡಿಯಲ್ಲಿ ಸಾಮಾಜಿಕ ಲೆಕ್ಕಪರಿಶೋಧನೆಯ ಸ್ವಾತಂತ್ರ್ಯವನ್ನು ಖಚಿತಪಡಿಸುವ ಮೂಲಕ ಮತ್ತು ಸಾಕಷ್ಟು ಆರ್ಥಿಕ ಮತ್ತು ಮಾನವ ಸಂಪನ್ಮೂಲಗಳನ್ನು ಒದಗಿಸುವ ಮೂಲಕ ಅದನ್ನು ಬಲಪಡಿಸಬೇಕು.

# ಅಧ್ಯಾಯ–I

# ಅವಲೋಕನ

# ಅಧ್ಯಾಯ–I

## ಅವಲೋಕನ

### 1.1 ಪರಿಚಯ

ಬಡತನವನ್ನು ಕಡಿಮೆ ಮಾಡಲು ಉದ್ಯೋಗ ಸೃಷ್ಟಿ ಕಾರ್ಯಕ್ರಮಗಳು ಸರ್ಕಾರದ ಉಪಕ್ರಮಗಳ ಪ್ರಮುಖ ಅಂಶವಾಗಿದೆ. ಅಂಥಹ ಕಾರ್ಯಕ್ರಮಗಳ ಗಾತ್ರ ಮತ್ತು ಸಂಖ್ಯೆಗಳೆರಡರ ವಿಸ್ತರಣೆಯು 2005ರ ಸೆಪ್ಟೆಂಬರ್‌ನಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ (ಎನ್.ಆರ್.ಇ.ಜಿ.ಎ) ಜಾರಿಗೆ ಬರುವಲ್ಲಿ ಪರಿಸಮಾಪ್ತವಾಯಿತು.

ಕೌಶಲ್ಯರಹಿತ ದೈಹಿಕ ಕೆಲಸ ಮಾಡಲು ಸ್ವಯಂಪ್ರೇರಿತರಾಗಿ ಬರುವ ಪ್ರತಿ ಕುಟುಂಬದ ವಯಸ್ಕ ಸದಸ್ಯರಿಗೆ ಪ್ರತಿ ಹಣಕಾಸು ವರ್ಷದಲ್ಲಿ ಕನಿಷ್ಠ 100 ದಿನಗಳ ಖಾತರಿ ವೇತನ ಉದ್ಯೋಗವನ್ನು ಒದಗಿಸುವ ಮೂಲಕ ದೇಶದ ಗ್ರಾಮೀಣ ಪ್ರದೇಶಗಳಲ್ಲಿನ ಕುಟುಂಬಗಳ ಜೀವನೋಪಾಯ ಭದ್ರತೆಯನ್ನು ಹೆಚ್ಚಿಸುವುದು ಕಾಯಿದೆಯ ಉದ್ದೇಶವಾಗಿತ್ತು. ಬಾಳಿಕೆ ಬರುವ ಸ್ವತ್ತುಗಳ ಸೃಷ್ಟಿ ಮತ್ತು ಗ್ರಾಮೀಣ ಬಡವರ ಜೀವನೋಪಾಯ ಸಂಪನ್ಮೂಲ ನೆಲೆಯನ್ನು ಬಲಪಡಿಸುವುದು ಯೋಜನೆಯ ಇತರ ಪ್ರಮುಖ ಉದ್ದೇಶಗಳಾಗಿದ್ದವು. ಅಕ್ಟೋಬರ್ 2009ರಲ್ಲಿ ಎನ್.ಆರ್.ಇ.ಜಿ.ಎ ಹೆಸರನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ (ಎಂ.ಜಿ.ಎನ್.ಆರ್.ಇ.ಜಿ.ಎ) ಎಂದು ಬದಲಾಯಿಸಲಾಯಿತು.

### 1.2 ಕರ್ನಾಟಕದಲ್ಲಿ ಎಂಜಿಎನ್‌ಆರ್‌ಇಜಿಎ ಅನುಷ್ಠಾನ

ಕರ್ನಾಟಕ ಸರ್ಕಾರವು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ, 2005ರ ಅಡಿಯಲ್ಲಿ ಅಗತ್ಯವಿರುವ 'ಕರ್ನಾಟಕ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ'ಯನ್ನು ಅಧಿಸೂಚಿಸಿತು (ಫೆಬ್ರವರಿ 2007). ಅಕ್ಟೋಬರ್ 2009ರಿಂದ, ಈ ಯೋಜನೆಯನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ಎಂ.ಜಿ.ಎನ್.ಆರ್.ಇ.ಜಿ.ಎಸ್) ಎಂದು ಮರುನಾಮಕರಣ ಮಾಡಲಾಯಿತು, ಇದು ಕಾಯಿದೆಯ ಶೆಡ್ಯೂಲ್ 1 ರಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಅಂಶಗಳನ್ನು ಒದಗಿಸಿತ್ತು.

ಕರ್ನಾಟಕದಲ್ಲಿ, ಮೊದಲ ಹಂತದಲ್ಲಿ (2006–07) ಐದು[1] ಜಿಲ್ಲೆಗಳನ್ನು ಮತ್ತು ಎರಡನೇ ಹಂತದಲ್ಲಿ (2007–08) ಆರು[2] ಹೆಚ್ಚುವರಿ ಜಿಲ್ಲೆಗಳನ್ನು ಕಾಯ್ದೆಯಡಿ ಅಧಿಸೂಚಿಸಲಾಯಿತು. ಉಳಿದ ಜಿಲ್ಲೆಗಳಿಗೆ 2008ರ ಏಪ್ರಿಲ್ 1ರಿಂದ ಜಾರಿಗೆ ಬರುವಂತೆ ಅಧಿಸೂಚನೆ ಹೊರಡಿಸಲಾಯಿತು.

### 1.3 ಕರ್ನಾಟಕದಲ್ಲಿ ಎಂಜಿಎನ್‌ಆರ್‌ಇಜಿಎಸ್‌ನ ಸಾಂಸ್ಥಿಕ ರಚನೆ

ತಳಮಟ್ಟದಲ್ಲಿ (ಗ್ರಾಮ ಪಂಚಾಯಿತಿ), ಈ ಯೋಜನೆಯನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಪಿಡಿಒ) ಮೂಲಕ ಅನುಷ್ಠಾನಗೊಳಿಸಲಾಗುತ್ತದೆ, ಅವರಿಗೆ ಗ್ರಾಮ ರೋಜ್ ಗಾರ್ ಸಹಾಯಕ, ಸಹೋದ್ಯೋಗಿಗಳು, ಇತರರು ಸಹಾಯ ಮಾಡುತ್ತಾರೆ. ಇತರ ಹಂತಗಳಲ್ಲಿನ (ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕು) ಸಾಂಸ್ಥಿಕ ರಚನೆಯನ್ನು ಕೆಳಗಿನ ನಕ್ಷೆ–1.1 ರಲ್ಲಿ ನೀಡಲಾಗಿದೆ:

---

[1] ಬೀದರ್, ಚಿತ್ರದುರ್ಗ, ದಾವಣಗೆರೆ, ಕಲಬುರಗಿ ಮತ್ತು ರಾಯಚೂರು.

[2] ಬೆಳಗಾವಿ, ಬಳ್ಳಾರಿ, ಚಿಕ್ಕಮಗಳೂರ್, ಹಾಸನ, ಕೊಡಗು ಮತ್ತು ಶಿವಮೊಗ್ಗ.

**ಚಾರ್ಟ್ 1.1: ಎಂಜಿಎನ್‌ಆರ್‌ಇಜಿಎಸ್ ಅನುಷ್ಠಾನದ ಸಾಂಸ್ಥಿಕ ರಚನೆ**




**ಎಂ.ಜಿ.ಎನ್.ಆರ್.ಇ.ಜಿ.ಎಸ್ ಅನುಷ್ಠಾನಕ್ಕಾಗಿ ಕೇರಳ ಸರ್ಕಾರ ಜಾರಿಗೆ ತಂದಿರುವ ಸಾಂಸ್ಥಿಕ ಕಾರ್ಯವಿಧಾನ ಮತ್ತು ವಿವಿಧ ಹಂತಗಳಲ್ಲಿನ ಅಧಿಕಾರಿಗಳ ಪಾತ್ರಗಳು ಮತ್ತು ಜವಾಬ್ದಾರಿಗಳನ್ನು ಅನುಬಂಧ–1.1ರಲ್ಲಿ ಸಂಕ್ಷಿಪ್ತವಾಗಿ ನೀಡಲಾಗಿದೆ.**

## 1.4 ಎಂಜಿಎನ್‌ಆರ್‌ಇಜಿಎಸ್ ಪ್ರಕ್ರಿಯೆಯ ಅವಲೋಕನ

ಎಂ.ಜಿ.ಎನ್.ಆರ್.ಇ.ಜಿ.ಎಸ್ ಪ್ರಕ್ರಿಯೆಯ ಅವಲೋಕನವನ್ನು ಕೆಳಗಿನ ನಕ್ಷೆ–1.2 ರಲ್ಲಿ ನೀಡಲಾಗಿದೆ:

**ನಕ್ಷೆ–1.2: ಎಂಜಿಎನ್‌ಆರ್ ಇಜಿಎಸ್ ಪ್ರಕ್ರಿಯೆಯ ಅವಲೋಕನ**




**ಮೂಲ: ಎಂಜಿಎನ್‌ಆರ್‌ಇಜಿಎ, 2005 ಮತ್ತು ಕಾರ್ಯಾಚರಣೆಯ ಮಾರ್ಗಸೂಚಿಗಳು, 2013.**

## 1.5 ಧನಸಹಾಯದ ಮಾದರಿ

ಎಂಜಿಎನ್‌ಆರ್‌ಇಜಿಎಸ್ ಕೇಂದ್ರ ಪ್ರಾಯೋಜಿತ ಯೋಜನೆಯಾಗಿದ್ದು, ಇದನ್ನು ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರದ ನಡುವೆ ವೆಚ್ಚ ಹಂಚಿಕೆಯ ಆಧಾರದ ಮೇಲೆ ಅನುಷ್ಠಾನ ಮಾಡಲಾಗುತ್ತಿದೆ. ಕೌಶಲ್ಯರಹಿತ ದೈಹಿಕ ಕಾರ್ಮಿಕರ ವೇತನದ ಸಂಪೂರ್ಣ ವೆಚ್ಚವನ್ನು ಹಾಗೂ ನುರಿತ ಮತ್ತು ಅರೆ–ನುರಿತ ಕಾರ್ಮಿಕರ ವೇತನ ಸೇರಿದಂತೆ ಸಾಮಗ್ರಿಗಳ ವೆಚ್ಚದ ಶೇಕಡಾ 75ರಷ್ಟನ್ನು ಭಾರತ ಸರ್ಕಾರವು ಭರಿಸುತ್ತದೆ. ಕೇಂದ್ರ ಮತ್ತು ರಾಜ್ಯಗಳ ನಡುವೆ ಎಂಜಿಎನ್‌ಆರ್ ಇಜಿಎಸ್ ನಿಧಿ ಹಂಚಿಕೆ ಮಾದರಿಯನ್ನು ನಕ್ಷೆ–1.3ರಲ್ಲಿ ನೀಡಲಾಗಿದೆ

**ನಕ್ಷೆ–1.3: ಎಂಜಿಎನ್‌ಆರ್ ಇಜಿಎಸ್ ಅಡಿಯಲ್ಲಿ ನಿಧಿಯ ಹರಿವು**




**ಮೂಲ: ಲೆಕ್ಕಪರಿಶೋಧನೆಯಿಂದ ಸಿದ್ಧಪಡಿಸಿದ ಸ್ಕೀಮ್ಯಾಟಿಕ್ ರೇಖಾಚಿತ್ರ.**

### 1.6 ನಿರ್ವಹಣಾ ಮಾಹಿತಿ ವ್ಯವಸ್ಥೆ– ಎನ್‌ಆರ್‌ಇಜಿಎ ಸಾಫ್ಟ್

ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯ (ಎಂ.ಒ.ಆರ್.ಡಿ), ವೆಬ್ ಸಕ್ರಿಯಗೊಳಿಸಿದ ನಿರ್ವಹಣಾ ಮಾಹಿತಿ ವ್ಯವಸ್ಥೆ (ಎಂಐಎಸ್) ಆಗಿರುವ ಕೆಲಸದ ಹರಿವಿನ ಆಧಾರಿತ ಎನ್‌ಆರ್.ಇಜಿಎಸಾಫ್ಟ್ ಅನ್ನು ಪೋರ್ಟಲ್ http://nrega.nic.in ನಲ್ಲಿ ಅಭಿವೃದ್ಧಿಪಡಿಸಿತು. ಎನ್‌ಆರ್.ಇಜಿಎ ಸಾಫ್ಟ್ (ಇನ್ನು ಮುಂದೆ ಎಂಐಎಸ್ ಎಂದು ಉಲ್ಲೇಖಿಸಲಾಗುತ್ತದೆ) ಎಂ.ಜಿ.ಎನ್.ಆರ್.ಇ.ಜಿ.ಎ ಅನುಷ್ಠಾನದಲ್ಲಿ ವಿವಿಧ ಪ್ರಕ್ರಿಯೆಗಳ ಎಲ್ಲಾ ವಹಿವಾಟು ವಿವರಗಳನ್ನು ದಾಖಲಿಸಲು ಮತ್ತು ಅದನ್ನು ಸಾರ್ವಜನಿಕ ಡೊಮೇನಿನಲ್ಲಿ ಇರಿಸಲು ಅವಕಾಶ ಒದಗಿಸುತ್ತದೆ.

ಒಳಗೊಂಡಿರುವ ಎಲ್ಲಾ ಘಟಕಗಳು (ಕೇಂದ್ರ/ರಾಜ್ಯ/ಜಿಲ್ಲೆ/ಬ್ಲಾಕ್ ಮತ್ತು ಪಂಚಾಯತ್ ಮಟ್ಟಗಳು) ಸಾರ್ವಜನಿಕ ಡೊಮೇನ್ ನಲ್ಲಿ (https://nrega.nic.in) ಯೋಜನೆಯ ಅನುಷ್ಠಾನದ ಚಿತ್ರಣವನ್ನು ನೈಜ–ಸಮಯದ ಆಧಾರದ ಮೇಲೆ ಅಥವಾ ಅದಕ್ಕೆ ಹತ್ತಿರವಾಗಿ ಪ್ರತಿನಿಧಿಸಲು ಸಮಯೋಚಿತ ವರದಿಯನ್ನು ಕೈಗೊಳ್ಳುವ ನಿರೀಕ್ಷೆಯಿದ್ದು, ಆ ಮೂಲಕ ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ಖಚಿತಪಡಿಸುತ್ತದೆ.

### 1.7 ಜಿಯೋ ಎಂಜಿಎನ್‌ಆರ್‌ಇಜಿಎ– ಭೌಗೋಳಿಕ ಮಾಹಿತಿ ವ್ಯವಸ್ಥೆ ಅನುಷ್ಠಾನ

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೋ) ರಾಷ್ಟ್ರೀಯ ದೂರ ಸಂವೇದಿ ಕೇಂದ್ರ (ಎನ್‌ಆರ್ ಎಸ್.ಸಿ) ಸಹಭಾಗಿತ್ವದಲ್ಲಿ ಎಂ.ಜಿ.ಎನ್.ಆರ್.ಇ.ಜಿ.ಎಸ್ ಅಡಿಯಲ್ಲಿ ರಚಿಸಲಾದ ಸ್ವತ್ತುಗಳ ಜಿಯೋಟ್ಯಾಗಿಂಗ್ ಗಾಗಿ ಭಾರತ ಸರ್ಕಾರದ ಗ್ರಾಮೀಣ ಅಭಿವೃದ್ಧಿ ಸಚಿವಾಲಯವು ಜಿಯೋಎಂಆರ್.ಇಜಿಎ ಅನ್ನು ಜಾರಿಗೆ ತರುತ್ತಿದೆ. ಆನ್ ಲೈನ್ ರೆಕಾರ್ಡಿಂಗ್ ಮತ್ತು ಮೇಲ್ವಿಚಾರಣೆಗಾಗಿ ಮೊಬೈಲ್ ಆಧಾರಿತ ಫೋಟೋ ಜಿಯೋ–ಟ್ಯಾಗಿಂಗ್ ಮತ್ತು ಭೌಗೋಳಿಕ ಮಾಹಿತಿ ವ್ಯವಸ್ಥೆ (ಜಿಐಎಸ್) ನಂತಹ ತಾಂತ್ರಿಕ ಮಧ್ಯಸ್ಥಿಕೆಗಳನ್ನು ಬಳಸಿಕೊಂಡು ಸ್ವತ್ತುಗಳ ದತ್ತಸಂಚಯವನ್ನು ವ್ಯವಸ್ಥಿತವಾಗಿ ರಚಿಸುವುದನ್ನು ಇದು ಅನುಸರಿಸುತ್ತದೆ. ಪ್ರತಿ ಆಸ್ತಿಯ ಸ್ಥಳವನ್ನು ಮೂರು ಹಂತದ ಛಾಯಾಚಿತ್ರಗಳೊಂದಿಗೆ (ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ಮೊದಲು, ಕಾಮಗಾರಿಯನ್ನು ಕಾರ್ಯಗತಗೊಳಿಸುವ ಸಮಯದಲ್ಲಿ ಮತ್ತು ಕಾಮಗಾರಿ ಪೂರ್ಣಗೊಂಡ ನಂತರ) ಜಿಯೋಟ್ಯಾಗ್ ಮಾಡಬೇಕು.

# ಅಧ್ಯಾಯ–II

# ಲೆಕ್ಕಪರಿಶೋಧನಾ ಚೌಕಟ್ಟು

## ಅಧ್ಯಾಯ–II

## ಲೆಕ್ಕಪರಿಶೋಧನಾ ಚೌಕಟ್ಟು

### 2.1 ಲೆಕ್ಕಪರಿಶೋಧನಾ ಉದ್ದೇಶಗಳು

ಕರ್ನಾಟಕ ರಾಜ್ಯದಲ್ಲಿ ಎಂಜಿಎನ್‌ಆರ್‌ಇಜಿಎಸ್ ಅನುಷ್ಠಾನದ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಉದ್ದೇಶಗಳು ಈ ಕೆಳಗಿನವುಗಳನ್ನು ನಿರ್ಣಯಿಸುವುದಾಗಿತ್ತು:

ಯೋಜನಾ ಪ್ರಕ್ರಿಯೆ ಮತ್ತು ಹಣಕಾಸು ನಿರ್ವಹಣಾ ಅಭ್ಯಾಸಗಳು ಸಂಬಂಧಿತ ನಿಯಮಗಳು ಮತ್ತು ನಿಬಂಧನೆಗಳಿಗೆ ಬದ್ಧವಾಗಿರುವುದರ ಜೊತೆಗೆ ಕಾಯಿದೆಯ ಗುರಿಗಳನ್ನು ಸಾಧಿಸುವತ್ತ ಸಮರ್ಪಕವಾಗಿ ಸಜ್ಜುಗೊಂಡಿದ್ದವೆ.

ಉದ್ಯೋಗಾವಕಾಶಗಳಿಗೆ ನ್ಯಾಯಯುತ ಪ್ರವೇಶವನ್ನು ಸಾಧಿಸಲಾಯಿತು, ಜೊತೆಗೆ ಸಮರ್ಪಕವಾಗಿ ಉದ್ಯೋಗಗಳನ್ನು ಸೃಷ್ಟಿಸಲಾಯಿತು, ಇದು ಊಹಿಸಿದಂತೆ ಸಾಮಾಜಿಕ ರಕ್ಷಣೆ ಮತ್ತು ಜೀವನೋಪಾಯ ಭದ್ರತೆಗೆ ಕಾರಣವಾಯಿತು.

ಇತರ ಕಾರ್ಯಕ್ರಮಗಳು/ಯೋಜನೆಗಳೊಂದಿಗೆ ಒಗ್ಗೂಡಿಸುವಿಕೆಯನ್ನು ಖಚಿತಪಡಿಸಿಕೊಳ್ಳುವಾಗ, ನಿಯಮಗಳು ಮತ್ತು ನಿಬಂಧನೆಗಳಿಗೆ ಅನುಸಾರವಾಗಿ ಬಾಳಿಕೆ ಬರುವ ಮತ್ತು ಉಪಯುಕ್ತ ಸ್ವತ್ತುಗಳನ್ನು ರಚಿಸಲಾಯಿತು ಮತ್ತು ನಿರ್ವಹಿಸಲಾಯಿತು.

ಹೆಚ್ಚಿನ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಸಾಧಿಸಲು ಸೂಕ್ತ ಮತ್ತು ಸಮರ್ಪಕ ಮೇಲ್ವಿಚಾರಣೆ, ಸಾಮಾಜಿಕ ಲೆಕ್ಕಪರಿಶೋಧನೆ ಮತ್ತು ಕುಂದುಕೊರತೆ ಪರಿಹಾರ ವ್ಯವಸ್ಥೆಗಳು ಜಾರಿಯಲ್ಲಿದ್ದವು ಮತ್ತು ಕಾರ್ಯನಿರ್ವಹಿಸುತ್ತಿದ್ದವು.

### 2.2 ಲೆಕ್ಕಪರಿಶೋಧನಾ ಮಾನದಂಡ

ಕಾರ್ಯನಿರ್ವಹಣಾ ಲೆಕ್ಕಪರಿಶೊಧನೆಯನ್ನು ಮೌಲ್ಯಮಾಪನ ಮಾಡುವ ಲೆಕ್ಕಪರಿಶೋಧನಾ ಮಾನದಂಡಗಳನ್ನು ಈ ಕೆಳಗಿನವುಗಳಿಂದ ಪಡೆಯಲಾಯಿತು:

- ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ, 2005; ಕಾರ್ಯಾಚರಣೆಯ ಮಾರ್ಗಸೂಚಿಗಳು, 2013; ಅದರ ತಿದ್ದುಪಡಿಗಳು ಮತ್ತು ಅಧಿನಿಯಮದ ಅಡಿಯಲ್ಲಿ ಹೊರಡಿಸಿದ ನಿಯಮಗಳು;
- ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯ ಹೊರಡಿಸಿದ ವಾರ್ಷಿಕ ಮಾಸ್ಟರ್ ಸುತ್ತೋಲೆಗಳು (ಎಎಂಸಿ);
- ಕರ್ನಾಟಕ ರಾಜ್ಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ರಾಜ್ಯ ಸರ್ಕಾರದಿಂದ ಅಧಿಸೂಚಿಸಿದಂತೆ);
- ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರ ಹೊರಡಿಸಿದ ಆದೇಶಗಳು, ಸುತ್ತೋಲೆಗಳು ಮತ್ತು ಸೂಚನೆಗಳು, ಮಾರ್ಗಸೂಚಿಗಳು ಇತ್ಯಾದಿ;
- ಕರ್ನಾಟಕ ಹಣಕಾಸು ನಿಯಮಗಳು ಮತ್ತು ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆ (ಕೆಪಿಡಬ್ಲ್ಯುಡಿ ಸಂಹಿತೆ).

## 2.3 ಲೆಕ್ಕಪರಿಶೋಧನಾ ವ್ಯಾಪ್ತಿ ಮತ್ತು ವಿಧಾನ

2019–20ರಿಂದ 2023–24ರ ಅವಧಿಗೆ ಸಚಿವಾಲಯ/ಕಮಿಷನರೇಟ್, ಐದು ಆಯ್ದ ಜಿಲ್ಲೆಗಳು, 10 ತಾಲ್ಲೂಕುಗಳು (ಪ್ರತಿ ಆಯ್ದ ಜಿಲ್ಲೆಯಲ್ಲಿ ಎರಡು) ಮತ್ತು 40 ಗ್ರಾಮ ಪಂಚಾಯಿತಿಗಳಲ್ಲಿ (ಪ್ರತಿ ಆಯ್ದ ತಾಲ್ಲೂಕಿನಲ್ಲಿ ನಾಲ್ಕು) ದಾಖಲೆಗಳ ಪರಿಶೀಲನೆಯನ್ನು ಒಳಗೊಂಡಂತೆ ಜೂನ್ 2024 ಮತ್ತು ಸೆಪ್ಟೆಂಬರ್ 2024ರ ನಡುವೆ ಲೆಕ್ಕಪರಿಶೋಧನೆಯನ್ನು ನಡೆಸಲಾಯಿತು.

ಸ್ತರೀಕೃತ ಬಹು–ಹಂತದ ಮಾದರಿ ವಿನ್ಯಾಸವನ್ನು ಬಳಸಿಕೊಂಡು ಅಂದರೆ, ಜಿಲ್ಲೆ, ತಾಲ್ಲೂಕು, ಗ್ರಾಮ ಪಂಚಾಯಿತಿ, ಕಾಮಗಾರಿ ಮತ್ತು ಫಲಾನುಭವಿ ಮಟ್ಟದಲ್ಲಿ ಮಾದರಿಯನ್ನು ಆಯ್ಕೆ ಮಾಡಲಾಯಿತು. ಅಳವಡಿಸಿಕೊಂಡ ಮಾದರಿ ಯೋಜನೆಯನ್ನು **ಅನುಬಂಧ–2.1**ರಲ್ಲಿ ನೀಡಲಾಗಿದೆ. ಅದರಂತೆ, ಒಟ್ಟು ಮಾದರಿ ಗಾತ್ರವು 31 ಜಿಲ್ಲೆಗಳ ಪೈಕಿ 5 ಜಿಲ್ಲೆಗಳನ್ನು (**ಪ್ರದರ್ಶಿಕೆ–2.1**), ಆಯ್ದ ಜಿಲ್ಲೆಗಳ 10 ತಾಲ್ಲೂಕುಗಳು ಮತ್ತು ಆಯ್ದ ತಾಲ್ಲೂಕುಗಳಲ್ಲಿ 40 ಗ್ರಾಮ ಪಂಚಾಯಿತಿಗಳನ್ನು ಒಳಗೊಂಡಿತ್ತು. ಈ ಮಾದರಿಯನ್ನು ಸಾಂಖ್ಯಿಕ ಸಲಹೆಗಾರರು 03 ಜುಲೈ 2024 ರಂದು ಅನುಮೋದಿಸಿದರು. ಜುಲೈ 2024ರಿಂದ ಸೆಪ್ಟೆಂಬರ್ 2024ರವರೆಗೆ ಇಲಾಖಾ ಅಧಿಕಾರಿಗಳೊಂದಿಗೆ ಒಟ್ಟು 400 ಫಲಾನುಭವಿಗಳನ್ನು ಸಮೀಕ್ಷೆ ಮಾಡಲಾಯಿತು ಮತ್ತು 400 ಕಾಮಗಾರಿಗಳ ಜಂಟಿ ಪರಿಶೀಲನೆಯನ್ನು ನಡೆಸಲಾಯಿತು. ಆಯ್ದ ಜಿಲ್ಲೆಗಳು, ತಾಲ್ಲೂಕುಗಳು ಮತ್ತು ಗ್ರಾಮ ಪಂಚಾಯಿತಿಗಳ ಪಟ್ಟಿಯನ್ನು **ಅನುಬಂಧ–2.2**ರಲ್ಲಿ ನೀಡಲಾಗಿದೆ.

**ಪ್ರದರ್ಶಿಕೆ–2.1**

**ಜಿಲ್ಲಾ ಮಾದರಿಗಳ ಭೌಗೋಳಿಕ ಪ್ರಸ್ತುತಿ (31 ಜಿಲ್ಲೆಗಳಲ್ಲಿ 5)**



13 ಜೂನ್ 2024 ರಂದು ಆರ್ಡಿಪಿಆರ್ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯೊಂದಿಗೆ (ಎಸಿಎಸ್) ಪ್ರವೇಶ ಸಮ್ಮೇಳನವನ್ನು ನಡೆಸಲಾಯಿತು, ಅದರಲ್ಲಿ ಲೆಕ್ಕಪರಿಶೋಧನಾ ವಿಧಾನ, ವ್ಯಾಪ್ತಿ, ಉದ್ದೇಶಗಳು ಮತ್ತು ಮಾನದಂಡಗಳನ್ನು ಚರ್ಚಿಸಲಾಯಿತು. ಲೆಕ್ಕಪರಿಶೋಧನಾ ವಿಧಾನವು ದಾಖಲೆಗಳ ವಿಶ್ಲೇಷಣೆ, ಲೆಕ್ಕಪರಿಶೋಧನಾ ಪ್ರಶ್ನೆಗಳಿಗೆ ಪ್ರತಿಕ್ರಿಯೆಗಳು, ಇಲಾಖೆ ಸಿಬ್ಬಂದಿಯೊಂದಿಗೆ ಜಂಟಿ ಭೌತಿಕ ಪರಿಶೀಲನೆ (ಜೆಪಿವಿ) ಮತ್ತು ಅಗತ್ಯವಿರುವೆಡೆ ಛಾಯಾಚಿತ್ರ ಪುರಾವೆಗಳ ಸಂಗ್ರಹವನ್ನು ಒಳಗೊಂಡಿತ್ತು. ಯೋಜನೆಯ ಬಗ್ಗೆ ಫಲಾನುಭವಿಗಳ ಗ್ರಹಿಕೆಯನ್ನು ತಿಳಿದುಕೊಳ್ಳಲು ವಿನ್ಯಾಸಗೊಳಿಸಲಾದ ರಚನಾತ್ಮಕ ಪ್ರಶ್ನಾವಳಿಯ ಸಹಾಯದಿಂದ ಫಲಾನುಭವಿ ಸಮೀಕ್ಷೆಯನ್ನು ಸಹ ನಡೆಸಲಾಯಿತು. ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಫಲಿತಾಂಶಗಳನ್ನು 05 ಮೇ 2025 ರಂದು ನಡೆದ ನಿರ್ಗಮನ ಸಮ್ಮೇಳನದಲ್ಲಿ ಅಪರ ಮುಖ್ಯ ಕಾರ್ಯದರ್ಶಿಯವರೊಂದಿಗೆ ಚರ್ಚಿಸಲಾಯಿತು. ರಾಜ್ಯ ಸರ್ಕಾರದ ಪ್ರತಿಕ್ರಿಯೆಯನ್ನು (ಮೇ 2025) ವರದಿಯಲ್ಲಿ ಸೂಕ್ತವಾಗಿ ಸೇರಿಸಲಾಗಿದೆ.

## 2.4 ಎಂಜಿಎನ್ಆರ್‌ಜಿಎಸ್ ಕುರಿತ ಹಿಂದಿನ ಲೆಕ್ಕಪರಿಶೋಧನೆಯ ಅವಲೋಕನಗಳು

2007–08ರಿಂದ 2011–12ರ ಅವಧಿಯ ಎಂ.ಜಿ.ಎನ್.ಆರ್.ಇ.ಜಿ.ಎಸ್‌ನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಏಪ್ರಿಲ್ 2012ರಿಂದ ಜೂನ್ 2012ರವರೆಗೆ ನಡೆಸಲಾಯಿತು ಮತ್ತು ಅವಲೋಕನಗಳನ್ನು ಮಾರ್ಚ್ 2012ಕ್ಕೆ ಕೊನೆಗೊಂಡ ವರ್ಷದ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಯಲ್ಲಿ ಸೇರಿಸಲಾಯಿತು (2013ರ ವರದಿ ಸಂಖ್ಯೆ 7 – ಕರ್ನಾಟಕ ಸರ್ಕಾರ).

ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯು ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿಯನ್ನು ಚರ್ಚಿಸಿತು (ಜೂನ್ 2020 ರಿಂದ ಮಾರ್ಚ್ 2021 ರವರೆಗೆ) ಮತ್ತು ಅದರ ವರದಿಯನ್ನು (ಸಂಖ್ಯೆ 33) 23.03.2021ರಂದು ಶಾಸಕಾಂಗದಲ್ಲಿ ಮಂಡಿಸಿತು. ಸಮಿತಿಯ ವರದಿಯ ಪ್ರಕಾರ, ಲೋಕಾಯುಕ್ತದಲ್ಲಿ ಮೊಕದ್ದಮೆಗಳನ್ನು ಸಲ್ಲಿಸಿದ ಮೂರು ಕಂಡಿಕೆಗಳನ್ನು ಹೊರತುಪಡಿಸಿ ಬಹುಪಾಲು ಕಂಡಿಕೆಗಳನ್ನು ಮುಕ್ತಾಯಗೊಳಿಸಲಾಗಿದೆ. ಅಂತಹ ಕಂಡಿಕೆಗಳ ವಿವರಗಳನ್ನು **ಅನುಬಂಧ–2.3**ರಲ್ಲಿ ನೀಡಲಾಗಿದೆ. ಪ್ರಸ್ತುತ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯು ಅದೇ ರೀತಿಯ ಲೋಪಗಳು (ವೇತನದ ಅಕ್ರಮ ಪಾವತಿ, ಮಸ್ಟರ್ ರೋಲ್ ಗಳಲ್ಲಿನ ಅಕ್ರಮಗಳು ಮತ್ತು ಕಾಮಗಾರಿಗಳ ಕಾರ್ಯಗತಗೊಳಿಸುವಿಕೆ), ಅಧ್ಯಾಯ–V ರಲ್ಲಿ ವಿವರಿಸಿದಂತೆ, ಇನ್ನೂ ಮುಂದುವರೆದಿರುವುದನ್ನು ತೋರಿಸಿತು.

## 2.5 ಸ್ವೀಕೃತಿ

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ನಡೆಸಲು ವಿವಿಧ ಹಂತಗಳಲ್ಲಿ ರಾಜ್ಯ ಸರ್ಕಾರ, ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ಅವುಗಳ ಅಧಿಕಾರಿಗಳು ನೀಡಿದ ಸಹಕಾರ ಮತ್ತು ಸಹಾಯವನ್ನು ಲೆಕ್ಕಪರಿಶೋಧನೆಯು ಸ್ಮರಿಸುತ್ತದೆ.

## 2.6 ಅಧ್ಯಾಯಗಳು

ಲೆಕ್ಕಪರಿಶೋಧನೆಯ ಫಲಿತಾಂಶಗಳನ್ನು ಈ ಕೆಳಗಿನ ನಾಲ್ಕು ಅಧ್ಯಾಯಗಳಲ್ಲಿ ಸಂಘಟಿಸಲಾಗಿದೆ:

- ಯೋಜನೆ ಮತ್ತು ಹಣಕಾಸು ನಿರ್ವಹಣೆ
- ಉದ್ಯೋಗ ಸೃಷ್ಟಿ
- ಕಾಮಗಾರಿಗಳ ಕಾರ್ಯಗತಗೊಳಿಸುವಿಕೆ
- ಮೇಲ್ವಿಚಾರಣೆ, ಸಾಮಾಜಿಕ ಲೆಕ್ಕಪರಿಶೋಧನೆ ಮತ್ತು ಕುಂದುಕೊರತೆ ಪರಿಹಾರ.

# ಅಧ್ಯಾಯ–III

# ಯೋಜನೆ ಮತ್ತು ಹಣಕಾಸು ನಿರ್ವಹಣೆ

# ಅಧ್ಯಾಯ–III

## ಯೋಜನೆ ಮತ್ತು ಹಣಕಾಸು ನಿರ್ವಹಣೆ

ಕಾರ್ಮಿಕ ಬಜೆಟ್ ತಯಾರಿಕೆಯಲ್ಲಿ ತಳಮಟ್ಟದ ವಿಧಾನವನ್ನು ಅನುಸರಿಸದ ಕಾರಣ ಎಂಜಿಎನ್ಆರ್ ಇಜಿಎಸ್ ಅಡಿಯಲ್ಲಿ ಉದ್ಯೋಗದ ಬೇಡಿಕೆಯ ಮೌಲ್ಯಮಾಪನದ ಕೊರತೆಯಿದ್ದಿತು. ತತ್ಪರಿಣಾಮವಾಗಿ ಕಾಮಗಾರಿಗಳ ಆಯ್ಕೆ ಮತ್ತು ಆದ್ಯತೆಯಲ್ಲಿ ಗ್ರಾಮ ಪಂಚಾಯಿತಿಗಳ ಭಾಗವಹಿಸುವಿಕೆ ಮತ್ತು ಸಮುದಾಯ ಮಟ್ಟದ ಪಾಲ್ಗೊಳ್ಳುವಿಕೆಯನ್ನು ಖಚಿತಪಡಿಸಿಕೊಳ್ಳಲಾಗಲಿಲ್ಲ. 2013–14ರ ವೇಳೆಗೆ ಪೂರ್ಣಗೊಳ್ಳಬೇಕಿದ್ದ ಉದ್ಯೋಗ ಬೇಡಿಕೆಯ ಪ್ರಮಾಣ ಮತ್ತು ಸಮಯವನ್ನು ನಿರ್ಣಯಿಸಲು ಜಾಬ್ ಕಾರ್ಡ್ ಹೊಂದಿರುವವರ ಮೂಲ ಸಮೀಕ್ಷೆಯನ್ನು ಇನ್ನೂ ಕೈಗೊಂಡಿರಲಿಲ್ಲ, ಇದು ಮೇಲೆ ಹೇಳಿದ ಯೋಜನೆಯಡಿ ವಾಸ್ತವಿಕ ಅಭಿವೃದ್ಧಿ ಯೋಜನೆಗಳ ತಯಾರಿಕೆಯ ಮೇಲೆ ಪರಿಣಾಮ ಬೀರಿತ್ತು. ಈ ನ್ಯೂನತೆಗಳು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕ್ರೋಢೀಕರಿಸಲ್ಪಟ್ಟ ಅನುಮೋದಿತ ಕಾರ್ಮಿಕ ಆಯವ್ಯಯದಲ್ಲಿ ಮಾನವ ದಿನಗಳಾಗಿ ದಾಖಲಾದ ಉದ್ಯೋಗದ ಬೇಡಿಕೆಯಲ್ಲಿ ದೊಡ್ಡ ವ್ಯತ್ಯಾಸಕ್ಕೆ ಕಾರಣವಾಯಿತು. ಮೇಲಿನ ನ್ಯೂನತೆಗಳ ಹೊರತಾಗಿ, ಪಂಚಾಯತ್ ರಾಜ್ ಸಂಸ್ಥೆಗಳ ವಿವಿಧ ಹಂತಗಳಲ್ಲಿ ಕಾರ್ಮಿಕ ಬಜೆಟ್ ಸಲ್ಲಿಕೆಯಲ್ಲಿ ವಿಳಂಬವಿದ್ದಿತು.

ಮಹಿಳೆಯರು, ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಅಂಗವಿಕಲರಿಗೆ ಸಾಕಷ್ಟು ಪ್ರಾತಿನಿಧ್ಯ ಸೇರಿದಂತೆ ಗುತ್ತಿಗೆ ಉದ್ಯೋಗಕ್ಕಾಗಿ ರಾಜ್ಯದ ಮೀಸಲಾತಿ ನೀತಿ 2013ರ ಕಾರ್ಯಾಚರಣೆಯ ಮಾರ್ಗಸೂಚಿಗಳನ್ನು ಅನುಸರಿಸದಿರುವುದನ್ನು ಎಂ.ಜಿ.ಎನ್.ಆರ್.ಇ.ಜಿ.ಎಸ್ ಸಿಬ್ಬಂದಿಯ ನೇಮಕಾತಿಯಲ್ಲಿ ಗಮನಿಸಲಾಯಿತು. ಹೊರಗುತ್ತಿಗೆ ಏಜೆನ್ಸಿಗಳ ಮೂಲಕ ಗುತ್ತಿಗೆ ಸಿಬ್ಬಂದಿಯ ನೇಮಕಾತಿಯು ಎಂಜಿಎನ್ಆರ್ ಇಜಿಎಸ್ ಸಿಬ್ಬಂದಿ ನೇಮಕಾತಿಯಲ್ಲಿ ಮಹಿಳೆಯರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಅಂಗವಿಕಲ ವ್ಯಕ್ತಿಗಳಿಗೆ ಸಾಕಷ್ಟು ಪ್ರಾತಿನಿಧ್ಯದ ಕೊರತೆಯಲ್ಲಿ ಪರಿಣಮಿಸಿತು.

ಯೋಜನೆಯಡಿ ಲಭ್ಯವಿದ್ದ ಹೊರಗುತ್ತಿಗೆ ಮಾನವಶಕ್ತಿಯಲ್ಲಿ ಕೊರತೆಯಿದ್ದಿತು. ಹೊಸ ಟೆಂಡರ್ ಗಳನ್ನು ಕರೆಯದೆ ಮಾನವ ಸಂಪನ್ಮೂಲ ಸೇವೆಗಳ ಹೊರಗುತ್ತಿಗೆಯ ಒಪ್ಪಂದಗಳನ್ನು ಅನಧಿಕೃತವಾಗಿ ವಿಸ್ತರಿಸಲಾಗಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದಲ್ಲದೆ, ಇತರ ಜಿಲ್ಲೆಗಳಲ್ಲಿ ಸೇವೆಗಳನ್ನು ಒದಗಿಸುವ ಮಾನವ ಸಂಪನ್ಮೂಲ ಏಜೆನ್ಸಿಗಳ ನಡುವೆ ಗುತ್ತಿಗೆಗಳನ್ನು ಮರು–ನಿಯೋಜಿಸುವಾಗ ಅತ್ಯಂತ ಸ್ಪರ್ಧಾತ್ಮಕ ದರಗಳನ್ನು ಪಡೆಯಲು ವಿಫಲವಾದ ಕಾರಣ ಇಲಾಖೆಯು ಹೆಚ್ಚುವರಿ ಸೇವಾ ಶುಲ್ಕಗಳನ್ನು ಭರಿಸಬೇಕಾಯಿತು. ಯೋಜನೆಯಡಿ ಸಾಮರ್ಥ್ಯ ವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ನಡೆಸುವಲ್ಲಿ ಕೊರತೆಯನ್ನೂ ಸಹ ಲೆಕ್ಕಪರಿಶೋಧನೆಯು ಗಮನಿಸಿತು.

2022–23 ಮತ್ತು 2023–24ರ ಅವಧಿಯಲ್ಲಿ ಯೋಜನೆಯ ವೇತನ ಘಟಕದಡಿಯಲ್ಲಿ ವೆಚ್ಚವು ಇಳಿಕೆ ಪ್ರವೃತ್ತಿಯನ್ನು ತೋರಿಸಿತು. ವರ್ಷದ ಕೊನೆಯಲ್ಲಿ ನಿಧಿಯನ್ನು ಬಿಡುಗಡೆ ಮಾಡಿದ್ದರಿಂದ ಸಾಮಗ್ರಿಗಳ ಘಟಕದ ಅಡಿಯಲ್ಲಿ ಬಿಡುಗಡೆಯಾದ ಸಂಪೂರ್ಣ ಮೊತ್ತವನ್ನು ಬಳಸಿಕೊಳ್ಳಲು ಇಲಾಖೆ ವಿಫಲವಾಯಿತು. ರಾಜ್ಯ ಉದ್ಯೋಗ ಖಾತರಿ ನಿಧಿಗೆ ಕೇಂದ್ರ ಮತ್ತು ರಾಜ್ಯದ ಪಾಲನ್ನು ಬಿಡುಗಡೆ ಮಾಡುವಲ್ಲಿ ರಾಜ್ಯ ಸರ್ಕಾರವು ವಿಳಂಬ ಮಾಡಿದ್ದರಿಂದ ₹36.26 ಕೋಟಿ ದಂಡದ ಬಡ್ಡಿಯನ್ನು ಒಳಗೊಂಡಿತ್ತು. ಯೋಜನೆಯ ಆಡಳಿತಾತ್ಮಕ ಶೀರ್ಷಿಕೆಯಡಿಯಲ್ಲಿ ₹32.78 ಕೋಟಿಗಳ ಅನುಮತಿಸಲಾಗದ ವೆಚ್ಚವನ್ನು ಲೆಕ್ಕಪರಿಶೋಧನೆಯು ಗಮನಿಸಿತು.

84.98 ಲಕ್ಷ ಸಕ್ರಿಯ ಕಾರ್ಮಿಕರಲ್ಲಿ 3.11 ಲಕ್ಷ ಕಾರ್ಮಿಕರ ಖಾತೆಗಳೊಂದಿಗೆ ಆಧಾರ್ ಮ್ಯಾಪಿಂಗ್ ಮಾಡುವುದು ರಾಜ್ಯ ಮಟ್ಟದಲ್ಲಿ ಬಾಕಿ ಉಳಿದಿದ್ದ (ಮಾರ್ಚ್ 2024) ಕಾರಣದಿಂದಾಗಿ ವೇತನ ಪಟ್ಟಿಗಳನ್ನು ತಯಾರಿಸುವ ಬಗ್ಗೆ ಮತ್ತು ಈ ಸಕ್ರಿಯ ಕಾರ್ಮಿಕರಿಗೆ ಪಾವತಿಗಳ ಬಗ್ಗೆ ಯಾವುದೇ ಭರವಸೆ ನೀಡಲು ಸಾಧ್ಯವಾಗಲಿಲ್ಲ.

ವೇತನ ಮತ್ತು ಸಾಮಗ್ರಿ ವಹಿವಾಟುಗಳ ಪಾವತಿಗೆ ಸಂಬಂಧಿಸಿದಂತೆ ಮೊದಲು ತಿರಸ್ಕರಿಸಿ ನಂತರ ಪುನರುಜ್ಜೀವನಗೊಳಿಸಲಾದ ₹35.10 ಕೋಟಿ ಬಾಕಿಯನ್ನು ಗಮನಿಸಲಾಯಿತು. ವೇತನದ ವಿಳಂಬಿತ

ಪಾವತಿಗೆ ಪರಿಹಾರದ ಲೆಕ್ಕಾಚಾರವನ್ನು ಫಲಾನುಭವಿಗಳ ಖಾತೆಗೆ ಜಮಾ ಮಾಡುವವರೆಗೆ ಸಂಪೂರ್ಣ ವಿಳಂಬವನ್ನು ಲೆಕ್ಕಹಾಕುವ ಬದಲು ನಿಧಿ ವರ್ಗಾವಣೆ ಆದೇಶಗಳಿಗೆ ಎರಡನೇ ಸಹಿ ಹಾಕಿದ ದಿನಾಂಕದವರೆಗಿನ ವಿಳಂಬವನ್ನು ಸೆರೆಹಿಡಿಯುವ ಮೂಲಕ ಕೈಗೊಳ್ಳಲಾಯಿತು. ತಪ್ಪು ಆಧಾರದ ಮೇಲೆ ಕಾರ್ಯಕ್ರಮ ಅಧಿಕಾರಿಗಳು ₹3.29 ಕೋಟಿಗಳ ವಿಳಂಬ ಪರಿಹಾರವನ್ನು ತಿರಸ್ಕರಿಸಿರುವುದನ್ನು ಸಹ ಲೆಕ್ಕಪರಿಶೋಧನೆಯು ಗಮನಿಸಿತು.

ಎಂ.ಜಿ.ಎನ್.ಆರ್.ಇ.ಜಿ.ಎಸ್‌ನ (ಯೋಜನೆ ಎಂದು ಉಲ್ಲೇಖಿತ) ಅತ್ಯಂತ ಪ್ರಮುಖ ಮತ್ತು ವಿಶಿಷ್ಟ ಲಕ್ಷಣವೆಂದರೆ ವೇತನ ಅನ್ವೇಷಕರ ಬೇಡಿಕೆಯ ಮೇರೆಗೆ ಕೆಲಸವನ್ನು ಒದಗಿಸುವುದು ಮತ್ತು ಅವರ ಕಾನೂನುಬದ್ಧ ಹಕ್ಕಾಗಿ ಕೆಲಸ ಒದಗಿಸುವುದು. ಎಂ.ಜಿ.ಎನ್.ಆರ್.ಇ.ಜಿ.ಎಸ್ ಬೇಡಿಕೆ ಚಾಲಿತ ಸಾರ್ವಜನಿಕ ವೇತನ ಉದ್ಯೋಗ ಕಾರ್ಯಕ್ರಮವಾಗಿದ್ದು, ಅಲ್ಲಿ ಕೆಲಸಕ್ಕೆ ಬೇಡಿಕೆ ಇದ್ದಾಗ ಕೆಲಸಗಳನ್ನು ತೆರೆದು ಉದ್ಯೋಗಗಳನ್ನು ನೀಡಲಾಗುತ್ತದೆ. ಇದಕ್ಕೆ ಬೇಡಿಕೆಯಿರುವ ಕೆಲಸದ ಪ್ರಮಾಣ ಮತ್ತು ಸಮಯದ ಬಗ್ಗೆ ಪೂರ್ವ ಮೌಲ್ಯಮಾಪನ ಅಗತ್ಯವಿದ್ದಿತು. ಈ ಬೇಡಿಕೆಯನ್ನು ಪೂರೈಸಲು ಏಕಕಾಲದಲ್ಲಿ ಯೋಜನೆಗಳ ಅವಧಿಯನ್ನು ಸಿದ್ಧಪಡಿಸಬೇಕು ಮತ್ತು ಆದ್ಯತೆ ನೀಡಬೇಕು. ಕೆಲಸದ ಬೇಡಿಕೆ ಮತ್ತು ಪೂರೈಕೆಯ ಈ ಹೊಂದಾಣಿಕೆಯು ಮೇಲೆ ಹೇಳಿದ ಯೋಜನೆಯಡಿಯಲ್ಲಿ ಯೋಜನೆಯ ಪ್ರಕ್ರಿಯೆಯಾಗಿದ್ದು, ಇದನ್ನು ಕಾರ್ಮಿಕ ಬಜೆಟ್ ತಯಾರಿಕೆಯ ಮೂಲಕ ಸಾಧಿಸಬೇಕು. ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ಗ್ರಾಮೀಣಾಭಿವೃದ್ಧಿ ಕಾರ್ಯಕರ್ತರು/ಏಜೆನ್ಸಿಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಾಮರ್ಥ್ಯ ವರ್ಧನೆ ಮತ್ತು ತಾಂತ್ರಿಕ ಬೆಂಬಲವು ಸಹ ಮುಖ್ಯವಾಗಿದೆ.

## 3.1 ಕಾರ್ಮಿಕ ಬಜೆಟ್ ತಯಾರಿಕೆ

ಅಭಿವೃದ್ಧಿ ಯೋಜನೆಯು ಗ್ರಾಮ ಸಭೆ ಮತ್ತು ವಾರ್ಡ್ ಸಭೆಗಳ ಶಿಫಾರಸುಗಳನ್ನು ಪರಿಗಣಿಸಿದ ನಂತರ ಪ್ರತಿ ಗ್ರಾಮ ಪಂಚಾಯಿತಿಯಿಂದ ಎಂ.ಜಿ.ಎನ್.ಆರ್.ಇ.ಜಿ.ಎಸ್‌ಗೆ ಸಿದ್ಧಪಡಿಸಬೇಕಾದ ವಾರ್ಷಿಕ ಯೋಜನೆಯಾಗಿದೆ. ಇದು ಯೋಜನೆಗಳನ್ನು ಗುರುತಿಸುವುದು ಮತ್ತು ಕಾರ್ಮಿಕ ಬಜೆಟ್ ಅಂದಾಜುಗಳನ್ನು ಸಿದ್ಧಪಡಿಸುವುದನ್ನು ಒಳಗೊಂಡಿರುತ್ತದೆ. ಎಂ.ಜಿ.ಎನ್.ಆರ್.ಇ.ಜಿ.ಎ ಸೆಕ್ಷನ್ 13 ರಿಂದ 16 ರಡಿಯಲ್ಲಿನ ನಿಬಂಧನೆಗಳ ಪ್ರಕಾರ, ಜಿಲ್ಲಾ ಕಾರ್ಯಕ್ರಮ ಸಂಯೋಜಕರು (ಡಿಪಿಸಿ) ಯೋಜನೆಯ ಹಂತದಿಂದ ಜಿಲ್ಲೆಯಲ್ಲಿ ಆಯ್ದ ಯೋಜನೆಗಳ ಅವಧಿ ಅನುಮೋದನೆಯವರೆಗೆ ತಳಮಟ್ಟದ ವಿಧಾನದ ತತ್ವವನ್ನು ಕಟ್ಟುನಿಟ್ಟಾಗಿ ಪಾಲಿಸುವುದನ್ನು ಖಚಿತಪಡಿಸಿಕೊಳ್ಳಬೇಕು. ಎಂ.ಜಿ.ಎನ್.ಆರ್.ಇ.ಜಿ.ಎಸ್ ಮೂಲಕ ಆಸ್ತಿ ಸೃಷ್ಟಿಯ ಅಗತ್ಯದ ಮೌಲ್ಯಮಾಪನವನ್ನು ಸಮುದಾಯ ಮಟ್ಟದಲ್ಲಿ, ಭಾಗವಹಿಸುವ ಪ್ರಕ್ರಿಯೆಗಳ ಮೂಲಕ ಗ್ರಾಮ ಪಂಚಾಯಿತಿಯು ಕೈಗೊಳ್ಳಬೇಕು. ಈ ಪ್ರಕ್ರಿಯೆಗಳ ಫಲಿತಾಂಶಗಳನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕ್ರೋಢೀಕರಿಸಬೇಕು ಮತ್ತು ಅನುಮೋದನೆಗಾಗಿ ಗ್ರಾಮಸಭೆಯ ಮುಂದೆ ಪ್ರಸ್ತುತಪಡಿಸಬೇಕು.

ಕಾರ್ಮಿಕ ಆಯವ್ಯಯ ಕೆಲಸಕ್ಕೆ ಬೇಡಿಕೆ ಇಡುವವರಿಗೆ ಒದಗಿಸಬೇಕಾದ ಕೆಲಸದ ಪ್ರಮಾಣ ಮತ್ತು ವೇಳಾಪಟ್ಟಿಯನ್ನು ವಿವರಿಸುವ ಯೋಜನೆಯ ಜೊತೆಗೆ ಕೆಲಸಕ್ಕಾಗಿ ತಿಂಗಳವಾರು ನಿರೀಕ್ಷಿತ ಬೇಡಿಕೆಯ ಪ್ರಮಾಣವನ್ನು ಒಳಗೊಂಡಿರಬೇಕು. ಎನ್‌ಆರ್.ಇಜಿಎಸಾಫ್ಟ್ (ಎಂಐಎಸ್ ಎಂದೂ ಕರೆಯಲ್ಪಡುತ್ತದೆ) ಕಾರ್ಮಿಕ ಆಯವ್ಯಯವನ್ನು ನಮೂದಿಸಲು ಪ್ರತ್ಯೇಕ ಲಿಂಕ್ ಗಳನ್ನು ಒಳಗೊಂಡಿತ್ತು, ಒಂದು ಕಾರ್ಮಿಕ ಪ್ರಕ್ಷೇಪಣೆಗೆ ಮತ್ತು ಇನ್ನೊಂದು ಕೆಲಸಗಳಿಗೆ. ಗ್ರಾಮ ಪಂಚಾಯಿತಿಯಲ್ಲಿ ಕಾರ್ಮಿಕ ಆಯವ್ಯಯಕ್ಕೆ ಈ ನಿಟ್ಟಿನಲ್ಲಿ ಮಾಡಲಾದ ನಮೂದುಗಳನ್ನು ವಿವಿಧ ಹಂತಗಳಲ್ಲಿ ಒಟ್ಟುಗೂಡಿಸಲಾಗುತ್ತದೆ. ಸಮಗ್ರ ಕಾರ್ಮಿಕ ಆಯವ್ಯಯವನ್ನು ಗ್ರಾಮೀಣಾಭಿವೃದ್ಧಿ ಸಚಿವಾಲಯದ ಕಾರ್ಯದರ್ಶಿ ಅಧ್ಯಕ್ಷರಾಗಿರುವ ಉನ್ನತಾಧಿಕಾರ ಸಮಿತಿಗೆ ಸಲ್ಲಿಸಲಾಗುವುದು. ಉನ್ನತಾಧಿಕಾರ ಸಮಿತಿಯು ಯೋಜಿತ ಕಾರ್ಮಿಕ ಆಯವ್ಯಯವನ್ನು ಸಂಬಂಧಪಟ್ಟ ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ (ಇಲಾಖೆ ಎಂದು ಉಲ್ಲೇಖಿಸಲಾಗುವ ಆರ್.ಡಿಪಿಆರ್) ಕಾರ್ಯದರ್ಶಿಯೊಂದಿಗೆ ಚರ್ಚಿಸುತ್ತದೆ ಮತ್ತು ಇಡೀ ರಾಜ್ಯಕ್ಕೆ

ಅಂತಿಮ ಕಾರ್ಮಿಕ ಆಯವ್ಯಯವನ್ನು ಒಪ್ಪಿಕೊಳ್ಳಲಾಗುತ್ತದೆ. ಅನುಮೋದಿತ ಕಾರ್ಮಿಕ ಆಯವ್ಯಯವನ್ನು ಜಿಲ್ಲಾ ಮತ್ತು ತಿಂಗಳವಾರು ವಿಂಗಡಿಸಲಾಗುತ್ತದೆ ಮತ್ತು ಎಂಐಎಸ್ ನಲ್ಲಿ ಸೂಕ್ತವಾಗಿ ನಮೂದಿಸಲಾಗುತ್ತದೆ.

ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಿದಂತೆ, 2019–20ರಿಂದ 2023–24ರ ಅವಧಿಯಲ್ಲಿ ಕಾರ್ಮಿಕ ಬಜೆಟ್ ತಯಾರಿಕೆಯಲ್ಲಿ ವಿವಿಧ ನ್ಯೂನತೆಗಳನ್ನು ಲೆಕ್ಕಪರಿಶೋಧನೆಯು ಗಮನಿಸಿತು.

### *3.1.1 ಬೇಸ್ ಲೈನ್ ಸಮೀಕ್ಷೆ ನಡೆಸದಿರುವುದು*

ಉದ್ಯೋಗದ ಬೇಡಿಕೆಯ ಪ್ರಮಾಣ ಮತ್ತು ಸಮಯವನ್ನು ನಿರ್ಣಯಿಸಲು ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಜಾಬ್ ಕಾರ್ಡ್ ಹೊಂದಿರುವವರ ಸಮೀಕ್ಷೆಯನ್ನು ಕಡ್ಡಾಯವಾಗಿ ನಡೆಸಬೇಕು ಎಂದು 2013ರ ಕಾರ್ಯಾಚರಣೆಯ ಮಾರ್ಗಸೂಚಿಗಳ ಕಂಡಿಕೆ 6.2(i) ಮತ್ತು (ii) ಷರತ್ತು ವಿಧಿಸುತ್ತದೆ. ಚೌಕಟ್ಟು ಮತ್ತು ವಿಧಾನವನ್ನು ಅಂತಿಮಗೊಳಿಸಲು ಪ್ರತಿ ರಾಜ್ಯದಲ್ಲಿ ತಜ್ಞ ಸಂಸ್ಥೆಗಳನ್ನು ಪ್ರತ್ಯೇಕವಾಗಿ ನೋಂದಾಯಿಸಬೇಕು. 2013–14ನೇ ಸಾಲಿನಲ್ಲಿ ಎಲ್ಲಾ ಗ್ರಾಮ ಪಂಚಾಯಿತಿಗಳ ಸಮೀಕ್ಷೆಗಳು ಪೂರ್ಣಗೊಳ್ಳಲು 2012–13ನೇ ಸಾಲಿನಲ್ಲಿ ಬೇಸ್ ಲೈನ್ ಸಮೀಕ್ಷೆಯ ಪೈಲಟ್ ಗಳನ್ನು ನಡೆಸಬೇಕಾಗಿತ್ತು. ಇದಲ್ಲದೆ, ಸ್ಥಳೀಯ ಜೀವನೋಪಾಯದ ಮಾದರಿಯಲ್ಲಿನ ಬದಲಾವಣೆಗಳು ಮತ್ತು ಉತ್ಪಾದನಾ ಚಟುವಟಿಕೆಗಳಲ್ಲಿ ಕೆಲಸದ ಅವಕಾಶಗಳನ್ನು ಲೆಕ್ಕಹಾಕಲು ಕಾರ್ಮಿಕ ಆಯವ್ಯಯದ ಮೂಲ ವರ್ಷದ ಮರು ಮೌಲ್ಯಮಾಪನವನ್ನು ಪ್ರತಿ ಐದು ವರ್ಷಗಳಿಗೊಮ್ಮೆ ಮಾಡಬೇಕಿತ್ತು.

ನಿಗದಿತ ಸಮಯದ ಚೌಕಟ್ಟಿನೊಳಗೆ ಅಂದರೆ 2013–14ರ ಮೊದಲು ಅಥವಾ ನಂತರ ತಳಮಟ್ಟದ ಸಮೀಕ್ಷೆಯನ್ನು ನಡೆಸಿಲ್ಲದಿರುವುದನ್ನು ಅಥವಾ ತಜ್ಞ ಸಂಸ್ಥೆಗಳನ್ನು ನೋಂದಾಯಿಸದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. 2019–20ರಿಂದ 2023–24ರವರೆಗಿನ ಲೆಕ್ಕಪರಿಶೋಧನಾ ಅವಧಿಯಲ್ಲಿ ತಳಮಟ್ಟದ ಸಮೀಕ್ಷೆಯನ್ನು ನಡೆಸಿರಲಿಲ್ಲ ಮತ್ತು ಕಾರ್ಮಿಕ ಆಯವ್ಯಯಕ್ಕೆ ಮೂಲ ವರ್ಷದ ಮರುಮೌಲ್ಯಮಾಪನವನ್ನು ಕೈಗೊಂಡಿರಲಿಲ್ಲ ಎಂಬುದನ್ನೂ ಸಹ ಗಮನಿಸಲಾಯಿತು. ಸಮೀಕ್ಷೆಯ ಅನುಪಸ್ಥಿತಿಯಲ್ಲಿ, ಫಲಾನುಭವಿಗಳಿಂದ ಕೆಲಸದ ನಿಜವಾದ ಬೇಡಿಕೆ, ಕೈಗೊಳ್ಳಬೇಕಾದ ಕಾಮಗಾರಿಗಳ ಸ್ವರೂಪ ಮತ್ತು ಉದ್ಯೋಗದ ಬೇಡಿಕೆಯ ಸಮಯವನ್ನು ಗ್ರಾಮ ಪಂಚಾಯಿತಿಗಳು ನಿರ್ಧರಿಸಲು ಸಾಧ್ಯವಾಗಲಿಲ್ಲ. ಇದರಿಂದಾಗಿ ತಳಮಟ್ಟದಲ್ಲಿ ವಾಸ್ತವಿಕ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸಲು ಸಾಧ್ಯವಾಗಲಿಲ್ಲ. ಎಂಐಎಸ್ ವರದಿ ಆರ್2.1.2ರಲ್ಲಿ[3] (ಕೆಲಸದ ಯೋಜನೆ) ಸೇರಿಸಲಾದ ವರ್ಗವಾರು ಕೆಲಸಗಳ ಸಂಖ್ಯೆ ಮತ್ತು ಅಂದಾಜು ಮಾನವ ದಿನಗಳನ್ನು ಪರೀಕ್ಷಾ–ತನಿಖೆ ನಡೆಸಿದ ಜಿಲ್ಲಾ ಪಂಚಾಯಿಗಳು ಇಲಾಖೆಯು ಯೋಜಿಸಿದ ಯೋಜನೆಗಳೊಂದಿಗೆ ಹೋಲಿಕೆ ಮಾಡುವುದರಿಂದ ಇದು ಸ್ಪಷ್ಟವಾಗುತ್ತದೆ. ಜಿಲ್ಲಾ ಪಂಚಾಯಿತಿಗಳು ಸಿದ್ಧಪಡಿಸಿದ ಯೋಜನೆಗಳಲ್ಲಿ ಸೇರಿಸಲಾದ ಕಾಮಗಾರಿಗಳ ಸಂಖ್ಯೆಯು ಎಂಐಎಸ್ ನಲ್ಲಿ ಸೇರಿಸಲಾದ ಕೆಲಸಗಳ ಶೇಕಡಾ 32ರಿಂದ 215ರ ನಡುವಿನ ವ್ಯಾಪ್ತಿಯಲ್ಲಿದ್ದರೆ, ಎಂಐಎಸ್ ಆರ್ 2.1.2 ರಲ್ಲಿ ಸೇರಿಸಿದ್ದರಲ್ಲಿ ಮಾನವ ದಿನಗಳು ಕೇವಲ ಶೇಕಡಾ 0.32ರಿಂದ 11.57 ರಷ್ಟಿತ್ತು (ವಿವರಗಳನ್ನು **ಅನುಬಂಧ–3.1**ರಲ್ಲಿ ನೀಡಲಾಗಿದೆ).

ಉದ್ಯೋಗ ಒದಗಿಸಿದ ಮಾದರಿಯೊಂದಿಗೆ (ಆರ್ 5.1.4) ಕೆಲಸದ ಬೇಡಿಕೆ ಮಾದರಿಯನ್ನು (ಎಂಐಎಸ್ ವರದಿ ಆರ್ 3.1) ಹೋಲಿಕೆ ಮಾಡಿದಾಗ ಇದೇ ರೀತಿಯ ವ್ಯತ್ಯಾಸಗಳು ಕಂಡುಬಂದವು. ಪರೀಕ್ಷಾ–ತನಿಖೆಗೆ ಒಳಗಾದ ಜಿಲ್ಲೆಗಳು/ರಾಜ್ಯದ ಉದ್ಯೋಗ ಒದಗಿಸಿದ ತಿಂಗಳುವಾರು ಕುಟುಂಬಗಳ ಸಂಖ್ಯೆ ತಿಂಗಳವಾರು ಬೇಡಿಕೆಗಿಂತ ಸತತವಾಗಿ ಕಡಿಮೆಯಾಗಿರುವುದನ್ನು ಹೋಲಿಕೆಯು ತೋರಿಸಿತು. ಐದು

[3] ಎಂಐಎಸ್ ವರದಿ ಆರ್2.1.2 ಒಂದು ನಿರ್ದಿಷ್ಟ ಹಣಕಾಸು ವರ್ಷಕ್ಕೆ ಗ್ರಾಮ ಪಂಚಾಯಿತಿಯಿಂದ ಅಂದಾಜು ಮಾಡಲಾದ ಕೆಲಸಗಳು ಮತ್ತು ವ್ಯಕ್ತಿ ದಿನಗಳ ಸಂಖ್ಯೆಯನ್ನು ಒಳಗೊಂಡಿದೆ, ಇದನ್ನು ಜಿಲ್ಲಾ ಪಂಚಾಯಿತಿ ಮಟ್ಟದಲ್ಲಿ ಕ್ರೋಢೀಕರಿಸಿದಾಗ, ಜಿಲ್ಲೆಗೆ ಅಂತಹ ಡೇಟಾವನ್ನು ಒದಗಿಸುತ್ತದೆ (16.11.2024 ರಂದು ಪ್ರವೇಶಿಸಲಾಗಿದೆ).

ವರ್ಷಗಳ ಅವಧಿಯಲ್ಲಿ (2019–20 ರಿಂದ 2023–24) ಕೊರತೆಯು ಶೇಕಡಾ 15 ರಿಂದ 25ರ ನಡುವಿನ ವ್ಯಾಪ್ತಿಯಲ್ಲಿದ್ದಿತು.

ತಜ್ಞ ಸಂಸ್ಥೆಗಳನ್ನು ನೋಂದಾಯಿಸಲಾಗದಿದ್ದರೂ, ತಳಮಟ್ಟದ ಸಮೀಕ್ಷೆಯನ್ನು ನಿಯಮಿತವಾಗಿ ನಡೆಸಲಾಗಿದೆ ಎಂದು ರಾಜ್ಯ ಸರ್ಕಾರ ತಿಳಿಸಿತು (ಮೇ 2025). ಯಾವುದೇ ಸಾಕ್ಷ್ಯಾಧಾರಗಳನ್ನು ಒದಗಿಸದ ಕಾರಣ ಉತ್ತರವನ್ನು ಒಪ್ಪಲಾಗುವುದಿಲ್ಲ ಮತ್ತು ಇದು ತಳಮಟ್ಟದ ಸಮೀಕ್ಷೆಗಳನ್ನು ನಡೆಸಲಾಗಿಲ್ಲ ಎಂದು ಹೇಳಲಾದ ಎಂ.ಜಿ.ಎನ್.ಆರ್.ಇ.ಜಿ.ಎಸ್ ಆಯುಕ್ತರು, (ಡಿಸೆಂಬರ್ 2024) ಮತ್ತು ಪರೀಕ್ಷಾ–ತನಿಖೆ ನಡೆಸಿದ ಘಟಕಗಳು (ಜುಲೈ–ಸೆಪ್ಟೆಂಬರ್ 2024) ಈ ಹಿಂದೆ ನೀಡಿದ ಉತ್ತರಗಳಿಗೆ ವ್ಯತಿರಿಕ್ತವಾಗಿತ್ತು.

### *3.1.2 ಕಾರ್ಮಿಕ ಆಯವ್ಯಯ ತಯಾರಿಕೆಯಲ್ಲಿ ತಳಮಟ್ಟದ ವಿಧಾನವನ್ನು ಅನುಸರಿಸದಿರುವುದು*

ವಾಸ್ತವಿಕ ಮೌಲ್ಯಮಾಪನ ಮಾಡಲು ಕಾರ್ಮಿಕ ಆಯವ್ಯಯಗಳನ್ನು ಪರಿಶೀಲನೆಯ ಎಲ್ಲಾ ಹಂತಗಳಲ್ಲಿ ಅಂದರೆ ಬ್ಲಾಕ್, ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಪರಿಶೀಲಿಸಬೇಕು ಮತ್ತು ಆನ್ ಲೈನ್ ಹಾಗು ಸೂಚಿಸಿದ ಕಿರುಪುಸ್ತಕ ಸ್ವರೂಪಗಳಲ್ಲಿ ಸಲ್ಲಿಸಬೇಕು ಎಂದು ಗ್ರಾಮೀಣಾಭಿವೃದ್ಧಿ ಸಚಿವಾಲಯವು ಸೂಚನೆ ನೀಡಿತ್ತು.

2021–22ರಿಂದ 2023–24ರ[4] ಅವಧಿಯಲ್ಲಿ ಪರೀಕ್ಷಾ–ತನಿಖೆ ನಡೆಸಿದ ಯಾವುದೇ ಜಿಲ್ಲೆಗಳಲ್ಲಿ ಕಾರ್ಮಿಕ ಪ್ರಕ್ಷೇಪಣೆಗಳನ್ನು ಆನ್ ಲೈನ್ ನಲ್ಲಿ[5] ಸಲ್ಲಿಸಿರಲಿಲ್ಲ ಎಂಬುದನ್ನು ಎಂಐಎಸ್ ವರದಿಗಳು ಆರ್2.1.3 (ಕಾರ್ಮಿಕ ಆಯವ್ಯಯ ಸ್ಥಿತಿ) ಮತ್ತು ಆರ್2.1.1 (ಮಾಸಿಕ ಕಾರ್ಮಿಕ ವ್ಯಕ್ತಿ ದಿನಗಳ ಪ್ರಕ್ಷೇಪಿತ ವರದಿ) ಗಳಿಂದ ಗಮನಿಸಲಾಯಿತು. ಇದಲ್ಲದೆ, ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳು (ಮಂಡ್ಯ ಹೊರತುಪಡಿಸಿ) ತಾಲೂಕು ಪಂಚಾಯತಿಗಳು/ಗ್ರಾಮ ಪಂಚಾಯಿತಿಗಳಿಂದ ಪಡೆದ ಕಾರ್ಮಿಕ ಆಯವ್ಯಯ ಪ್ರಸ್ತಾವನೆಗಳನ್ನು ಸಂಕಲಿಸಿಲ್ಲ. ಎಂ.ಜಿ.ಎನ್.ಆರ್.ಇ.ಜಿ.ಎಸ್ ಆಯುಕ್ತರ ಕಚೇರಿ ಕೂಡ ಜಿಲ್ಲೆಗಳಿಂದ ಪಡೆದ ಕಾರ್ಮಿಕ ಆಯವ್ಯಯ ಪ್ರಸ್ತಾವನೆಗಳ ಸಂಕಲನಕ್ಕೆ ಸಂಬಂಧಿಸಿದ ದಾಖಲೆಗಳನ್ನು ನಿರ್ವಹಿಸಿರಲಿಲ್ಲ. ಜಿಲ್ಲಾ ಪಂಚಾಯಿತಿಗಳ ಸಿಇಓಗಳು ಕಾರ್ಮಿಕ ಆಯವ್ಯಯವನ್ನು ಅಂತಿಮಗೊಳಿಸಲು ಎಂ.ಜಿ.ಎನ್.ಆರ್.ಇ.ಜಿ.ಎಸ್ ಆಯುಕ್ತರಿಗೆ ಪ್ರಾತ್ಯಕ್ಷಿಕೆಗಳನ್ನು ನೀಡುತ್ತಿದ್ದುದು ಅನುಸರಿಸುತ್ತಿದ್ದ ವಿಧಾನವಾಗಿತ್ತು. ಆದರೆ, ನಿಗದಿತ ಕಾರ್ಯವಿಧಾನದ ಅನುಪಸ್ಥಿತಿಯಲ್ಲಿ, ಪರೀಕ್ಷಾ–ತನಿಖೆ ನಡೆಸಿದ ಜಿಲ್ಲಾ ಪಂಚಾಯಿತಿಗಳು ಮತ್ತು ರಾಜ್ಯ ಸರ್ಕಾರವು ಮಾನವ ದಿನಗಳನ್ನು ಯೋಜಿಸಲು ಅಳವಡಿಸಿಕೊಂಡ ಆಧಾರವನ್ನು ಪರಿಶೀಲಿಸಲಾಗಲಿಲ್ಲ.

ಪರೀಕ್ಷಾ–ತನಿಖೆ. ನಡೆಸಿದ ಜಿಲ್ಲಾ ಪರಿಷತ್ (ಮಂಡ್ಯ) ಮಾತ್ರ ಗ್ರಾಮ ಪಂಚಾಯಿತಿ/ತಾಲೂಕು ಪಂಚಾಯಿತಿಗಳಿಂದ ಪಡೆದ ಕಾರ್ಮಿಕ ಅಂದಾಜುಗಳನ್ನು ಸಂಕಲಿಸಿತ್ತು. ಮಂಡ್ಯ ಜಿಲ್ಲಾ ಪರಿಷತ್ ಇಂತಹ ಕಾರ್ಯವನ್ನು ನಡೆಸಿರುವುದು ಶ್ಲಾಘನೀಯವಾದರೂ, ರಾಜ್ಯ ಸರ್ಕಾರಕ್ಕೆ ಮಂಡ್ಯದ ಜಿಲ್ಲಾ ಪರಿಷತ್ ನಿಂದ ಪ್ರಕ್ಷೇಪಣೆ ಮಾಡಿದ ಮಾನವ ದಿನಗಳು ಗ್ರಾಮ ಪಂಚಾಯತಿಗಳು/ತಾಲೂಕು ಪಂಚಾಯತಿಗಳ ಏಕೀಕೃತ ಯೋಜನೆಯ ಪ್ರಕಾರದ ಮಾನವ ದಿನಗಳಿಗಿಂತ ಕಡಿಮೆಯಿದ್ದಿತು ಎಂಬುದು ವಾಸ್ತವಾಂಶವಾಗಿದೆ. 2019–20ರಿಂದ 2023–24ರ ಅವಧಿಯಲ್ಲಿ ಕೊರತೆಯು 17.58 ಲಕ್ಷದಿಂದ 155.07 ಲಕ್ಷ ಮಾನವ ದಿನಗಳ ವ್ಯಾಪ್ತಿಯಲ್ಲಿದ್ದಿತು. (**ಕೋಷ್ಟಕ–3.1**).

[4] 16.11.2024 ರಂದು ಡೇಟಾವನ್ನು ಪ್ರವೇಶಿಸಲಾಗಿದೆ ಮತ್ತು 2019–20 ಮತ್ತು 2020–21 ವರ್ಷಗಳ ಡೇಟಾ ಎಂಐಎಸ್ ನಲ್ಲಿ ಲಭ್ಯವಿಲ್ಲ.

[5] 2022–23ರಲ್ಲಿ ಸಲ್ಲಿಸಿದ ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲೂಕಿನ ಕೊರಟಿಗೆರೆ ಜಿ.ಪಂ.ಹೊರತುಪಡಿಸಿ.

**ಕೋಷ್ಟಕ–3.1: ಮಂಡ್ಯ ಜಿಲ್ಲೆಯಲ್ಲಿ ಮಾನವ ದಿನಗಳ (ಪಿಡಿ) ಪ್ರಕ್ಷೇಪಣೆಯಲ್ಲಿನ ವ್ಯತ್ಯಾಸಗಳು**

**(ವ್ಯಕ್ತಿ ದಿನಗಳು ಲಕ್ಷಗಳಲ್ಲಿ)**

| ವರ್ಷ | ಜಿಪಿಗಳು/ಟಿಪಿಗಳ ಏಕೀಕೃತ ಯೋಜನೆಗಳ ಪ್ರಕಾರ ಪಿಡಿಗಳು | ಜಿಲ್ಲಾ ಪಂಚಾಯಿತಿಯಿಂದ ಪ್ರಕ್ಷೇಪಿತವಾದ ಪಿಡಿಗಳು | ವ್ಯತ್ಯಾಸ |
|---|---|---|---|
| 2019–20 | 110.98 | 25.30 | 85.68 |
| 2020–21 | 95.03 | 43.34 | 51.69 |
| 2021–22 | 174.96 | 157.38 | 17.58 |
| 2022–23 | 170.93 | 35.97 | 134.96 |
| 2023–24 | 180.20 | 25.13 | 155.07 |

**ಮೂಲ: ಇಲಾಖೆಯಿಂದ ಒದಗಿಸಿದ ಮಾಹಿತಿ (ಸೆಪ್ಟೆಂಬರ್ 2024)**

ಮೇಲಿನವುಗಳ ಜೊತೆಗೆ, ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳು ಪ್ರಕ್ಷೇಪಿಸಿದ ಮಾನವ ದಿನಗಳಿಗೆ ಹೋಲಿಸಿದರೆ ರಾಜ್ಯ ಸರ್ಕಾರವು ಅನುಮೋದಿಸಿದ ಮಾನವ ದಿನಗಳಲ್ಲಿ ವ್ಯತ್ಯಾಸಗಳಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. 2019–20ರಿಂದ 2023–24ರ ಅವಧಿಯಲ್ಲಿ ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ ಈ ವ್ಯತ್ಯಾಸಗಳು ಶೇಕಡಾ 25ರಿಂದ 177ರ ವ್ಯಾಪ್ತಿಯಲ್ಲಿದ್ದವು **(ಅನುಬಂಧ–3.2)**. ವಾಸ್ತವಿಕವಾಗಿ ಉತ್ಪತ್ತಿ ಮಾಡಿದ ಮಾನವ ದಿನಗಳು ಪ್ರಕ್ಷೇಪಿತ ಮಾನವ ದಿನಗಳ ಶೇಕಡಾ 25ರಿಂದ 148ರಷ್ಟಿದ್ದವು ಎಂಬುದನ್ನೂ ಸಹ ಲೆಕ್ಕಪರಿಶೋಧನೆಯು ಗಮನಿಸಿತು. ಗ್ರಾಮ ಪಂಚಾಯಿತಿಗಳಿಂದ ಪಡೆದ ಕಾರ್ಮಿಕ ಆಯವ್ಯಯಗಳನ್ನು ಸಂಕಲಿಸುವ ನಿಗದಿತ ಕಾರ್ಯವಿಧಾನವನ್ನು ಅನುಸರಿಸುವ ಬದಲು ಗ್ರಾಮಾಭಿವೃದ್ಧಿ ಸಚಿವಾಲಯದಿಂದ ಹಂಚಿಕೆಯನ್ನು ಪಡೆದ ನಂತರ ಜಿಲ್ಲೆಗಳಿಗೆ ಕಾರ್ಮಿಕ ಆಯವ್ಯಯ ಹಂಚಿಕೆ ಮಾಡಿರುವುದು ವ್ಯತ್ಯಾಸಕ್ಕೆ ಕಾರಣವಾಗಿತ್ತು. ಜಿಲ್ಲಾ ಪಂಚಾಯಿತಿಗಳು ಪ್ರಕ್ಷೇಪಿಸಿದ ಮಾನವ ದಿನಗಳು ಮತ್ತು ರಾಜ್ಯ ಮಟ್ಟದಲ್ಲಿ ಅನುಮೋದಿಸಲಾದ ಮಾನವ ದಿನಗಳ ನಡುವಿನ ದೊಡ್ಡ ವ್ಯತ್ಯಾಸವು ಯೋಜನಾ ಪ್ರಕ್ರಿಯೆಯಲ್ಲಿ ತಳಮಟ್ಟದ ವಿಧಾನವನ್ನು ಅಳವಡಿಸಿಕೊಳ್ಳದಿರುವುದನ್ನು ಸೂಚಿಸುತ್ತದೆ. ಜಿಲ್ಲಾ ಪಂಚಾಯಿತಿಗಳು ಪ್ರಸ್ತಾವಿಸಿದ ಮಾನವ ದಿನಗಳು, ರಾಜ್ಯ ಮಟ್ಟದಲ್ಲಿ ಅನುಮೋದಿಸಲ್ಪಟ್ಟ ಮಾನವ ದಿನಗಳು ಮತ್ತು 2019–20ರಿಂದ 2023–24ರ ಅವಧಿಯಲ್ಲಿ ಉತ್ಪತ್ತಿ ಮಾಡಿದ ಮಾನವ ದಿನಗಳ ನಡುವಿನ ಅಸಂಗತತೆಯನ್ನು **ನಕ್ಷೆ–3.1**ರಲ್ಲಿ ನೀಡಲಾಗಿದೆ.

**ನಕ್ಷೆ 3.1: ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ ಪ್ರಸ್ತಾಪಿತ, ಅನುಮೋದಿತ ಮತ್ತು ಉತ್ಪತ್ತಿ ಮಾಡಿದ ಮಾನವ ದಿನಗಳು**




**ಮೂಲ: ಇಲಾಖೆ ಒದಗಿಸಿದ ಮಾಹಿತಿ**

ಜಿಲ್ಲೆಗಳಿಂದ ತಿಂಗಳವಾರು ಕಾರ್ಮಿಕ ಆಯವ್ಯಯ ಪ್ರಕ್ಷೇಪಣೆಗಳನ್ನು ಅನುಸರಿಸಲಿಲ್ಲ ಮತ್ತು ಜಿಲ್ಲಾ ಪಂಚಾಯಿಗಳು ನೀಡಿದ ಪ್ರಸ್ತುತಿಗಳ ಆಧಾರದ ಮೇಲೆ ಮಾನವ ದಿನಗಳ ವಿಷಯದಲ್ಲಿ ಕೌಶಲ್ಯರಹಿತ ಕಾರ್ಮಿಕರ ಬೇಡಿಕೆಯನ್ನು ಗ್ರಾಮಾಭಿವೃದ್ಧಿ ಸಚಿವಾಲಯಕ್ಕೆ ಪ್ರಸ್ತುತಪಡಿಸಲಾಯಿತು ಎಂದು ರಾಜ್ಯ ಸರ್ಕಾರವು ಒಪ್ಪಿಕೊಂಡಿತು (ಮೇ 2025). 2025–26ನೇ ವರ್ಷದಿಂದ ಎಂಡ್ 2 ಎಂಡ್ ಕಾರ್ಯ ಯೋಜನೆ ಮಾಡ್ಯೂಲ್ ಅನ್ನು[6] ಪರಿಚಯಿಸುವುದರೊಂದಿಗೆ ಕಾರ್ಯ ಯೋಜನೆಗಳ ತಯಾರಿಕೆಯನ್ನು ಸುವ್ಯವಸ್ಥಿತಗೊಳಿಸಲಾಗುವುದು ಎಂದೂ ತಿಳಿಸಲಾಯಿತು.

### *3.1.3 ರಾಜ್ಯ ಮಟ್ಟದಲ್ಲಿ ಯೋಜಿತ ಮತ್ತು ಸಾಧಿಸಿದ ಮಾನವ ದಿನಗಳಲ್ಲಿನ ಅಂತರಗಳು*

2019–20ರಿಂದ 2023–24ರವರೆಗಿನ ಅವಧಿಯಲ್ಲಿ ರಾಜ್ಯ ಮಟ್ಟದಲ್ಲಿ ಪ್ರಸ್ತಾಪಿಸಿದ, ಅನುಮೋದಿಸಲಾದ ಮತ್ತು ಉತ್ಪತ್ತಿ ಮಾಡಿದ ಮಾನವ ದಿನಗಳ ವಿವರಗಳನ್ನು **ಕೋಷ್ಟಕ–3.2**ರಲ್ಲಿ ನೀಡಲಾಗಿದೆ:

2019–20ರಿಂದ 2023–24ರವರೆಗಿನ ಅವಧಿಯಲ್ಲಿ ರಾಜ್ಯ ಮಟ್ಟದಲ್ಲಿ ಪ್ರಸ್ತಾವಿಸಿದ, ಅನುಮೋದಿಸಲಾದ ಮತ್ತು ಉತ್ಪತ್ತಿ ಮಾಡಿದ ವ್ಯಕ್ತಿ ದಿನಗಳ (ಪಿಡಿಗಳು) ವಿವರಗಳನ್ನು **ಕೋಷ್ಟಕ–3.2**ರಲ್ಲಿ ನೀಡಲಾಗಿದೆ:

**ಕೋಷ್ಟಕ 3.2: ರಾಜ್ಯ ಮಟ್ಟದಲ್ಲಿ ಪ್ರಸ್ತಾಪಿಸಿದ, ಅನುಮೋದಿಸಿದ ಮತ್ತು ಉತ್ಪಾದಿಸಲಾದ ಮಾನವ ದಿನಗಳು**

**(ಮಾನವ ದಿನಗಳು ಕೋಟಿಯಲ್ಲಿ)**

| ವರ್ಷ | ಎಂಐಎಸ್ ಆರ್2.1.2 ರ ಪ್ರಕಾರ ಅಂದಾಜು ಪಿಡಿಗಳು | ಎಲ್ ಬಿಯಲ್ಲಿ ಪ್ರಕ್ಷೇಪಿಸಿದ ಪಿಡಿಗಳು | ಭಾರತ ಸರ್ಕಾರದಿಂದ ಅನುಮೋದಿತ ಪಿಡಿಗಳು | ವಾಸ್ತವವಾಗಿ ಉತ್ಪಾದಿಸಿದ ಪಿಡಿಗಳು | ಭಾರತ ಸರ್ಕಾರದಿಂದ ಪಿಡಿಗಳಿಗೆ ಪರಿಷ್ಕೃತ ಅನುಮೋದನೆ |
|---|---|---|---|---|---|
| (1) | (2) | (3) | (4) | (5) | (6) |
| 2019–20 | ಲಭ್ಯವಿಲ್ಲ | 14.00 | 12.00 | 11.19 | – |
| 2020–21 | ಲಭ್ಯವಿಲ್ಲ | 15.00 | 13.00 | 14.80 | 14.65 |
| 2021–22 | 2933.18 | 18.00 | 13.00 | 16.32 | 16.00 |
| 2022–23 | 1852.25 | 16.00 | 13.00 | 12.58 | – |
| 2023–24 | 1245.02 | 13.80 | 13.00 | 13.89 | 14.00 |

**ಮೂಲ: ಇಲಾಖೆಯಿಂದ ಒದಗಿಸಲಾದ ಮಾಹಿತಿ (ಜೂನ್ 2024) ಮತ್ತು 16.11.2024 ರ ಎಂಐಎಸ್ ವರದಿ ಆರ್ 2.1.2.**

ಈ ಕೆಳಗಿನ ಅಂಶಗಳನ್ನು ಗಮನಿಸಲಾಯಿತು:

- ಎಂಐಎಸ್ ವರದಿ ಆರ್2.1.2 ಮತ್ತು ರಾಜ್ಯ ಸರ್ಕಾರವು ಯೋಜಿಸಿದ ಮಾನವ ದಿನಗಳಲ್ಲಿ ಭಾರಿ ವ್ಯತ್ಯಾಸಗಳಿದ್ದವು. ತತ್ಪರಿಣಾಮವಾಗಿ, ಎಂಐಎಸ್ ನಲ್ಲಿ ಸೇರಿಸಲಾದ ದತ್ತಾಂಶದ ನಿಖರತೆಯ ಬಗ್ಗೆ ಯಾವುದೇ ಭರವಸೆ ನೀಡಲು ಸಾಧ್ಯವಾಗಲಿಲ್ಲ.

- ಭಾರತ ಸರ್ಕಾರ ಅನುಮೋದಿಸಿದ ಮಾನವ ದಿನಗಳ ಸಂಖ್ಯೆ (ಅಂಕಣ–4) ರಾಜ್ಯ ಸರ್ಕಾರ ಪ್ರಕ್ಷೇಪಿಸಿದ್ದಕ್ಕಿಂತ ಕಡಿಮೆ (ಅಂಕಣ–3) ಇದ್ದಿತು. ಕಡಿಮೆ ಅನುಮೋದನೆಯು 0.80 ಕೋಟಿ ಮಾನವ ದಿನಗಳಿಂದ (2023–24) 5 ಕೋಟಿ ಮಾನವ ದಿನಗಳವರೆಗಿನ (2021–22) ವ್ಯಾಪ್ತಿಯಲ್ಲಿದ್ದಿತು. ಹಣದ ಲಭ್ಯತೆಗೆ ಈ ಕಡಿತವನ್ನು ಹೊಂದಾಣಿಕೆ ಮಾಡುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

[6] ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸ್ವೀಕರಿಸಿದ ಅರ್ಜಿಗಳನ್ನು ಮೇಲ್ವಿಚಾರಣೆ ಮಾಡಲು ಮತ್ತು ಕಾರ್ಯ ಯೋಜನೆಗಳ ಸಮಯೋಚಿತ ಅನುಮೋದನೆಗಾಗಿ ಅಭಿವೃದ್ಧಿಪಡಿಸಲಾದ ಕೆಲಸದ ಹರಿವಿನ ವ್ಯವಸ್ಥೆ.

- 2019–20ರಿಂದ 2022–23ರವರೆಗಿನ ಅವಧಿಯಲ್ಲಿ, ರಾಜ್ಯ ಸರ್ಕಾರವು ಕಾರ್ಮಿಕ ಆಯವ್ಯಯದಲ್ಲಿ ಯೋಜಿತ ಮಾನವ ದಿನಗಳನ್ನು ಸೃಷ್ಟಿಸಲು ಸಾಧ್ಯವಾಗಲಿಲ್ಲ. ಯೋಜಿತ ಮಾನವ ದಿನಗಳ ಸಾಧನೆಯಲ್ಲಿನ ಕೊರತೆಯು 0.20 ಕೋಟಿ ಮಾನವ ದಿನಗಳು (2020–21) ಮತ್ತು 3.42 ಕೋಟಿ ಮಾನವ ದಿನಗಳ (2022–23) ನಡುವಿನ ವ್ಯಾಪ್ತಿಯಲ್ಲಿದ್ದಿತು.

- ರಾಜ್ಯದ ಕಾರ್ಯಕ್ಷಮತೆಯು ಅನುಮೋದಿತ ಕಾರ್ಮಿಕ ಆಯವ್ಯಯಕ್ಕಿಂತ ಅಧಿಕವಾಗಿದ್ದರೆ ಹಣಕಾಸು ವರ್ಷದ ಯಾವುದೇ ಸಮಯದಲ್ಲಿ ಕಾರ್ಮಿಕ ಆಯವ್ಯಯವನ್ನು ಪರಿಷ್ಕರಿಸಬಹುದು. ಇದರ ಹೊರತಾಗಿಯೂ, 2020–21 (0.15 ಕೋಟಿ ಮಾನವ ದಿನಗಳು) ಮತ್ತು 2021–22ರ (0.32 ಕೋಟಿ ಮಾನವ ದಿನಗಳು) ಅವಧಿಯಲ್ಲಿ ಮಾನವ ದಿನಗಳ ಹೆಚ್ಚುವರಿ ಉತ್ಪಾದನೆಯನ್ನು ಭಾರತ ಸರ್ಕಾರ ಅನುಮೋದಿಸಲಿಲ್ಲ (ಜೂನ್ 2024). ತತ್ಪರಿಣಾಮವಾಗಿ, 2020–21 ಮತ್ತು 2021–22ರ ಅವಧಿಯಲ್ಲಿ ಭಾರತ ಸರ್ಕಾರದ ಅನುಮೋದನೆಯನ್ನು ಮೀರಿ ಒಟ್ಟು ₹133.73 ಕೋಟಿಗಳ[7] ಪಾವತಿಗಳನ್ನು ಮಾಡಲಾಯಿತು.

2020–21 ಮತ್ತು 2021–22ರ ಅವಧಿಯಲ್ಲಿ ಉತ್ಪತ್ತಿ ಮಾಡಿದ ಅಧಿಕ ಮಾನವ ದಿನಗಳಿಗೆ ಅನುಮೋದನೆ ಪಡೆಯಲಾಗಿಲ್ಲ ಎಂದು ರಾಜ್ಯ ಸರ್ಕಾರ ಒಪ್ಪಿಕೊಂಡಿತು (ಮೇ 2025) ಮತ್ತು ವರದಿ ಆರ್2.12 ನಲ್ಲಿನ ಅಸಂಗತೆಗಳ ಬಗ್ಗೆ ಪ್ರಕರಣವನ್ನು ಎನ್ಐಸಿಯೊಂದಿಗೆ ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿತು.

### *3.1.4 ಕಾರ್ಮಿಕ ಬಜೆಟ್ ಸಲ್ಲಿಕೆಯಲ್ಲಿ ವಿಳಂಬ*

ಎಎಂಸಿ, 2019–20ರ ಕಂಡಿಕೆ–6.8 ಯೋಜನಾ ಪ್ರಕ್ರಿಯೆಯ ಕಾಲಮಿತಿಯನ್ನು ಸೂಚಿಸಿತ್ತು ಮತ್ತು ಅದನ್ನು **ಅನುಬಂಧ–3.3**ರಲ್ಲಿ ನೀಡಲಾಗಿದೆ.

ಕೆಳಗಿನ **ಕೋಷ್ಟಕ–3.3**ರಲ್ಲಿ ವಿವರಿಸಿರುವಂತೆ ಪರೀಕ್ಷಾ–ತನಿಖೆ ನಡೆಸಿದ ಗ್ರಾಮ ಪಂಚಾಯಿತಿಗಳಲ್ಲಿ ಪ್ರತಿ ಹಂತದಲ್ಲೂ ಕಾರ್ಮಿಕ ಬಜೆಟ್ ತಯಾರಿಕೆ ಮತ್ತು ಅನುಮೋದನೆಯಲ್ಲಿ ವಿಳಂಬವಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು:

**ಕೋಷ್ಟಕ–3.3: 40 ಪರೀಕ್ಷಾ–ತನಿಖೆ ನಡೆಸಿದ ಗ್ರಾಮ ಪಂಚಾಯಿತಿಗಳ ಕಾರ್ಮಿಕ ಆಯವ್ಯಯ ಅನುಮೋದನೆಯಲ್ಲಿ ವಿಳಂಬ**

| ವಿವರಗಳು | 2019–20 | 2020–21 | 2021–22 | 2022–23 | 2023–24 |
|---|---|---|---|---|---|
| ನಿಗದಿತ ದಿನಾಂಕದ ನಂತರ ಗ್ರಾಮ ಪಂಚಾಯಿತಿಯಿಂದ ಎಲ್ ಬಿ ಅನುಮೋದನೆ ಪಡೆದ ಗ್ರಾಮ ಪಂಚಾಯಿತಿಗಳ ಸಂಖ್ಯೆ. | 11 | 10 | 14 | 17 | 16 |
| ನಿಗದಿತ ದಿನಾಂಕದ ನಂತರ ಟಿಪಿಯಿಂದ ಎಲ್ ಬಿ ಅನುಮೋದನೆ ಪಡೆದ ಗ್ರಾಮ ಪಂಚಾಯಿತಿಗಳ ಸಂಖ್ಯೆ. | 28 | 29 | 28 | 28 | 24 |
| ನಿಗದಿತ ದಿನಾಂಕದ ನಂತರ ಜಿಲ್ಲಾ ಪಂಚಾಯಿತಿಯಿಂದ ಎಲ್ ಬಿ ಅನುಮೋದನೆ ಪಡೆದ ಗ್ರಾಮ ಪಂಚಾಯಿತಿಗಳ ಸಂಖ್ಯೆ. | 32 | 32 | 32 | 32 | 32 |
| ರಾಜ್ಯದ ಅನುಮೋದನೆಯ ನಂತರ ಜಿಲ್ಲಾ ಪಂಚಾಯಿತಿಯಿಂದ ಎಲ್ ಬಿ ಅನುಮೋದನೆ ಪಡೆದ ಗ್ರಾಮ ಪಂಚಾಯಿತಿಗಳ ಸಂಖ್ಯೆ. | 32 | 32 | 32 | 32 | 22 |

2019–20 ರಿಂದ 2023–24ರ ಅವಧಿಯಲ್ಲಿ ಕೆಳಗಿನ ಅಂಶಗಳನ್ನು ಗಮನಿಸಲಾಯಿತು:

- 10ರಿಂದ 17 ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳು ತಮ್ಮ ಕಾರ್ಮಿಕ ಆಯವ್ಯಯಗಳನ್ನು ನಿಗದಿತ ದಿನಾಂಕದ (ಡಿಸೆಂಬರ್ 5) ನಂತರ ಅನುಮೋದಿಸಿದ್ದವು.

[7] 0.15 ಕೋಟಿ × ₹275 (ವೇತನ ದರ 2020–21) + 0.32 crore × ₹289 (ವೇತನ ದರ 2021–22) = ₹133.73 ಕೋಟಿ.

- 24ರಿಂದ 29ರ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳ ಕಾರ್ಮಿಕ ಆಯವ್ಯಯಗಳನ್ನು ನಿಗದಿತ ದಿನಾಂಕದ (ಡಿಸೆಂಬರ್ 20) ನಂತರ ಆಯಾ ತಾಲೂಕು ಪಂಚಾಯಿತಿಗಳು ಅನುಮೋದಿಸಿದ್ದವು.
- ಅದೇ ರೀತಿ, ಪರೀಕ್ಷಾ–ತನಿಖೆಗೆ ಒಳಗಾದ 40 ಗ್ರಾಮ ಪಂಚಾಯಿತಿಗಳ ಪೈಕಿ 32 ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಮಿಕ ಆಯವ್ಯಯದ ಅನುಮೋದನೆಯಲ್ಲಿ ಆಯಾ ಜಿಲ್ಲಾ ಪಂಚಾಯಿತಿಗಳಿಂದ ವಿಳಂಬವಾಗಿತ್ತು. ಈ ಪ್ರಕರಣಗಳಲ್ಲಿ ಹೆಚ್ಚಿನವುಗಳಲ್ಲಿ, ರಾಜ್ಯ ಸರ್ಕಾರವು ಕಾರ್ಮಿಕ ಆಯವ್ಯಯವನ್ನು ಅನುಮೋದಿಸಿದ ನಂತರ ಜಿಲ್ಲಾ ಪಂಚಾಯಿತಿಗಳು ಅನುಮೋದನೆ ನೀಡಿದ್ದವು.
- ಕೇಂದ್ರ ಸರ್ಕಾರಕ್ಕೆ ಕಾರ್ಮಿಕ ಬಜೆಟ್ ಸಲ್ಲಿಸಲು ನಿಗದಿತ ದಿನಾಂಕ ಫೆಬ್ರವರಿ 10 ಆಗಿತ್ತು, ಆದರೆ 2019–20ರಿಂದ 2023–24ರ ಅವಧಿಯಲ್ಲಿ 10 ರಿಂದ 42[8] ದಿನಗಳವರೆಗೆ ವಿಳಂಬವಾಗಿತ್ತು.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನೆಯ ಅವಲೋಕನವನ್ನು (ಮೇ 2025) ಒಪ್ಪಿಕೊಂಡಿತು ಮತ್ತು 2025–26ನೇ ವರ್ಷದಿಂದ ಎಂಡ್2ಎಂಡ್ ಕಾರ್ಯ ಯೋಜನೆ ಮಾಡ್ಯೂಲ್ ಅನ್ನು ಪರಿಚಯಿಸಿದ್ದು ಕಾರ್ಮಿಕ ಆಯವ್ಯಯಕ್ಕೆ ಸಮಯೋಚಿತ ಅನುಮೋದನೆಯನ್ನು ಖಚಿತಪಡಿಸುತ್ತದೆ ಎಂದು ತಿಳಿಸಿತು.

ಹೀಗೆ, ಕಾರ್ಮಿಕ ಆಯವ್ಯಯ ತಯಾರಿಕೆಯಲ್ಲಿ ತಳಮಟ್ಟದಿಂದ ಮೇಲಕ್ಕೆ ಬರುವ ವಿಧಾನದ ಬದಲಿಗೆ ಇಲಾಖೆಯು ಮೇಲಿನಿಂದ ಕೆಳಗಿನ ವಿಧಾನವನ್ನು ಅಳವಡಿಸಿಕೊಂಡಿದ್ದರಿಂದ ಕಾರ್ಮಿಕ ಆಯವ್ಯಯ ತಯಾರಿಕೆಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಅಲ್ಪ ಭಾಗವಹಿಸುವಿಕೆಗೆ ಕಾರಣವಾಯಿತು. ಇದು ಗ್ರಾಮಸಭೆಗಳಲ್ಲಿ ಭಾಗವಹಿಸುವ ಕಾರ್ಮಿಕರ ಹಕ್ಕನ್ನು ನಿರಾಕರಿಸುವಲ್ಲಿ ಮತ್ತು ಎಂ.ಜಿ.ಎನ್.ಆರ್.ಇ.ಜಿ.ಎಸ್ ಅಡಿಯಲ್ಲಿ ಕೈಗೊಳ್ಳಬೇಕಾದ ಕಾಮಗಾರಿಗಳ ಸ್ವರೂಪ/ಆದ್ಯತೆಯನ್ನು ನಿರ್ಧರಿಸಲು ಕಾರಣವಾಯಿತು.

***ಗ್ರಾಮ ಸಭಾ ಸಭೆಗಳ ಬಗ್ಗೆ ಫಲಾನುಭವಿಗಳ ಪ್ರತಿಕ್ರಿಯೆ***

ಸಮೀಕ್ಷೆಯ ಸಮಯದಲ್ಲಿ ಗ್ರಾಮಸಭಾ ಸಭೆಗಳಲ್ಲಿ ಕೇಳಿದ ಪ್ರಶ್ನೆಗಳಿಗೆ ಮಾದರಿ ಫಲಾನುಭವಿಗಳಿಂದ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಯಿತು. ತಮ್ಮ ಗ್ರಾಮಗಳಲ್ಲಿ ನಡೆದ ಗ್ರಾಮ ಸಭಾ ಸಭೆಗಳಿಗೆ ಹಾಜರಾಗಿದ್ದೆವು ಎಂದು ಶೇಕಡಾ 57ರಷ್ಟು ಫಲಾನುಭವಿಗಳು ಹೇಳಿದರೆ, ಶೇಕಡಾ 12ರಷ್ಟು ಫಲಾನುಭವಿಗಳು ಗ್ರಾಮದಲ್ಲಿ ಗ್ರಾಮ ಸಭಾ ಸಭೆಗಳ ಬಗ್ಗೆ ಸಾಕಷ್ಟು ಜಾಹೀರಾತು ನೀಡಿರಲಿಲ್ಲ ಎಂದು ತಿಳಿಸಿದರು. ಎಂ.ಜಿ.ಎನ್.ಆರ್.ಇ.ಜಿ.ಎಸ್ ಕಾಮಗಾರಿಗಳ ವಿವರಗಳನ್ನು ಪಂಚಾಯತ್ ಕಚೇರಿ ಕಟ್ಟಡದ ಗೋಡೆಗಳು ಮತ್ತು ನೋಟೀಸ್ ಬೋರ್ಡ್‌ಗಳ ಮೇಲೆ ಚಿತ್ರಿಸಲಾಗಿತ್ತು ಅಥವಾ ಬರೆಯಲಾಗಿತ್ತು ಎಂದು 299 ಫಲಾನುಭವಿಗಳು (ಶೇಕಡಾ 75) ಹೇಳಿಕೊಂಡರೂ, ಎಂ.ಜಿ.ಎನ್.ಆರ್.ಇ.ಜಿ.ಎಸ್ ಕಾಮಗಾರಿಗಳ ಆಯ್ಕೆಯನ್ನು ಗ್ರಾಮಸಭೆ ಸಭೆಗಳಲ್ಲಿ ಹೆಚ್ಚಾಗಿ ಚರ್ಚಿಸಲಾಗಿತ್ತು ಮತ್ತು ಅಗತ್ಯಕ್ಕೆ ಅನುಗುಣವಾಗಿ ಕಾಮಗಾರಿಗಳಿಗೆ ಆದ್ಯತೆ ನೀಡಲಾಗಿತ್ತು ಎಂದು ಕೇವಲ 39 ಫಲಾನುಭವಿಗಳು (ಶೇಕಡಾ 10) ಮಾತ್ರ ತಿಳಿಸಿದರು

**ಶಿಫಾರಸು–1: ಯೋಜನಾ ಪ್ರಕ್ರಿಯೆಯಲ್ಲಿ ಎಲ್ಲಾ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳ ಸಮಗ್ರ ಭಾಗವಹಿಸುವಿಕೆಯನ್ನು ಖಚಿತಪಡಿಸುವ ಎಂ.ಜಿ.ಎನ್.ಆರ್.ಇ.ಜಿ.ಎಸ್ ಯೋಜನೆಯಲ್ಲಿ ರಾಜ್ಯ ಸರ್ಕಾರವು ತಳಮಟ್ಟದ ವಿಧಾನವನ್ನು ಖಚಿತಪಡಿಸಿಕೊಳ್ಳಬೇಕು. ಅನುಮೋದಿತ ಕಾರ್ಮಿಕ**

[8] 2019–20 ರಿಂದ 2023–24 ರವರೆಗಿನ ವರ್ಷಗಳ ಕಾರ್ಮಿಕ ಬಜೆಟ್‌ಗಳನ್ನು ರಾಜ್ಯ ಸರ್ಕಾರವು ಕ್ರಮವಾಗಿ 20.02.2019 (10 ದಿನಗಳ ವಿಳಂಬ), 21.02.2020 (11 ದಿನಗಳ ವಿಳಂಬ), 04.03.2021 (22 ದಿನಗಳ ವಿಳಂಬ), 07.03.2022 (25 ದಿನಗಳ ವಿಳಂಬ), 24.03.2023 (42 ದಿನಗಳ ವಿಳಂಬ) ರಂದು ಎಂಒಆರ್‌.ಡಿಗೆ ಸಲ್ಲಿಸಿದೆ.

**ಆಯವ್ಯಯಕ್ಕಿಂತ ಅಧಿಕವಾಗಿ ಉತ್ಪಾದಿಸಿದ ಮಾನವ ದಿನಗಳಿಗೆ ಅನುಮೋದನೆ ಪಡೆಯಲು ಕ್ರಮ ಕೈಗೊಳ್ಳಬೇಕು.**

### 3.2 ಎಂ.ಜಿ.ಎನ್.ಆರ್.ಇ.ಜಿ.ಎಸ್‌ನ ಮಾನವ ಸಂಪನ್ಮೂಲದ ಸ್ಥಿತಿಗತಿ

ಎಂ.ಜಿ.ಎನ್.ಆರ್.ಇ.ಜಿ.ಎ ಸೆಕ್ಷನ್ 18ರ ಪ್ರಕಾರ ರಾಜ್ಯ ಸರ್ಕಾರವು ಜಿಲ್ಲಾ ಕಾರ್ಯಕ್ರಮ ಸಂಯೋಜಕ (ಡಿಪಿಸಿ) ಮತ್ತು ಕಾರ್ಯಕ್ರಮ ಅಧಿಕಾರಿಗೆ (ಪಿಒ) ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಅಗತ್ಯವಿರುವ ಸಿಬ್ಬಂದಿ ಮತ್ತು ತಾಂತ್ರಿಕ ಬೆಂಬಲವನ್ನು ಲಭ್ಯವಾಗುವಂತೆ ಮಾಡಬೇಕು. ರಾಜ್ಯ ಮಟ್ಟದಲ್ಲಿ ವೃತ್ತಿಪರ ಸೇವೆಗಳನ್ನು ಒದಗಿಸಲು ಗುತ್ತಿಗೆ ಆಧಾರದ ಮೇಲೆ ಸಹ ಪೋಷಕ ಸಿಬ್ಬಂದಿಯನ್ನು ನೇಮಿಸಿಕೊಳ್ಳಬಹುದು. ಪದಾಧಿಕಾರಿಗಳ ನೇಮಕಾತಿ ನೀತಿಯನ್ನು ರಾಜ್ಯ ಸರ್ಕಾರವೇ ನಿರ್ಧರಿಸುತ್ತದೆ. ನೇಮಕಾತಿ ಪ್ರಕ್ರಿಯೆಯಲ್ಲಿ ಗುತ್ತಿಗೆ ಆಧಾರಿತ ಉದ್ಯೋಗಕ್ಕಾಗಿ ರಾಜ್ಯದ ಮೀಸಲಾತಿ ನೀತಿಯನ್ನು ಅನುಸರಿಸಬೇಕು ಮತ್ತು ಎಂ.ಜಿ.ಎನ್.ಆರ್.ಇ.ಜಿ.ಎಸ್ ಸಿಬ್ಬಂದಿಯಲ್ಲಿ ಮಹಿಳೆಯರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಂಗವಿಕಲರು ಇತ್ಯಾದಿಗಳಿಗೆ ಸಮರ್ಪಕ ಪ್ರಾತಿನಿಧ್ಯ ಇರಬೇಕು ಎಂದು 2013ರ ಕಾರ್ಯಾಚರಣಾ ಮಾರ್ಗಸೂಚಿಗಳ ಕಂಡಿಕೆ 4.6.7 ಷರತ್ತು ವಿಧಿಸುತ್ತದೆ.

ಗುತ್ತಿಗೆ ಸಿಬ್ಬಂದಿಯ ನೇಮಕಾತಿಯನ್ನು ಹೊರಗುತ್ತಿಗೆ ಏಜೆನ್ಸಿಗಳ ಮೂಲಕ ಮಾಡಲಾಗಿರುವುದನ್ನು ಮತ್ತು ಅಂತಹ ಗುತ್ತಿಗೆ ನೇಮಕಾತಿಯಲ್ಲಿ ಯಾವುದೇ ಮೀಸಲಾತಿ ನೀತಿಯನ್ನು ಅನುಸರಿಸದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ತತ್ಪರಿಣಾಮವಾಗಿ ಕಾರ್ಯಾಚರಣಾ ಮಾರ್ಗಸೂಚಿಗಳಲ್ಲಿ ಕಲ್ಪಿಸಲಾಗಿದ್ದರೂ ಮಹಿಳೆಯರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು, ಅಂಗವಿಕಲರು ಇತ್ಯಾದಿಗಳಿಗೆ ಸಾಕಷ್ಟು ಪ್ರಾತಿನಿಧ್ಯವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಪರೀಕ್ಷಾ-ತನಿಖೆ ನಡೆಸಿದ ಐದು ಜಿಲ್ಲೆಗಳಲ್ಲಿ ಮಂಜೂರಾದ ಸಿಬ್ಬಂದಿಯ ಕೊರತೆ (ಹೊರಗುತ್ತಿಗೆ/ ಗೌರವಧನ) ಶೇಕಡಾ 7ರಿಂದ 29ರ ನಡುವಿನ ವ್ಯಾಪ್ತಿಯಲ್ಲಿರುವುದನ್ನು ಸಹ ಲೆಕ್ಕಪರಿಶೋಧನೆಯು ಗಮನಿಸಿತು.

ತಾಂತ್ರಿಕ ಸಹಾಯಕರು (ತೋಟಗಾರಿಕೆ, ಕೃಷಿ, ಅರಣ್ಯ, ರೇಷ್ಮೆ ಸಾಕಣೆ), ಗ್ರಾಮ ಕಾಯಕ್ ಮಿತ್ರ, ಆಡಳಿತಾತ್ಮಕ ಸಹಾಯಕರು, ಡೇಟಾ ಎಂಟ್ರಿ ಆಪರೇಟರ್ ಗಳು ಮುಂತಾದ ಪ್ರಮುಖ ಹುದ್ದೆಗಳಿಗೆ ಸಂಬಂಧಿಸಿದಂತೆ ಹೆಚ್ಚು ಕೊರತೆ (ಶೇಕಡಾ 25ಕ್ಕಿಂತ ಹೆಚ್ಚು) ಕಂಡುಬಂದಿತ್ತು. ನಿರ್ಣಾಯಕ ಕ್ಷೇತ್ರಗಳ ಕಾರ್ಯನಿರ್ವಹಣೆಗೆ ಸಂಬಂಧಿಸಿದ ಹುದ್ದೆಗಳಲ್ಲಿನ ಖಾಲಿ ಹುದ್ದೆಗಳು ಯೋಜನೆಯ ಅನುಷ್ಠಾನದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತವೆ.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ಅವಲೋಕನವನ್ನು ಒಪ್ಪಿಕೊಂಡಿತು ಮತ್ತು ಸಿಬ್ಬಂದಿಯ ಅಗತ್ಯತೆಯನ್ನು ನಿರ್ಧರಿಸಿ ಅದಕ್ಕನುಗುಣವಾಗಿ ಆಯ್ಕೆ ಮಾಡಲಾಗುವುದು ಎಂದು ತಿಳಿಸಿತು (ಮೇ 2025).

### 3.3 ಸಹೋದ್ಯೋಗಿಗಳ ನೇಮಕದಲ್ಲಿ ಮಹಿಳೆಯರು ಮತ್ತು ವಿಕಲಚೇತನರಿಗೆ ಆದ್ಯತೆಯ ಕೊರತೆ

ಕಾರ್ಯಾಚರಣಾ ಮಾರ್ಗದರ್ಶಿ ಸೂತ್ರಗಳು, 2013ರ ಕಂಡಿಕೆ 7.11.1, ಕಾರ್ಮಿಕರ ಹಾಜರಾತಿಯನ್ನು ತೆಗೆದುಕೊಳ್ಳುವುದು ಸೇರಿದಂತೆ ಕೆಲಸದ ಸ್ಥಳದ ಸೌಲಭ್ಯಗಳನ್ನು ನಿರ್ವಹಿಸುವಲ್ಲಿ ಗ್ರಾಮ ರೋಜ್ ಗಾರ್ ಸಹಾಯಕರಿಗೆ ಸಹಾಯ ಮಾಡಲು ಸಹೋದ್ಯೋಗಿಗಳನ್ನು ನೇಮಕ ಮಾಡಲು ಅವಕಾಶ ಕಲ್ಪಿಸಿದೆ. ಸಹೋದ್ಯೋಗಿಗಳ ನೇಮಕದಲ್ಲಿ ಮಹಿಳಾ ಕಾರ್ಮಿಕರು ಅಥವಾ ಸೂಚಿಸಿದ ಕರ್ತವ್ಯಗಳನ್ನು ನಿರ್ವಹಿಸಲು ಸಾಕಷ್ಟು ತರಬೇತಿ ಪಡೆದ ವಿಕಲಚೇತನರಿಗೆ ಆದ್ಯತೆ ನೀಡಬೇಕು ಎಂದೂ ಸಹ ಅದು ಷರತ್ತು ವಿಧಿಸಿತ್ತು. ಸಹೋದ್ಯೋಗಿಗಳ ಸಂಭಾವನೆಯು ಅವನ/ಅವಳ ಕೆಲಸದ ಮಾನವ ದಿನಗಳನ್ನು ಆಧರಿಸಿರಬೇಕು, ಅರೆ-

ನುರಿತ ಕಾರ್ಮಿಕರಿಗೆ ಸಮಾನವಾದ ವೇತನ ದರದಲ್ಲಿ ಲೆಕ್ಕಹಾಕಬೇಕು ಮತ್ತು ಯೋಜನೆಯ ಸಾಮಗ್ರಿ ಘಟಕದಡಿಯ ವೆಚ್ಚದ ಅಂದಾಜಿನಲ್ಲಿ ಸೇರಿಸಬೇಕು (ಕಂಡಿಕೆ 4.12 (vi)).

ಪರೀಕ್ಷಾ-ತನಿಖೆ ನಡೆಸಿದ ಗ್ರಾಮ ಪಂಚಾಯಿತಿಗಳು ಒದಗಿಸಿದ ಮಾಹಿತಿಯ ಪರಿಶೀಲನೆಯು ಐದು[9] ಗ್ರಾಮಪಂಚಾಯಿತಿಗಳಲ್ಲಿ (ಮಾರ್ಚ್ 2024) ಯಾವುದೇ ಸಹೋದ್ಯೋಗಿಗಳನ್ನು ನೇಮಿಸಿರಲಿಲ್ಲ ಎಂದು ತೋರಿಸಿತು. ಉಳಿದ 35 ಗ್ರಾಮ ಪಂಚಾಯಿತಿಗಳಲ್ಲಿ, 730 ಸಹೋದ್ಯೋಗಿಗಳನ್ನು ನೇಮಿಸಲಾಯಿತು, ಅದರಲ್ಲಿ 196 (ಶೇಕಡಾ 27) ಮಹಿಳೆಯರು ಮತ್ತು ಕೇವಲ ಇಬ್ಬರು (ಶೇಕಡಾ 0.27) ವಿಕಲಚೇತನರು ಇದ್ದರು. ಈ 35 ಗ್ರಾಮ ಪಂಚಾಯಿತಿಗಳಲ್ಲಿ ಮೂರರಲ್ಲಿ (ಮುದಗಂದೂರು, ಚಿಕ್ಕರಸಿನಕೆರೆ ಮತ್ತು ಹಿರೋಳ್ಳಿ) ಮಾತ್ರ ಸಹೋದ್ಯೋಗಿಗಳಿಗೆ ಸಂಭಾವನೆಯನ್ನು ಪಾವತಿಸಲಾಗಿತ್ತು. 32 ಗ್ರಾಮ ಪಂಚಾಯತಿಗಳಲ್ಲಿ ಸಹೋದ್ಯೋಗಿಗಳನ್ನು ನೇಮಿಸಲಾಯಿತು, ಆದರೆ ಸಂಭಾವನೆಯನ್ನು ಪಾವತಿಸಲಾಗಿಲ್ಲ ಅಥವಾ ಲೆಕ್ಕಪರಿಶೋಧನೆಗೆ ವಿವರಗಳನ್ನು ಒದಗಿಸಲಿಲ್ಲ. ಹೀಗೆ, ಸಹೋದ್ಯೋಗಿಗಳ ನೇಮಕಾತಿಯಲ್ಲಿ ಮಹಿಳಾ ಕಾರ್ಮಿಕರು/ವಿಕಲಚೇತನರಿಗೆ ಆದ್ಯತೆಯ ಕೊರತೆಯು ಕಾರ್ಯಾಚರಣೆಯ ಮಾರ್ಗಸೂಚಿಗಳ ನಿಬಂಧನೆಗಳನ್ನು ಉಲ್ಲಂಘಿಸುತ್ತದೆ ಮತ್ತು ಸಂಭಾವನೆಯನ್ನು ಪಾವತಿಸದಿರುವುದು ನೇಮಕಗೊಂಡ ಸಹೋದ್ಯೋಗಿಗಳನ್ನು ನಿರುತ್ಸಾಹಗೊಳಿಸುತ್ತದೆ.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ಅವಲೋಕನವನ್ನು (ಮೇ 2025) ಒಪ್ಪಿಕೊಂಡಿತು ಮತ್ತು ಮಹಿಳಾ ಕಾರ್ಮಿಕರಿಗೆ ವಿಶೇಷ ಪರಿಗಣನೆಯೊಂದಿಗೆ ಸಕ್ರಿಯ ಸಹೋದ್ಯೋಗಿಗಳನ್ನು ನೋಂದಾಯಿಸಲು 2024–25ರ ಅವಧಿಯಲ್ಲಿ ವಿಶೇಷ ಅಭಿಯಾನವನ್ನು ನಡೆಸಲಾಗಿದೆ ಎಂದು ತಿಳಿಸಿತು.

**ಶಿಫಾರಸು 2: ಮೀಸಲಾತಿ ನೀತಿಯನ್ನು ಅನುಸರಿಸಿ ಎಂ.ಜಿ.ಎನ್.ಆರ್.ಇ.ಜಿ.ಎಸ್ ಅಡಿಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಮತ್ತು ಮಹಿಳೆಯರು ಮತ್ತು ವಿಕಲಚೇತನರಿಗೆ ಸಾಕಷ್ಟು ಪ್ರಾತಿನಿಧ್ಯ ನೀಡಲು ಇಲಾಖೆ ಕ್ರಮ ಕೈಗೊಳ್ಳಬೇಕು.**

## 3.4 ಮಾನವ ಸಂಪನ್ಮೂಲ ಸೇವೆಗಳ ಹೊರಗುತ್ತಿಗೆ

ಮಾನವಶಕ್ತಿ ಸೇವೆಗಳ ನೇಮಕದಲ್ಲಿನ ಲೋಪದೋಶಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

### *3.4.1 ಮಾನವ ಸಂಪನ್ಮೂಲ ಸೇವೆಗಳ ಹೊರಗುತ್ತಿಗೆಗಾಗಿ ಒಪ್ಪಂದಗಳ ಅಕ್ರಮ ಮತ್ತು ಅನಧಿಕೃತ ವಿಸ್ತರಣೆ*

ಸರಕು/ಸೇವೆಗಳ ಮೌಲ್ಯವು ಒಂದು ಲಕ್ಷ ರೂಪಾಯಿ ಮೀರಿದಾಗ (27 ಏಪ್ರಿಲ್ 2020ರಿಂದ ಜಾರಿಗೆ ಬಂದಂತೆ ಐದು ಲಕ್ಷ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ) ಟೆಂಡರ್ ಪ್ರಕ್ರಿಯೆಯನ್ನು ಅನುಸರಿಸಬೇಕು ಎಂದು ಕೆಟಿಪಿಪಿ ಕಾಯಿದೆಯ ಸೆಕ್ಷನ್ 4 (ಇ) ನಿಗದಿಪಡಿಸುತ್ತದೆ

29 ಜಿಲ್ಲೆಗಳಲ್ಲಿ ಎಂ.ಜಿ.ಎನ್.ಆರ್.ಇ.ಜಿ.ಎಸ್ ಅಡಿಯಲ್ಲಿ 2,920 ಸಿಬ್ಬಂದಿಗಳ ಸೇವೆಗಳನ್ನು ಹೊರಗುತ್ತಿಗೆ ನೀಡಲು ಎಂ.ಜಿ.ಎನ್.ಆರ್.ಇ.ಜಿ.ಎಸ್ ಆಯುಕ್ತರ ಕಚೇರಿಯು ಮಾನವ ಸಂಪನ್ಮೂಲ ಸಂಸ್ಥೆಗಳಿಂದ ಟೆಂಡರ್ ಆಹ್ವಾನಿಸಿತ್ತು (ಅಕ್ಟೋಬರ್ 2012) ಎಂದು ದಾಖಲೆಗಳ ಪರಿಶೀಲನೆಯಿಂದ ತಿಳಿದುಬಂದಿತು. ಟೆಂಡರ್ ಮೌಲ್ಯಮಾಪನದ ನಂತರ, 29 ಜಿಲ್ಲೆಗಳಿಗೆ 14 ಏಜೆನ್ಸಿಗಳನ್ನು ಆಯ್ಕೆ ಮಾಡಲಾಯಿತು. 29 ಜನವರಿ 2013ರಂದು ಪರೀಕ್ಷಾ-ತನಿಖೆ ನಡೆಸಿದ ಐದು ಜಿಲ್ಲೆಗಳಲ್ಲಿ ಸಂಕಲ್ಪ ಪತ್ರಗಳನ್ನು ನೀಡಲಾಯಿತು. ಪ್ರಸ್ತಾವನೆಯ ವಿನಂತಿಯ ಷರತ್ತು (ಆರ್.ಎಫ್.ಪಿ) 11 ಮತ್ತು 2 (viii)ರ ಪ್ರಕಾರ, ಒಪ್ಪಂದಗಳ ಅವಧಿಯು 31 ಜುಲೈ 2016ರವರೆಗೆ ಇದ್ದಿತು (ಒಂದು ವರ್ಷದ ವಿಸ್ತೃತ ಅವಧಿ ಸೇರಿದಂತೆ).

[9] ದಸರಿಘಟ್ಟ, ಗ್ಯಾರಘಟ್ಟ, ಹಿಂಡಿಸ್ಕೆರೆ ಮತ್ತು ಸಾರ್ಥವಳ್ಳಿ (ತಿಪಟೂರು ತಾಲೂಕು); ಹಡವನಹಳ್ಳಿ (ತುರುವೇಕೆರೆ ತಾಲ್ಲೂಕು).

ಇಲಾಖೆಯ ಪ್ರಸ್ತಾವನೆಗೆ ಅನುಗುಣವಾಗಿ, ಸಚಿವ ಸಂಪುಟವು ಹಾಲಿ ಸಂಸ್ಥೆಗಳಿಗೆ 30.06.2018ರವರೆಗೆ ಕಾಲಾವಕಾಶವನ್ನು ವಿಸ್ತರಿಸಲು ಅನುಮೋದನೆ ನೀಡಿತು (ಆಗಸ್ಟ್ 2016 ಮತ್ತು ಮಾರ್ಚ್ 2018) ಮತ್ತು ತಕ್ಷಣವೇ ಹೊಸ ಟೆಂಡರ್ ಕರೆಯುವಂತೆ ಸೂಚನೆ ನೀಡಿತು. ಆದರೆ, ಈ ನಿಟ್ಟಿನಲ್ಲಿ ಮೇ 2018, ಜೂನ್ 2019 ಮತ್ತು ಡಿಸೆಂಬರ್ 2021ರಲ್ಲಿ ಜಾರಿ ಮಾಡಲಾದ ಟೆಂಡರ್ ಅಧಿಸೂಚನೆಗಳನ್ನು ಆಡಳಿತಾತ್ಮಕ ಕಾರಣಗಳನ್ನು ಉಲ್ಲೇಖಿಸಿ ರದ್ದುಪಡಿಸಲಾಯಿತು. ತತ್ಪರಿಣಾಮವಾಗಿ, ಜನವರಿ 2013ರಲ್ಲಿ ನೇಮಕಗೊಂಡ ಏಜೆನ್ಸಿಗಳು (ಮರುನಿಯೋಜಿತ ಏಜೆನ್ಸಿಗಳು ಸೇರಿದಂತೆ) ಪರೀಕ್ಷಾ-ತನಿಖೆ ನಡೆಸಿದ ಐದು ಜಿಲ್ಲೆಗಳಲ್ಲಿ ಮಾನವಶಕ್ತಿ ಸೇವೆಗಳನ್ನು ಒದಗಿಸುವುದನ್ನು ಮುಂದುವರಿಸಿದ್ದವು ಮತ್ತು 2019-20ರಿಂದ 2023-24ರ ಅವಧಿಯಲ್ಲಿ ಒಟ್ಟು ₹86.67 ಕೋಟಿಗಳನ್ನು ಪಾವತಿ ಮಾಡಲಾಗಿತ್ತು. ಈ ಕೆಳಗಿನ ಕಾರಣಗಳಿಗಾಗಿ ಇದು ಅಕ್ರಮ ಮತ್ತು ಅನಧಿಕೃತವಾಗಿತ್ತು:

- ಆರ್.ಎಫ್.ಪಿ ಪ್ರಕಾರ ಒಪ್ಪಂದಗಳ ಅವಧಿಯನ್ನು 31 ಜುಲೈ 2016ರವರೆಗೆ ಮಾತ್ರ ವಿಸ್ತರಿಸಬಹುದಾಗಿತ್ತು. ನಂತರ ಕೆಟಿಪಿಪಿ ಕಾಯ್ದೆಯ ನಿಬಂಧನೆಗಳ ಪ್ರಕಾರ ಹೊಸ ಟೆಂಡರ್ ಕರೆಯಬೇಕಾಗಿತ್ತು. ಅದನ್ನು ಅನುಸರಿಸದಿರುವುದು ಇಲಾಖೆಯು ಸ್ಪರ್ಧಾತ್ಮಕ ದರಗಳನ್ನು ಪಡೆಯುವ ಅವಕಾಶವನ್ನು ಕಳೆದುಕೊಳ್ಳುವಲ್ಲಿ ಪರಿಣಮಿಸಿತು.

- ಕರ್ನಾಟಕ ಸರ್ಕಾರದ (ವ್ಯವಹಾರದ ವಹಿವಾಟು) ನಿಯಮಗಳು, 1977ರ ಪ್ರಕಾರ, ಸರಕು ಮತ್ತು ಸೇವೆಗಳ ಖರೀದಿಯ ಪರಿಷ್ಕೃತ ವೆಚ್ಚವು ₹10 ಕೋಟಿಗಳನ್ನು ಮೀರಿದರೆ ಮಂತ್ರಿಮಂಡಲದ ಅನುಮೋದನೆ ಕಡ್ಡಾಯವಾಗಿದೆ (ನಿಯಮ 20 ಅನ್ನು ಮೊದಲ ವೇಳಾಪಟ್ಟಿ ಷರತ್ತು 15ಎರೂಂದಿಗೆ). ಇದಲ್ಲದೆ, ಯಾವುದೇ ಪ್ರಾಧಿಕಾರವು ತನ್ನದೇ ಮಂಜೂರಾತಿಯ ಅಧಿಕಾರವನ್ನು ಮೀರಿ ವೆಚ್ಚ ಮಾಡುವ ಸಾಧ್ಯತೆ ಇರುವ ಒಳಗೊಂಡಿರುವ ಯಾವುದೇ ವೆಚ್ಚವನ್ನು ಮಂಜೂರು ಮಾಡಬಾರದು ಎಂದು ಕರ್ನಾಟಕ ಹಣಕಾಸು ಸಂಹಿತೆ, 1958ರ ಕಂಡಿಕೆ 15(4) ಷರತ್ತು ವಿಧಿಸುತ್ತದೆ.

  30 ಜೂನ್ 2018ರ ನಂತರದ ಅವಧಿಗೆ ಸಂಪುಟದಿಂದ ಯಾವುದೇ ಸಮಯ ವಿಸ್ತರಣೆಯ ಅನುಮೋದನೆ ಇರಲಿಲ್ಲ ಮತ್ತು ಹೊಸ ಟೆಂಡರ್ ಗಳ ಮೂಲಕ ಏಜೆನ್ಸಿಗಳನ್ನು ನೇಮಕ ಮಾಡುವ ಸಚಿವ ಸಂಪುಟದ ಸೂಚನೆಗಳನ್ನು(ಆಗಸ್ಟ್ 2016 ಮತ್ತು ಮಾರ್ಚ್ 2018) ಪಾಲಿಸಿರಲಿಲ್ಲ.

- ಒಪ್ಪಂದವನ್ನು ರದ್ದುಗೊಳಿಸಿದ ಸಂದರ್ಭದಲ್ಲಿ, ಮತ್ತೊಂದು ಜಿಲ್ಲೆಯಲ್ಲಿ ಕೆಲಸ ಮಾಡುವ ಯಾವುದೇ ಮಾನವ ಸಂಪನ್ಮೂಲದ ಏಜೆನ್ಸಿಗೆ ಆ ಒಪ್ಪಂದವನ್ನು ನಿಯೋಜಿಸಲು ಆರ್.ಎಫ್.ಪಿ ಅವಕಾಶವನ್ನು ಒಳಗೊಂಡಿತ್ತು (ಷರತ್ತು 2 (xii)). ಈ ನಿಯೋಜನೆಯು ರದ್ದುಗೊಂಡ ಒಪ್ಪಂದಕ್ಕೆ ಅನ್ವಯವಾಗುವ ಅದೇ ನಿಯಮಗಳು ಮತ್ತು ಷರತ್ತುಗಳ ಮೇಲೆ ಇರಬೇಕಾಗಿತ್ತು ಮತ್ತು ಗರಿಷ್ಠ ಆರು ತಿಂಗಳ ಅವಧಿಗೆ ಮುಂದುವರಿಯಬೇಕಾಗಿತ್ತು ಹಾಗೂ ಈ ಅವಧಿಯಲ್ಲಿ ಇಲಾಖೆಯು ಹೊಸ ಟೆಂಡರ್ ಅನ್ನು ಆಹ್ವಾನಿಸಬೇಕಾಗಿತ್ತು.

  ನವೆಂಬರ್ 2017ರಿಂದ ಜನವರಿ 2022ರ ಅವಧಿಯಲ್ಲಿ ಪರೀಕ್ಷಾ-ತನಿಖೆ ನಡೆಸಿದ ಜಿಲ್ಲೆಗಳಲ್ಲಿ (ಕೊಪ್ಪಳ ಹೊರತುಪಡಿಸಿ) ಗುತ್ತಿಗೆಗಳನ್ನು ಇತರ ಏಜೆನ್ಸಿಗಳಿಗೆ ಮರು-ನಿಯೋಜಿಸಲಾಯಿತು. ನಿಗದಿತ ಆರು ತಿಂಗಳ ಅವಧಿಯ ಬದಲಿಗೆ, ಮರು-ನಿಯೋಜಿಸಿದ ಒಪ್ಪಂದಗಳು ಇನ್ನೂ (ಅಕ್ಟೋಬರ್ 2024) ಮುಂದುವರೆದಿದ್ದವು. ಇದರಿಂದ ಆರ್.ಎಫ್.ಪಿಯ ಷರತ್ತು 2(xii) ಅನ್ನು ಉಲ್ಲಂಘಿಸಿದಂತಾಯಿತು.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ, ಹೊರಗುತ್ತಿಗೆ ಸಂಸ್ಥೆಗಳಿಗೆ ಪಾವತಿಸಿದ ₹86.67 ಕೋಟಿ ಮೊತ್ತವು ಅಕ್ರಮವಾಗಿತ್ತು, ಏಕೆಂದರೆ ಅವರ ಸೇವೆಗಳ ವಿಸ್ತರಣೆಯು ಸಚಿವ ಸಂಪುಟದ ನಿರ್ಧಾರಕ್ಕೆ ವಿರುದ್ಧವಾಗಿತ್ತು ಮತ್ತು ಕೆಟಿಪಿಪಿ ಕಾಯ್ದೆಯ ನಿಬಂಧನೆಗಳನ್ನು ಉಲ್ಲಂಘಿಸಿದಂತಾಯಿತು.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನೆಯ ಅವಲೋಕನವನ್ನು ಒಪ್ಪಕೊಂಡಿತು ಮತ್ತು ಸಚಿವ ಸಂಪುಟದ ಅನುಮೋದನೆ ಪಡೆಯುವ ಪ್ರಸ್ತಾಪವನ್ನು ಶೀಘ್ರದಲ್ಲೇ ಸಲ್ಲಿಸಲಾಗುವುದು ಎಂದು ತಿಳಿಸಿತು (ಮೇ 2025).

### *3.4.2 ಟೆಂಡರ್ ಗಳನ್ನು ಮರುನಿಯೋಜಿಸುವಾಗ ಅತ್ಯಂತ ಸ್ಪರ್ಧಾತ್ಮಕ ದರಗಳನ್ನು ಪಡೆಯುವಲ್ಲಿ ವಿಫಲತೆ*

ಇತರ ಜಿಲ್ಲೆಗಳಲ್ಲಿ ಸೇವೆಗಳನ್ನು ಒದಗಿಸುವ ಏಜೆನ್ಸಿಗಳಿಗೆ ಗುತ್ತಿಗೆಯನ್ನು ಮರು–ನಿಯೋಜಿಸುವ ಸಂದರ್ಭದಲ್ಲಿ, ಐದಕ್ಕಿಂತ ಹೆಚ್ಚು ಜಿಲ್ಲೆಗಳನ್ನು ಒಂದೇ ಮಾನವಸಂಪನ್ಮೂಲ ಏಜೆನ್ಸಿಗೆ ನಿಯೋಜಿಸುವುದನ್ನು ನಿರ್ಬಂಧಿಸುವ ಆರ್.ಎಫ್.ಪಿಯ ಷರತ್ತು ಅನ್ವಯಿಸುವುದಿಲ್ಲ ಎಂದು ಆರ್.ಎಫ್.ಪಿಯ ಷರತ್ತು 2 (xii) ವಿಧಿಸುತ್ತದೆ.

ಇಪಿಎಫ್ ಮತ್ತು ಇಎಸ್ಐ ದೇಣಿಗೆಯನ್ನು ಸಂಬಂಧಪಟ್ಟ ಖಾತೆ ಲೆಕ್ಕ ಶೀರ್ಷಿಕೆಗೆ ಪಾವತಿಮಾಡದ ಬಗ್ಗೆ ಏಜೆನ್ಸಿ (ಮೆ.ಟಿಡಿಎಸ್ ಮ್ಯಾನೇಜ್ ಮೆಂಟ್ ಕನ್ಸಲ್ಟೆಂಟ್ಸ್ ಪ್ರೈವೇಟ್ ಲಿಮಿಟೆಡ್) ವಿರುದ್ಧ ದೂರು ಬಂದಿತ್ತು ಎಂಬುದನ್ನು ತುಮಕೂರು ಜಿಲ್ಲಾ ಪಂಚಾಯಿತಿಯ ದಾಖಲೆಗಳ ಪರಿಶೀಲನೆಯಲ್ಲಿ ಗಮನಿಸಲಾಯಿತು. ಗುತ್ತಿಗೆಯನ್ನು ರದ್ದುಗೊಳಿಸಲು ಮತ್ತು ಕಾಮಗಾರಿಯನ್ನು ಮರು ನಿಯೋಜಿಸಲು ಇಲಾಖೆಯು ಏಜೆನ್ಸಿಯ ವಿರುದ್ಧ ಕ್ರಮವನ್ನು ಪ್ರಾರಂಭಿಸಿತು (03 ಮೇ 2018). ಈಗಾಗಲೇ ನೆರೆಯ ಜಿಲ್ಲೆಗಳಲ್ಲಿ ಸೇವೆಗಳನ್ನು ಒದಗಿಸುತ್ತಿರುವ ಆರು ಮಾನವ ಸಂಪನ್ಮೂಲ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಯಿತು (08 ಮೇ 2018). ಅದರಂತೆ, ಮೆ.ಇನ್ವೆನ್ಸಿಸ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ನ ಪ್ರಸ್ತಾವನೆಯನ್ನು ಒಪ್ಪಿಕೊಳ್ಳಲಾಯಿತು ಮತ್ತು ಗುತ್ತಿಗೆ ಒಪ್ಪಂದವನ್ನು ಶೇಕಡಾ 6.5ರಷ್ಟು ಸ್ವೀಕೃತ ಸೇವಾ ಶುಲ್ಕದೊಂದಿಗೆ ಕಾರ್ಯಗತಗೊಳಿಸಲಾಯಿತು (ಜೂನ್ 2018).

ಮತ್ತೊಂದು ಏಜೆನ್ಸಿ (ಈಗಾಗಲೇ ಐದು ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಸರ್ಸ್ ಬಿಕೆಆರ್ ಸೆಕ್ಯುರಿಟಿ ಏಜೆನ್ಸಿ) ಶೇಕಡಾ 1.5ರಷ್ಟು ಸೇವಾ ಶುಲ್ಕದ ಪ್ರಸ್ತಾವನೆ ನೀಡಿತ್ತು ಎಂಬುದನ್ನು ಪ್ರಕ್ರಿಯೆ ಮತ್ತು ತುಲನಾತ್ಮಕ ಪರಿಶೀಲನೆಯು ತೋರಿಸಿತು, ಆದರೆ ಒಂದೇ ಏಜೆನ್ಸಿಗೆ ಐದಕ್ಕಿಂತ ಹೆಚ್ಚು ಜಿಲ್ಲೆಗಳನ್ನು ಹಂಚಿಕೆ ಮಾಡುವುದನ್ನು ನಿಷೇಧಿಸಿರುವ ಆರ್.ಎಫ್.ಪಿಯ ಷರತ್ತು 2(xi) ಅನ್ನು ಉಲ್ಲೇಖಿಸಿ ಅದರ ಪ್ರಸ್ತಾವನೆಯನ್ನು ತಿರಸ್ಕರಿಸಲಾಯಿತು. ಮರು–ನಿಯೋಜನೆಯ ಸಂದರ್ಭದಲ್ಲಿ ಒಂದೇ ಮಾನವಸಂಪನ್ಮೂಲ ಏಜೆನ್ಸಿಗೆ ಐದಕ್ಕಿಂತ ಹೆಚ್ಚು ಜಿಲ್ಲೆಗಳನ್ನು ಹಂಚಿಕೆ ಮಾಡದಿರಲು ಆರ್.ಎಫ್.ಪಿಯ ಷರತ್ತು ಅನ್ವಯಿಸುವುದಿಲ್ಲ ಎಂದು ಸ್ಪಷ್ಟವಾಗಿ ತಿಳಿಸುವ ಷರತ್ತು 2 (xii) ಒಪ್ಪಂದದ ಮರು–ನಿಯೋಜನೆಯನ್ನು ನಿಯಂತ್ರಿಸುವು ದರಿಂದ ಈ ನಿರಾಕರಣೆಯು ತಪ್ಪಾಗಿದ್ದಿತು. ಅಂತಹ ಸಂದರ್ಭಗಳಲ್ಲಿ ಐದು ಟೆಂಡರ್ ಗಳ ಮಿತಿ ಅನ್ವಯಿಸುವುದಿಲ್ಲ ಎಂಬ ಲೆಕ್ಕಪರಿಶೋಧನಾ ವಾದವನ್ನು ಬೆಂಬಲಿಸುವ ಮೂಲಕ ಶಿವಮೊಗ್ಗ ಜಿಲ್ಲಾ ಪಂಚಾಯಿತಿಯು ಜನವರಿ 2022ರಲ್ಲಿ ಮಾನವಸಂಪನ್ಮೂಲ ಒಪ್ಪಂದವನ್ನು ಮೆಸರ್ಸ್ ಬಿಕೆಆರ್ ಭದ್ರತಾ ಸಂಸ್ಥೆಗೆ ಮರು ನಿಯೋಜಿಸಿತ್ತು ಎಂಬುದನ್ನು ಇಲ್ಲಿ ಗಮನಿಸಬಹುದು.

ಅದೇ ರೀತಿ, ಮಂಡ್ಯ ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿರುವ ಏಜೆನ್ಸಿಯ (ಮೆ.ಡೆಕ್ಸ್ಟೆರಿಟಿ ಪ್ರಾಜೆಕ್ಟ್ಸ್ (ಪ್ರೈವೇಟ್ ಲಿಮಿಟೆಡ್) ಒಪ್ಪಂದವನ್ನು ರದ್ದುಪಡಿಸಲಾಯಿತು (ನವೆಂಬರ್ 2019) ಮತ್ತು ಶೇಕಡಾ 7ರಷ್ಟು ಸೇವಾ ಶುಲ್ಕವನ್ನು ವಿಧಿಸಿದ್ದ ಮೆಸರ್ಸ್ ಇನ್ವೆನ್ಸಿಸ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಗೆ ವಹಿಸಲಾಯಿತು (ಜೂನ್ 2020). ಮಂಡ್ಯ ಜಿಲ್ಲಾ ಪಂಚಾಯಿತಿ ಸಿಇಒ ಅವರು ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಕೆಲಸ ಮಾಡುವ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದರು ಎಂಬುದಕ್ಕೆ ಯಾವುದೇ ಸಾಕ್ಷ್ಯಾಧಾರಗಳಿರಲಿಲ್ಲ. ತತ್ಪರಿಣಾಮವಾಗಿ, ಹತ್ತಿರದ ಮೈಸೂರು ಜಿಲ್ಲೆಯಲ್ಲಿ ಶೇಕಡಾ ನಾಲ್ಕರಷ್ಟು ಸೇವಾ ಶುಲ್ಕದಲ್ಲಿ ಸೇವೆ ಒದಗಿಸುತ್ತಿರುವ ಮೆಸರ್ಸ್ ಮೇಘಾ ಸರ್ವೀಸಸ್ ಬ್ಯೂರೋ ಒದಗಿಸುವ ಮಾನವ ಸಂಪನ್ಮೂಲ ಸೇವೆಗಳನ್ನು ಇಲಾಖೆ ಪಡೆಯಲು ಸಾಧ್ಯವಾಗಲಿಲ್ಲ.

ಹೀಗೆ, ಬಿಕೆಆರ್ ಸೆಕ್ಯುರಿಟಿ ಏಜೆನ್ಸಿಯ ಅತ್ಯಂತ ಕಡಿಮೆ ಟೆಂಡರ್ ಅನ್ನು (ಶೇಕಡಾ 1.5) ತುಮಕೂರು ಜಿಲ್ಲಾ ಪಂಚಾಯಿತಿಯ ಸಿಇಒ ತಪ್ಪಾಗಿ ತಿರಸ್ಕರಿಸಿದ್ದರಿಂದ ಮತ್ತು ಹತ್ತಿರದ ಮೈಸೂರು ಜಿಲ್ಲೆಯಿಂದ (ಮೆ.ಮೇಘಾ ಸರ್ವೀಸಸ್ ಬ್ಯೂರೋ) ಅತ್ಯಂತ ಸ್ಪರ್ಧಾತ್ಮಕ ದರವನ್ನು ಪಡೆಯಲು ಮಂಡ್ಯ ಜಿಲ್ಲಾ ಪಂಚಾಯಿತಿಯ ಸಿಇಒ ವಿಫಲವಾದದ್ದು 2019–20ರಿಂದ 2022–23ರ ಅವಧಿಯಲ್ಲಿ ಕ್ರಮವಾಗಿ ₹121.53 ಲಕ್ಷ ಮತ್ತು ₹35.19 ಲಕ್ಷ ತಪ್ಪಿಸಬಹುದಾಗಿದ್ದ ವೆಚ್ಚದಲ್ಲಿ ಪರಿಣಮಿಸಿತು.

ಅನುಸರಣಾ ವರದಿಯನ್ನು ಸಲ್ಲಿಸಲು ಮಂಡ್ಯದ ಜಿಲ್ಲಾ ಪಂಚಾಯಿತಿಯ ಸಿಇಒಗೆ ಸೂಚನೆ ನೀಡಲಾಗುವುದು ಎಂದು ರಾಜ್ಯ ಸರ್ಕಾರವು ತಿಳಿಸಿತು (ಮೇ 2025) ಮತ್ತು ಷರತ್ತು 2(xii)ರ ನಿಬಂಧನೆಗಳ ಪ್ರಕಾರ ತುಮಕೂರಿನ ಮೆ.ಬಿಕೆಆರ್ ಸೆಕ್ಯುರಿಟಿ ಏಜೆನ್ಸಿಗಳ ಪ್ರಸ್ತಾವನೆಯನ್ನು ತಿರಸ್ಕರಿಸಲಾಯಿತು ಎಂದು ಪುನರುಚ್ಚರಿಸಿತು. ಮೇಲೆ ವಿವರಿಸಿದಂತೆ ಮರು ನಿಯೋಜನೆಯ ಸಂದರ್ಭದಲ್ಲಿ ಒಂದೇ ಏಜೆನ್ಸಿಗೆ ಐದು ಜಿಲ್ಲೆಗಳ ಮಿತಿ ಅನ್ವಯಿಸುವುದಿಲ್ಲವಾದ್ದರಿಂದ ತುಮಕೂರು ಜಿಲ್ಲಾ ಪಂಚಾಯಿತಿಗೆ ಸಂಬಂಧಿಸಿದಂತೆ ಉತ್ತರವನ್ನು ಒಪ್ಪಲಾಗುವುದಿಲ್ಲ.

### *3.4.3 ವಿನಾಯಿತಿ ಪಡೆದ ಸೇವೆಗಾಗಿ ಸರಕು ಮತ್ತು ಸೇವಾ ತೆರಿಗೆ ಪಾವತಿಯ ಮೇಲೆ ತಪ್ಪಿಸಬಹುದಾಗಿದ್ದ ವೆಚ್ಚ*

ಸಂವಿಧಾನದ ಅನುಚ್ಛೇದ 243ಜಿ (11 ನೇ ಪರಿಚ್ಛೇದ) ಅಡಿಯಲ್ಲಿ ಯಾವುದೇ ಚಟುವಟಿಕೆಯ ಮೂಲಕ ಪಂಚಾಯತ್ ಗೆ ವಹಿಸಲಾದ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ/ರಾಜ್ಯ ಸರ್ಕಾರ /ಕೇಂದ್ರಾಡಳಿತ ಪ್ರದೇಶ/ಕೇಂದ್ರಾಡಳಿತ ಪ್ರದೇಶ/ಸ್ಥಳೀಯ ಪ್ರಾಧಿಕಾರ/ಸರ್ಕಾರಿ ಪ್ರಾಧಿಕಾರಕ್ಕೆ ಒದಗಿಸಲಾದ 'ಶುದ್ಧ ಸೇವೆಗಳು' (ಸರಕುಗಳ ಪೂರೈಕೆಯನ್ನು ಒಳಗೊಂಡಿರುವ ಇತರ ಸಂಯೋಜಿತ ಸರಬರಾಜುಗಳು ಹಾಗು ಕೆಲಸದ ಒಪ್ಪಂದದ ಸೇವೆಗಳುನ್ನು ಹೊರತುಪಡಿಸಿ) ಇವನ್ನು ಒಳಗೊಂಡಂತೆ, ಜುಲೈ 1, 2017 ರಿಂದ ಜಾರಿಗೆ ಬರುವಂತೆ ವಿಧಿಸಬಹುದಾದ ಕೇಂದ್ರ ತೆರಿಗೆಯಿಂದ ವಿನಾಯಿತಿ ಹೊಂದಿದೆ ಎಂದು ಭಾರತ ಸರ್ಕಾರ, ಹಣಕಾಸು ಸಚಿವಾಲಯ (ಕಂದಾಯ ಇಲಾಖೆ) ಅಧಿಸೂಚಿಸಿತು (ಜೂನ್ 2017)[10].

ಭಾರತದ ಸಂವಿಧಾನದ 11ನೇ ಪರಿಚ್ಛೇದದಲ್ಲಿ ಪಟ್ಟಿ ಮಾಡಲಾದ 29 ಕಾರ್ಯಗಳನ್ನು ಪಿ.ಆರ್.ಐ.ಗಳಿಗೆ ವರ್ಗಾಯಿಸಲು 73ನೇ ಸಾಂವಿಧಾನಿಕ ತಿದ್ದುಪಡಿಯು ಅವಕಾಶ ಕಲ್ಪಿಸಿದೆ. ಇದನ್ನು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ಕೂಡ ಒಳಗೊಂಡಿತ್ತು. ರಾಜ್ಯ ಸರ್ಕಾರವು ಚಟುವಟಿಕೆಯ ನಕ್ಷೆಯನ್ನು ರೂಪಿಸುವ ಮೂಲಕ (ನವೆಂಬರ್ 2016) 11ನೇ ಶೆಡ್ಯೂಲ್ ನಲ್ಲಿ ಪಟ್ಟಿ ಮಾಡಲಾದ ಎಲ್ಲಾ 29 ಕಾರ್ಯಗಳನ್ನು ಪಿಆರ್ ಐಗಳಿಗೆ ವರ್ಗಾಯಿಸಿತು. ಬಡತನ ನಿರ್ಮೂಲನೆ ಮತ್ತು ಉದ್ಯೋಗ ಖಾತರಿ ಕಾರ್ಯಕ್ರಮಗಳ ಅನುಷ್ಠಾನವನ್ನು ಒಳಗೊಂಡಿರುವ 29 ಕಾರ್ಯಗಳಲ್ಲಿ 'ಬಡತನ ನಿರ್ಮೂಲನಾ ಕಾರ್ಯಕ್ರಮ' (11ನೇ ಪರಿಚ್ಛೇದದ 16ನೇ ನಮೂದು) ಒಂದಾಗಿದೆ. ಹೀಗೆ, ಬಡತನ ನಿವಾರಣೆ ಮತ್ತು ಉದ್ಯೋಗ ಖಾತರಿಯ ಪ್ರಮುಖ ಯೋಜನೆಗಳಲ್ಲಿ ಒಂದಾದ ಎಂ.ಜಿ.ಎನ್.ಆರ್.ಇ.ಜಿ.ಎಸ್.ಗೆ ಹೊರಗುತ್ತಿಗೆ ಮಾನವಸಂಪನ್ಮೂಲ ಸೇವೆಗಳ ಪೂರೈಕೆಯನ್ನು ಕೇಂದ್ರ ಮತ್ತು ರಾಜ್ಯ ಸರಕು ಮತ್ತು ಸೇವಾ ತೆರಿಗೆ (ಜಿಎಸ್.ಟಿ) ವಿಧಿಸುವುದರಿಂದ ವಿನಾಯಿತಿ ನೀಡಲಾಯಿತು ಏಕೆಂದರೆ ಅದು ಶುದ್ಧ ಸೇವೆಯಾಗಿತ್ತು (ಅಂದರೆ ಇದು ಯಾವುದೇ ಸರಕುಗಳ ಪೂರೈಕೆಯನ್ನು ಒಳಗೊಂಡಿರಲಿಲ್ಲ) ಮತ್ತು ಅನುಚ್ಛೇದ 243ಜಿ ಅಡಿಯಲ್ಲಿ ವಹಿಸಲಾದ ಕಾರ್ಯಕ್ಕೆ ಸಂಬಂಧಿಸಿದ ಚಟುವಟಿಕೆಯ ಮೂಲಕವಾಗಿತ್ತು.

ನಿಬಂಧನೆಗಳ ಲಭ್ಯತೆಯ ಹೊರತಾಗಿಯೂ, ಇಲಾಖೆಯು ಜಿಎಸ್ ಟಿ ವಿನಾಯಿತಿಯ ಪ್ರಯೋಜನವನ್ನು ಪಡೆದುಕೊಂಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಎಂಜಿಎನ್ಆರ್ ಇಜಿಎಸ್ ಆಯುಕ್ತರ ಕಚೇರಿ ಮತ್ತು ಪರೀಕ್ಷಾ–ತನಿಖೆ ನಡೆಸಿದ ಐದು ಜಿಲ್ಲೆಗಳು ಹೊರಗುತ್ತಿಗೆ ಸಿಬ್ಬಂದಿಯ ವೇತನಕ್ಕಾಗಿ ಮಾನವಸಂಪನ್ಮೂಲ ಏಜೆನ್ಸಿಗಳಿಗೆ ಮಜೂರಿಯನ್ನು ಪಾವತಿಸಿದ್ದವು, ಅದು ಶೇಕಡಾ 18ರಷ್ಟು

[10] ಅಧಿಸೂಚನೆ ಸಂಖ್ಯೆ 12/2017– ಕೇಂದ್ರ ತೆರಿಗೆ (ದರ) ದಿನಾಂಕ 28 ಜೂನ್ 2017.

ಜಿಎಸ್ ಟಿಯನ್ನು ಒಳಗೊಂಡಿತ್ತು. ಇದು 2019–20ರಿಂದ 2023–24ರ ಅವಧಿಯಲ್ಲಿ ಜಿಎಸ್ ಟಿ ಪಾವತಿಗೆ ₹15.43 ಕೋಟಿಗಳ ತಪ್ಪಿಸಬಹುದಾದ ವೆಚ್ಚದಲ್ಲಿ ಪರಿಣಮಿಸಿತು (**ಅನುಬಂಧ–3.4**).

ಹೊರಗುತ್ತಿಗೆ ಸೇವೆಗಳ ಮೇಲೆ ಜಿಎಸ್ ಟಿ ಪಾವತಿಸುವ ಬಗ್ಗೆ ಅಧಿಸೂಚನೆಯಲ್ಲಿ ಅಸ್ಪಷ್ಟತೆ ಇದೆ ಮತ್ತು ವಾಣಿಜ್ಯ ತೆರಿಗೆ ಇಲಾಖೆಯಿಂದ ಸ್ಪಷ್ಟೀಕರಣವನ್ನು ಪಡೆಯಲಾಗುವುದು ಎಂದು ರಾಜ್ಯ ಸರ್ಕಾರ ತಿಳಿಸಿತು (ಮೇ 2025).

### 3.5 ಎಂ.ಜಿ.ಎನ್.ಆರ್.ಇ.ಜಿ.ಎಸ್ ಗಾಗಿ ನಡೆಸಿದ ಸಾಮರ್ಥ್ಯ ವೃದ್ಧಿ ಚಟುವಟಿಕೆಗಳ ಸ್ಥಿತಿ

ಎಂ.ಜಿ.ಎನ್.ಆರ್.ಇ.ಜಿ.ಎಸ್ ಅನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ಎಲ್ಲಾ ಕಾರ್ಯಕರ್ತರು /ಏಜೆನ್ಸಿಗಳು ಮತ್ತು ಪಿ.ಆರ್.ಐ. ಅಧಿಕಾರಿಗಳ ಸಾಮರ್ಥ್ಯ ವರ್ಧನೆ ಮತ್ತು ತಾಂತ್ರಿಕ ಬೆಂಬಲ ಮತ್ತು ಸಂಭಾವ್ಯ ಮತ್ತು ಅಸ್ತಿತ್ವದಲ್ಲಿರುವ ಕಾರ್ಮಿಕರಲ್ಲಿ ಜಾಗೃತಿ ಮೂಡಿಸುವುದು ಅತ್ಯಂತ ಕಾರ್ಯತಂತ್ರದ ಅಂಶವಾಗಿದೆ. ಪ್ರತಿ ರಾಜ್ಯವು ರಾಜ್ಯ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಸಾಮರ್ಥ್ಯ ವೃದ್ಧಿ ವಿಭಾಗಗಳನ್ನು ಸ್ಥಾಪಿಸಬೇಕು ಎಂದು 2013ರ ಕಾರ್ಯಾಚರಣೆಯ ಮಾರ್ಗಸೂಚಿಗಳ ಕಂಡಿಕೆ 5.2.2 ಮತ್ತು 5.2.4 ನಿಗದಿಪಡಿಸಿವೆ.

ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದ ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಸಾಮರ್ಥ್ಯ ವೃದ್ಧಿ ವಿಭಾಗಗಳನ್ನು ಸ್ಥಾಪಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ರಾಜ್ಯ ಮಟ್ಟದಲ್ಲಿ, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು (ಎಎನ್‌ಎಸ್‌ಎಸ್‌ಐಆರ್ ಡಿ) ಎಂಜಿಎನ್‌ಆರ್ ಇಜಿಎಸ್ ಅಡಿಯಲ್ಲಿ ಸಾಮರ್ಥ್ಯ ವರ್ಧನೆ ಚಟುವಟಿಕೆಗಳನ್ನು ಆಯೋಜಿಸಿತು. ಎಎನ್‌ಎಸ್‌ಎಸ್‌ಐಆರ್ ಡಿಯಲ್ಲಿ ಯೋಜಿಸಲಾದ ಮತ್ತು ನಡೆಸಿದ ತರಬೇತಿ ಕಾರ್ಯಕ್ರಮಗಳ ವಿವರಗಳನ್ನು **ಕೋಷ್ಟಕ–3.4**ರಲ್ಲಿ ವಿವರಿಸಲಾಗಿದೆ.

**ಕೋಷ್ಟಕ–3.4: ಯೋಜಿಸಿದ ಮತ್ತು ನಡೆಸಲಾದ ತರಬೇತಿ ಕಾರ್ಯಕ್ರಮಗಳ ವಿವರಗಳು**

| ವರ್ಷ | ಯೋಜಿಸಲಾದ ಒಟ್ಟು ತರಬೇತಿ ಕಾರ್ಯಕ್ರಮಗಳು | ನಡೆಸಿದ ಒಟ್ಟು ತರಬೇತಿ ಕಾರ್ಯಕ್ರಮಗಳು | ತರಬೇತಿಗೆ ಪ್ರಸ್ತಾವಿಸಲಾದ ಒಟ್ಟು ಪ್ರಶಿಕ್ಷಣಾರ್ಥಿಗಳ ಸಂಖ್ಯೆ | ತರಬೇತಿಗೆ ಹಾಜರಾದ ಒಟ್ಟು ಪ್ರಶಿಕ್ಷಣಾರ್ಥಿಗಳ ಸಂಖ್ಯೆ |
|---|---|---|---|---|
| 2019–20 | 16 | 8 | 7411 | 2592 |
| 2020–21 | 16 (13+3*) | 12 (9+3*) | 15859 | 5749 |
| 2021–22 | 16 (15+1*) | 10 (9+1*) | 16166 | 12985 |
| 2022–23 | 25 (19+6*) | 16(10+6*) | 23710 | 18254 |
| 2023–24 | 16 (14+2*) | 13 (11+2*) | 30485 | 21612 |
| **Total** | **89 (77+12*)** | **59 (47+12*)** | **93631** | **61192** |

* ಎಂ.ಜಿ.ಎನ್.ಆರ್.ಇ.ಜಿ.ಎಸ್ ಆಯುಕ್ತರ ನಿರ್ದೇಶನದಂತೆ ಹೆಚ್ಚುವರಿ ಕಾರ್ಯಕ್ರಮಗಳು

**ಮೂಲ: ಇಲಾಖೆಯಿಂದ ಒದಗಿಸಲಾದ ಮಾಹಿತಿ (ಸೆಪ್ಟೆಂಬರ್ 2024)**

2019–20ರಿಂದ 2023–24ರ ಅವಧಿಯಲ್ಲಿ, ಯೋಜಿಸಿದ 89[11] ತರಬೇತಿ ಕಾರ್ಯಕ್ರಮಗಳಿಗೆ ಪ್ರತಿಯಾಗಿ ಎಎನ್‌ಎಸ್‌ಎಸ್‌ಐಆರ್ ಡಿ ಕೇವಲ 59 ಕಾರ್ಯಕ್ರಮಗಳನ್ನು (ಶೇಕಡಾ 34ರಷ್ಟು ಕೊರತೆ) ಮಾತ್ರ ನಡೆಸಿತ್ತು. ಈ 59 ಕಾರ್ಯಕ್ರಮಗಳಲ್ಲಿ ತರಬೇತಿ ಪಡೆಯಲು ಭಾಗವಹಿಸಿದವರ ಸಂಖ್ಯೆಯಲ್ಲಿ ಶೇಕಡಾ 35ರಷ್ಟು ಕೊರತೆ ಕಂಡುಬಂದಿತ್ತು, ಏಕೆಂದರೆ 89 ಕಾರ್ಯಕ್ರಮಗಳಿಗೆ 93,631 ಭಾಗವಹಿಸುವವರ ಗುರಿಗೆ ಪ್ರತಿಯಾಗಿ ಕೇವಲ 61,192 ಪ್ರಶಿಕ್ಷಣಾರ್ಥಿಗಳು ಮಾತ್ರ ಭಾಗವಹಿಸಿದ್ದರು.

[11] ಅನುಮೋದಿತ 77 ತರಬೇತಿ ಕಾರ್ಯಕ್ರಮಗಳು ಮತ್ತು ಎಂ.ಜಿ.ಎನ್.ಆರ್.ಇ.ಜಿ.ಎಸ್ ಆಯುಕ್ತರಿಂದ ಅನುಮೋದಿತ 12 ಹೆಚ್ಚುವರಿ ಕಾರ್ಯಕ್ರಮಗಳು

ಮಾಹಿತಿ ಶಿಕ್ಷಣ ಮತ್ತು ಸಂವಹನ ಸಂಯೋಜಕರ ಜ್ಞಾನ ಬ್ಯಾಂಕ್ ಆಗಿ ಸಾಮರ್ಥ್ಯ ವರ್ಧನೆ, ಎಂಜಿಎನ್‌ಆರ್ ಇಜಿಎಸ್ ನ ಪರಿಣಾಮಕಾರಿ ಅನುಷ್ಠಾನದಲ್ಲಿ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳ ಪಾತ್ರ, ಎನ್‌ಆರ್ ಎಂ. ಆಧಾರಿತ ಕಾರ್ಮಿಕ ಬಜೆಟ್ ತಯಾರಿಕೆಯಲ್ಲಿ ಪಿಡಿಒಗಳ ಸಾಮರ್ಥ್ಯವನ್ನು ಹೆಚ್ಚಿಸುವುದು ಮತ್ತು ಎಂಐಎಸ್. ಕಾರ್ಯಾಚರಣೆ, ಸಂವಾದ ಕಾರ್ಯಕ್ರಮ ಇತ್ಯಾದಿಗಳು ಕಡಿಮೆ ಭಾಗವಹಿಸುವಿಕೆಯ ಪ್ರಮುಖ ಕಾರ್ಯಕ್ರಮಗಳಾಗಿವೆ. 2019–20ರಿಂದ 2023–24ರ ಅವಧಿಯಲ್ಲಿ ಲಭ್ಯವಿರುವ ₹12.49[12] ಕೋಟಿಗಳಿಗೆ ಪ್ರತಿಯಾಗಿ ಎಎನ್‌ಎಸ್‌ಎಸ್‌ಐಆರ್‌ಡಿ ತರಬೇತಿ ಕಾರ್ಯಕ್ರಮಗಳಿಗಾಗಿ ₹9.13 ಕೋಟಿಗಳನ್ನು (73 ಶೇಕಡಾ) ವೆಚ್ಚ ಮಾಡಿತ್ತು.

ಹೀಗೆ, ತರಬೇತಿ ಕಾರ್ಯಕ್ರಮಗಳನ್ನು ಬಳಸಿಕೊಳ್ಳಲು ಮತ್ತು ತರಬೇತಿ ಪಡೆದ ಸಿಬ್ಬಂದಿಗೆ ಉದ್ದೇಶಿತ ರೀತಿಯಲ್ಲಿ ಯೋಜನೆಯನ್ನು ಕಾರ್ಯಗತಗೊಳಿಸಲು ಯೋಜಿಸಲಾದ ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಹೆಚ್ಚು ಸಂಘಟಿತ ಪ್ರಯತ್ನಗಳ ಅಗತ್ಯವಿದೆ.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನೆಯ ಅವಲೋಕನವನ್ನು ಒಪ್ಪಿಕೊಂಡಿತು (ಮೇ 2025) ಮತ್ತು ಹೆಚ್ಚಿನ ಮಾನ್ಯತೆಗಾಗಿ ಹೊಸ ತರಬೇತಿ ಕಾರ್ಯಕ್ರಮಗಳು ಮತ್ತು ಸಂಸ್ಥೆಗಳನ್ನು ಗುರುತಿಸುವ ಮೂಲಕ ಸಾಮರ್ಥ್ಯವನ್ನು ಹೆಚ್ಚಿಸಲು ಪ್ರಯತ್ನಿಸಲಾಗುವುದು ಎಂದು ತಿಳಿಸಿತು.

## ಹಣಕಾಸು ನಿರ್ವಹಣೆ

ಎಂಜಿಎನ್‌ಆರ್ ಇಜಿಎಯ ಸೆಕ್ಷನ್ 22 ಧನಸಹಾಯ ಮಾದರಿಗೆ ಚೌಕಟ್ಟನ್ನು ಒದಗಿಸುತ್ತದೆ. ಒಪ್ಪಿತ ಕಾರ್ಮಿಕ ಬಜೆಟ್ (ಎಲ್.ಬಿ), ಪ್ರಾರಂಭಿಕ ಶಿಲ್ಕು, ಹಿಂದಿನ ಹಣಕಾಸು ವರ್ಷದ ಬಾಕಿ ಬಾಧ್ಯತೆಗಳು ಮತ್ತು ಒಟ್ಟಾರೆ ಕಾರ್ಯಕ್ಷಮತೆಯ ಆಧಾರದ ಮೇಲೆ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ಸಾಮಾನ್ಯವಾಗಿ ಎರಡು ಕಂತುಗಳಲ್ಲಿ ಹಣವನ್ನು ಬಿಡುಗಡೆ ಮಾಡಲಾಗುತ್ತದೆ. ಕೇಂದ್ರ ಮತ್ತು ರಾಜ್ಯಗಳ ನಡುವೆ ಎಂಜಿಎನ್‌ಆರ್ ಇಜಿಎಸ್ ನಿಧಿ ಹಂಚಿಕೆ ಮಾದರಿಯನ್ನು ಈಗಾಗಲೇ **ನಕ್ಷೆ–1.2**ರಲ್ಲಿ ನೀಡಲಾಗಿದೆ.

### 3.6 ಆರ್ಥಿಕ ಸ್ಥಿತಿ

2019–20ರಿಂದ 2023–24ರ ಅವಧಿಯಲ್ಲಿ ಎಂಜಿಎನ್‌ಆರ್ ಇಜಿಎಸ್ ಅಡಿಯಲ್ಲಿ ಬಿಡುಗಡೆಯಾದ ಹಣ ಮತ್ತು ಭರಿಸಿದ ವೆಚ್ಚದ ವಿವರಗಳನ್ನು ಕೋಷ್ಟಕ–3.5 ಮತ್ತು ಕೋಷ್ಟಕ–3.6ರಲ್ಲಿ ನೀಡಲಾಗಿದೆ:

**ಕೋಷ್ಟಕ 3.5: 2019–20 ರಿಂದ 2023–24 ರ ಅವಧಿಯಲ್ಲಿ ಬಿಡುಗಡೆಯಾದ ಹಣ ಮತ್ತು ವೆಚ್ಚದ ವಿವರಗಳು**

**(₹ ಕೋಟಿಗಳಲ್ಲಿ)**

| ವರ್ಷ | ಒಬಿ | ವೇತನ ಬಿಡುಗಡೆಗಳು | ಕೇಂದ್ರ ಬಿಡುಗಡೆ | | ರಾಜ್ಯ ಸಾಮಗ್ರಿ | ಸಂಕೀರ್ಣ ಸ್ವೀಕೃತಿ | ಒಟ್ಟು ನಿಧಿ ಲಭ್ಯತೆ | ವೆಚ್ಚ | ಸಿಬಿ |
|---|---|---|---|---|---|---|---|---|---|
| | | | ಸಾಮಗ್ರಿ | ಆಡಳಿತ | | | | | |
| 2019–20 | 236.91 | 2,690.18 | 1,596.43 | 68.68 | 139.03 | 16.19 | 4,747.42 | 4,553.98 | 193.44 |
| 2020–21 | 193.34 | 4,251.06 | 1,370.62 | 70.07 | 365.89 | 36.20 | 6,287.18 | 5,817.81 | 469.37 |
| 2021–22 | 469.37 | 4,527.38 | 936.28 | 149.42 | 723.48 | 23.21 | 6,829.14 | 6,275.31 | 553.83 |
| 2022–23 | 553.83 | 3,911.00 | 2,147.07 | 295.02 | 395.29 | 20.57 | 7,322.78 | 6,688.73 | 634.05 |
| 2023–24 | 634.05 | 3,794.03 | 1,502.62 | 118.41 | 500.87 | 17.35 | 6,567.33 | 6,298.54 | 268.79 |
| **ಒಟ್ಟು** | | **19,173.65** | **7,553.02** | **701.60** | **2,124.56** | **113.52** | | **29,634.37** | |

**ಮೂಲ: ಇಲಾಖೆ ಒದಗಿಸಿದ ಮಾಹಿತಿ (ಮೇ 2024) ಮತ್ತು ಸಿಎ ವರದಿಗಳು**

[12] ಪ್ರಾರಂಭಿಕ ಶಿಲ್ಕು ₹3.16 ಕೋಟಿ + ₹8.19 ಕೋಟಿ ಬಿಡುಗಡೆ ಮತ್ತು ₹1.14 ಕೋಟಿ ಬಡ್ಡಿ.

**ಕೋಷ್ಟಕ 3.6: ಭರಿಸಿದ ವೆಚ್ಚದ ವಿವರಗಳು (ಘಟಕವಾರು)**

(₹ ಕೋಟಿಗಳಲ್ಲಿ)

| ವರ್ಷ | ವೇತನ | ಸಾಮಗ್ರಿ | ಆಡಳಿತಾತ್ಮಕ ವೆಚ್ಚ | ಇತರೆ ವೆಚ್ಚ | ಒಟ್ಟು |
|---|---|---|---|---|---|
| 2019–20 | 2,691.06 | 1,774.64 | 88.28 | – | 4,553.98 |
| 2020–21 | 4,143.03 | 1,476.16 | 158.83 | 39.79 | 5,817.81 |
| 2021–22 | 4,635.80 | 1,412.95 | 183.44 | 43.12 | 6,275.31 |
| 2022–23 | 3,865.81 | 2,585.00 | 227.61 | 10.31 | 6,688.73 |
| 2023–24 | 3,839.22 | 2,245.15 | 190.47 | 23.70 | 6,298.54 |
| **ಒಟ್ಟು** | **19,174.92** | **9,493.9** | **848.63** | **116.92** | **29,634.37** |

**ಮೂಲ: ಇಲಾಖೆ ಒದಗಿಸಿದ ಮಾಹಿತಿ (ಜುಲೈ 2024) ಮತ್ತು ಸಿಎ ವರದಿಗಳು**

ಎಂ.ಜಿ.ಎನ್.ಆರ್.ಇ.ಜಿ.ಎಸ್ ಅಡಿಯಲ್ಲಿ ಭರಿಸಿದ ಒಟ್ಟು ವೆಚ್ಚವು 2019–20ರಿಂದ 2022–23ರ ಅವಧಿಯಲ್ಲಿ ಏರಿಕೆಯಾಗಿದ್ದು ಮತ್ತು ನಂತರ ₹390.19 ಕೋಟಿಗಳಷ್ಟು (ಶೇಕಡಾ 6) ಇಳಿಕೆಯಾಗಿತ್ತು. ಸಾಮಗ್ರಿ ಘಟಕದ ಅಡಿಯಲ್ಲಿ ವೆಚ್ಚವು ಅಸಮಂಜಸವಾದ ಇಳಿಕೆ ಮತ್ತು ಏರಿಕೆಗಳ ಪ್ರವೃತ್ತಿಗಳನ್ನು ತೋರಿಸಿತ್ತು. ಅದು ಪ್ರಾರಂಭಿಕ ಮೂರು ವರ್ಷಗಳಲ್ಲಿ (2019–20ರಿಂದ 2021–22ರವರೆಗೆ) ಇಳಿಕೆಯಾಗಿದ್ದರೆ, 2022–23ರಲ್ಲಿ ಏರಿಕೆಯಾಗಿತ್ತು ಮತ್ತು ನಂತರ ಶೇಕಡಾ 13ರಷ್ಟು ಇಳಿಕೆಯಾಗಿತ್ತು. ಹಿಂದಿನ ವರ್ಷಕ್ಕೆ ಹೋಲಿಸಿದರೆ 2022–23ರಲ್ಲಿ ವೇತನ ವೆಚ್ಚವು ₹769.99 ಕೋಟಿಗಳಷ್ಟು (17 ಶೇಕಡಾ) ಇಳಿಕೆಯಾಗಿದ್ದರೂ ಸಹ ಅದೇ ಅವಧಿಯಲ್ಲಿ ಒಟ್ಟು ವೆಚ್ಚವು ಏರಿಕೆಯಾಗಿತ್ತು.

ಸಾಮಗ್ರಿಗಳ ಘಟಕದ ಅಡಿಯಲ್ಲಿ ಹಣದ ಲಭ್ಯತೆಯ ಹೊರತಾಗಿಯೂ, ಇಲಾಖೆಯು ಸಂಪೂರ್ಣ ಮೊತ್ತವನ್ನು ಬಳಸಿಕೊಳ್ಳಲು ವಿಫಲವಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ವರ್ಷದ ಕೊನೆಯಲ್ಲಿ ಹಣದ ಬಿಡುಗಡೆ ಮಾಡಿದ್ದು ಇದಕ್ಕೆ ಭಾಗಶ: ಕಾರಣವಾಗಿತ್ತು. 2022–23ನೇ ವರ್ಷಕ್ಕೆ ₹566.91 ಕೋಟಿಗಳನ್ನು 2023ರ ಮಾರ್ಚ್ 28ರಂದು ಬಿಡುಗಡೆ/ಜಮಾ ಮಾಡಿರುವುದನ್ನು ಮತ್ತು 2023–24ನೇ ವರ್ಷಕ್ಕೆ ₹258.04 ಕೋಟಿಗಳನ್ನು 2024ರ ಮಾರ್ಚ್ 31ರಂದು ಜಮಾ ಮಾಡಿರುವುದನ್ನು ಗಮನಿಸಲಾಯಿತು.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ಅವಲೋಕನವನ್ನು ಒಪ್ಪಿಕೊಂಡಿತು (ಮೇ 2025) ಮತ್ತು ವೇತನ ವೆಚ್ಚದ ಹೆಚ್ಚಳಕ್ಕೆ (2021–22) ಕೋವಿಡ್–19 ಸಾಂಕ್ರಾಮಿಕದ ಸಮಯದಲ್ಲಿ ಗ್ರಾಮೀಣ ಪ್ರದೇಶಗಳತ್ತ ಜನಸಂಖ್ಯೆಯ ವಲಸೆಯೇ ಕಾರಣವೆಂದು ತಿಳಿಸಿತು.

### 3.7 ಹಣ ಬಿಡುಗಡೆಯಲ್ಲಿ ವಿಳಂಬ ಮತ್ತು ಬಡ್ಡಿ ಪಾವತಿಸದಿರುವುದು

ಎಂ.ಜಿ.ಎನ್.ಆರ್.ಇ.ಜಿ.ಎಸ್. ಅನುಷ್ಠಾನಕ್ಕಾಗಿ ಸಾಮಗ್ರಿ ಮತ್ತು ಆಡಳಿತಾತ್ಮಕ ಘಟಕಗಳಿಗೆ ಕೇಂದ್ರದ ನೆರವನ್ನು ಬಿಡುಗಡೆ ಮಾಡಲು ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯವು ಕಾಲಕಾಲಕ್ಕೆ ಮಂಜೂರಾತಿ ಆದೇಶಗಳನ್ನು ಹೊರಡಿಸುತ್ತದೆ. ಆದೇಶಗಳ ಸ್ವೀಕೃತಿಯ ನಂತರ, ರಾಜ್ಯ ಸರ್ಕಾರವು ಈ ಹಣವನ್ನು ರಾಜ್ಯ ಪಾಲಿನ ಹಣದೊಂದಿಗೆ (ಅಂದರೆ ವಸ್ತು ಘಟಕದ ಶೇಕಡಾ 25 ಪಾಲು) ರಾಜ್ಯ ಉದ್ಯೋಗ ಖಾತರಿ ನಿಧಿಗೆ (ಎಸ್‌ಇಜಿಎಫ್) 3 ದಿನಗಳ ಒಳಗೆ (2019–20 ಮತ್ತು 2020–21ರ ವರ್ಷಗಳಿಗೆ)/15 ದಿನಗಳೊಳಗೆ (2021–22ರಿಂದ 2023–24ರ ವರ್ಷಗಳಿಗೆ) ತಪ್ಪದೇ ವರ್ಗಾಯಿಸಬೇಕು. ರಾಜ್ಯ ಸರ್ಕಾರವು ಹಣವನ್ನು ಬಿಡುಗಡೆ ಮಾಡುವಲ್ಲಿ ವಿಳಂಬ ಮಾಡಿದರೆ ವಾರ್ಷಿಕ ಶೇಕಡಾ 12ರ ದರದಲ್ಲಿ (2019–20, 2020–21 ಮತ್ತು 2023–24 ವರ್ಷಕ್ಕೆ) ಬಡ್ಡಿಯನ್ನು ಪಾವತಿಸಬೇಕಾಗುತ್ತದೆ. 2021–22 ಮತ್ತು 2022–23ರ ವರ್ಷಗಳಿಗೆ ಸಂಬಂಧಿಸಿದ ಮಂಜೂರಾತಿ ಆದೇಶಗಳಲ್ಲಿ ಅಂತಹ ಯಾವುದೇ ಸೂಚನೆಗಳಿಲ್ಲ.

2019–20ರಿಂದ 2023–24ರ ಅವಧಿಯಲ್ಲಿ ಬಿಡುಗಡೆಯಾದ ₹10,379.17 ಕೋಟಿಗಳಲ್ಲಿ (ಸಾಮಗ್ರಿ ಮತ್ತು ಆಡಳಿತಾತ್ಮಕ ಘಟಕ) ₹6,699.25 ಕೋಟಿಗಳನ್ನು (ಶೇಕಡಾ 65) ಹಣಕಾಸು ಇಲಾಖೆ 1ರಿಂದ 146 ದಿನಗಳ ವ್ಯಾಪ್ತಿಯ ವಿಳಂಬದೊಂದಿಗೆ ಬಿಡುಗಡೆ ಮಾಡಿರುವುದನ್ನು ದಾಖಲೆಗಳ ಪರಿಶೀಲನೆಯು ತೋರಿಸಿತು. ಭಾರತ ಸರ್ಕಾರದ ಸೂಚನೆಗಳ ಪ್ರಕಾರ, 2019–20, 2020–21 ಮತ್ತು 2023–24ರ ವರ್ಷಗಳಿಗೆ ಹಣವನ್ನು ಬಿಡುಗಡೆ ಮಾಡುವಲ್ಲಿ ವಿಳಂಬ ಮಾಡಿದ್ದರಿಂದ ರಾಜ್ಯ ಸರ್ಕಾರವು ವಾರ್ಷಿಕ ಶೇಕಡಾ ₹36.26 ಕೋಟಿ ಬಡ್ಡಿಯನ್ನು ಪಾವತಿಸಬೇಕಿತ್ತು (**ಅನುಬಂಧ–3.5**ರಲ್ಲಿ ವಿವರಿಸಲಾಗಿದೆ).

ರಾಜ್ಯ ಸರ್ಕಾರವು ಲೆಕ್ಕಪರಿಶೋಧನೆಯ ಅವಲೋಕನವನ್ನು ಒಪ್ಪಿಕೊಂಡಿತು ಮತ್ತು ವಿಳಂಬಕ್ಕೆ ಸ್ಥಾಪಿತ ಆಡಳಿತಾತ್ಮಕ ಕಾರ್ಯವಿಧಾನಗಳು, ರಜಾದಿನಗಳು ಇತ್ಯಾದಿಗಳು ಕಾರಣವೆಂದು ತಿಳಿಸಿತು (ಮೇ 2025).

## 3.8 ಅನುಮತಿಸಲಾಗದ ಆಡಳಿತಾತ್ಮಕ ವೆಚ್ಚಗಳು

### *3.8.1 ಕ್ಲರ್ಕ್–ಕಮ್–ಡೇಟಾ ಎಂಟ್ರಿ ಆಪರೇಟರ್ ಗಳ ವೇತನದ ಅನುಮತಿಸಲಾಗದ ವೆಚ್ಚ*

ಕಂಡಿಕೆ 12.5.5(ix) ಪ್ರಕಾರ, ಆಡಳಿತಾತ್ಮಕ ವೆಚ್ಚದ ಅಡಿಯಲ್ಲಿ ಅನುಮತಿಸಬಹುದಾದ ಚಟುವಟಿಕೆಗಳು ಯೋಜನೆಯ ಪ್ರಮುಖ ಕಾರ್ಯಕಾರಿ ಹುದ್ದೆಗಳಲ್ಲಿ ಮತ್ತು ಗ್ರಾಮಪಂಚಾತ್ತಿ ಬ್ಲಾಕ್/ಜಿಲ್ಲಾ ಮಟ್ಟದಲ್ಲಿನ ಹೆಚ್ಚುವರಿ ಮೀಸಲಾದ ಸಿಬ್ಬಂದಿಗೆ ಮಾಡಿದ ವೆಚ್ಚಗಳನ್ನು ಒಳಗೊಂಡಿವೆ. ಸರ್ಕಾರ/ಪಿಆರ್ ಐಗಳು/ಇನ್ನಾವುದೇ ಅನುಷ್ಠಾನ ಸಂಸ್ಥೆಯಿಂದ ಈಗಾಗಲೇ ತೊಡಗಿಸಿಕೊಂಡಿರುವ ಕಾರ್ಯಕರ್ತರ ವೇತನ/ಸಂಭಾವನೆಯನ್ನು ಯಾವುದೇ ಸಂದರ್ಭದಲ್ಲಿಯೂ ಎಂಜಿಎನ್ಆರ್ ಇಜಿಎಸ್ ಆಡಳಿತಾತ್ಮಕ ವೆಚ್ಚಗಳ ಅಡಿಯಲ್ಲಿ ಭರಿಸಬಾರದು ಎಂದು ಕಂಡಿಕೆ 12.5.6 (ಆಡಳಿತಾತ್ಮಕ ವೆಚ್ಚಗಳ ಅಡಿಯಲ್ಲಿ ಅನುಮತಿಸಲಾಗದ ವೆಚ್ಚಗಳು) ಷರತ್ತು ವಿಧಿಸುತ್ತದೆ.

ಗ್ರಾಮ ಪಂಚಾಯಿತಿಗಳಲ್ಲಿ ಕೆಲಸ ಮಾಡುವ 4,959 ಕ್ಲರ್ಕ್–ಕಮ್–ಡೇಟಾ ಎಂಟ್ರಿ ಆಪರೇಟರ್ ಗಳ (ಡಿಇಒಗಳು) ವೇತನ ವೆಚ್ಚವನ್ನು ಪೂರೈಸಲು ಹಣ ಬಿಡುಗಡೆ ಮಾಡುವಂತೆ ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಎಂ.ಜಿ.ಎನ್.ಆರ್.ಇ.ಜಿ.ಎಸ್ ಆಯುಕ್ತರಿಗೆ ಮನವಿ ಮಾಡಿತು (ಜೂನ್ 2020). ಅದರಂತೆ, ಎಂಜಿಎನ್ಆರ್.ಇಜಿಎಸ್.ನ ಆಡಳಿತಾತ್ಮಕ ವೆಚ್ಚದಡಿಯಲ್ಲಿ ಎರಡು ಕಂತುಗಳಲ್ಲಿ ₹62.99 ಕೋಟಿಗಳನ್ನು ಬಿಡುಗಡೆ ಮಾಡಲು ಸರ್ಕಾರ ಆದೇಶ ಹೊರಡಿಸಿತು (02 ನವೆಂಬರ್ 2020).

ಸರ್ಕಾರದ ಆದೇಶಕ್ಕೆ ಅನುಗುಣವಾಗಿ, ಎಂ.ಜಿ.ಎನ್.ಆರ್.ಇ.ಜಿ.ಎಸ್ ಆಯುಕ್ತರು (24 ನವೆಂಬರ್ 2020) ಮೊದಲ ಕಂತಿನ ₹31.50 ಕೋಟಿಗಳನ್ನು ಆರ್.ಡಿಪಿಆರ್ ಕಾರ್ಯದರ್ಶಿಗಳಿಗೆ ಬಿಡುಗಡೆ ಮಾಡಿದರು. ಹಣದ ಕೊರತೆಯನ್ನು ಉಲ್ಲೇಖಿಸಿ ಎರಡನೇ ಕಂತನ್ನು ಬಿಡುಗಡೆ ಮಾಡಲಿಲ್ಲ ಮತ್ತು ಎಂಜಿಎನ್ಆರ್ ಇಜಿಎಸ್ ಅಡಿಯಲ್ಲಿ ಸಂಬಳ ಪಾವತಿಸಲು ಅಧಿಕಾರ ನೀಡುವ ಸರ್ಕಾರಿ ಆದೇಶವನ್ನು ಹಿಂತೆಗೆದುಕೊಳ್ಳಲು ಅನುಮೋದನೆ ನೀಡಲಾಯಿತು (ಆಗಸ್ಟ್ 2022).

ಈ ಡಿಇಒಗಳು ಎಂ.ಜಿ.ಎನ್.ಆರ್.ಇ.ಜಿ.ಎಸ್‌ಗೆ ಮೀಸಲಿಟ್ಟ ಸಿಬ್ಬಂದಿಯಾಗಿರಲಿಲ್ಲ ಮತ್ತು ಈಗಾಗಲೇ ಪಿಆರ್ ಐಗಳು ತೊಡಗಿಸಿಕೊಂಡ ಸಿಬ್ಬಂದಿಯಾಗಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆದ್ದರಿಂದ, ಅವರ ಸಂಬಳ/ಸಂಭಾವನೆಯನ್ನು ಪಾವತಿಸುವುದು ಆರ್.ಡಿಪಿಆರ್ ಇಲಾಖೆಯ ಜವಾಬ್ದಾರಿಯಾಗಿತ್ತು. ಈ ಡಿಇಒಗಳ 2021–22ನೇ ಸಾಲಿನ ವೇತನವನ್ನು ಸರ್ಕಾರಿ ನಿಧಿ ಮತ್ತು ಗ್ರಾಮ ಪಂಚಾಯಿತಿಗಳ ಸ್ವಂತ ಸಂಪನ್ಮೂಲದಿಂದ ಭರಿಸಲಾಗಿತ್ತು ಎಂಬ ಅಂಶವೂ ಇದಕ್ಕೆ ಸಾಕ್ಷಿಯಾಗಿದೆ. ಹೀಗೆ, ಎಂ.ಜಿ.ಎನ್.ಆರ್.ಇ.ಜಿ.ಎಸ್ ಅಡಿಯಲ್ಲಿ ₹31.50 ಕೋಟಿಗಳ ವೆಚ್ಚವು ಅನುಮತಿಸಲಾಗದ ವೆಚ್ಚವಾಗಿತ್ತು.

### *3.8.2 ಎಂ.ಜಿ.ಎನ್.ಆರ್.ಇ.ಜಿ.ಎಸ್‌ಗೆ ಸಂಬಂಧಿಸಿಲ್ಲದ ಖರ್ಚುಗಳಿಗಾಗಿ ಅನುಮತಿಸಲಾಗದ ವೆಚ್ಚ.*

ಅಂತೆಯೇ, ಕಂಡಿಕೆ 12.5.5 ಆಡಳಿತಾತ್ಮಕ ವೆಚ್ಚದಡಿಯಲ್ಲಿ ಅನುಮತಿಸಬಹುದಾದ ಚಟುವಟಿಕೆಗಳನ್ನು ಪಟ್ಟಿ ಮಾಡಿದೆ, ಇದು ಎಂ.ಜಿ.ಎನ್.ಆರ್.ಇ.ಜಿ.ಎಸ್‌ನ ಕಚೇರಿ ವೆಚ್ಚಗಳಿಗೆ ಸಂಬಂಧಿಸಿರಬೇಕು ಎಂದು ನಿರ್ದಿಷ್ಟಪಡಿಸಿದೆ.

ಎಂ.ಜಿ.ಎನ್.ಆರ್.ಇ.ಜಿ.ಎಸ್ ಆಯುಕ್ತರ ಕಚೇರಿಯ ಆಡಳಿತ ನಿಧಿಯಿಂದ ಮಾಡಿದ ₹1.28 ಕೋಟಿಗಳ ವೆಚ್ಚವು ಯೋಜನೆಗೆ ಸಂಬಂಧಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಚುನಾವಣಾ ಕರ್ತವ್ಯಕ್ಕಾಗಿ ಪ್ರಯಾಣ ವೆಚ್ಚಗಳು, ಆರ್ ಡಿಪಿಆರ್ ನ ಇತರ ಯೋಜನೆಗಳ ವೆಚ್ಚ ಇತ್ಯಾದಿಗಳು ಕೆಲವು ಚಟುವಟಿಕೆಗಳಾಗಿದ್ದವು (**ಅನುಬಂಧ–3.6** ರಲ್ಲಿ ವಿವರಿಸಲಾಗಿದೆ).

ಸಕ್ಷಮ ಅಧಿಕಾರಿಗಳ ಅನುಮೋದನೆಯೊಂದಿಗೆ ವೆಚ್ಚವನ್ನು ಮಾಡಲಾಗಿದೆ ಎಂದು ರಾಜ್ಯ ಸರ್ಕಾರ ತಿಳಿಸಿತು (ಮೇ 2025). ಆದರೆ, ಯೋಜನೆಯ ಮಾರ್ಗಸೂಚಿಗಳ ಪ್ರಕಾರ ಈ ವೆಚ್ಚಗಳು ಸ್ವೀಕಾರಾರ್ಹವಲ್ಲ ಎಂಬುದು ವಾಸ್ತವಾಂಶವಾಗಿದೆ. ನಿರ್ಗಮನ ಸಮ್ಮೇಳನದಲ್ಲಿ (ಮೇ 2025), ಮೊತ್ತವನ್ನು ಮರುಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ಎಸಿಎಸ್ ಭರವಸೆ ನೀಡಿದರು.

**ಶಿಫಾರಸು 3: ಎಂಜಿಎನ್‌ಆರ್.ಇಜಿಎಸ್ ಅಡಿಯಲ್ಲಿ ಮಾಡಿದ ಅನುಮತಿಸಲಾಗದ ವೆಚ್ಚವನ್ನು ಮರುಭರ್ತಿ ಮಾಡಲು ರಾಜ್ಯ ಸರ್ಕಾರವು ಕ್ರಮ ಕೈಗೊಳ್ಳಬೇಕು.**

### 3.9 ಆಧಾರ್ ಆಧಾರಿತ ಪಾವತಿಗಳ ಸ್ಥಿತಿಗತಿ

ಫಲಾನುಭವಿಗಳ ಖಾತೆ ವಿವರಗಳನ್ನು ಎಂಐಎಸ್ ನಲ್ಲಿ ನಿಯಮಿತವಾಗಿ ಸೇರಿಸಬೇಕು ಎಂದು ಎಎಂಸಿ, 2019–20ರ ಕಂಡಿಕೆ–14.2 ಷರತ್ತು ವಿಧಿಸುತ್ತದೆ. ಆಧಾರ್ ಆಧಾರಿತ ಪಾವತಿ ವ್ಯವಸ್ಥೆಯನ್ನು (ಎಬಿಪಿಎಸ್) ಸಕ್ರಿಯಗೊಳಿಸಲು, ಆಧಾರ್ ಜೋಡಣೆ ಮತ್ತು ಬ್ಯಾಂಕುಗಳಿಂದ ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ (ಎನ್ ಪಿಸಿಐ) ಮ್ಯಾಪರ್ ನಲ್ಲಿ ಅದರ ಮ್ಯಾಪಿಂಗ್ ಅತ್ಯಗತ್ಯವಾಗಿದೆ. ಎಂಜಿಎನ್‌ಆರ್ ಇಜಿಎಸ್ ಕಾರ್ಮಿಕರ ಬ್ಯಾಂಕ್ ಖಾತೆಗಳಿಗೆ ಆಧಾರ್ ಜೋಡಣೆಯನ್ನು ತ್ವರಿತಗೊಳಿಸಲು ಕೇಂದ್ರ ಸರ್ಕಾರವು ನಿಗದಿತ ಕಾರ್ಯಾಚರಣಾ ವಿಧಾನವನ್ನು (ಎಸ್‌ಒಪಿ) (ಮಾರ್ಚ್ 2017) ಹೊರಡಿಸಿತು.

ಎಸ್‌ಒಪಿ ಹೊರಡಿಸಿದ ಏಳು ವರ್ಷಗಳ ನಂತರವೂ 84.98 ಲಕ್ಷ ಸಕ್ರಿಯ ಕಾರ್ಮಿಕರಲ್ಲಿ 3.11 ಲಕ್ಷ ಕಾರ್ಮಿಕರ ಖಾತೆಗಳೊಂದಿಗೆ ಆಧಾರ್ ಮ್ಯಾಪಿಂಗ್ ರಾಜ್ಯ ಮಟ್ಟದಲ್ಲಿ (ಮಾರ್ಚ್ 2024) ಬಾಕಿ ಇದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಬ್ಯಾಂಕ್ ಖಾತೆಗಳ ಮ್ಯಾಪಿಂಗ್ ನ ಅನುಪಸ್ಥಿತಿಯಿಂದಾಗಿ ಈ ಸಕ್ರಿಯ ಕಾರ್ಮಿಕರಿಗೆ ವೇತನ ಪಟ್ಟಿಗಳನ್ನು ತಯಾರಿಸುವ ಮತ್ತು ಪಾವತಿ ಮಾಡುವ ಬಗ್ಗೆ ಯಾವುದೇ ಭರವಸೆಯನ್ನು ಪಡೆಯಲು ಸಾಧ್ಯವಾಗಲಿಲ್ಲ.

ಸಮಸ್ಯೆಗಳನ್ನು ಪರಿಹರಿಸಲಾಗುವುದು ಮತ್ತು ಬಾಕಿ ಇರುವ ಮ್ಯಾಪಿಂಗ್ ಪೂರ್ಣಗೊಳ್ಳಲಾಗುವುದು ಎಂದು ರಾಜ್ಯ ಸರ್ಕಾರ ತಿಳಿಸಿತು (ಮೇ 2025).

### 3.10 ಬಾಕಿ ಇರುವ ಹೊಣೆಗಾರಿಕೆಗಳು

ನಿಧಿಯ ಹರಿವಿನ ವ್ಯವಸ್ಥೆಯನ್ನು ಸುವ್ಯವಸ್ಥಿತಗೊಳಿಸುವ ದೃಷ್ಟಿಯಿಂದ ಮತ್ತು ಎಂಜಿಎನ್‌ಆರ್ ಇಜಿಎಯ ಉದ್ದೇಶಗಳ ಪ್ರಕಾರ ಪ್ರಯೋಜನಗಳನ್ನು ತಲುಪಿಸಲು ರಾಜ್ಯ ಸರ್ಕಾರಗಳು/ತಳಮಟ್ಟದ ಅನುಷ್ಠಾನ ಏಜೆನ್ಸಿಗಳಿಗೆ ಅಧಿಕಾರ ನೀಡುವ ಉದ್ದೇಶದಿಂದ, ಕೇಂದ್ರ ಸರ್ಕಾರವು ವೇತನ ಪಾವತಿಗಳಿಗಾಗಿ ನ್ಯಾಷನಲ್ ಎಲೆಕ್ಟ್ರಾನಿಕ್ ಫಂಡ್ ಮ್ಯಾನೇಜ್ಮೆಂಟ್ ಸಿಸ್ಟಮ್ ಅನ್ನು (ಎನ್‌ಇ–ಎಫ್‌ಎಂಎಸ್) ಪರಿಚಯಿಸಿತು (ಮೇ 2016). ಸೂಚನೆಗಳ ಪ್ರಕಾರ, ಎಂ.ಜಿ.ಎನ್.ಆರ್.ಇ.ಜಿ.ಎಸ್ ವೇತನ ಘಟಕವು ಸಂಪೂರ್ಣವಾಗಿ ಭಾರತ ಸರ್ಕಾರದ ಜವಾಬ್ದಾರಿಯಾಗಿದ್ದು, ಅದನ್ನು ಕೇಂದ್ರ ವಲಯ ಯೋಜನೆಯಾಗಿ ನಿರ್ವಹಿಸಬೇಕಾಗಿತ್ತು

ಮತ್ತು ಸಾಮಗ್ರಿ/ಆಡಳಿತಾತ್ಮಕ ಘಟಕಗಳನ್ನು ಕೇಂದ್ರ ಪ್ರಾಯೋಜಿತ ಯೋಜನೆಯಾಗಿ ಮುಂದುವರಿಸಬೇಕು ಮತ್ತು ಅದನ್ನು ರಾಜ್ಯ ಕ್ರೋಢೀಕೃತ ನಿಧಿಗೆ ಬಿಡುಗಡೆ ಮಾಡಬೇಕಾಗಿತ್ತು. ಎಲ್ಲಾ ಹಣ ವರ್ಗಾವಣೆ ಆದೇಶಗಳ ಪ್ರಕ್ರಿಯೆಗಳು ಸಕಾಲಿಕವಾಗಿ ಆಗುವುದನ್ನು ಖಚಿತಪಡಿಸಿಕೊಳ್ಳುವುದು ಜಿಲ್ಲಾ ಪಂಚಾಯಿತಿಗಳ ಸಿಇಓಗಳು ಮತ್ತು ತಾಲೂಕು ಪಂಚಾಯಿತಿಗಳ ಇಓಗಳ ಕರ್ತವ್ಯವಾಗಿತ್ತು.

2019–20ರಿಂದ 2023–24ರ ಅವಧಿಗೆ ಕೌಶಲ್ಯರಹಿತ ವೇತನಗಳು, ಅರೆ–ನುರಿತ/ನುರಿತ ವೇತನಗಳು, ಸಾಮಗ್ರಿಗಳು ಮತ್ತು ತೆರಿಗೆಗಳಿಗೆ ಸಂಬಂಧಿಸಿದಂತೆ ಪಾವತಿಸಲು ₹780.91 ಕೋಟಿ ಮೊತ್ತ ಬಾಕಿ ಇರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು (ಮೇ 2024). ವಿವರಗಳನ್ನು ಕೆಳಗಿನ **ಕೋಷ್ಟಕ–3.7** ರಲ್ಲಿ ನೀಡಲಾಗಿದೆ:

**ಕೋಷ್ಟಕ 3.7: ಬಾಕಿ ಇರುವ ಪಾವತಿಗಳ ವಿವರಗಳು (ಮೇ 2024)**

**(₹ ಕೋಟಿಯಲ್ಲಿ)**

| ವರ್ಷ | ಕೌಶಲ್ಯರಹಿತ ಮಜೂರಿ | ಅರೆ–ನುರಿತ / ನುರಿತ ಮಜೂರಿ | ಸಾಮಗ್ರಿ | ತೆರಿಗೆ | ಒಟ್ಟು | ಬಾಕಿ ಇರುವ ಕೌಶಲ್ಯರಹಿತ ಮಜೂರಿಗೆ ಅನುಗುಣವಾದ ಪಿಡಿಗಳು |
|---|---|---|---|---|---|---|
| 2019–20 | 2.22 | 0.31 | 13.73 | 0.15 | 16.41 | 89,157 |
| 2020–21 | 2.66 | 0.76 | 19.52 | 0.18 | 23.12 | 96,727 |
| 2021–22 | 2.25 | 0.99 | 39.72 | 0.52 | 43.48 | 77,855 |
| 2022–23 | 3.22 | 1.36 | 122.70 | 3.86 | 131.14 | 1,04,207 |
| 2023–24 | 20.17 | 4.20 | 520.15 | 22.24 | 566.76 | 6,38,291 |
| **Total** | **30.52** | **7.62** | **715.82** | **26.95** | **780.91** | **10,06,237** |

**ಮೂಲ: ಇಲಾಖೆಯು ಒದಗಿಸಿದ ಮಾಹಿತಿ (17.05.2024)**

₹30.52 ಕೋಟಿಗಳಷ್ಟು ಕೌಶಲ್ಯರಹಿತ ವೇತನವು ಒಂದರಿಂದ ಐದು ವರ್ಷಗಳವರೆಗೆ ಬಾಕಿ ಇರುವುದನ್ನು ಗಮನಿಸಬಹುದು. ಕೆಲಸ ಮಾಡಿದ ದಿನಗಳ ವಿಷಯದಲ್ಲಿ, 10.06 ಲಕ್ಷ ಮಾನವ ದಿನಗಳ ವೇತನವನ್ನು ಇನ್ನೂ ಪಾವತಿಸಬೇಕಾಗಿರುವುದನ್ನು ಇದು ಸೂಚಿಸುತ್ತದೆ. ಒಂದು ವೇಳೆ ಇದು ನಿಜವಾಗಿದ್ದರೆ, ತಮ್ಮ ಜೀವನೋಪಾಯಕ್ಕಾಗಿ ಈ ಪಾವತಿಗಳನ್ನು ಅವಲಂಬಿಸಿರುವ ಗ್ರಾಮೀಣ ಬಡವರ ಜೀವನೋಪಾಯದ ಮೇಲೆ ವೇತನದ ನಿರಾಕರಣೆಯು ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಅಂತೆಯೇ, ಇಲಾಖೆಯು ಒಂದರಿಂದ ಐದು ವರ್ಷಗಳ ಅವಧಿಗೆ ಸಾಮಗ್ರಿಗಳ (ಅರೆ–ನುರಿತ/ನುರಿತ ವೇತನ ಸೇರಿದಂತೆ) ₹723.44 ಕೋಟಿಗಳ ಬಾಕಿಯನ್ನು ಪಾವತಿಸಿರಲಿಲ್ಲ. ಕಾರ್ಮಿಕರು/ಪೂರೈಕೆದಾರರಿಗೆ ಅನಗತ್ಯವಾಗಿ ದೀರ್ಘಕಾಲದವರೆಗೆ ಬಾಕಿಯನ್ನು ಪಾವತಿಸದಿರುವುದು ಪರಿಣಾಮಕಾರಿಯಲ್ಲದ ಮೇಲ್ವಿಚಾರಣಾ ಕಾರ್ಯವಿಧಾನವನ್ನು ಸೂಚಿಸುವುದಲ್ಲದೆ, ನಕಲಿ ಕಾರ್ಮಿಕರು ಮತ್ತು ನಕಲಿ ಬಿಲ್ಲುಗಳ ಸಾಧ್ಯತೆಯನ್ನು ಹೆಚ್ಚಿಸುತ್ತದೆ. ಈ ಹೊಣೆಗಾರಿಕೆಗಳಿಗೆ ವಿವರವಾದ ತನಿಖೆ ಮತ್ತು ಶೀಘ್ರ ಪರಿಹಾರದ ಅಗತ್ಯವಿದೆ.

ಎಂಐಎಸ್ ವರದಿಗಳು[13] ಆರ್14.6 (ಒಟ್ಟಾರೆ ಸಮಯೋಚಿತ ಪಾವತಿ ಸ್ಥಿತಿ) ಮತ್ತು ಆರ್7.2.2 (ಕಾರ್ಮಿಕ ಸಾಮಗ್ರಿ ಅನುಪಾತ ವಿಶ್ಲೇಷಣೆ) ನಲ್ಲಿರುವ ವಿವರಗಳಿಗೆ ಹೋಲಿಸಿದರೆ ಬಾಕಿ ಉಳಿದಿರುವ ವೇತನ ಪಾವತಿಗಳ ಅಂಕಿಅಂಶಗಳಲ್ಲಿ ವ್ಯತ್ಯಾಸಗಳಿರುವುದು ಕಂಡುಬಂದಿತು. ಈ ವರದಿಗಳ ಪ್ರಕಾರ, 2019–20ರಿಂದ 2023–24ರ ಅವಧಿಯಲ್ಲಿ ಬಾಕಿ ಇರುವ ವೇತನ ಪಾವತಿಯು ಒಟ್ಟು ₹133.04 ಕೋಟಿಗಳಷ್ಟಿದ್ದು, ಇದು ಇಲಾಖೆಯು ಒದಗಿಸಿದ ಬಾಕಿ ವೇತನದ ವಿವರಗಳಿಗಿಂತ (₹30.52 ಕೋಟಿ) ಗಮನಾರ್ಹವಾಗಿ ಅಧಿಕವಾಗಿದ್ದಿತು. ಇಲಾಖೆಯು ವ್ಯತ್ಯಾಸವಿರುವುದನ್ನು ಒಪ್ಪಿಕೊಂಡಿತು ಮತ್ತು

[13] 26 ಆಗಸ್ಟ್ 2024 ರಂತೆ.

ವ್ಯತ್ಯಾಸವನ್ನು ಪರಿಹರಿಸಲು ಎನ್‌ಐಸಿಯೊಂದಿಗೆ ಇ–ಟಿಕೆಟ್ ಅನ್ನು ಮಂಡಿಸಲಾಗಿದೆ ಎಂದು ತಿಳಿಸಿತು (ಸೆಪ್ಟೆಂಬರ್ 2024).

ಈ ಬಾಕಿ ಇರುವ ಹೊಣೆಗಾರಿಕೆಗಳನ್ನು ತೀರಿಸಲು ವಿಫಲವಾಗುವುದಕ್ಕೆ ಒಂದು ಕಾರಣವೆಂದರೆ ಎನ್‌ಪಿಸಿಐ ಮ್ಯಾಪರ್ ನಿಂದ ಆಧಾರ್ ಸಂಖ್ಯೆಯನ್ನು ತೆಗೆದುಹಾಕಿರುವುದು, ತಪ್ಪಾದ/ಮುಚ್ಚಿದ ಬ್ಯಾಂಕ್ ಖಾತೆ, ಆಧಾರ್ ಮ್ಯಾಪಿಂಗ್ ಮಾಡದಿರುವುದು, ಅಮಾನ್ಯ ಬ್ಯಾಂಕ್ ಗುರುತು, ಬ್ಯಾಂಕ್ ಖಾತೆಯ ಐಎಫ್‌ಎಸ್ ಸಿ ಕೋಡ್ ನಲ್ಲಿ ಹೊಂದಾಣಿಕೆಯಾಗದಿರುವುದು ಮುಂತಾದ ಕಾರಣಗಳನ್ನು ತಿಳಿಸಿ ವಹಿವಾಟುಗಳನ್ನು ತಿರಸ್ಕರಿಸುವುದು. ಗ್ರಾಮೀಣಾಭಿವೃದ್ಧಿ ಸಚಿವಾಲಯದ ಉನ್ನತಾಧಿಕಾರ ಸಮಿತಿಯು ವಹಿವಾಟುಗಳ ಪುನರುತ್ಪಾದನೆಗೆ ವಿಶೇಷ ಒತ್ತು ನೀಡುವಂತೆ ರಾಜ್ಯ ಸರ್ಕಾರಕ್ಕೆ ಸೂಚನೆ ನೀಡಿತ್ತು (ಡಿಸೆಂಬರ್ 2020). ತಿರಸ್ಕೃತ ವಹಿವಾಟುಗಳನ್ನು ಎರಡು ದಿನಗಳಲ್ಲಿ ಪುನರುಜ್ಜೀವನಗೊಳಿಸುವಂತೆ ನಿರ್ದೇಶಿಸಲಾಯಿತು.

ತಿರಸ್ಕೃತಗೊಂಡ ವಹಿವಾಟುಗಳ ಸ್ಥಿತಿ ಹಾಗೂ ವೇತನ ಮತ್ತು ಸಾಮಗ್ರಿ ಘಟಕಗಳಿಗೆ ಸಂಬಂಧಿಸಿದಂತೆ ತೆಗೆದುಕೊಂಡ ಕ್ರಮವನ್ನು **ಅನುಬಂಧ–3.7**ರಲ್ಲಿ ನೀಡಲಾಗಿದೆ. ತಿರಸ್ಕೃತಗೊಂಡ ಒಟ್ಟು 6,76,244 ವೇತನ ವಹಿವಾಟುಗಳಲ್ಲಿ 6,18,281 ವಹಿವಾಟುಗಳನ್ನು (ಶೇಕಡಾ 91) ಪುನರುಜ್ಜೀವನಗೊಳಿಸಲಾಗಿದೆ ಎಂಬುದನ್ನು ಗಮನಿಸಲಾಯಿತು. ಪುನರುಜ್ಜೀವನಗೊಳಿಸಿದ ವಹಿವಾಟುಗಳಲ್ಲಿ ₹11.66 ಕೋಟಿಗಳ ವೇತನ ಪಾವತಿ ಬಾಕಿ ಇದ್ದಿತು (ಆಗಸ್ಟ್ 2024).

ಸಾಮಗ್ರಿ ಘಟಕಕ್ಕೆ ಸಂಬಂಧಿಸಿದಂತೆ, ₹477.62 ಕೋಟಿ (1,06,941 ವಹಿವಾಟುಗಳು) ವಹಿವಾಟುಗಳನ್ನು ತಿರಸ್ಕರಿಸಲಾಗಿತ್ತು. 93,677 ವಹಿವಾಟುಗಳನ್ನು ಪುನರುಜ್ಜೀವನಗೊಳಿಸಿದ್ದರೂ, 6,132 ವಹಿವಾಟುಗಳಿಗೆ ಸಂಬಂಧಿಸಿದ ₹23.44 ಕೋಟಿಗಳ ಪಾವತಿ ಬಾಕಿ ಉಳಿದಿತ್ತು (ಆಗಸ್ಟ್ 2024). ಇದಲ್ಲದೆ, 2019–20 ರಿಂದ 2023–24ರ ಅವಧಿಗೆ ಸಂಬಂಧಿಸಿದ ₹11.27 ಕೋಟಿಗಳ 7,132 ವಹಿವಾಟುಗಳು ಇನ್ನೂ ಪುನರುಜ್ಜೀವನಕ್ಕಾಗಿ ಬಾಕಿ ಉಳಿದಿದ್ದವು (ಆಗಸ್ಟ್ 2024). ತಿರಸ್ಕೃತ ವಹಿವಾಟುಗಳ ಅಂತಹ ನಿದರ್ಶನಗಳು ಬ್ಯಾಂಕ್ ಖಾತೆಗಳ ನಿಯಮಿತ ಪರಿಶೀಲನೆ ಮತ್ತು ನವೀಕರಣದಲ್ಲಿನ ನ್ಯೂನತೆಗಳನ್ನು ಸೂಚಿಸುವುದಲ್ಲದೆ, ಗ್ರಾಮೀಣಾಭಿವೃದ್ಧಿ ಸಚಿವಾಲಯದ ನಿರ್ದೇಶನಗಳನ್ನು (ಡಿಸೆಂಬರ್ 2020) ಸಹ ಉಲ್ಲಂಘಿಸಿದಂತಾಯಿತು.

ತಿರಸ್ಕೃತ ವಹಿವಾಟುಗಳನ್ನು ನಿಯಮಿತವಾಗಿ ಮೇಲ್ವಿಚಾರಣೆ ಮಾಡಲಾಗುತ್ತಿದೆ/ಪರಿಶೀಲಿಸಲಾಗುತ್ತಿದೆ ಮತ್ತು ಕ್ಷೇತ್ರ ಸಿಬ್ಬಂದಿಯಿಂದ ಮೌಖಿಕ ಸಂವಹನದ ಮೂಲಕ ಫಲಾನುಭವಿಗಳಿಗೆ ತಿಳಿಸಲಾಗುತ್ತಿದೆ ಎಂದು ಇಲಾಖೆ ತಿಳಿಸಿತು (ಆಗಸ್ಟ್ 2024). ತಿರಸ್ಕೃತ ವಹಿವಾಟುಗಳನ್ನು ಪುನರುಜ್ಜೀವನಗೊಳಿಸುವಲ್ಲಿ ಇಲಾಖೆ ಮಾಡಿದ ಪ್ರಯತ್ನಗಳು ಶ್ಲಾಘನೀಯವಾಗಿದ್ದರೂ, ವೇತನ ಪಾವತಿ ವಹಿವಾಟುಗಳನ್ನು ತಿರಸ್ಕರಿಸುವುದರಿಂದ ವೇತನ ಪಾವತಿಯಲ್ಲಿ ವಿಳಂಬವಾಗುತ್ತದೆ ಎಂಬುದು ವಾಸ್ತವಾಂಶವಾಗಿದೆ. ಇದಲ್ಲದೆ, ತಿರಸ್ಕೃತ/ವಿಫಲವಾದ ವಹಿವಾಟಿನ ಬಗ್ಗೆ ಫಲಾನುಭವಿಗೆ ತಿಳಿಸಲು ಯಾವುದೇ ಸ್ವಯಂಚಾಲಿತ ವ್ಯವಸ್ಥೆಯನ್ನು ಸ್ಥಾಪಿಸಿರಲಿಲ್ಲ

ರಾಜ್ಯ ಸರ್ಕಾರವು ಲೆಕ್ಕಪರಿಶೋಧನೆಯ ಅವಲೋಕನವನ್ನು ಒಪ್ಪಿಕೊಂಡಿತು (ಮೇ 2025) ಮತ್ತು ವೇತನ ಮತ್ತು ಸಾಮಗ್ರಿಗಳ ವಹಿವಾಟುಗಳನ್ನು ಮುಕ್ತಗೊಳಿಸಲು ಮತ್ತು ದೀರ್ಘಕಾಲದಿಂದ ಬಾಕಿ ಉಳಿದಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿತು.

**ಶಿಫಾರಸು 4: ಆಧಾರ್ ಆಧಾರಿತ ಪಾವತಿಗಳಿಗೆ ಸಂಬಂಧಿಸಿದಂತೆ ವಿಫಲವಾದ ವಹಿವಾಟುಗಳ ಪುನರುತ್ಪಾದನೆ ಮತ್ತು ಫಲಾನುಭವಿಗಳಿಗೆ ಮರುಪಾವತಿಯಲ್ಲಿ ಬಾಕಿ ಇರುವ ಪ್ರಕರಣಗಳನ್ನು ಕಡಿಮೆ ಮಾಡಲು ಕ್ರಮ ಕೈಗೊಳ್ಳಬೇಕು. ವಿಫಲವಾದ ವಹಿವಾಟುಗಳು/ಬಾಕಿ ಪಾವತಿಗಳ ಸ್ಥಿತಿಯ ಬಗ್ಗೆ ಫಲಾನುಭವಿಗಳಿಗೆ ಮಾಹಿತಿ ನೀಡಲು ಇಲಾಖೆ ಸ್ವಯಂಚಾಲಿತ ವ್ಯವಸ್ಥೆಯನ್ನು ರೂಪಿಸಬೇಕು.**

### 3.11 ವೇತನ ಪಾವತಿಯಲ್ಲಿ ವಿಳಂಬ ಮತ್ತು ಪರಿಹಾರಕ್ಕಾಗಿ ವಿಳಂಬಿತ ದಿನಗಳನ್ನು ನ್ಯಾಯಸಮ್ಮತವಲ್ಲದೆ ತಿರಸ್ಕರಿಸುವುದು

ಎಂ.ಜಿ.ಎನ್.ಆರ್.ಇ.ಜಿ.ಎಸ್ ಕಾಯ್ದೆಯ ಸೆಕ್ಷನ್ 3(3), ಫಲಾನುಭವಿಯು ತಮ್ಮ ದೈನಂದಿನ ವೇತನವನ್ನು ವಾರಕ್ಕೊಮ್ಮೆ ಪಡೆಯಲು ಮತ್ತು ಯಾವುದೇ ಸಂದರ್ಭದಲ್ಲಿ, ಅಂತಹ ಕೆಲಸ ಮಾಡಿದ ದಿನಾಂಕದ ನಂತರ ಹದಿನೈದು ದಿನಗಳೊಳಗೆ ಪಡೆಯಲು ಅರ್ಹತೆ ನೀಡುತ್ತದೆ. ಕಾಯ್ದೆಯ ಅನುಸೂಚಿ–IIರ ಕಂಡಿಕೆ 29ರಲ್ಲಿ, ಮಸ್ಟರ್ ರೋಲ್ ಮುಕ್ತಾಯಗೊಳಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗೆ ವೇತನವನ್ನು ಪಾವತಿಸದಿದ್ದರೆ, ವೇತನ ಪಡೆಯುವವರು ಮಸ್ಟರ್ ರೋಲ್ ಮುಕ್ತಾಯಗೊಳಿಸಿದ ಹದಿನಾರನೇ ದಿನದ ನಂತರ ವಿಳಂಬಿತ ದಿನಕ್ಕೆ ಪಾವತಿಸದ ವೇತನದ ಶೇಕಡಾ 0.05ರ ದರದಲ್ಲಿ ವಿಳಂಬಿತ ಪರಿಹಾರದ ಪಾವತಿಯನ್ನು ಪಡೆಯಲು ಅರ್ಹರಾಗುತ್ತಾರೆ. ಮಸ್ಟರ್ ರೋಲ್ ಮುಕ್ತಾಯಗೊಳಿಸಿದ ದಿನಾಂಕ ಮತ್ತು ವೇತನ ಪಡೆಯುವವರ ಖಾತೆಗಳಿಗೆ ವೇತನವನ್ನು ಠೇವಣಿ ಮಾಡಿದ ದಿನಾಂಕವನ್ನು ಆಧರಿಸಿ ಪಾವತಿಸಬೇಕಾದ ಪರಿಹಾರವನ್ನು ಸ್ವಯಂಚಾಲಿತವಾಗಿ ಲೆಕ್ಕಾಚಾರ ಮಾಡಲು ಕಂಪ್ಯೂಟರ್ ವ್ಯವಸ್ಥೆಯು ಅವಕಾಶವನ್ನು ಹೊಂದಿರಬೇಕು ಎಂದು ಕಾಯಿದೆಯು ಕಡ್ಡಾಯಗೊಳಿಸಿದೆ. ಮೇಲೆ ನಿರ್ದಿಷ್ಟಪಡಿಸಿದ ಕಾಲಮಿತಿಯೊಳಗೆ ಸೂಕ್ತ ಪರಿಶೀಲನೆಯ ನಂತರ ಪರಿಹಾರವನ್ನು ಮುಂಗಡವಾಗಿ ಪಾವತಿಸುವುದು ರಾಜ್ಯ ಸರ್ಕಾರದ ಹೊಣೆಯಾಗಿದ್ದು ಪಾವತಿಯ ವಿಳಂಬಕ್ಕೆ ಕಾರಣವಾದ ಕಾರ್ಯನಿರ್ವಾಹಕರು ಅಥವಾ ಏಜೆನ್ಸಿಗಳಿಂದ ಪರಿಹಾರದ ಮೊತ್ತವನ್ನು ವಸೂಲಿ ಮಾಡಬೇಕಾಗುತ್ತದೆ.

ಯೋಜನೆಯ ಫಲಾನುಭವಿಗಳಿಗೆ ಸಕಾಲಿಕ ಪಾವತಿಗಳನ್ನು (ಇ–ಮಸ್ಟರ್ ಮುಕ್ತಾಯಗೊಳಿಸಿದ 15 ದಿನಗಳೊಳಗೆ) ಮಾಡುವ ಉದ್ದೇಶವನ್ನು ಪೂರೈಸಲು, ಈ ವ್ಯವಸ್ಥೆಯಲ್ಲಿನ ಎಲ್ಲಾ ಪಾಲುದಾರರು ನಿಗದಿಪಡಿಸಿದ ಕಾಲಮಿತಿಗೆ ಬದ್ಧರಾಗಿರುವುದು ಅತ್ಯಗತ್ಯವಾಗಿತ್ತು. ಒಳಗೊಂಡಿದ್ದ ಮಧ್ಯಸ್ಥಗಾರರು: **(ಹಂತ–I)** ಎಫ್ ಟಿಒಗಳ ಉತ್ಪಾದನೆಯವರೆಗೆ ಭಾಗಿಯಾಗಿರುವ ಕ್ಷೇತ್ರ ಕಾರ್ಯಕರ್ತರು **(ರಾಜ್ಯ ಮಟ್ಟ)**, **(ಹಂತ–II)** ನಿಧಿ ಆದೇಶ ಬಿಡುಗಡೆಯಲ್ಲಿ ತೊಡಗಿರುವ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಅಧಿಕಾರಿಗಳು ಮತ್ತು ಎಫ್ ಟಿಒಗಳ ಚಲನೆ ಮತ್ತು ಪ್ರಕ್ರಿಯೆಯಲ್ಲಿ ತೊಡಗಿರುವ ಏಜೆನ್ಸಿಗಳು **(ಪಿಎಫ್ಎಂಎಸ್/ಬ್ಯಾಂಕುಗಳು/ಎನ್.ಪಿಸಿಐ/ಡಿಒಪಿ/ಎನ್ಐಸಿ–ಡಿಆರ್.ಡಿ)** ಮತ್ತು ಅಂತಿಮವಾಗಿ ಫಲಾನುಭವಿಗಳ ಖಾತೆಗಳಿಗೆ ಜಮಾ ಮಾಡುವುದು. ವಿವಿಧ ಕಾರ್ಯಕರ್ತರ ಮೇಲೆ ಜವಾಬ್ದಾರಿಯನ್ನು ಪತ್ತೆಹಚ್ಚಲು/ನಿಗದಿಪಡಿಸಲು ಮತ್ತು ವಿಳಂಬಕ್ಕೆ ಅನುಗುಣವಾಗಿ ವಸೂಲಿ ಮಾಡಲು, ರಾಜ್ಯ ಸರ್ಕಾರವು **ಅನುಬಂಧ–3.8** ರಲ್ಲಿ ವಿವರಿಸಿದಂತೆ ಕಾಲಮಿತಿಗಳನ್ನು (ಜನವರಿ 2019) ನಿಗದಿಪಡಿಸಿತ್ತು.

ವೇತನವನ್ನು ಸಕಾಲಿಕವಾಗಿ ಪಾವತಿಸುವುದು ಮತ್ತು ವೇತನ ಪಾವತಿಯ ವಿಳಂಬಿತ ಪರಿಹಾರ ಪಾವತಿಗೆ ಸಂಬಂಧಿಸಿದ ಕಾಯಿದೆಯ ನಿಬಂಧನೆಗಳನ್ನು ನಂತರದ ಕಂಡಿಕೆಗಳಲ್ಲಿ ವಿವರಿಸಿದಂತೆ ಅನುಸರಿಸಲಾಗಿಲ್ಲ ಎಂಬುದನ್ನು ಎಂಐಎಸ್ ವರದಿಗಳು ಮತ್ತು ಇಲಾಖೆ ಒದಗಿಸಿದ ಮಾಹಿತಿಯ ಪರಿಶೀಲನೆಯು ತಿಳಿಯಪಡಿಸಿತು.

(i) ಎರಡನೇ ಹಂತದವರೆಗೆ ಅಂದರೆ ಫಲಾನುಭವಿಗಳಿಗೆ ವಾಸ್ತವಿಕವಾಗಿ ವೇತನ ಜಮಾ ಆಗುವವರೆಗೆ ವೇತನ ಪಾವತಿಯ ಏಕೀಕೃತ ಸ್ಥಿತಿಯನ್ನು ನೀಡುವ ಯಾವುದೇ ಎಂಐಎಸ್ ವರದಿಗಳು ಸಾರ್ವಜನಿಕ ಡೊಮೇನ್ ನಲ್ಲಿ ಇರಲಿಲ್ಲ. ಆರ್14.5 (ಹಣಕಾಸು ವರ್ಷದ ವಿಳಂಬ ಪಾವತಿ (ಹಂತ–1) ಎಂಬ ವರದಿ ಇದ್ದು, ಅದು ಎಫ್ ಟಿಒಗಳ 2ನೇ ಸಹಿ ಹಾಕಿದ (ಹಂತ–1) ಹಂತದವರೆಗೆ ಮಾತ್ರ ಸ್ಥಿತಿಯನ್ನು ಟ್ರ್ಯಾಕ್ ಮಾಡುತ್ತದೆ ಮತ್ತು ವಾಸ್ತವಿಕವಾಗಿ ಜಮೆ ಮಾಡಿದ ದಿನಾಂಕವನ್ನಲ್ಲ.

(ii) ಇಲಾಖೆಯು ಒದಗಿಸಿದ ಮಾಹಿತಿಯು (ಆಗಸ್ಟ್ 2024) ಒಟ್ಟು ₹19,231.31 ಕೋಟಿಗಳ ವೇತನವನ್ನು ಪಾವತಿಸಲಾಗಿದೆ ಮತ್ತು ₹133.04 ಕೋಟಿಗಳ ವೇತನ ಪಾವತಿಸಲು ಬಾಕಿ ಇದೆ ಎಂಬುದನ್ನು ತೋರಿಸಿತು. ಸಕಾಲಿತ ಪಾವತಿ ಸ್ಥಿತಿಯ (ಒಟ್ಟಾರೆ) ವರದಿಗಳ ಪರಿಶೀಲನೆಯು 15

ದಿನಗಳ ಕಡ್ಡಾಯ ಅವಧಿಯಲ್ಲಿ ₹9,499.43 ಕೋಟಿಗಳನ್ನು (ಶೇಕಡಾ 49) ಪಾವತಿಸಿದ್ದರೆ ₹9,864.92 ಕೋಟಿಗಳ (ಶೇಕಡಾ 51) ವೇತನ ಪಾವತಿಯಲ್ಲಿ ವಿಳಂಬವಾಗಿರುವುದನ್ನು ತೋರಿಸಿತು. **ಕೋಷ್ಟಕ–3.8** ರಲ್ಲಿ ವಿವರಿಸಿರುವಂತೆ ವರ್ಷವಾರು ವಿಳಂಬಗಳು ಶೇಕಡಾ 26ರಿಂದ 70 ರಷ್ಟಿದ್ದವು:

**ಕೋಷ್ಟಕ–3.8: ವೇತನ ಪಾವತಿಗಳನ್ನು ತೋರಿಸುವ ವಿವರಗಳು**

**(₹ ಕೋಟಿಯಲ್ಲಿ)**

| ವರ್ಷ | ಪಾವತಿಸಬೇಕಾದ ಒಟ್ಟು ಮಜೂರಿ (R7.2.2) | ಒಟ್ಟು ವೇತನ ಪಾವತಿ | 15 ದಿನಗೊಳಗೆ ಪಾವತಿ (%) | ವಿಳಂಬಿತ ಮಜೂರಿ ಪಾವತಿ | | |
|---|---|---|---|---|---|---|
| | | | | 15 ದಿನಗಳನ್ನು ಮೀರಿ ಪಾವತಿ | ಬಾಕಿ ಇರುವ ಮಜೂರಿ ಪಾವತಿ | ಒಟ್ಟು (%) |
| 2019–20 | 2,746.61 | 2,735.41 | 841.87 (31) | 1,893.54 | 11.20 | 1,904.74 (69) |
| 2020–21 | 4,009.01 | 3,923.17 | 2,979.23 (74) | 943.94 | 85.84 | 1,029.78 (26) |
| 2021–22 | 4,634.99 | 4,621.98 | 2,020.76 (44) | 2,601.22 | 13.01 | 2,614.23 (56) |
| 2022–23 | 3,780.36 | 3,771.41 | 2,389.99 (63) | 1,381.42 | 8.95 | 1,390.37 (37) |
| 2023–24 | 4,193.38 | 4,179.34 | 1,267.58 (30) | 2,911.76 | 14.04 | 2,925.80 (70) |
| **ಒಟ್ಟು** | **19,364.35** | **19,231.31** | **9,499.43 (49)** | **9,731.88** | **133.04** | **9,864.92 (51)** |

**ಮೂಲ: ಇಲಾಖೆ ಒದಗಿಸಿದ ಮಾಹಿತಿ (ಎಂಐಎಸ್ ವರದಿಗಳು ' R14.6– ಒಟ್ಟಾರೆಯಾಗಿ ಸಕಾಲಿಕ ಪಾವತಿ ಸ್ಥಿತಿ' ಮತ್ತು 26.08.2024 ರ 'ಆರ್7.2.2–ಕಾರ್ಮಿಕ ಸಾಮಗ್ರಿ ಅನುಪಾತ ವಿಶ್ಲೇಷಣೆ')**

ಮಸ್ಟರ್ ರೋಲ್ ಗಳನ್ನು ಮುಕ್ತಾಯಗೊಳಿಸಿದ ದಿನಾಂಕದ 16ರಿಂದ 60 ದಿನಗಳ ನಂತರ ಒಟ್ಟು ₹7,915.44 ಕೋಟಿಗಳ ವೇತನವನ್ನು ಪಾವತಿಸಲಾಗಿತ್ತು, 61ರಿಂದ 90 ದಿನಗಳ ನಡುವೆ ₹1,582.72 ಕೋಟಿಗಳ ವೇತನವನ್ನು ಪಾವತಿಸಲಾಗಿತ್ತು ಮತ್ತು ₹233.72 ಕೋಟಿಗಳ ವೇತನವನ್ನು ಮೂರು ತಿಂಗಳ (90 ದಿನಗಳು) ನಂತರ ಪಾವತಿಸಲಾಗಿರುವುದನ್ನು ವಿಳಂಬಿತ ವೇತನ ಪಾವತಿಗಳ (₹9,731.88 ಕೋಟಿ) ಮತ್ತಷ್ಟು ಪರಿಶೀಲನೆಯು ತೋರಿಸಿತು (ವಿವರಗಳನ್ನು ಕೆಳಗಿನ **ಕೋಷ್ಟಕ–3.9** ರಲ್ಲಿ ನೀಡಲಾಗಿದೆ):

**ಕೋಷ್ಟಕ 3.9: ವೇತನ ಪಾವತಿಗಳಲ್ಲಿ ವಿಳಂಬಗಳು (ಅವಧಿವಾರು)**

**(₹ ಕೋಟಿಯಲ್ಲಿ)**

| ವರ್ಷ | 15 ದಿನಗಳ ನಂತರ ವೇತನ ಪಾವತಿ | 16–30 ದಿನಗಳ ನಡುವೆ | 31–60 ದಿನಗಳ ನಡುವೆ | 61–90 ದಿನಗಳ ನಡುವೆ | 90 ದಿನಗಳಿಗಿಂತ ಹೆಚ್ಚು |
|---|---|---|---|---|---|
| 2019–20 | 1,893.54 | 503.48 | 948.02 | 378.60 | 63.44 |
| 2020–21 | 943.94 | 556.28 | 338.93 | 33.20 | 15.53 |
| 2021–22 | 2,601.22 | 1,017.85 | 1,157.88 | 360.66 | 64.83 |
| 2022–23 | 1,381.42 | 910.24 | 441.57 | 14.54 | 15.07 |
| 2023–24 | 2,911.76 | 662.76 | 1,378.43 | 795.72 | 74.85 |
| **ಒಟ್ಟು** | **9,731.88** | **3,650.61** | **4,264.83** | **1,582.72** | **233.72** |

**ಮೂಲ:ಇಲಾಖೆಯಿಂದ ಒದಗಿಸಲಾದ ಮಾಹಿತಿ (ಎಮ್‌ಐಎಸ್ ವರದಿ 'ಆರ್14.6–ಒಟ್ಟಾರೆಯಾಗಿ ಸಕಾಲಿಕ ಪಾವತಿ ಸ್ಥಿತಿ', ದಿನಾಂಕ 26.08.2024)**

ಡಿಜಿಟಲ್ ಸಹಿ ಪ್ರಮಾಣಪತ್ರಗಳ ಅವಧಿ ಮುಗಿಯುವಿಕೆ/ನಷ್ಟ/ಹಾನಿ, ಸರ್ವರ್ ನಲ್ಲಿನ ತಾಂತ್ರಿಕ ಸಮಸ್ಯೆ ಮುಂತಾದವುಗಳಿಗೆ ವಿಳಂಬವನ್ನು ಅಧ್ಯಾರೋಪಿಸಲಾಯಿತು. ಆದರೆ, ವೇತನ ಪಾವತಿಯಲ್ಲಿನ ವಿಳಂಬವು ಕಾಯಿದೆಯಡಿ ಖಾತರಿಪಡಿಸಿದ ಉದ್ಯೋಗ ಮತ್ತು ವೇತನಗಳನ್ನು ಒದಗಿಸುವ ಉದ್ದೇಶವನ್ನು ನಿರಾಕರಿಸುತ್ತದೆ ಎಂಬುದು ವಾಸ್ತವಾಂಶವಾಗಿದೆ.

**iii) ತಪ್ಪಾದ ಲೆಕ್ಕಾಚಾರದಿಂದಾಗಿ ವಿಳಂಬಿತ ಪರಿಹಾರದ ಕಡಿಮೆ ಪಾವತಿ:**

ವೇತನ ಪಾವತಿಯಲ್ಲಿ ವಿಳಂಬವಾದರೆ, ಪಾವತಿಸಬೇಕಾದ ಒಟ್ಟು ಪರಿಹಾರವನ್ನು ಲೆಕ್ಕಾಚಾರ ಮಾಡಲು ಎನ್ಆರ್ ಇಜಿಎಸಾಫ್ಟ್ (ಎಂಐಎಸ್ ವರದಿ ಆರ್ 14.1–ವಿಳಂಬ ಪರಿಹಾರ) ಅವಕಾಶವನ್ನು ಹೊಂದಿತ್ತು. ಸರಿಯಾದ ಪರಿಶೀಲನೆಯ ನಂತರ ಪರಿಹಾರವನ್ನು ಪಾವತಿಸಬೇಕಾಗಿತ್ತು. ವಿಳಂಬ ಪರಿಹಾರ ಬಾಕಿ ಇರುವ ದಿನಾಂಕದಿಂದ 15 ದಿನಗಳೊಳಗೆ, ಎನ್ಆರ್.ಇಜಿಎಸಾಫ್ಟ್ ಲೆಕ್ಕ ಹಾಕಿದ ಪರಿಹಾರವನ್ನು ಪಾವತಿಸಬೇಕೇ ಅಥವಾ ಬೇಡವೇ ಎಂಬುದನ್ನು ಪ್ರತಿಯೊಬ್ಬ ಕಾರ್ಯಕ್ರಮ ಅಧಿಕಾರಿಯು ನಿರ್ಧರಿಸಬೇಕು. (i) ನೈಸರ್ಗಿಕ ವಿಕೋಪಗಳು, (ii) ಬಾಕಿ ಇರದ ಪರಿಹಾರ ಅಂದರೆ ವೇತನವನ್ನು ಸಮಯಕ್ಕೆ ಸರಿಯಾಗಿ ಪಾವತಿಸಲಾಗಿದೆ ಆದರೆ ವಿವರಗಳನ್ನು ಎಂಐಎಸ್ ನಲ್ಲಿ ನಮೂದಿಸಲಾಗಿಲ್ಲ ಇತ್ಯಾದಿ ಸಂದರ್ಭಗಳಲ್ಲಿ ಪರಿಹಾರವನ್ನು ಪಾವತಿಸಲಾಗುವುದಿಲ್ಲ. ನಿರಾಕರಣೆಯ ಎಲ್ಲಾ ಸಂದರ್ಭಗಳಲ್ಲಿ, ಕಾರ್ಯಕ್ರಮ ಅಧಿಕಾರಿಯು ಎನ್ಆರ್ ಇಜಿಎಸಾಫ್ಟ್ ನಲ್ಲಿ ನಿರಾಕರಣೆಗೆ ವಿವರವಾದ ಕಾರಣಗಳನ್ನು ನೀಡಬೇಕಾಗಿತ್ತು. ಪರಿಹಾರಕ್ಕಾಗಿ ಅನುಮೋದಿಸಲಾದ ಮೊತ್ತವನ್ನು ರಾಜ್ಯ ಉದ್ಯೋಗ ಖಾತರಿ ನಿಧಿಯಿಂದ (ಎಸ್ಇಜಿಎಫ್) ಮುಂಚಿತವಾಗಿ ಭರಿಸಬೇಕಾಗಿತ್ತು ಮತ್ತು ವಿಳಂಬಕ್ಕೆ ಕಾರಣವಾದ ಕಾರ್ಯಕರ್ತರು/ಏಜೆನ್ಸಿಗಳಿಂದ ನಂತರ ವಸೂಲಿ ಮಾಡಬೇಕಾಗಿತ್ತು.

ಪರಿಹಾರದ ಮೊತ್ತವನ್ನು ಎಫ್ ಟಿಓಗಳ ಎರಡನೇ ಸಹಿ ದಿನಾಂಕದವರೆಗೆ ಲೆಕ್ಕಹಾಕಲಾಗಿತ್ತು ಮತ್ತು ವೇತನವನ್ನು ಫಲಾನುಭವಿಗಳ ಖಾತೆಗಳಿಗೆ ವಾಸ್ತವವಾಗಿ ವರ್ಗಾಯಿಸುವ ದಿನಾಂಕದವರೆಗೆ ಅಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಹಾಗಾಗಿ, ಅದು ಭಾಗಶಃ ವಿಳಂಬವನ್ನು ಮಾತ್ರ ಸೆರೆಹಿಡಿದಿತ್ತು.

ಇದಲ್ಲದೆ, ಸರ್ಕಾರಿ ಆದೇಶದಲ್ಲಿ ಸೂಚಿಸಿದಂತೆ 15 ದಿನಗಳ ನಂತರ (ಟಿ+15) ಎಫ್ ಟಿಓಗಳಿಗೆ ಸಹಿ ಹಾಕಿದ ಸಂದರ್ಭಗಳಲ್ಲಿ ಮಾತ್ರ ವಿಳಂಬವನ್ನು ಲೆಕ್ಕಹಾಕಲಾಯಿತು ಮತ್ತು ಟಿ+8 ದಿನಗಳಿಗಲ್ಲ. ಇದು ವಿಳಂಬಗಳ ಭಾಗಶಃ ಲೆಕ್ಕಾಚಾರಕ್ಕೆ ಕಾರಣವಾಯಿತು ಮತ್ತು ಎಫ್ ಟಿಓಗಳು ಮಸ್ಟರ್ ರೋಲ್ ಗಳನ್ನು ಮುಕ್ತಾಯಗೊಳಿಸಿದ 15 ದಿನಗಳೊಳಗೆ ಸಹಿ ಹಾಕಿದ ಆದರೆ 15 ದಿನಗಳ ನಂತರ ವೇತನವನ್ನು ಜಮಾ ಮಾಡಲಾದ ಅರ್ಹ ಪ್ರಕರಣಗಳನ್ನು ಹೊರಗಿಡುವಲ್ಲಿ ಪರಿಣಮಿಸಿತು. ಇದನ್ನು ವಿವರಿಸಲು, ಲೆಕ್ಕಪರಿಶೋಧನೆಯು 400 ಪರೀಕ್ಷಾ-ತನಿಖೆ ನಡೆಸಿದ ಕಾಮಗಾರಿಗಳ 761 ಎನ್ಎಂಆರ್ ಗಳನ್ನು ವಿಶ್ಲೇಷಿಸಿತು ಮತ್ತು 389 ವಿಳಂಬವಾದ ಎನ್ಎಂಆರ್ ಗಳಲ್ಲಿ 373ರ (ಶೇಕಡಾ 96) ವಿಳಂಬಗಳನ್ನು ಎಂಐಎಸ್ ನಲ್ಲಿ ಸೆರೆಹಿಡಿದಿರಲಿಲ್ಲ ಎಂಬುದನ್ನು ಗಮನಿಸಿತು. ತತ್ಪರಿಣಾಮವಾಗಿ, ಈ 389 ಎನ್ಎಂಆರ್ ಗಳಲ್ಲಿ ವಾಸ್ತವಿಕವಾಗಿ ಪಾವತಿಸಬೇಕಾದ ಪರಿಹಾರವು ₹1.62 ಲಕ್ಷವಾಗಿದ್ದರೂ ಸಹ ವಿಳಂಬಿತ ಪರಿಹಾರವನ್ನು ₹0.02 ಲಕ್ಷ (ಶೇಕಡಾ ಒಂದು) ಎಂದು ತೋರಿಸಲಾಯಿತು. ವಿವರಗಳನ್ನು **ಅನುಬಂಧ-3.9**ರಲ್ಲಿ ನೀಡಲಾಗಿದೆ.

ಹೀಗೆ, ಸರ್ಕಾರದ ಆದೇಶಗಳನ್ನು ಉಲ್ಲಂಘಿಸಿ ವಿಳಂಬಿತ ಲೆಕ್ಕಾಚಾರವನ್ನು ನಡೆಸಲಾಯಿತು. ಇದು ಫಲಾನುಭವಿಗಳಿಗೆ ನೈಜ ಅರ್ಹತೆಗಿಂತ ಕಡಿಮೆ ಪರಿಹಾರವನ್ನು ಪಾವತಿಸುವಲ್ಲಿ ಪರಿಣಮಿಸಿತು.

**iv) ಫಲಾನುಭವಿಗಳ ಅರ್ಹ ಪರಿಹಾರ ಕ್ಲೇಮ್ ನ ತಪ್ಪಾದ ತಿರಸ್ಕರಣೆ:**

390.11 ಲಕ್ಷ ದಿನಗಳ ವಿಳಂಬಕ್ಕೆ ಪಾವತಿಸಬೇಕಿದ್ದ ವಿಳಂಬಿತ ಪರಿಹಾರವನ್ನು ₹377.12 ಲಕ್ಷ (2019-24) ಎಂದು ಎನ್ಆರ್ ಇಜಿಎ ಸಾಫ್ಟ್ ಲೆಕ್ಕ ಹಾಕಿತ್ತು. ಕಾರ್ಯಕ್ರಮ ಅಧಿಕಾರಿಗಳು 380.55 ಲಕ್ಷ ದಿನಗಳ ವಿಳಂಬಿತ ಪರಿಹಾರವನ್ನು (ಶೇಕಡಾ 98) ತಿರಸ್ಕರಿಸಿದ್ದರು, ಇದಕ್ಕಾಗಿ

ಸಾರ್ವಜನಿಕ ಡೊಮೇನ್ ನಲ್ಲಿ (ಎನ್ಆರ್ ಇಜಿಎ ಸಾಫ್ಟ್) ವಿವರವಾದ ಕಾರಣಗಳು ಲಭ್ಯವಿರಲಿಲ್ಲ. 390.11 ಲಕ್ಷ ದಿನಗಳಲ್ಲಿ, 329.06 ಲಕ್ಷ ದಿನಗಳನ್ನು (ಶೇಕಡಾ 84) 'ಪರಿಹಾರ ಬಾಕಿ ಇಲ್ಲ' ಎಂಬ ಆಧಾರದ ಮೇಲೆ ತಿರಸ್ಕರಿಸಲಾಯಿತು (ವಿವರಗಳನ್ನು ಕೆಳಗಿನ **ಕೋಷ್ಟಕ–3.10**ರಲ್ಲಿ ನೀಡಲಾಗಿದೆ). ವೇತನವನ್ನು ಪಾವತಿಸಿ ಆದರೆ ವಿವರಗಳನ್ನು ಎಂಐಎಸ್ ನಲ್ಲಿ ನಂತರ ನಮೂದು ಮಾಡಿರುವ ಸಂದರ್ಭಗಳಲ್ಲಿ ಇದು ಅನ್ವಯವಾಗುವುದರಿಂದ ಈ ಆಧಾರದ ಮೇಲೆ ನಿರಾಕರಣೆಯು ತಪ್ಪಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಪ್ರಸ್ತುತ ಎನ್ಇ–ಎಫ್ಎಂಎಸ್ ವ್ಯವಸ್ಥೆಯಡಿಯಲ್ಲಿ, ಎಂಐಎಸ್ ನಲ್ಲಿ ದತ್ತಾಂಶದ ನಮೂದು ಇಲ್ಲದೆ ವೇತನ ಪಾವತಿಗಳನ್ನು ಪ್ರಕ್ರಿಯೆಗೊಳಿಸಲು ಸಾಧ್ಯವಿರಲಿಲ್ಲ.

**ಕೋಷ್ಟಕ 3.10: ವಿಳಂಬಿತ ಪರಿಹಾರವನ್ನು ತಪ್ಪಾಗಿ ತಿರಸ್ಕರಿಸಿದ ವಿವರಗಳು**

| ವರ್ಷ | ವಿಳಂಬಿತ ಪರಿಹಾರ | | ನಿರಾಕರಣೆಗೆ ಕಾರಣ (ದಿನಗಳಲ್ಲಿ) | | | ಒಟ್ಟು ನಿರಾಕರಣೆಯ ಶೇಕಡಾವಾರು ಪ್ರಮಾಣ | ಪರಿಹಾರ ಬಾಕಿ ಇಲ್ಲದಿರುವಲ್ಲಿ ನಿರಾಕರಣೆಯ ಶೇಕಡಾವಾರು | ಅನುಮೋದಿತ ವಿಳಂಬಿತ ಪರಿಹಾರ ₹ (ಶೇಕಡಾ) |
|---|---|---|---|---|---|---|---|---|
| | ಪಾವತಿಸಬೇಕಾದ್ದು (ವಿಳಂಬ ದಿನಗಳಲ್ಲಿ) | ಪಾವತಿಸಬೇಕಾದ ಮೊತ್ತ (₹ನಲ್ಲಿ) | ನೈಸರ್ಗಿಕ ವಿಕೋಪಗಳು | ಪರಿಹಾರ ಬಾಕಿ ಇಲ್ಲ | ಒಟ್ಟು ತಿರಸ್ಕೃತ | | | |
| 2019–20 | 1,07,19,484 | 1,05,48,787 | 12,77,233 | 93,02,696 | 1,05,79,929 | 99 | 87 | 2,95,830 (3) |
| 2020–21 | 82,91,985 | 82,33,486 | 10,89,072 | 70,31,136 | 81,20,208 | 98 | 85 | 2,15,362 (3) |
| 2021–22 | 64,84,934 | 63,31,256 | 7,64,847 | 55,93,192 | 63,58,039 | 98 | 86 | 1,46,212 (2) |
| 2022–23 | 87,10,393 | 80,12,918 | 12,93,735 | 72,88,419 | 85,82,154 | 99 | 84 | 1,62,272 (2) |
| 2023–24 | 48,04,226 | 45,86,098 | 7,24,195 | 36,90,331 | 44,14,526 | 92 | 77 | 31,787 (1) |
| **ಒಟ್ಟು** | **3,90,11,022** | **3,77,12,545** | **51,49,082** | **3,29,05,774** | **3,80,54,856** | **98** | **84** | **8,51,463 (2)** |

**ಮೂಲ: ಎಂಐಎಸ್ ವರದಿ 'ಆರ್14.1–ವಿಳಂಬ ಪರಿಹಾರ ದಿನಾಂಕ 05.09.2024**

ಈ ತಪ್ಪು ತಿರಸ್ಕಾರದ ತತ್ಪರಿಣಾಮವಾಗಿ ಅನುಮೋದಿತ ಪರಿಹಾರವು ಕೇವಲ ₹8.51 ಲಕ್ಷ (ಪಾವತಿಸಬೇಕಾದ ಮೊತ್ತ ₹377.12 ಲಕ್ಷದ ಶೇಕಡಾ 2) ಆಗಿತ್ತು. ಇದಕ್ಕೆ ಪ್ರತಿಯಾಗಿ, ಪಾವತಿಸಿದ ಪರಿಹಾರ ₹4.45 ಲಕ್ಷವಾಗಿತ್ತು ಮತ್ತು ₹4.06 ಲಕ್ಷ (ಶೇಕಡಾ 48) ಪಾವತಿ ಬಾಕಿ ಇದ್ದಿತು (ಮೇ 2024). ಪಾವತಿಸಿದ ಪರಿಹಾರದಲ್ಲಿ ₹1.51 ಲಕ್ಷಗಳನ್ನು ಮಾತ್ರ ಜವಾಬ್ದಾರ ವ್ಯಕ್ತಿಗಳಿಂದ ವಸೂಲಿ ಮಾಡಲಾಗಿದೆ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ರಾಜ್ಯ ಸರ್ಕಾರವು ಭರಿಸಿದ ಪರಿಹಾರದ ವಿವರಗಳನ್ನು ಇಲಾಖೆಯು ಒದಗಿಸಿಲ್ಲ (ಸೆಪ್ಟೆಂಬರ್ 2024).

ರಾಜ್ಯ ಸರ್ಕಾರವು ಲೆಕ್ಕಪರಿಶೋಧನೆಯ ಅವಲೋಕನವನ್ನು ಒಪ್ಪಿಕೊಂಡಿತು (ಮೇ 2025) ಮತ್ತು ಸಂಬಂಧಪಟ್ಟ ಅಧಿಕಾರಿಗಳಿಂದ ವಸೂಲಾತಿಯನ್ನು ಪ್ರಾರಂಭಿಸಲು ಎಲ್ಲಾ ಜಿಲ್ಲಾ ಪಂಚಾಯಿತಿಗಳಿಗೆ ಸೂಚನೆಗಳನ್ನು ನೀಡಲಾಗಿದೆ ಎಂದು ತಿಳಿಸಿತು.

**ಶಿಫಾರಸು 5: ವಿಳಂಬಿತ ಪರಿಹಾರದ ಲೆಕ್ಕಾಚಾರಕ್ಕೆ ಸಂಬಂಧಿಸಿದಂತೆ ಸರ್ಕಾರದ ಸೂಚನೆಗಳನ್ನು ಇಲಾಖೆಯು ಕಟ್ಟುನಿಟ್ಟಾಗಿ ಪಾಲಿಸಬೇಕು ಮತ್ತು ವಿಳಂಬಿತ ಪರಿಹಾರವನ್ನು ತಪ್ಪಾಗಿ ತಿರಸ್ಕರಿಸಿರುವುದನ್ನು ಮರುಪರಿಶೀಲಿಸಲು ಕ್ರಮ ತೆಗೆದುಕೊಳ್ಳಬೇಕು.**

# ಅಧ್ಯಾಯ–IV

# ಉದ್ಯೋಗ ಸೃಷ್ಟಿ

## ಅಧ್ಯಾಯ–IV

## ಉದ್ಯೋಗ ಸೃಷ್ಟಿ

ಎಂ.ಜಿ.ಎನ್.ಆರ್.ಇ.ಜಿ.ಎಸ್ ಅಡಿಯಲ್ಲಿ ಕಾರ್ಮಿಕರ ಅರ್ಹತೆಗಳನ್ನು ದಾಖಲಿಸುವ ಗುರುತಿನ ದಾಖಲೆಯಾದ ಜಾಬ್ ಕಾರ್ಡ್, ಮಾರ್ಚ್ 2024 ರಲ್ಲಿದ್ದಂತೆ ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸಿದ್ದ 34,499 ಫಲಾನುಭವಿಗಳಿಗೆ ನೀಡುವುದು ಬಾಕಿ ಉಳಿದಿತ್ತು. ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ ಜಾಬ್ ಕಾರ್ಡ್‌ಗಳು ನಿಗದಿತ ನಮೂನೆಗೆ ಬದ್ಧವಾಗಿರಲಿಲ್ಲ ಮತ್ತು ವಿಕಲಚೇತನರಿಗೆ ವಿಶೇಷ ಜಾಬ್ ಕಾರ್ಡಗಳನ್ನು ನೀಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಪ್ರತಿ ಬೇಡಿಕೆಯ ಕುಟುಂಬಕ್ಕೆ 100 ದಿನಗಳ ಉದ್ಯೋಗವನ್ನು ಎಂ.ಜಿ.ಎನ್.ಆರ್.ಇ.ಜಿ.ಎಸ್ ಖಚಿತಪಡಿಸಿದ್ದರೂ, 2019–20ರಿಂದ 2023–24ರ ಅವಧಿಯಲ್ಲಿ ನೋಂದಾಯಿತ ಕುಟುಂಬಗಳಿಂದ ಉದ್ಯೋಗದ ಬೇಡಿಕೆಯು ನೀಡಲಾದ ಜಾಬ್ ಕಾರ್ಡಗಳಲ್ಲಿ ಶೇಕಡಾ 48ಕ್ಕಿಂತ ಅಧಿಕವಾಗಿರಲಿಲ್ಲ. ಇದಲ್ಲದೆ, 2019–20ರಿಂದ 2023–24ರ ಅವಧಿಯಲ್ಲಿ ಕನಿಷ್ಠ 100 ದಿನಗಳ ಉದ್ಯೋಗವನ್ನು ಒದಗಿಸಿದ ಕುಟುಂಬಗಳ ಸಂಖ್ಯೆ ಕೇವಲ ಶೇಕಡಾ ಐದರಷ್ಟಿತ್ತು ಮತ್ತು ಹೆಚ್ಚಿನ ಕುಟುಂಬಗಳಿಗೆ ಕೇವಲ 1ರಿಂದ 30 ದಿನಗಳ ಉದ್ಯೋಗವನ್ನು ಮಾತ್ರ ಒದಗಿಸಲಾಗಿತ್ತು.

ಯೋಜನೆಯಡಿ ಉದ್ಯೋಗ ಒದಗಿಸಿದ ವಿಕಲಚೇತನರ ಶೇಕಡಾವಾರು ಪ್ರಮಾಣವು ರಾಷ್ಟ್ರೀಯ ಸರಾಸರಿಗಿಂತ ಕಡಿಮೆಯಿದ್ದು, ಇದು ಅವರ ಗುರುತಿಸುವಿಕೆಯಲ್ಲಿನ ನ್ಯೂನತೆಗಳನ್ನು ಸೂಚಿಸುತ್ತದೆ. ಇದಲ್ಲದೆ, ಅಲೆಮಾರಿ ಬುಡಕಟ್ಟು ಜನಾಂಗದವರು, ಎಚ್‌ಐವಿ ಪಾಸಿಟಿವ್ ವ್ಯಕ್ತಿಗಳು ಮುಂತಾದ ಇತರ ದುರ್ಬಲ ಗುಂಪುಗಳು ಬೇಡಿಕೆ ಮಾಡಿದ/ ಒದಗಿಸಿದ ಉದ್ಯೋಗದ ದತ್ತಾಂಶವನ್ನು ದಾಖಲಿಸಲು ಎನ್.ಆರ್.ಇ.ಜಿ.ಎ.ಸಾಫ್ಟ್ ನಲ್ಲಿ ಅವಕಾಶವಿರಲಿಲ್ಲ. ವಸತಿ ಯೋಜನೆಗಳ ಅಡಿಯಲ್ಲಿ ನಿರ್ವಹಿಸಲಾದ ವಿಕಲಚೇತನರು ಮತ್ತು ದುರ್ಬಲ ಗುಂಪಿನ ಫಲಾನುಭವಿಗಳ ದತ್ತಾಂಶದ ಲೆಕ್ಕಪರಿಶೋಧನೆಯ ಪರಿಶೀಲನೆಯು ಎಂಜಿಎನ್‌ಆರ್ ಇಜಿ ಎಸ್ ಅಡಿಯಲ್ಲಿ ಅಂತಹ ಫಲಾನುಭವಿಗಳನ್ನು ಗಮನಾರ್ಹವಾಗಿ ಹೊರಗಿಡಲಾಗಿತ್ತು ಎಂಬುದನ್ನು ಸೂಚಿಸಿತು.

ಈ ಯೋಜನೆಯಡಿಯಲ್ಲಿ ಮಾರಾಟಗಾರರು/ಏಜೆನ್ಸಿಗಳನ್ನು ದೈಹಿಕ (ಕಾರ್ಮಿಕ ಆಧಾರಿತ) ಘಟಕಗಳಿಗಾಗಿ ನೇಮಿಸಿಕೊಳ್ಳಲಾಗಿತ್ತು ಮತ್ತು ಪಾವತಿಸಲಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದು, ಫಲಾನುಭವಿಗಳಿಗೆ ಉದ್ಯೋಗಾವಕಾಶಗಳನ್ನು ನಿರಾಕರಿಸುವಲ್ಲಿ ಪರಿಣಮಿಸಿತು. ಮಾಹಿತಿ ಶಿಕ್ಷಣ ಮತ್ತು ಸಂವಹನ ಚಟುವಟಿಕೆಗಳು ಮತ್ತು ರೋಜ್ ಗಾರ್ ದಿವಸ್ ಅನ್ನು ನಡೆಸುವಲ್ಲಿ ಕೊರತೆಯು, ಯೋಜನೆಯಡಿ ಹಕ್ಕುಗಳು /ಅರ್ಹತೆಗಳ ಬಗ್ಗೆ ಫಲಾನುಭವಿಗಳಲ್ಲಿ ಅರಿವಿನ ಕೊರತೆ ಉಂಟಾಗುವಲ್ಲಿ ಪರಿಣಮಿಸಿತು.

ಪರೀಕ್ಷಾ–ತನಿಖೆ ನಡೆಸಿದ ಗ್ರಾಮ ಪಂಚಾಯಿತಿಗಳಲ್ಲಿ ಬೇಡಿಕೆ ರಿಜಿಸ್ಟರ್ ಅನ್ನು ನಿರ್ವಹಣೆ ಮಾಡದಿರುವುದು ಮತ್ತು ಕಾರ್ಮಿಕರ ಬೇಡಿಕೆಯನ್ನು ತಪ್ಪಾಗಿ ದಾಖಲಿಸಿದ ಕಾರಣ ಫಲಾನುಭವಿಗಳಿಗೆ ನೀಡಬೇಕಾದ ನಿರುದ್ಯೋಗ ಭತ್ಯೆಯನ್ನು ನಿಖರವಾಗಿ ಮೌಲ್ಯಮಾಪನ ಮಾಡಲು ಸಾಧ್ಯವಾಗಲಿಲ್ಲ. 2019–20ರಿಂದ 2023–24ರ ಅವಧಿಗೆ ನಿರ್ಧರಣೆ ಮಾಡಿದ್ದ ₹1.28 ಕೋಟಿ ನಿರುದ್ಯೋಗ ಭತ್ಯೆಯನ್ನು ಸಹ ಫಲಾನುಭವಿಗಳಿಗೆ ಇಲಾಖೆ ಪಾವತಿಸಿರಲಿಲ್ಲ.

ಕನಿಷ್ಠ 100 ದಿನಗಳ ಖಾತರಿಪಡಿಸಿದ ವೇತನ ಉದ್ಯೋಗವನ್ನು ಒದಗಿಸುವುದು ಮತ್ತು ಗ್ರಾಮೀಣ ಬಡವರ ಜೀವನೋಪಾಯ ಸಂಪನ್ಮೂಲ ನೆಲೆಯನ್ನು ಬಲಪಡಿಸಲು ಅನುಷ್ಠಾನಕಾರರು ಸಂಭಾವ್ಯ ವೇತನ ಅನ್ವೇಷಕರಲ್ಲಿ ಜಾಗೃತಿ ಮೂಡಿಸಲು ಹೆಚ್ಚಿನ ಗಮನ ಹರಿಸಬೇಕು ಹಾಗೂ ಕೆಲಸಕ್ಕಾಗಿ ನೋಂದಣಿ, ಜಾಬ್

ಕಾರ್ಡ್‌ಗಳ ವಿತರಣೆ ಮತ್ತು ಕೆಲಸದ ಬೇಡಿಕೆಯ ಮೇಲೆ ಅರ್ಜಿಗಳನ್ನು ಕಟ್ಟುನಿಟ್ಟಾಗಿ ದಾಖಲಿಸುವ ವ್ಯವಸ್ಥೆಗಳನ್ನು ಸ್ಥಾಪಿಸಬೇಕು. ಇದಲ್ಲದೆ, ಗ್ರಾಮೀಣ ಪ್ರದೇಶದ ದುರ್ಬಲ ವರ್ಗಗಳ ಮೇಲೆ ವಿಶೇಷ ಗಮನ ಹರಿಸಿದರೆ ಮಾತ್ರ ದೇಶದ ಗ್ರಾಮೀಣ ಪ್ರದೇಶಗಳಲ್ಲಿನ ಬಡ ಕುಟುಂಬಗಳ ಜೀವನೋಪಾಯದ ಭದ್ರತೆಯನ್ನು ಹೆಚ್ಚಿಸುವ ಉದ್ದೇಶವನ್ನು ಸಾಧಿಸಬಹುದು.

ಆಯ್ದ ಜಿಲ್ಲೆಗಳು, ತಾಲ್ಲೂಕುಗಳು ಮತ್ತು ಗ್ರಾಮ ಪಂಚಾಯಿತಿಗಳ ದತ್ತಾಂಶವನ್ನು ಲೆಕ್ಕಪರಿಶೋಧನೆಯು ವಿಶ್ಲೇಷಿಸಿತು ಮತ್ತು ಲೆಕ್ಕಪರಿಶೋಧನೆಯು ಅರ್ಜಿಗಳ ಸ್ವೀಕೃತಿ, ಅವುಗಳ ಪರಿಶೀಲನೆ ಮತ್ತು ಜಾಬ್ ಕಾರ್ಡ್‌ಗಳ ನೀಡುವ ಪ್ರಕ್ರಿಯೆಯನ್ನು ಮಾರ್ಗಸೂಚಿಗಳಲ್ಲಿ ಸೂಚಿಸಿದಂತೆ ಮಾಡಿರಲಿಲ್ಲ ಎಂಬುದನ್ನು ಗಮನಿಸಲಾಯಿತು. ಅವಲೋಕನಗಳನ್ನು ಮುಂದಿನ ಕಂಡಿಕೆಗಳನ್ನು ಚರ್ಚಿಸಲಾಗಿದೆ.

## 4.1 ನೋಂದಣಿ ಮತ್ತು ಜಾಬ್ ಕಾರ್ಡ್‌ಗಳ ವಿತರಣೆ

ಎಂಜಿಎನ್‌ಆರ್ ಇಜಿ ಎಸ್ ಅಡಿಯಲ್ಲಿ ಫಲಾನುಭವಿಯ 100 ದಿನಗಳ ಉದ್ಯೋಗದ ಹಕ್ಕನ್ನು ಖಚಿತ ಪಡಿಸುವ ಮೊದಲ ಹೆಜ್ಜೆಯೆಂದರೆ ಗ್ರಾಮ ಪಂಚಾಯಿತಿಯಲ್ಲಿ ಕುಟುಂಬದ ನೋಂದಣಿಯನ್ನು ಖಚಿತಪಡಿಸಿಕೊಳ್ಳುವುದು. ಕಾಯಿದೆಯ ಅನುಸೂಚಿ–2ರ ಕಂಡಿಕೆ–2ರಡಿಯಲ್ಲಿ, ಸೂಕ್ತ ವಿಚಾರಣೆಗಳನ್ನು ನಡೆಸಿದ ನಂತರ ಕುಟುಂಬವನ್ನು ನೋಂದಾಯಿಸುವುದು ಮತ್ತು ಜಾಬ್ ಕಾರ್ಡ್ ನೀಡುವುದು ಗ್ರಾಮ ಪಂಚಾಯಿತಿಯ ಕರ್ತವ್ಯವಾಗಿತ್ತು. ಕುಟುಂಬಗಳ ನೋಂದಣಿ, ಜಾಬ್ ಕಾರ್ಡ್‌ಗಳ ವಿತರಣೆ ಮತ್ತು ಉದ್ಯೋಗ ಹಂಚಿಕೆಯ ಪ್ರಕ್ರಿಯೆಯನ್ನು ಕೆಳಗಿನ **ನಕ್ಷೆ–4.1** ರಲ್ಲಿ ವಿವರಿಸಲಾಗಿದೆ:

**ನಕ್ಷೆ–4.1: ನೋಂದಣಿ ಪ್ರಕ್ರಿಯೆ, ಜಾಬ್ ಕಾರ್ಡ್ ಮತ್ತು ಉದ್ಯೋಗ ಹಂಚಿಕೆ**

ನೋಂದಣಿ ಪ್ರಕ್ರಿಯೆ

- ನೋಂದಾಯಿಸಲು ಇಚ್ಛಿಸುವ ಜನರನ್ನು ಗುರುತಿಸಲು ಗ್ರಾಮ ಪಂಚಾಯಿತಿಯಿಂದ ಮನೆ ಮನೆ ಸಮೀಕ್ಷೆ ನಡೆಸಬೇಕು.
- ವ್ಯಕ್ತಿಗಳು/ಕುಟುಂಬಗಳು ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ಅರ್ಜಿ ಸಲ್ಲಿಸುವ ಮೂಲಕ ನೋಂದಾಯಿಸಬಹುದು.
- ಎಲ್ಲಾ ಅರ್ಜಿದಾರರನ್ನು ಹದಿನೈದು ದಿನಗಳಲ್ಲಿ ಪರಿಶೀಲಿಸಬೇಕು.
- ಪ್ರತಿ ಮನೆಗೆ ವಿಶಿಷ್ಟ ನೋಂದಣಿ ಸಂಖ್ಯೆ ನೀಡಬೇಕು.

ಜಾಬ್ ಕಾರ್ಡ್

- ಅರ್ಜಿ ಸಲ್ಲಿಸಿದ ಹದಿನೈದು ದಿನಗಳ ಒಳಗೆ ನೀಡಬೇಕು.
- ಅದು ವಯಸ್ಕ ಸದಸ್ಯರ ಛಾಯಾಚಿತ್ರವನ್ನು ಹೊಂದಿರಬೇಕು.
- ಕುಟುಂಬದ ವಶದಲ್ಲಿರಬೇಕು.
- ಐದು ವರ್ಷಗಳವರೆಗೆ ಮಾನ್ಯವಾಗಿರುತ್ತದೆ.
- ಸದಸ್ಯರ ಸೇರ್ಪಡೆ/ತೆಗೆದುಹಾಕಲು ಅವಕಾಶವಿರಬೇಕು.
- ಸ್ಥಳೀಯ ಸಮುದಾಯ/ಗ್ರಾಮ ಸಭೆಯ ಸಮ್ಮುಖದಲ್ಲಿ, ಸೇರ್ಪಡೆ/ಅಳಿಸುವಿಕೆ, ನೀಡುವುದು ಮಾಡಬೇಕು.

ಉದ್ಯೋಗ ಹಂಚಿಕೆ ಚಟುವಟಿಕೆಗಳು

- ಕೆಲಸಕ್ಕಾಗಿ ಅರ್ಜಿಯನ್ನು ಗ್ರಾಮ ಪಂಚಾಯಿತಿ ಕಚೇರಿ, ಕೆಲಸದ ಸ್ಥಳದಲ್ಲಿ ಅಥವಾ ಕಾರ್ಯಕ್ರಮ ಅಧಿಕಾರಿಗೆ ನೀಡಬಹುದು.
- ಪ್ರತಿ ಅರ್ಜಿದಾರರಿಗೆ ದಿನಾಂಕದ ರಸೀದಿಯನ್ನು ನೀಡಬೇಕು.
- ಅರ್ಜಿ ಸಲ್ಲಿಸಿದ 15 ದಿನದೊಳಗೆ ಉದ್ಯೋಗ ನೀಡಬೇಕು. ಇಲ್ಲದಿದ್ದರೆ ನಿರುದ್ಯೋಗ ಭತ್ಯೆ ಪಾವತಿಸಬೇಕು.
- ಪ್ರತಿಯೊಬ್ಬ ಅರ್ಜಿದಾರನು ಉದ್ಯೋಗವನ್ನು ಪಡೆಯುವುದನ್ನು ಖಚಿತಪಡಿಸಿಕೊಳ್ಳಲು ಖಚಿತಪಡಿಸಿಕೊಳ್ಳಲು ಕಾರ್ಯಕ್ರಮ ಅಧಿಕಾರಿ ಜವಾಬ್ದಾರರಾಗಿರುತ್ತಾರೆ.

### *4.1.1 ಜಾಬ್ ಕಾರ್ಡ್ ನೀಡದಿರುವುದು*

79,43,273 ಕುಟುಂಬಗಳು ಜಾಬ್ ಕಾರ್ಡ್‌ಗಳಿಗಾಗಿ ಅರ್ಜಿ ಸಲ್ಲಿಸಿದ್ದು, ಅದಕ್ಕೆ ಪ್ರತಿಯಾಗಿ 79,08,774 ಜಾಬ್ ಕಾರ್ಡ್‌ಗಳನ್ನು ನೀಡಲಾಗಿತ್ತು (ಮಾರ್ಚ್ 2024ರಲ್ಲಿದ್ದಂತೆ). ಹೀಗೆ, ರಾಜ್ಯದಲ್ಲಿ 34,499 ನೋಂದಾಯಿತ ಕುಟುಂಬಗಳಿಗೆ ಸಂಬಂಧಿಸಿದಂತೆ ಜಾಬ್ ಕಾರ್ಡ್‌ಗಳನ್ನು ನೀಡಿರಲಿಲ್ಲ. ಜಾಬ್ ಕಾರ್ಡ್‌ಗಳ

ಅನುಪಸ್ಥಿತಿಯಲ್ಲಿ, ಫಲಾನುಭವಿಗಳು 100 ದಿನಗಳ ಭರವಸೆಯ ಉದ್ಯೋಗದ ಮೂಲಭೂತ ಹಕ್ಕಿನಿಂದ ವಂಚಿತರಾಗಿದ್ದರು.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ಅಭಿಪ್ರಾಯವನ್ನು ಒಪ್ಪಿಕೊಂಡಿತು (ಮೇ 2025) ಮತ್ತು ಭವಿಷ್ಯದಲ್ಲಿ ಇಂತಹ ಘಟನೆಗಳನ್ನು ತಪ್ಪಿಸಲು ಮೇಲ್ವಿಚಾರಣೆ ಮಾಡಲಾಗುವುದು ಎಂದು ತಿಳಿಸಿತು.

### *4.1.2 ನಿಗದಿತ ಜಾಬ್ ಕಾರ್ಡ್‌ಗಳ ವಿತರಣೆ ಮಾಡದಿರುವುದು*

ಜಾಬ್ ಕಾರ್ಡ್, ಎಂ.ಜಿ.ಎನ್.ಆರ್.ಇ.ಜಿ.ಎ ಅಡಿಯಲ್ಲಿ ಕಾರ್ಮಿಕರ ಅರ್ಹತೆಗಳನ್ನು ದಾಖಲಿಸುವ ಪ್ರಮುಖ ದಾಖಲೆಯಾಗಿದೆ ಎಂದು ಕಾರ್ಯಾಚರಣಾ ಮಾರ್ಗಸೂಚಿ 2013ರ ಕಂಡಿಕೆ–3.1 ತಿಳಿಸಿದೆ. ಅದು ನೋಂದಾಯಿತ ಕುಟುಂಬಗಳಿಗೆ ಕೆಲಸಕ್ಕೆ ಅರ್ಜಿ ಸಲ್ಲಿಸಲು ಕಾನೂನುಬದ್ಧವಾಗಿ ಅಧಿಕಾರ ನೀಡಿದೆ ಮತ್ತು ಪಾರದರ್ಶಕತೆ ಮತ್ತು ವಂಚನೆಯ ವಿರುದ್ಧ ರಕ್ಷಣೆಯನ್ನು ಖಚಿತಪಡಿಸಿದೆ. ಇದಲ್ಲದೆ, ಗ್ರಾಮೀಣಾಭಿವೃದ್ಧಿ ಸಚಿವಾಲಯವು ರೂಪಿಸಿದ ಎಂ.ಜಿ.ಎನ್.ಆರ್.ಇ.ಜಿ.ಎ ಜಾಬ್ ಕಾರ್ಡ್‌ಗಳಿಗಾಗಿನ ಸೂಚಕ ಚೌಕಟ್ಟು (ಆಗಸ್ಟ್ 2017) ವಿಷಯ, ವಿನ್ಯಾಸ, ವೆಚ್ಚ ಮತ್ತು ಅನುಷ್ಠಾನವನ್ನು ಒಳಗೊಂಡಿರುವ ಮೂಲಭೂತ ಅವಶ್ಯಕತೆಗಳನ್ನು ಸೂಚಿಸಿತ್ತು.

ತಿಪಟೂರು ಮತ್ತು ತುರುವೇಕೆರೆ ತಾಲ್ಲೂಕುಗಳಲ್ಲಿ (ತುಮಕೂರು ಜಿಲ್ಲೆ) ಪರೀಕ್ಷಾ–ತನಿಖೆ ನಡೆಸಿದ ಎಂಟು ಗ್ರಾಮ ಪಂಚಾಯಿತಿಗಳ ಪೈಕಿ ಏಳರಲ್ಲಿ[14] 8,053 ನೋಂದಾಯಿತ/ಸಕ್ರಿಯ ಜಾಬ್ ಕಾರ್ಡ್‌ಗಳ ಪೈಕಿ 5,403 ಜಾಬ್ ಕಾರ್ಡ್‌ಗಳಿಗೆ (ಶೇಕಡಾ 67) ಮುದ್ರಿತ (ಸೂಚಿಸಿದ) ಜಾಬ್ ಕಾರ್ಡ್‌ಗಳ ಬದಲಿಗೆ ಆನ್ ಲೈನ್ ಜಾಬ್ ಕಾರ್ಡ್‌ಗಳನ್ನು ನೀಡಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು (ವಿವರಗಳನ್ನು ಅನುಬಂಧ–4.1ರಲ್ಲಿ ನೀಡಲಾಗಿದೆ). ಉಳಿದ ಒಂದು ಗ್ರಾಮ ಪಂಚಾಯಿತಿಯಲ್ಲಿ (ತುರುವೇಕೆರೆ ತಾಲ್ಲೂಕಿನ ದಂಡಿನಶಿವರ) ಲೆಕ್ಕಪರಿಶೋಧನೆಗೆ ಮಾಹಿತಿಯನ್ನು ಒದಗಿಸಲಿಲ್ಲವಾದ್ದರಿಂದ ನಿಗದಿತ ಜಾಬ್ ಕಾರ್ಡ್ ಗಳ ವಿತರಣೆಯನ್ನು ಪರಿಶೀಲಿಸಲಾಗಲಿಲ್ಲ.

ಮುದ್ರಿತ ಜಾಬ್ ಕಾರ್ಡ್ ಗಳ ಕೊರತೆಯಿಂದಾಗಿ ಆನ್ ಲೈನ್ ಜಾಬ್ ಕಾರ್ಡ್ ಗಳನ್ನು ನೀಡಲಾಗಿತ್ತು ಎಂದು ಗ್ರಾಮ ಪಂಚಾಯಿತಿಗಳು ತಿಳಿಸಿದವು (ಸೆಪ್ಟೆಂಬರ್ 2024). ಆದರೆ, ಈ ಗ್ರಾಮ ಪಂಚಾಯಿತಿಗಳು ಜಾಬ್ ಕಾರ್ಡ್‌ಗಳ ಕೊರತೆಯನ್ನು ತಾಲ್ಲೂಕು ಪಂಚಾಯತಿ/ಜಿಲ್ಲಾ ಪಂಚಾಯಿತಿಗಳಿಗೆ ತಿಳಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಮುದ್ರಿತ ಜಾಬ್ ಕಾರ್ಡ್‌ಗಳು ಗ್ರಾಮೀಣಾಭಿವೃದ್ಧಿ ಸಚಿವಾಲಯ ಹೊರಡಿಸಿದ ಚೌಕಟ್ಟಿನ ಪ್ರಮುಖ ಭಾಗವಾಗಿದ್ದು, ಇದು ಮಾಹಿತಿಯನ್ನು ಹಸ್ತಚಾಲಿತವಾಗಿ ಸೇರಿಸಲು ಅನುಕೂಲ ಮಾಡಿಕೊಟ್ಟಿತ್ತು. ಆನ್ ಲೈನ್ ಜಾಬ್ ಕಾರ್ಡ್‌ಗಳ ವಿತರಣೆಯನ್ನು ಆಶ್ರಯಿಸುವ ಮೂಲಕ ಗ್ರಾಮ ಪಂಚಾಯಿತಿಗಳು ಜಾಬ್ ಕಾರ್ಡ್‌ಗಳ ಇಂದೀಕರಣವನ್ನು ಕಷ್ಟಕರವಾಗಿಸಿದ್ದಲ್ಲದೆ, ಸೂಚಕ ಚೌಕಟ್ಟು/ಕಾರ್ಯಾಚರಣಾ ಮಾರ್ಗಸೂಚಿಗಳು, 2013 ಅನ್ನು ಉಲ್ಲಂಘಿಸಿದ್ದವು. ಹೀಗೆ, ಈ ಗ್ರಾಮ ಪಂಚಾಯಿತಿಗಳಲ್ಲಿ ನೋಂದಾಯಿತ ಕುಟುಂಬಗಳು ಕಷ್ಟಕ್ಕೆ ಸಿಲುಕಲ್ಪಟ್ಟವು ಮತ್ತು ಅವರ ಮೂಲಭೂತ ಅರ್ಹತೆಯಿಂದ ವಂಚಿತರಾಗಿದ್ದವು.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ಅಭಿಪ್ರಾಯವನ್ನು ಒಪ್ಪಿಕೊಂಡಿತು (ಮೇ 2025) ಮತ್ತು ಆನ್ ಲೈನ್ ಜಾಬ್ ಕಾರ್ಡ್ ಗಳನ್ನು ನೀಡುವುದನ್ನು ತಪ್ಪಿಸುವಂತೆ ಎಲ್ಲಾ ಜಿಲ್ಲಾ ಪಂಚಾಯಿತಿಗಳಿಗೆ ಸೂಚನೆ ನೀಡಲಾಗುವುದು ಎಂದು ತಿಳಿಸಿತು.

[14] ದಾಸರಹಳ್ಳಿ, ಗ್ಯಾರಘಟ್ಟ, ಹಿಂಡಿಸ್ಕೆರೆ ಮತ್ತು ಸಾರ್ತವಳ್ಳಿ (ತಿಪಟೂರು ತಾಲ್ಲೂಕು); ಬೈಥಾರಹೊಸಹಳ್ಳಿ, ಹಡವನಹಳ್ಳಿ ಮತ್ತು ಹುಲ್ಲೇಕೆರೆ (ತುರುವೇಕೆರೆ ತಾಲ್ಲೂಕು)

### *4.1.3 ವಿಕಲಚೇತನರಿಗೆ ವಿಶೇಷ ಜಾಬ್ ಕಾರ್ಡ್ ನೀಡದಿರುವುದು*

ಎಂ.ಜಿ.ಎನ್.ಆರ್.ಇ.ಜಿ.ಎ ಅನುಸೂಚಿ–2 ಮತ್ತು ಗ್ರಾಮೀಣಾಭಿವೃದ್ಧಿ ಸಚಿವಾಲಯವು ರೂಪಿಸಿದ ಎಂ.ಜಿ.ಎನ್.ಆರ್.ಇ.ಜಿ.ಎ ಜಾಬ್ ಕಾರ್ಡ್‌ಗಳಿಗಾಗಿನ ಸೂಚಕ ಚೌಕಟ್ಟು (ಆಗಸ್ಟ್ 2017) ಒಂಟಿ ಮಹಿಳೆ ಅಥವಾ ಅಂಗವಿಕಲ ವ್ಯಕ್ತಿ ಅಥವಾ ವೃದ್ಧ ವ್ಯಕ್ತಿ ಅಥವಾ ಬಿಡುಗಡೆಯಾದ ಜೀತದಾಳು ಅಥವಾ ವಿಶೇಷವಾಗಿ ದುರ್ಬಲ ಬುಡಕಟ್ಟು ಗುಂಪಿಗೆ ಸೇರಿದ ಉದ್ಯೋಗಾಕಾಂಕ್ಷಿಗಳಿಗೆ ವಿಶಿಷ್ಟ ಬಣ್ಣದ ವಿಶೇಷ ಜಾಬ್ ಕಾರ್ಡ್ ಅನ್ನು ನೀಡಬೇಕು ಎಂದು ಷರತ್ತು ವಿಧಿಸಿದೆ. ಇದು ಅವರಿಗೆ ಕೆಲಸ, ಕೆಲಸದ ಮೌಲ್ಯಮಾಪನ ಮತ್ತು ಕೆಲಸದ ಸ್ಥಳದ ಸೌಲಭ್ಯಗಳನ್ನು ಒದಗಿಸುವಲ್ಲಿ ವಿಶೇಷ ರಕ್ಷಣೆಯನ್ನು ಖಚಿತಪಡಿಸುತ್ತದೆ. ವಿಕಲಚೇತನರನ್ನು (ಪಿಡಬ್ಲ್ಯುಡಿ) ಕುಟುಂಬದಂತೆ ಪರಿಗಣಿಸಬೇಕು ಮತ್ತು ಪ್ರತ್ಯೇಕ ಜಾಬ್ ಕಾರ್ಡ್ ನೀಡಬೇಕು ಎಂದು ಎಂ.ಜಿ.ಎನ್.ಆರ್.ಇ.ಜಿ.ಎಸ್ ಆಯುಕ್ತರು ಸಹ ಸೂಚನೆ ನೀಡಿದ್ದರು. ಪರೀಕ್ಷಾ–ತನಿಖೆ ನಡೆಸಿದ 40 ಗ್ರಾಮ ಪಂಚಾಯಿತಿಗಳಲ್ಲಿ ಲೆಕ್ಕಪರಿಶೋಧನೆಯು ನಡೆಸಿದ 400 ಫಲಾನುಭವಿಗಳ ಸಮೀಕ್ಷೆಯಲ್ಲಿ ಜುಲೈ ಇಂದ ಸೆಪ್ಟೆಂಬರ್ ವರೆಗೆ, 42 ಫಲಾನುಭವಿಗಳು ವಿಕಲಚೇತನರ ಗುಂಪಿಗೆ ಸೇರಿದವರಾಗಿದ್ದರು, ಆದರೆ 26[15] (65 ಶೇಕಡಾ) ಗ್ರಾಮ ಪಂಚಾಯಿತಿಗಳಲ್ಲಿ ಅವರಿಗೆ ವಿಶೇಷ ಜಾಬ್ ಕಾರ್ಡ್‌ಗಳನ್ನು ನೀಡಿರಲಿಲ್ಲ ಎಂಬುದನ್ನು ಗಮನಿಸಲಾಯಿತು. ಅಂತಹ ದುರ್ಬಲ ಗುಂಪುಗಳಿಗೆ ವಿಶೇಷ ಜಾಬ್ ಕಾರ್ಡ್‌ಗಳನ್ನು ನೀಡದಿರುವುದು ಕೆಲಸದ ಸ್ಥಳದಲ್ಲಿ ವಿಶೇಷ ರಕ್ಷಣೆ/ಸೌಲಭ್ಯಗಳನ್ನು ಒದಗಿಸದ ಅಪಾಯದಿಂದ ಕೂಡಿರುತ್ತದೆ.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ಅಭಿಪ್ರಾಯವನ್ನು ಒಪ್ಪಿಕೊಳ್ಳುತ್ತಾ (ಮೇ 2025) ವಿಕಲಚೇತನರು ಉದ್ಯೋಗದಿಂದ ವಂಚಿತರಾಗಿಲ್ಲ ಎಂದು ತಿಳಿಸಿತು. ಆದರೆ ಕಾರ್ಯಾಚರಣಾ ಮಾರ್ಗಸೂಚಿಗಳ ನಿಬಂಧನೆಗಳನ್ನು ಅನುಸರಿಸಿರಲಿಲ್ಲ ಎಂಬುದು ವಾಸ್ತವಾಂಶವಾಗಿದೆ.

### *4.1.4 ಜಾಬ್ ಕಾರ್ಡ್ ವಿತರಣೆಗೆ ಸಂಬಂಧಿಸಿದಂತೆ ಫಲಾನುಭವಿಗಳ ಪ್ರತಿಕ್ರಿಯೆಗಳು*

ಸಮೀಕ್ಷೆಗೆ ಒಳಗಾದ 400 ಫಲಾನುಭವಿಗಳ ಪೈಕಿ ನೋಂದಣಿಗೆ 126 ಫಲಾನುಭವಿಗಳು (ಶೇಕಡಾ 32) ಲಿಖಿತ ಮತ್ತು 274 ಫಲಾನುಭವಿಗಳು (ಶೇಕಡಾ 68) ಮೌಖಿಕ ಮನವಿಗಳನ್ನು ಸಲ್ಲಿಸಿದ್ದರು. ಆದರೆ, ಜಾಬ್ ಕಾರ್ಡ್ ನೀಡಲು ಅಗತ್ಯವಾದ ವಿವರಗಳನ್ನು (ಗ್ರಾಮದ ಹೆಸರು, ಕುಟುಂಬದ ಮುಖ್ಯಸ್ಥರ ಹೆಸರು, ಮನೆಯ ಸಂಖ್ಯೆ ಇತ್ಯಾದಿ) ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಅಧಿಕಾರಿಗಳು ಪಡೆದುಕೊಂಡಿರಲಿಲ್ಲ ಎಂದು 55 ಫಲಾನುಭವಿಗಳು (ಶೇಕಡಾ 14) ಪ್ರತಿಕ್ರಿಯಿಸಿದ್ದರು. ಐದು ತಾಲ್ಲೂಕು ಪಂಚಾಯಿತಿಗಳ (ಆಲಂದ್, ಕಮಲಾಪುರ, ಮದ್ದೂರು, ಮಂಡ್ಯ ಮತ್ತು ತಿಪಟೂರು) 11 ಗ್ರಾಮ ಪಂಚಾಯಿತಿಗಳಲ್ಲಿ 361 ಫಲಾನುಭವಿಗಳ[16] ಪೈಕಿ 24 ಫಲಾನುಭವಿಗಳಿಗೆ ನಿಗದಿತ 15 ದಿನಗಳ ನಂತರ ಜಾಬ್ ಕಾರ್ಡ್ ನೀಡಲಾಗಿತ್ತು ಎಂಬುದನ್ನು ಸಮೀಕ್ಷೆ ತಿಳಿಸಿತು.

ಶೇಕಡಾ 15ರಷ್ಟು ಜಾಬ್ ಕಾರ್ಡ್‌ಗಳಲ್ಲಿ ಯಾವುದೇ ಛಾಯಾಚಿತ್ರವನ್ನು ಅಂಟಿಸಲಾಗಿಲ್ಲವಾದರೂ, ಶೇಕಡಾ 29ರಷ್ಟು ಜಾಬ್ ಕಾರ್ಡ್‌ಗಳಲ್ಲಿ ಕುಟುಂಬದ ಜಂಟಿ ಛಾಯಾಚಿತ್ರ ಮತ್ತು ಇತರ ಶೇಕಡಾ 56ರಷ್ಟು ಜಾಬ್ ಕಾರ್ಡ್‌ಗಳಲ್ಲಿ ಉದ್ಯೋಗಿಯ ಭಾವಚಿತ್ರವನ್ನು ಮಾತ್ರ ಹೊಂದಿತ್ತು ಎಂಬುದನ್ನು ಸಮೀಕ್ಷೆ ತೋರಿಸಿತು.
ಫಲಾನುಭವಿಗಳ ಜಾಬ್ ಕಾರ್ಡ್‌ಗಳ ವಿಶ್ಲೇಷಣೆಯು ಶೇಕಡಾ 33ರಷ್ಟು ಜಾಬ್ ಕಾರ್ಡ್‌ಗಳಲ್ಲಿ ಪಾವತಿ ನಮೂದುಗಳು ಇಂದೀಕೃತವಾಗಿರಲಿಲ್ಲ, ಶೇಕಡಾ 34ರಷ್ಟು ಜಾಬ್ ಕಾರ್ಡ್‌ಗಳಲ್ಲಿ ಕುಟುಂಬವು ಕೆಲಸ

---

15 ಭೋಧನ್, ಹಿರೊಳ್ಳಿ, ಕಮಲನಗರ ಮತ್ತು ಕಿನ್ನಿ ಸುಲ್ತಾನ್ (ಆಲಂದ್ ತಾಲೂಕು); ಅಂಬಲಗ, ಬಬಲಾದ (ಐಕೆ), ಒಕಾಲಿ ಮತ್ತು ಸೊಂತ್ (ಕಮಲಾಪುರ ತಾಲೂಕು); ಕೇಸರಹಟ್ಟಿ, ಮರಳಿ ಮತ್ತು ವಡ್ಡರಹಟ್ಟಿ (ಗಂಗಾವತಿ ತಾಲೂಕು); ಗೆದ್ದಿಗೇರಿ, ಗುನ್ನಲ್, ಹಿರೇವಂಕಲ್ ಕುಂಟ ಮತ್ತು ತಳಕೇರಿ (ಯಲಬುರ್ಗಾ ತಾಲೂಕು); ಚಿಕ್ಕರಸಿನಕೆರೆ (ಮದ್ದೂರು ತಾಲೂಕು); ಗಣದಲು, ಕನ್ನಲಿ, ಮುದಗಂಡೂರ್ ಮತ್ತು ಮುತ್ತೆಗೆರೆ (ಮಂಡ್ಯ ತಾಲೂಕು); ದಾಸರಿಘಟ್ಟ ಮತ್ತು ಸಾರ್ತವಳ್ಳಿ (ತಿಪಟೂರು ತಾಲೂಕು); ಹಡವನಹಳ್ಳಿ ಮತ್ತು ಹುಲ್ಲೇಕೆರೆ (ತುರುವೇಕೆರೆ ತಾಲೂಕು); ಹಿರೇನೆಲ್ಲೂರು ಮತ್ತು ಪದವಾಗೋಡು (ಸಾಗರ ತಾಲೂಕು).

16 ಜಾಬ್ ಕಾರ್ಡ್‌ಗಳನ್ನು ನೀಡಲು ಗ್ರಾಮ ಪಂಚಾಯಿತಿಗಳು ತೆಗೆದುಕೊಂಡ ದಿನಗಳ ಬಗ್ಗೆ 400 ಫಲಾನುಭವಿಗಳಲ್ಲಿ, 39 ಫಲಾನುಭವಿಗಳು ಪ್ರತಿಕ್ರಿಯಿಸಲಿಲ್ಲ

ಮಾಡಿದ ದಿನಗಳನ್ನು ಇಂದೀಕರಿಸಿರಲಿಲ್ಲ ಮತ್ತು ಶೇಕಡಾ 42ರಷ್ಟು ಜಾಬ್ ಕಾರ್ಡ್‌ಗಳಲ್ಲಿ ಸಹಿ ಅಂಕಣಗಳು ಖಾಲಿ ಇದ್ದವು ಅಥವಾ ಭಾಗಶಃ ಖಾಲಿ ಇದ್ದವು ಎಂಬುದನ್ನು ತೋರಿಸಿತು. ಇಂತಹ ಲೋಪಗಳು ಉದ್ಯೋಗ ಕಾರ್ಡ್‌ಗಳ ಪರಿಶೀಲನೆ ಅಥವಾ ಸೃಷ್ಟಿಯಾದ ಉದ್ಯೋಗದ ಸಾಮಾಜಿಕ ಲೆಕ್ಕಪರಿಶೋಧನೆಗೆ ಅನುವು ಮಾಡಿಕೊಡುವುದಿಲ್ಲ.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ಅಭಿಪ್ರಾಯವನ್ನು ಒಪ್ಪಿಕೊಂಡಿತು (ಮೇ 2025) ಮತ್ತು ಸಮಸ್ಯೆಗಳನ್ನು ಕಡ್ಡಾಯವಾಗಿ ಪರಿಹರಿಸಲು ಎಲ್ಲಾ ಕ್ಷೇತ್ರ ಅಧಿಕಾರಿಗಳಿಗೆ ನಿರ್ದೇಶನಗಳನ್ನು ನೀಡಲಾಗುವುದು ಮತ್ತು ಮೇಲ್ವಿಚಾರಣೆಯನ್ನು ಕಟ್ಟುನಿಟ್ಟಾಗಿ ಕೈಗೊಳ್ಳಲಾಗುವುದು ಎಂದು ತಿಳಿಸಿತು.

**ಶಿಫಾರಸು–6: ಎಂಜಿಎನ್‌ಆರ್ ಇಜಿ ಎಸ್ ಯೋಜನೆಯಡಿ ಎಲ್ಲಾ ಉದ್ಯೋಗಾಕಾಂಕ್ಷಿಗಳಿಗೆ ನಿಗದಿತ ನಮೂನೆಯಲ್ಲಿ ಜಾಬ್ ಕಾರ್ಡ್‌ಗಳನ್ನು ನೀಡಲು ಮತ್ತು ಅಗತ್ಯವಿರುವ ಎಲ್ಲಾ ನಮೂದುಗಳನ್ನು ಪೂರ್ಣಗೊಳಿಸಲು ಇಲಾಖೆಯು ಕ್ರಮ ಕೈಗೊಳ್ಳಬೇಕು.**

### 4.2 ಉದ್ಯೋಗ ಸೃಷ್ಟಿ

2019–20ರಿಂದ 2023–24ರ ಅವಧಿಯಲ್ಲಿ ಎಂಜಿಎನ್‌ಆರ್ ಇಜಿ ಎಸ್ ಅಡಿಯಲ್ಲಿ ರಾಜ್ಯದಲ್ಲಿ ಬೇಡಿಕೆ ಮತ್ತು ಒದಗಿಸಲಾದ ಉದ್ಯೋಗದ ವಿವರಗಳನ್ನು **ಕೋಷ್ಟಕ–4.1** ರಲ್ಲಿ ನೀಡಲಾಗಿದೆ.

**ಕೋಷ್ಟಕ–4.1: ರಾಜ್ಯದಲ್ಲಿ ಎಂಜಿಎನ್‌ಆರ್ ಇಜಿ ಎಸ್ ಅಡಿಯಲ್ಲಿ ಉದ್ಯೋಗದ ಬೇಡಿಕೆ ಮತ್ತು ಒದಗಿಸಲಾದ ಉದ್ಯೋಗದ ವಿವರಗಳು**

| ವಿವರಗಳು | 2019–20 | 2020–21 | 2021–22 | 2022–23 | 2023–24 |
|---|---|---|---|---|---|
| ನೀಡಲಾದ ಒಟ್ಟು ಜಾಬ್ ಕಾರ್ಡ್ ಗಳು (ಲಕ್ಷಗಳಲ್ಲಿ) | 63.68 | 71.31 | 75.95 | 78.15 | 79.09 |
| ಉದ್ಯೋಗ ಬೇಡಿಕೆ ಮಾಡಿದ ಕುಟುಂಬಗಳು (ಲಕ್ಷಗಳಲ್ಲಿ) | 24.77 (39%) | 32.96 (46%) | 36.81 (48%) | 32.72 (42%) | 32.41 (41%) |
| ಉದ್ಯೋಗ ಒದಗಿಸಲಾದ ಕುಟುಂಬಗಳು (ಲಕ್ಷಗಳಲ್ಲಿ) | 22.38 (90%) | 30.15 (91%) | 33.85 (92%) | 29.59 (90%) | 29.96 (92%) |
| ಉತ್ಪತ್ತಿ ಮಾಡಿದ ಒಟ್ಟು ಮಾನವ ದಿನಗಳು (ಲಕ್ಷಗಳಲ್ಲಿ) | 1118.63 | 1480.27 | 1632.10 | 1258.25 | 1385.01 |
| ಪ್ರತಿ ಕುಟುಂಬಕ್ಕೆ ವ್ಯಕ್ತಿ ದಿನಗಳು | 49.99 | 49.09 | 48.21 | 42.52 | 46.23 |
| 100 ದಿನಗಳ ಉದ್ಯೋಗವನ್ನು ಒದಗಿಸಿದ ಕುಟುಂಬಗಳು (ಲಕ್ಷಗಳಲ್ಲಿ) | 1.87 | 2.40 | 1.76 | 0.32 | 0.43 |

**ಮೂಲ: ಇಲಾಖೆ ಒದಗಿಸಿದ ಮಾಹಿತಿ (ಜೂನ್ 2024) ಮತ್ತು ಎಂಐಎಸ್ ದತ್ತಾಂಶ (ನವೆಂಬರ್ 2024).**

2019–20ರಿಂದ 2023–24 ರವರೆಗಿನ ಲೆಕ್ಕಪರಿಶೋಧನಾ ಅವಧಿಯಲ್ಲಿ ನೋಂದಾಯಿತ ಅರ್ಧದಷ್ಟು ಕುಟುಂಬಗಳೂ ಸಹ ಕೆಲಸಕ್ಕೆ ಬೇಡಿಕೆ ಇಟ್ಟಿರಲಿಲ್ಲ ಎಂಬುದನ್ನು ಗಮನಿಸಬಹುದು. ಉದ್ಯೋಗ ಬೇಡಿಕೆಯಲ್ಲಿ ಇಳಿಕೆಯಿದ್ದರೂ, ಇಲಾಖೆಯು ಕುಸಿದಿದ್ದ ಬೇಡಿಕೆಯನ್ನು ಸಹ ಪೂರೈಸಲು ಸಾಧ್ಯವಾಗಲಿಲ್ಲ. ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ಅಭಿಪ್ರಾಯವನ್ನು ಒಪ್ಪಿಕೊಂಡಿತು (ಮೇ 2025) ಮತ್ತು ನೀಡಿದ ಜಾಬ್ ಕಾರ್ಡ್‌ಗಳಿಗೆ ಪ್ರತಿಯಾಗಿ ಕಡಿಮೆ ಬೇಡಿಕೆಗೆ ನಿಷ್ಕ್ರಿಯ ಜಾಬ್ ಕಾರ್ಡ್‌ಗಳು, ಕಾರ್ಮಿಕರ ವಲಸೆ ಮುಂತಾದ ಅನೇಕ ಕಾರಣಗಳನ್ನು ಉಲ್ಲೇಖಿಸಿತು. ಉದ್ಯೋಗ ಬಯಸುವ ಎಲ್ಲಾ ಕಾರ್ಮಿಕರಿಗೆ ಉದ್ಯೋಗ ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದೂ ಸಹ ತಿಳಿಸಲಾಯಿತು.

### 4.3 ಸಕ್ರಿಯ ಜಾಬ್ ಕಾರ್ಡ್‌ಗಳು

ಎಂಐಎಸ್ ವರದಿಗಳು (ಆರ್1.1.1–ವರ್ಗವಾರು ಕುಟುಂಬ/ಕಾರ್ಮಿಕರು) ಸಕ್ರಿಯ ಕುಟುಂಬಗಳು/ಕಾರ್ಮಿಕರ ವಿವರಗಳನ್ನು ಒಳಗೊಂಡಿವೆ. ಕಳೆದ ಮೂರು ಹಣಕಾಸು ವರ್ಷಗಳಲ್ಲಿ ಅಥವಾ ಪ್ರಸಕ್ತ ಹಣಕಾಸು ವರ್ಷದಲ್ಲಿ ಯಾವುದೇ ಒಂದು ದಿನ ಕೆಲಸ ಮಾಡಿದ ಕುಟುಂಬವನ್ನು ಸಕ್ರಿಯ ಕುಟುಂಬವೆಂದು ವ್ಯಾಖ್ಯಾನಿಸಲಾಗಿದೆ. 2019–20ರಿಂದ 2023–24ರ ಅವಧಿಯಲ್ಲಿ ರಾಜ್ಯದಲ್ಲಿ ಒಟ್ಟು ನೋಂದಾಯಿತ ಕಾರ್ಮಿಕರಲ್ಲಿ ಸಕ್ರಿಯ ಕಾರ್ಮಿಕರ ಶೇಕಡಾವಾರು (ಸರಾಸರಿ) ಕೇವಲ 45ರಷ್ಟಿತ್ತು ಎಂಬುದನ್ನು ಪರಿಶೀಲನೆಯು ತೋರಿಸಿತು, ಇದು ನೋಂದಾಯಿತ ಕಾರ್ಮಿಕರಲ್ಲಿ ಬಹುಪಾಲು (ಶೇಕಡಾ 55) ಎಂಜಿಎನ್‌ಆರ್ ಇಜಿ ಎಸ್ ಅಡಿಯಲ್ಲಿ ಕೆಲಸ ಮಾಡಿರಲಿಲ್ಲ ಎಂಬುದನ್ನು ಸಾಬೀತುಪಡಿಸುತ್ತದೆ. ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ ಸಕ್ರಿಯ ಕಾರ್ಮಿಕರ ಶೇಕಡಾವಾರು ಪ್ರಮಾಣ ಮಂಡ್ಯದಲ್ಲಿನ 33ರಿಂದ ಕೊಪ್ಪಳದಲ್ಲಿನ 57ರ ವ್ಯಾಪ್ತಿಯಲ್ಲಿತ್ತು (**ನಕ್ಷೆ–4.2ರಲ್ಲಿ** ಚಿತ್ರಿಸಲಾಗಿದೆ).

**ನಕ್ಷೆ–4.2: 2019–20ರಿಂದ 2023–24ರ ಅವಧಿಯಲ್ಲಿ ರಾಜ್ಯ ಮತ್ತು ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ ಸಕ್ರಿಯ ಉದ್ಯೋಗ ಕಾರ್ಡ್ ಗಳು ಮತ್ತು ಸಕ್ರಿಯ ಕಾರ್ಮಿಕರ ಶೇಕಡಾವಾರು (ಸರಾಸರಿ)**




**ಮೂಲ: ಎಂಐಎಸ್ ದತ್ತಾಂಶ (ಆರ್1.1.1 26.07.2024 ರಂದು ಪಡೆಯಲಾಗಿದೆ)**

ಸಕ್ರಿಯ ಜಾಬ್ ಕಾರ್ಡ್‌ಗಳು/ಕಾರ್ಮಿಕರ ಕಡಿಮೆ ಶೇಕಡಾವಾರಿಗೆ ಕಾರಣಗಳನ್ನು ನಕಲಿ ಕಾರ್ಮಿಕರ ಅಸ್ತಿತ್ವ, ಜಾಬ್ ಕಾರ್ಡ್‌ಗಳ ವಾರ್ಷಿಕ ಇಂದೀಕರಣವನ್ನು ಕೈಗೊಳ್ಳುವಲ್ಲಿ ಗ್ರಾಮಪಂಚಾಯಿತಿಗಳ ವೈಫಲ್ಯ, ಸಂಭಾವ್ಯ ಫಲಾನುಭವಿಗಳಲ್ಲಿ ಅರ್ಹತೆಗಳ ಕಳಪೆ ಅರಿವಿನ ಮಟ್ಟಗಳು ಇತ್ಯಾದಿಗಳಿಗೆ ಅಧ್ಯಾರೋಪಿಸಬಹುದು.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ಅವಲೋಕನವನ್ನು ಒಪ್ಪಿಕೊಂಡಿತು (ಮೇ 2025) ಮತ್ತು ಸಮುದಾಯ ಕಾಮಗಾರಿಗಳಲ್ಲಿ ಕಾರ್ಮಿಕರ ಭಾಗವಹಿಸುವಿಕೆಯ ಹಿಂಜರಿಕೆ, ವಲಸೆ ಇತ್ಯಾದಿಗಳು ಇದಕ್ಕೆ ಮುಖ್ಯ ಕಾರಣವೆಂದು ತಿಳಿಸಿತು.

### 4.4 100 ದಿನಗಳ ಉದ್ಯೋಗ ಒದಗಿಸದಿರುವುದು

2019–20ರಿಂದ 2023–24ರ ಅವಧಿಯಲ್ಲಿ 100 ದಿನಗಳ ಉದ್ಯೋಗವನ್ನು ಒದಗಿಸಿದ ಒಟ್ಟು ಕುಟುಂಬಗಳ ಸಂಖ್ಯೆ ತುಂಬಾ ಕಡಿಮೆಯಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಗಮನಿಸಿದೆ. 2019–20ರಿಂದ 2023–24ರ ಅವಧಿಯಲ್ಲಿ ರಾಜ್ಯ ಮಟ್ಟದಲ್ಲಿ ಇದು 0.32 ಲಕ್ಷದಿಂದ 2.40 ಲಕ್ಷ ಕುಟುಂಬಗಳವರೆಗೆ ಇದ್ದಿತು. ಲೆಕ್ಕಪರಿಶೋಧನಾ ಅವಧಿಯಲ್ಲಿ ಕುಟುಂಬಗಳಿಗೆ ಒದಗಿಸಲಾದ ಸರಾಸರಿ ಮಾನವ ದಿನಗಳು ಬಹುಪಾಲು (ಶೇಕಡಾ 40) ಕುಟುಂಬಗಳಿಗೆ 1ರಿಂದ 30 ದಿನಗಳವರೆಗೆ

ಉದ್ಯೋಗವನ್ನು ಒದಗಿಸಲಾಗಿತ್ತು ಮತ್ತು ಕೇವಲ ಶೇಕಡಾ 5ರಷ್ಟು ಕುಟುಂಬಗಳಿಗೆ 100 ದಿನಗಳು ಮತ್ತು ಅದಕ್ಕಿಂತ ಹೆಚ್ಚಿನ ಉದ್ಯೋಗವನ್ನು ಒದಗಿಸಲಾಗಿತ್ತು ಎಂಬುದನ್ನು ತೋರಿಸಿತು.

ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ 1ರಿಂದ 30 ದಿನಗಳ ಕಾಲ ಉದ್ಯೋಗ ಪಡೆದ ಕುಟುಂಬಗಳ ಶೇಕಡಾವಾರು ಪ್ರಮಾಣ 33ರಿಂದ (ಕೊಪ್ಪಳ) 56ರ (ಶಿವಮೊಗ್ಗ) ವ್ಯಾಪ್ತಿಯಲ್ಲಿದ್ದಿತು. ಶೇಕಡಾ 10ರಿಂದ (ಶಿವಮೊಗ್ಗ) ಶೇಕಡಾ 24ರಷ್ಟು ಕುಟುಂಬಗಳಿಗೆ 71ರಿಂದ 99 ದಿನಗಳವರೆಗೆ ಉದ್ಯೋಗ ಒದಗಿಸಿದ್ದರೆ, ಕೇವಲ ಶೇಕಡಾ 2ರಿಂದ ಶೇಕಡಾ 4ರಷ್ಟು ಕುಟುಂಬಗಳಿಗೆ ಮಾತ್ರ 100 ಮತ್ತು ಅದಕ್ಕಿಂತ ಹೆಚ್ಚಿನ ದಿನಗಳ ಉದ್ಯೋಗ ನೀಡಲಾಗಿತ್ತು. ವಿವರಗಳನ್ನು **ನಕ್ಷೆ–4.3ರಲ್ಲಿ** ನೀಡಲಾಗಿದೆ. ಇದು ಯೋಜನೆಯ ಮೂಲ ಉದ್ದೇಶವನ್ನು ಸಾಧಿಸುವಲ್ಲಿ ವಿಫಲವಾಗಿ ಯೋಜನೆಯ ನಿಷ್ಪರಿಣಾಮಕಾರಿ ಅನುಷ್ಠಾನವನ್ನು ಸಾಬೀತುಪಡಿಸುತ್ತದೆ.

**ನಕ್ಷೆ–4.3: 2019–20ರಿಂದ 2023–24ರ ಅವಧಿಯಲ್ಲಿ ಕುಟುಂಬಗಳಿಗೆ ಒದಗಿಸಲಾದ ಅವಧಿವಾರು ಉದ್ಯೋಗ (ಸರಾಸರಿ)**




**ಮೂಲ: 16.11.2024 ರ ಎಂಐಎಸ್ ವರದಿ (ಆರ್5.1.1)**

ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ಅಭಿಪ್ರಾಯವನ್ನು ಒಪ್ಪಿಕೊಂಡಿತು (ಮೇ 2025) ಮತ್ತು ವಾಸ್ತವಿಕವಾಗಿ ಒದಗಿಸಿದ ಉದ್ಯೋಗವು ವೈಯಕ್ತಿಕ ಬೇಡಿಕೆ ಮತ್ತು ಕೆಲಸ ಮಾಡುವ ಇಚ್ಛೆಯನ್ನು ಅವಲಂಬಿಸಿರುತ್ತದೆ ಎಂದು ತಿಳಿಸಿತು. ಸಮುದಾಯ ಆಧಾರಿತ ಕಾಮಗಾರಿಗಳ ಕಡೆಗೆ ಕಾರ್ಮಿಕರ ಒಲವು ಇಲ್ಲದಿರುವುದು ಮತ್ತೊಂದು ಕಾರಣವಾಗಿತ್ತು ಎಂದೂ ತಿಳಿಸಲಾಯಿತು.

## 4.5 ವಿಶೇಷ ವರ್ಗದ ವ್ಯಕ್ತಿಗಳಿಗೆ ಒದಗಿಸಲಾದ ಉದ್ಯೋಗ

ಅಂಗವೈಕಲ್ಯ ಹೊಂದಿರುವ ಎಲ್ಲಾ ವ್ಯಕ್ತಿಗಳು ಮತ್ತು ಇತರ ದುರ್ಬಲ ವ್ಯಕ್ತಿಗಳನ್ನು (ಅಲೆಮಾರಿ ಬುಡಕಟ್ಟು ಗುಂಪು, ಎಚ್ಐವಿ ಪಾಸಿಟಿವ್ ವ್ಯಕ್ತಿಗಳು, ಆಂತರಿಕವಾಗಿ ಸ್ಥಳಾಂತರಗೊಂಡ ವ್ಯಕ್ತಿಗಳು, ಇತ್ಯಾದಿ) ಗುರುತಿಸಲು ಮತ್ತು ನಿರ್ದಿಷ್ಟ ಸಮಯದ ಚೌಕಟ್ಟಿನೊಳಗೆ ಎಲ್ಲಾ ಗ್ರಾಮಗಳಲ್ಲಿ ಅವರಿಗೆ 100 ದಿನಗಳ ಕೆಲಸವನ್ನು ಒದಗಿಸಲು ವಿಶೇಷ ಅಭಿಯಾನವನ್ನು ಪ್ರಾರಂಭಿಸಬೇಕು ಎಂದು ಕಾರ್ಯಾಚರಣಾ ಮಾರ್ಗಸೂಚಿಗಳು, 2013ರ ಕಂಡಿಕೆ–9.3.9 ಷರತ್ತು ವಿಧಿಸುತ್ತದೆ. ಪ್ರತಿ ರಾಜ್ಯ ಸರ್ಕಾರವು ಪ್ರತಿ ಜಿಲ್ಲೆಯಲ್ಲಿ ಒಬ್ಬ ಅಧಿಕಾರಿಯನ್ನು ಸಂಯೋಜಕರಾಗಿ (ದುರ್ಬಲ ಗುಂಪುಗಳು) ನೇಮಿಸಬೇಕು, ಅವರು ವಿಶೇಷ ವರ್ಗಗಳ ಅಗತ್ಯತೆಗಳು ಮತ್ತು ಅವಶ್ಯಕತೆಗಳನ್ನು ಪ್ರತ್ಯೇಕವಾಗಿ ನೋಡಿಕೊಳ್ಳಬೇಕು ಮತ್ತು ಎಂಜಿಎನ್ಆರ್ ಇಜಿ ಎಸ್ ಕಾಮಗಾರಿಗಳಲ್ಲಿ ಅವರನ್ನು ಸೇರಿಸಲು ಅನುವು ಮಾಡಿಕೊಡುವ ಪರಿಸ್ಥಿತಿಗಳನ್ನು ಸೃಷ್ಟಿಸಬೇಕು ಎಂದು ಕಂಡಿಕೆ–9.2.2 ಷರತ್ತು ವಿಧಿಸಿದೆ. ಸಂಯೋಜಕರು (ದುರ್ಬಲ ಗುಂಪುಗಳು) ಅಂತಹ

ಅನುಷ್ಠಾನದ ಪ್ರಗತಿಯನ್ನು ಪರಿಶೀಲಿಸಲು ಬ್ಲಾಕ್/ಗ್ರಾಮ ಪಂಚಾಯಿತಿ ಮಟ್ಟದ ಅಧಿಕಾರಿಗಳೊಂದಿಗೆ ಮಾಸಿಕ ಸಭೆಯನ್ನು ನಡೆಸಬೇಕು ಮತ್ತು ಮಾಸಿಕ ಮತ್ತು ತ್ರೈಮಾಸಿಕ ಪ್ರಗತಿ ವರದಿಗಳನ್ನು ಜಿಲ್ಲಾ ಕಾರ್ಯಕ್ರಮ ಸಂಯೋಜಕರಿಗೆ ಸಲ್ಲಿಸಬೇಕು.

ಆದರೆ, ಲೆಕ್ಕಪರಿಶೋಧನೆಯು ಈ ವಿಶೇಷ ಅಭಿಯಾನಗಳಲ್ಲಿ ಈ ಕೆಳಗೆ ವಿವರಿಸಲಾದ ನ್ಯೂನತೆಗಳನ್ನು ಗಮನಿಸಿತು:

i) ಎಂ.ಜಿ.ಎನ್.ಆರ್.ಇ.ಜಿ.ಎಸ್ ಅಡಿಯಲ್ಲಿ ವಿಶೇಷ ವರ್ಗಗಳನ್ನು ಸೇರಿಸಲು ಅನುವು ಮಾಡಿಕೊಡುವ ಪರಿಸ್ಥಿತಿಗಳನ್ನು ಸೃಷ್ಟಿಸಲು ಪ್ರತಿ ಜಿಲ್ಲೆಯಲ್ಲಿ ಒಬ್ಬ ವಿಶೇಷ ಅಧಿಕಾರಿಯನ್ನು ನೇಮಿಸುವ ಬದಲು, ಕಾರ್ಮಿಕರನ್ನು ಸಜ್ಜುಗೊಳಿಸುವ ಮತ್ತು ಜಾಗೃತಿ ಮೂಡಿಸುವ ಹೆಚ್ಚುವರಿ ಜವಾಬ್ದಾರಿಯನ್ನು ಸಹೋದ್ಯೋಗಿಗಳು, ತಾಂಡ ರೋಜ್ ಗಾರ್ ಮಿತ್ರ ಮತ್ತು ಗ್ರಾಮ ಕಾಯಕ ಮಿತ್ರ[17] ಅವರಿಗೆ ವಹಿಸಲಾಗಿತ್ತು.

ii) ರಾಜ್ಯ ಮಟ್ಟದಲ್ಲಿ ಅಂಗವಿಕಲರಿಗೆ ಒದಗಿಸಲಾದ ಉದ್ಯೋಗದ ಶೇಕಡಾವಾರು ಪ್ರಮಾಣವು 14ರಿಂದ (2019–20) 32ಕ್ಕೆ (2023–24) ಏರಿತ್ತಾದರೂ ಅದು 2019–20ರಿಂದ 2023–24ರ ಅವಧಿಯಲ್ಲಿ ರಾಷ್ಟ್ರೀಯ ಸರಾಸರಿಗಿಂತ ಇನ್ನೂ ಕಡಿಮೆಯಾಗಿತ್ತು (**ಕೋಷ್ಟಕ–4.2**ರಲ್ಲಿ ವಿವರಿಸಲಾಗಿದೆ).

**ಕೋಷ್ಟಕ 4.2: ಅಂಗವಿಕಲರಿಗೆ ಒದಗಿಸಲಾದ ಉದ್ಯೋಗದ ವಿವರಗಳು**

| ವರ್ಷ | ನೋಂದಾಯಿತ ಅಂಗವಿಕಲರ ಸಂಖ್ಯೆ | ಕೆಲಸ ಮಾಡಿದ ಅಂಗವಿಕಲರ ಸಂಖ್ಯೆ | ರಾಜ್ಯ ಮಟ್ಟದಲ್ಲಿ ಶೇಕಡಾವಾರು | ರಾಷ್ಟ್ರೀಯ ಸರಾಸರಿ |
|---|---|---|---|---|
| 2019–20 | 77,296 | 10,621 | 14 | 21 |
| 2020–21 | 97,887 | 20,354 | 21 | 27 |
| 2021–22 | 1,15,595 | 27,375 | 24 | 25 |
| 2022–23 | 86,673 | 26,862 | 31 | 35 |
| 2023–24 | 87,893 | 28,139 | 32 | 37 |

**ಮೂಲ: ಇಲಾಖೆಯಿಂದ ಒದಗಿಸಲಾದ ಮಾಹಿತಿ (ಜೂನ್ 2024) ಮತ್ತು ಎಂಐಎಸ್ ದತ್ತಾಂಶ (01.08.2024)**

iii) ಅಂಗವಿಕಲರನ್ನು ಹೊರತುಪಡಿಸಿ ಗುರುತಿಸಲಾದ ದುರ್ಬಲ ವ್ಯಕ್ತಿಗಳ ವಿವರಗಳನ್ನು ಮತ್ತು ಅವರಿಗೆ ಒದಗಿಸಲಾದ ಉದ್ಯೋಗವನ್ನು ಚಿತ್ರಿಸುವ ವರದಿಯನ್ನು ರಚಿಸಲು ಎನ್.ಆರ್.ಇ.ಜಿ.ಎಸಾಫ್ಟ್ ನಲ್ಲಿ ಅವಕಾಶವಿರಲಿಲ್ಲ. ಅಂಗವಿಕಲರಿಗೆ ಸಂಬಂಧಿಸಿದಂತೆ ಸಹ ಕೆಲಸಗಳಿಗೆ ಬೇಡಿಕೆ ಇಟ್ಟ ವ್ಯಕ್ತಿಗಳ ವಿವರಗಳನ್ನು ಎನ್.ಆರ್.ಇ.ಜಿ.ಎಸಾಫ್ಟ್ ನಲ್ಲಿ ತೋರಿಸಿರಲಿಲ್ಲ.

ಇಲಾಖೆಯು ಒದಗಿಸಿದ ಮಾಹಿತಿಯ ಪ್ರಕಾರ (ಜೂನ್ 2024), ಎಂ.ಜಿ.ಎನ್.ಆರ್.ಇ.ಜಿ.ಎಸ್ ಅಡಿಯಲ್ಲಿ 2023–24ರ ಅವಧಿಯಲ್ಲಿ 87,893 ವಿಕಲಚೇತನರು (ದೈಹಿಕ ಅಂಗವಿಕಲರು), 'ಶೂನ್ಯ' ಎಚ್‌ಐವಿ ವ್ಯಕ್ತಿಗಳು ಮತ್ತು 475 ಬುಡಕಟ್ಟು ವ್ಯಕ್ತಿಗಳು ನೋಂದಾಯಿಸಲ್ಪಟ್ಟಿದ್ದರು. ರಾಜೀವ್ ಗಾಂಧಿ ಹೌಸಿಂಗ್ ಕಾರ್ಪೊರೇಷನ್ ಲಿಮಿಟೆಡ್ (ಆರ್.ಜಿ.ಎಚ್.ಸಿ.ಎಲ್) ವೆಬ್ ಸೈಟಿನಲ್ಲಿ ಲಭ್ಯವಿರುವ ಮನೆಯಿಲ್ಲದ ಫಲಾನುಭವಿಗಳ ದತ್ತಾಂಶದ ಲೆಕ್ಕಪರಿಶೋಧನೆಯು (ನವೆಂಬರ್ 2024) ರಾಜ್ಯದಲ್ಲಿ 5,70,830 ಅಂಗವಿಕಲರು, 44,861 ಎಚ್‌ಐವಿ ಮತ್ತು 2,813 ಬುಡಕಟ್ಟು ವಸತಿರಹಿತ ಫಲಾನುಭವಿಗಳಿದ್ದರು ಎಂಬುದನ್ನು ತಿಳಿಯಪಡಿಸಿತು. ಎಂ.ಜಿ.ಎನ್.ಆರ್.ಇ.ಜಿ.ಎಸ್ ಅಡಿಯಲ್ಲಿ ಅಂತಹ ದುರ್ಬಲ ವರ್ಗಗಳನ್ನು ಗಮನಾರ್ಹವಾಗಿ ಹೊರಗಿಡಲಾಗಿತ್ತು ಮತ್ತು ಯೋಜನೆಯಡಿ

[17] ಯೋಜನೆಯ ಅನುಷ್ಠಾನದಲ್ಲಿ ಪಿಡಿಒಗಳಿಗೆ ಸಹಾಯ ಮಾಡಲು ಇವರನ್ನು ಗೌರವಧನದ ಆಧಾರದ ಮೇಲೆ ನೇಮಿಸಿಕೊಳ್ಳಲಾಗುತ್ತದೆ.

ಅಂತಹ ಫಲಾನುಭವಿಗಳ ವಿಶ್ವಾಸಾರ್ಹ ದತ್ತಸಂಚಯ ಇಲ್ಲದಿರುವುದನ್ನು ಇದು ಸೂಚಿಸುತ್ತದೆ. ಇದಲ್ಲದೆ, ಪರೀಕ್ಷಾ–ತನಿಖೆ ನಡೆಸಿದ 26 ಗ್ರಾಮಪಂಚಾಯಿತಿಗಳಲ್ಲಿ ಸಮೀಕ್ಷೆಗೆ ಒಳಗಾದ ಯಾವುದೇ ಅಂಗವಿಕಲ ಫಲಾನುಭವಿಗಳಿಗೆ ವರ್ಷದಲ್ಲಿ 100 ದಿನಗಳ ಕೆಲಸವನ್ನು ಒದಗಿಸಿರಲಿಲ್ಲ.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ಅಭಿಪ್ರಾಯವನ್ನು ಒಪ್ಪಿಕೊಂಡಿತು (ಮೇ 2025) ಮತ್ತು ಯೋಜನೆಯಡಿಯಲ್ಲಿ ದುರ್ಬಲ ವರ್ಗದ ಮೇಲೆ ವಿಶೇಷ ಗಮನಹರಿಸುವ ಯೋಜನೆಗಳನ್ನು ಹೊಂದಲು ಜಿಲ್ಲಾ ಪಂಚಾಯಿತಿಗಳ ಎಲ್ಲಾ ಸಿಇಒಗಳಿಗೆ ಸೂಚಿಸಲಾಗಿದೆ ಎಂದು ತಿಳಿಸಿತು.

**ಶಿಫಾರಸು 7: ದುರ್ಬಲ ವ್ಯಕ್ತಿಗಳನ್ನು ಗುರುತಿಸಲು ಮತ್ತು ಯೋಜನೆಯಡಿ ಉದ್ಯೋಗ ಒದಗಿಸಲು ಇಲಾಖೆಯು ವಿಶೇಷ ಅಭಿಯಾನಗಳನ್ನು ನಡೆಸಬೇಕು ಮತ್ತು ವಿವಿಧ ಇಲಾಖೆಗಳೊಂದಿಗೆ ಲಭ್ಯವಿರುವ ದತ್ತಾಂಶವನ್ನು ಬಳಸಿಕೊಳ್ಳಬೇಕು**

### 4.6 ಎಂ.ಜಿ.ಎನ್.ಆರ್.ಇ.ಜಿ.ಎಸ್ ಕಾರ್ಮಿಕರಿಗೆ ಯೋಜನೆಯ ಪ್ರಯೋಜನಗಳ ನಿರಾಕರಣೆ

ಯಾವುದೇ ಗುತ್ತಿಗೆದಾರರನ್ನು ನೇಮಿಸಿಕೊಳ್ಳದೆ ಕಾಮಗಾರಿಯನ್ನು ಕಾರ್ಯಗತಗೊಳಿಸಬೇಕು ಎಂದು ಎಂಜಿಎನ್ಆರ್ ಇಜಿ ಎ ಅನುಸೂಚಿ–1ರ ಕಂಡಿಕೆ–21 ಷರತ್ತು ವಿಧಿಸುತ್ತದೆ. ಕಾರ್ಯಸಾಧ್ಯವಾದಷ್ಟು, ಕಾರ್ಯಕ್ರಮ ಅನುಷ್ಠಾನ ಏಜೆನ್ಸಿಗಳು (ಪಿಐಎಗಳು) ಕಾರ್ಯಗತಗೊಳಿಸುವ ಕಾಮಗಾರಿಗಳನ್ನು ದೈಹಿಕ ಶ್ರಮವನ್ನು ಬಳಸಿ ನಿರ್ವಹಿಸಬೇಕು ಮತ್ತು ಯಾವುದೇ ಕಾರ್ಮಿಕರನ್ನು ಸ್ಥಳಾಂತರಿಸುವ ಯಂತ್ರಗಳನ್ನು ಬಳಸಬಾರದು ಎಂದು ಕಂಡಿಕೆ–22 ಷರತ್ತು ವಿಧಿಸಿದೆ.

ಲೆಕ್ಕಪರಿಶೋಧನೆಯು ಎನ್.ಆರ್.ಇ.ಜಿ.ಎಸಾಫ್ಟ್ ನಲ್ಲಿ ಲಭ್ಯವಿದ್ದ "ಎಸ್5.13–ಮಾರಾಟಗಾರರ ಪ್ರಕಾರ ವೆಚ್ಚ" ವರದಿಯನ್ನು ಪರಿಶೀಲಿಸಿತು (ಆಗಸ್ಟ್ 2024) ವರದಿ ಎನ್.ಆರ್.ಇ.ಜಿ.ಎ. ಸಾಫ್ಟ‌ನಲ್ಲಿ ವರದಿಯು ಸಾಮಗ್ರಿ ಪಾವತಿಗಳ ವಿವರಗಳನ್ನು ಒಳಗೊಂಡಿತ್ತು. ಆಯ್ದ 40 ಗ್ರಾಮ ಪಂಚಾಯಿತಿಗಳ ವರದಿಗಳಲ್ಲಿ ಸೇರಿಸಲಾದ ಸಾಮಗ್ರಿ ಘಟಕಗಳ ವಿಶ್ಲೇಷಣೆಯು ನೀರುಣಿಸುವುದು, ಕಳೆ ತೆಗೆಯುವುದು, ವಾಚ್ ಮತ್ತು ವಾರ್ಡ್ ಮುಂತಾದ ಹಸ್ತಚಾಲಿತ (ಕಾರ್ಮಿಕ ಆಧಾರಿತ) ಘಟಕಗಳಿಗಾಗಿ ಮಾರಾಟಗಾರರು/ಏಜೆನ್ಸಿಗಳನ್ನು ನೇಮಿಸಿಕೊಳ್ಳಲಾಗಿತ್ತು ಎಂಬುದನ್ನು ತೋರಿಸಿತು. ಅಂತಹ ಚಟುವಟಿಕೆಗಳನ್ನು ಕಾರ್ಯಗತಗೊಳಿಸಲು ಯಾವುದೇ ವಿಶಿಷ್ಠ ಕೌಶಲ್ಯದ ಅಗತ್ಯತೆಯಿಲ್ಲದಿರುವುದರಿಂದ ಎಂ.ಜಿ.ಎನ್.ಆರ್.ಇ.ಜಿ.ಎಸ್‌ನ ಕೌಶಲ್ಯರಹಿತ ಕಾರ್ಮಿಕರ ಮೂಲಕ ಅದನ್ನು ಕಾರ್ಯಗತಗೊಳಿಸಬೇಕಿತ್ತು.

ಮಾರಾಟಗಾರರು/ಏಜೆನ್ಸಿಗಳ ಅಂತಹ ನೇಮಕವನ್ನು ಸಂಬಂಧಿತ ಇಲಾಖೆಗಳ ದತ್ತಾಂಶಗಳಲ್ಲಿನ ಅಸಂಗತತೆಗಳಿಗೆ ಅಧ್ಯಾರೋಪಿಸಬಹುದು. ಸಂಬಂಧಿತ ಇಲಾಖೆಗಳು (ಸಾಮಾಜಿಕ ಅರಣ್ಯೀಕರಣ, ತೋಟಗಾರಿಕೆ, ಇತ್ಯಾದಿ) ಕಾರ್ಯಗತಗೊಳಿಸುವ ಕಾಮಗಾರಿಗೆ ಸಂಬಂಧಿಸಿದಂತೆ, ಎಂ.ಜಿ.ಎನ್.ಆರ್.ಇ.ಜಿ.ಎಸ್ ಆಯುಕ್ತರ ಕಚೇರಿ ಪ್ರತಿ ವರ್ಷ ದತ್ತಾಂಶವನ್ನು ಅನುಮೋದಿಸುತ್ತದೆ ಎಂಬುದನ್ನು ಗಮನಿಸಬಹುದು. ಈ ದತ್ತಾಂಶವು ಕಾರ್ಮಿಕ ಮತ್ತು ಸಾಮಗ್ರಿಗಳ ಘಟಕವನ್ನು ಒಳಗೊಂಡಂತೆ ಕಾಮಗಾರಿ ಘಟಕಗಳ ದರಗಳನ್ನು ಒದಗಿಸಿದ್ದವು. 2019–20ರಿಂದ 2023–24ರ ಅವಧಿಯಲ್ಲಿ ಕಾರ್ಮಿಕ ಮತ್ತು ಸಾಮಗ್ರಿಗಳ ವೆಚ್ಚವನ್ನು ಹಂಚಿಕೆ ಮಾಡುವಲ್ಲಿ ಯಾವುದೇ ಸ್ಥಿರತೆ ಇರಲಿಲ್ಲವೆಂಬುದನ್ನು ಪರಿಶೀಲನೆಯು ತೋರಿಸಿತು, ಉದಾಹರಣೆಗೆ, ಸಾಮಾಜಿಕ ಅರಣ್ಯೀಕರಣದ ದತ್ತಾಂಶದಲ್ಲಿ ಪಾಲಿಥೀನ್/ಹೆಚ್ಚಿನ ಸಾಂದ್ರತೆಯ ಪಾಲಿಥಿಲೀನ್ (ಎಚ್ ಡಿಪಿಇ) ಚೀಲದ ಸಸಿಗಳನ್ನು ಸಾಗಿಸುವ ವೆಚ್ಚವನ್ನು 2019–20ರಿಂದ 2021–22ರ ಅವಧಿಯಲ್ಲಿ ಸಾಮಗ್ರಿ ಘಟಕವಾಗಿ ವರ್ಗೀಕರಿಸಲಾಗಿತ್ತಾದರೆ ಅದನ್ನು 2022–23 ಮತ್ತು 2023–24ರ ಅವಧಿಯಲ್ಲಿ ಕಾರ್ಮಿಕ ಘಟಕವನ್ನಾಗಿ ಬದಲಾಯಿಸಲಾಗಿತ್ತು. ಅಂತೆಯೇ, 2019–20ರಲ್ಲಿ ವಾಚ್ ಮತ್ತು ವಾರ್ಡ್ ಅನ್ನು ಕಾರ್ಮಿಕ ಘಟಕವೆಂದು ವರ್ಗೀಕರಿಸಲಾಯಿತ್ತಾದರೆ ಅದನ್ನು 2020–21ರಿಂದ 2023–24ರ ಅವಧಿಯಲ್ಲಿ ಕಾರ್ಮಿಕರು ಮತ್ತು ಸಾಮಗ್ರಿಗಳ ನಡುವೆ (ವಿವಿಧ ಶೇಕಡಾವಾರುಗಳೊಂದಿಗೆ) ವಿಂಗಡಿಸಲಾಗಿತ್ತು. 2024–25ನೇ ಸಾಲಿನ

ದತ್ತಾಂಶವನ್ನು ಅನುಮೋದಿಸುವಾಗ, ವಾಚ್ ಮತ್ತು ವಾರ್ಡ್ ವೆಚ್ಚವನ್ನು ಮತ್ತೆ ಶೇಕಡಾ 100ರಷ್ಟು ಕಾರ್ಮಿಕ ಘಟಕವೆಂದು ವರ್ಗೀಕರಿಸಲಾಗಿತ್ತು. ಸಾಮಾಜಿಕ ಅರಣ್ಯಶಾಸ್ತ್ರ ದತ್ತಾಂಶಗಳ ವಿವರಣಾತ್ಮಕ ಪ್ರಕರಣಗಳನ್ನು **ಅನುಬಂಧ–4.2**ರಲ್ಲಿ ನೀಡಲಾಗಿದೆ.

ತತ್ಪರಿಣಾಮವಾಗಿ, ಪರೀಕ್ಷಾ–ತನಿಖೆ ನಡೆಸಿದ 39 ಗ್ರಾಮ ಪಂಚಾಯಿತಿಗಳಲ್ಲಿ (ಮಂಡ್ಯ ತಾಲ್ಲೂಕಿನ ಕನ್ನಾಲಿ ಹೊರತುಪಡಿಸಿ) ಮಾರಾಟಗಾರರು/ಏಜೆನ್ಸಿಗಳಿಗೆ ಒಟ್ಟು ₹3.87 ಕೋಟಿ ಅನಗತ್ಯ ಪ್ರಯೋಜನಗಳನ್ನು ನೀಡಲಾಯಿತು. ಗ್ರಾಮ ಪಂಚಾಯಿತಿವಾರು ವಿವರಗಳನ್ನು **ಅನುಬಂಧ–4.3**ರಲ್ಲಿ ನೀಡಲಾಗಿದೆ.
ಹೀಗೆ, ಇಲಾಖೆಯು ವೇತನ ಉದ್ಯೋಗವನ್ನು ಹೆಚ್ಚಿಸಲು ವಿಫಲವಾಯಿತು ಮತ್ತು ಬದಲಿಗೆ ಪರೀಕ್ಷಾ–ತನಿಖೆ ನಡೆಸಿದ 39 ಗ್ರಾಮಪಂಚಾಯಿತಿಗಳಲ್ಲಿ ಏಜೆನ್ಸಿಗಳಿಗೆ ₹3.87 ಕೋಟಿ ಅನಗತ್ಯ ಪ್ರಯೋಜನಗಳನ್ನು ವಿಸ್ತರಿಸಿತು. ಇದು ಗ್ರಾಮೀಣ ಕುಟುಂಬಗಳು ತಮ್ಮ ಜೀವನೋಪಾಯದ ಭದ್ರತೆಯನ್ನು ಹೆಚ್ಚಿಸುವುದರಿಂದ ವಂಚಿತರನ್ನಾಗಿಸಿತು.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ಅಭಿಪ್ರಾಯವನ್ನು ಒಪ್ಪಿಕೊಂಡಿತು (ಮೇ 2025) ಮತ್ತು ವೇತನ ಘಟಕದಡಿಯಲ್ಲಿ ಮಾತ್ರ ಅಂತಹ ಚಟುವಟಿಕೆಗಳನ್ನು ಕೈಗೊಳ್ಳಲು ಎಲ್ಲಾ ಅನುಷ್ಠಾನ ಇಲಾಖೆಗಳಿಗೆ ನಿರ್ದೇಶನಗಳನ್ನು ನೀಡಲಾಗುವುದು ಎಂದು ತಿಳಿಸಿತು.

**ಶಿಫಾರಸು–8: ದತ್ತಾಂಶಗಳಲ್ಲಿನ ವೈಪರೀತ್ಯಗಳನ್ನು ತೆಗೆದುಹಾಕಲು ಇಲಾಖೆಯು ಅಗತ್ಯ ಕ್ರಮ ತೆಗೆದುಕೊಳ್ಳಬೇಕು ಮತ್ತು ಎಂಜಿಎನ್‌ಆರ್ ಇಜಿ ಎಸ್ ಅಡಿಯಲ್ಲಿ ಕಾರ್ಮಿಕರಿಗೆ ಸೂಕ್ತ ಪ್ರಾಮುಖ್ಯತೆ ನೀಡಲಾಗಿದೆಯೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು**

## 4.7 ಮಾಹಿತಿ, ಶಿಕ್ಷಣ ಮತ್ತು ಸಂವಹನ (ಐಇಸಿ) ಚಟುವಟಿಕೆಗಳು

### *4.7.1 ಎಂಜಿಎನ್‌ಆರ್‌ಇಜಿಎಸ್ ಅಡಿಯಲ್ಲಿ ಐಇಸಿ ಚಟುವಟಿಕೆಗಳು*

ಎಂ.ಜಿ.ಎನ್.ಆರ್.ಇ.ಜಿ.ಎಸ್‌ನ ಪರಿಣಾಮಕಾರಿ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು ಒಂದು ಪ್ರಮುಖ ಪೂರ್ವಭಾವಿ ಷರತ್ತು ಗ್ರಾಮೀಣ ಜನರು ಮತ್ತು ಇತರ ಪಾಲುದಾರರಲ್ಲಿ ವಿಶೇಷವಾಗಿ ಎಂ.ಜಿ.ಎನ್.ಆರ್.ಇ.ಜಿ.ಎಸ್ ಕಾರ್ಮಿಕರಲ್ಲಿ ಯೋಜನೆಯ ನಿಬಂಧನೆಗಳು ಹಾಗೂ ಅವರ ಹಕ್ಕುಗಳು ಮತ್ತು ಅರ್ಹತೆಗಳಿಗೆ ಸಂಬಂಧಿಸಿದಂತೆ ಜಾಗೃತಿ ಮೂಡಿಸುವುದು ಎಂದು ಕಾರ್ಯಾಚರಣಾ ಮಾರ್ಗಸೂಚಿಗಳು, 2013 ಗುರುತಿಸಿದ್ದವು. ಕಾರ್ಯಾಚರಣಾ ಮಾರ್ಗಸೂಚಿಗಳು, 2013ರ ಕಂಡಿಕೆ–5.4.2ಯು ಎಲ್ಲಾ ರಾಜ್ಯಗಳು, ನೋಂದಾಯಿತ ಕಾರ್ಮಿಕರು ಮತ್ತು ಯೋಜನೆಯಿಂದ ಪ್ರಯೋಜನ ಪಡೆಯಬಹುದಾದ ಇತರ ಗುಂಪುಗಳನ್ನು ತಲುಪುವತ್ತ ಗಮನ ಹರಿಸಲು ಐಇಸಿ ಯೋಜನೆಯನ್ನು ಅಭಿವೃದ್ಧಿಪಡಿಸಬೇಕು ಎಂದು ಸೂಚಿಸಿತ್ತು. ಐಇಸಿ ಯೋಜನೆಯು ರಾಜ್ಯ, ಜಿಲ್ಲೆ, ಬ್ಲಾಕ್ ಮತ್ತು ಸ್ಥಳೀಯ ಮಟ್ಟದ ಚಟುವಟಿಕೆಗಳನ್ನು ಸ್ಪಷ್ಟವಾಗಿ ಸೂಚಿಸಬೇಕು. ಆಯ್ದ ಸಂದೇಶವನ್ನು ಪ್ರಸಾರ ಮಾಡಲು ರಾಜ್ಯಗಳು ಪರಸ್ಪರ ಸಂವಹನ, ಮಾಧ್ಯಮ ಮತ್ತು ಸಮೂಹ ಮಾಧ್ಯಮ ವಿಧಾನಗಳ ಸೃಜನಶೀಲ ಮಿಶ್ರಣವನ್ನು ವಿಕಸನಗೊಳಿಸಬೇಕಿತ್ತು. ವಾರ್ಷಿಕ ಮಾಸ್ಟರ್ ಸುತ್ತೋಲೆ (ಎಎಂಸಿ) 2019–20ರ ಕಂಡಿಕೆ–11.6 ರಾಜ್ಯದಲ್ಲಿ ಐಇಸಿ ಚಟುವಟಿಕೆಗಳ ಮೇಲ್ವಿಚಾರಣೆಗಾಗಿ ರಾಜ್ಯ ಐಇಸಿ ನೋಡಲ್ ಅಧಿಕಾರಿಗಳನ್ನು ರಾಜ್ಯಗಳು ನಾಮನಿರ್ದೇಶನ ಮಾಡಬೇಕು ಎಂದು ಷರತ್ತು ವಿಧಿಸಿತ್ತು.

2019–20ರಿಂದ 2023–24ರ ಅವಧಿಗೆ ರಾಜ್ಯವು ವಾರ್ಷಿಕ ಐಇಸಿ ಯೋಜನೆಗಳನ್ನು ಸಿದ್ಧಪಡಿಸಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. 2020–21ನೇ ಸಾಲಿನಲ್ಲಿ ಮೀಸಲಾದ ರಾಜ್ಯ ಐಇಸಿ ನೋಡಲ್ ಅಧಿಕಾರಿಯನ್ನು ನೇಮಕ ಮಾಡಲಾಗಿದ್ದರೆ, ಇತರ ವರ್ಷಗಳಲ್ಲಿ, ಈ ಹುದ್ದೆಯನ್ನು ಜಂಟಿ ನಿರ್ದೇಶಕರು, ತೋಟಗಾರಿಕೆ (2019–20 ಮತ್ತು 2021–22) ಮತ್ತು ಜಂಟಿ ನಿರ್ದೇಶಕರು, ಆಡಳಿತ (2022–23 ಮತ್ತು 2023–24) ಅವರು ಹೆಚ್ಚುವರಿ ಉಸ್ತುವಾರಿಯಾಗಿ ನಿಭಾಯಿಸಿದ್ದರು. ಐಇಸಿ

ಯೋಜನೆಗಳ ಪ್ರಕಾರ, ರಾಜ್ಯವು ಪರಸ್ಪರ ಸಂವಹನ (ಐಪಿಸಿ), ಮಾಧ್ಯಮ ಮತ್ತು ಸಮೂಹ ಮಾಧ್ಯಮ ವಿಧಾನಗಳ ಮಿಶ್ರಣವನ್ನು ಪ್ರಸ್ತಾವಿಸಿತ್ತು. 2019–20ರಿಂದ 2023–24ರ ಅವಧಿಯಲ್ಲಿ ಐಇಸಿ ಯೋಜನೆಗಳ ಪ್ರಕಾರ ಮೊತ್ತ/ವೆಚ್ಚ ಮತ್ತು ಭರಿಸಿದ ವೆಚ್ಚದ ವಿವರಗಳನ್ನು ಕೆಳಗೆ ನೀಡಲಾಗಿದೆ (**ಕೋಷ್ಟಕ–4.3**):

**ಕೋಷ್ಟಕ–4.3: ಐಇಸಿ ಚಟುವಟಿಕೆಗಳ ಮೇಲೆ ಭರಿಸಿದ ವೆಚ್ಚ**

**(₹ ಕೋಟಿಯಲ್ಲಿ)**

| ವರ್ಷ | ಐಇಸಿ ಯೋಜನೆಯ ಪ್ರಕಾರ ಮೊತ್ತ/ವೆಚ್ಚ | ಐಇಸಿ ಚಟುವಟಿಕೆಗಳ ಮೇಲೆ ಭರಿಸಿದ ವೆಚ್ಚ | ಐಇಸಿ ಯೋಜನೆಯ ಪ್ರಕಾರ ಒಟ್ಟು ವೆಚ್ಚಕ್ಕೆ ಆದ ಶೇಕಡಾವಾರು ವೆಚ್ಚ |
|---|---|---|---|
| 2019–20 | 18.75 | 3.03 | 16 |
| 2020–21 | 33.87 | 13.39 | 40 |
| 2021–22 | 37.55 | 26.03 | 69 |
| 2022–23 | 42.88 | 20.40 | 48 |
| 2023–24 | 40.76 | 4.59 | 11 |
| **ಒಟ್ಟು** | **173.81** | **67.44** | **39** |

**ಮೂಲ: ಇಲಾಖೆಯಿಂದ ಒದಗಿಸಲಾದ ಮಾಹಿತಿ (ಆಗಸ್ಟ್ 2024 ಮತ್ತು ಏಪ್ರಿಲ್ 2025)**

2019–20ರಿಂದ 2023–24ರ ಅವಧಿಯಲ್ಲಿ ಎಂ.ಜಿ.ಎನ್.ಆರ್.ಇ.ಜಿ.ಎಸ್ ಅಡಿಯಲ್ಲಿ ಐಇಸಿ ಚಟುವಟಿಕೆಗಳಿಗೆ ಮೀಸಲಿಟ್ಟ ಹಂಚಿಕೆ (₹173.81 ಕೋಟಿ) ಒಟ್ಟು ವೆಚ್ಚವಾದ ₹29,634.37 ಕೋಟಿಯ ಕೇವಲ ಶೇಕಡಾ 0.59 ರಷ್ಟಿರುವುದನ್ನು ಕೋಷ್ಟಕದಿಂದ ನಾವು ಗಮನಿಸಬಹುದು. ಭರಿಸಿದ ವೆಚ್ಚವು ಕೇವಲ ₹67.44 ಕೋಟಿ (ಶೇಕಡಾ 39) ಆಗಿದ್ದರಿಂದ ಮೀಸಲಿಟ್ಟ ₹173.81 ಕೋಟಿಗಳ ಹಂಚಿಕೆಯನ್ನು ಸಹ ಸಂಪೂರ್ಣವಾಗಿ ವೆಚ್ಚ ಮಾಡಿರಲಿಲ್ಲ. ಇದು 2019–20ರಿಂದ 2023–24ರ ಅವಧಿಯಲ್ಲಿ ಉದ್ದೇಶಿತ ವೆಚ್ಚದ ಶೇಕಡಾ 11 ರಿಂದ 69ರ ನಡುವಿನ ವ್ಯಾಪ್ತಿಯಲ್ಲಿತ್ತು. ಇಲಾಖೆಯು ಅನುಮೋದಿತ ಐಇಸಿ ಯೋಜನೆಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳಲಿಲ್ಲ ಮತ್ತು ಎಲ್ಲಾ ಯೋಜಿತ ಐಇಸಿ ಚಟುವಟಿಕೆಗಳನ್ನು ನಡೆಸಲು ವಿಫಲವಾಗಿತ್ತು ಎಂಬುದನ್ನು ಇದು ಸೂಚಿಸುತ್ತದೆ. ಯೋಜಿತ ಚಟುವಟಿಕೆಗಳಲ್ಲಿ ಪ್ರಮುಖ ಕೊರತೆಯಿದ್ದ (ಕೊರತೆಯ ಅವಧಿಯೊಂದಿಗೆ) ಚಟುವಟಿಕೆಗಳನ್ನು ಈ ಕೆಳಗೆ ವಿವರಿಸಲಾಗಿದೆ:

ಅ) ಅಭಿಯಾನದ ಚಟುವಟಿಕೆಯನ್ನು ವ್ಯಾಪಕವಾಗಿ ಪ್ರಚಾರ ಮಾಡಲು ಸೂಚನಾ ಫಲಕಗಳಲ್ಲಿ ಮಾಹಿತಿಯನ್ನು ಪ್ರದರ್ಶಿಸುವಲ್ಲಿನ ಕೊರತೆಯು ಶೇಕಡಾ 23ರಿಂದ (2021–22) ಶೇಕಡಾ 100ರ (2019–20) ವ್ಯಾಪ್ತಿಯಲ್ಲಿದ್ದಿತು.

ಆ) 2019–20, 2021–22 ಮತ್ತು 2023–24ರಲ್ಲಿ ಯೋಜನೆಯ ಪ್ರಯೋಜನಗಳ ಬಗ್ಗೆ ಪ್ರಯಾಣಿಕರಿಗೆ ತಿಳಿಸಲು ಮತ್ತು ಗ್ರಾಮಸ್ಥರಲ್ಲಿ ಜಾಗೃತಿ ಮೂಡಿಸಲು ಕೆ.ಎಸ್.ಆರ್.ಟಿ.ಸಿ ಬಸ್‌ಗಳ ಮೇಲೆ ಯೋಜನೆಯ ಬಗ್ಗೆ ಪ್ರದರ್ಶನ ಮಾಡಿರಲಿಲ್ಲ. ಬಸ್ಸುಗಳಲ್ಲಿ ಪ್ರದರ್ಶನದ ಯೋಜಿತ ಚಟುವಟಿಕೆಯನ್ನು 2020–21 ಮತ್ತು 2022–23ರ ಅವಧಿಯಲ್ಲಿ ಸಾಧಿಸಲಾಗಿತ್ತು.

ಇ) ಫಲಾನುಭವಿಗಳನ್ನು, ವಿಶೇಷವಾಗಿ ಕೋವಿಡ್–19 ಸಾಂಕ್ರಾಮಿಕ ರೋಗದ ಕಷ್ಟದಿಂದಾಗಿ ಜೀವನ ನಿರ್ವಹಣೆಗಾಗಿ ಹಳ್ಳಿಗಳಿಗೆ ಮರಳಿದ ಜನರನ್ನು ಉತ್ತೇಜಿಸಲು ಮತ್ತು ಪ್ರೇರೇಪಿಸಲು ವೀಡಿಯೊ ಸಾಕ್ಷ್ಯಚಿತ್ರಗಳನ್ನು 2019–20, 2022–23 ಮತ್ತು 2023–24ರ ಅವಧಿಯಲ್ಲಿ ತಯಾರಿಸಿರಲಿಲ್ಲ.

ಈ) 2019–20 ಮತ್ತು 2020–21ರ ಅವಧಿಯಲ್ಲಿ ಎಂ.ಜಿ.ಎನ್.ಆರ್.ಇ.ಜಿ.ಎಸ್ ಚಟುವಟಿಕೆಗಳನ್ನು ಪ್ರದರ್ಶಿಸುವ ಮತ್ತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ವಸ್ತುಪ್ರದರ್ಶನಗಳು ನಡೆದಿರಲಿಲ್ಲ.

ಉ) 100 ದಿನಗಳ ಕೌಶಲ್ಯರಹಿತ ಕೆಲಸ ಮತ್ತು ಟೋಲ್ ಫ್ರೀ ಸಹಾಯವಾಣಿ ಸೇವೆಯ ಲಭ್ಯತೆಯ ಬಗ್ಗೆ ಕೇಳುಗರಿಗೆ ತಿಳಿಸಲು (2019–20ರಿಂದ 2023–24) ಎಂ.ಜಿ.ಎನ್.ಆರ್.ಇ.ಜಿ.ಎಸ್ ಜಿಂಗಲ್ ಗಳನ್ನು ಆಕಾಶವಾಣಿಯಲ್ಲಿ ಪ್ರಸಾರ ಮಾಡಿರಲಿಲ್ಲ.

ಊ) ಕಾರ್ಯಾಚರಣಾ ಮಾರ್ಗಸೂಚಿಗಳು, 2013ರಲ್ಲಿ ಆಲೋಚಿಸಿದಂತೆ ಹಕ್ಕುಗಳು, ಅರ್ಹತೆಗಳು, ಬೇಡಿಕೆ ಕೆಲಸ ಮತ್ತು ಬೇಡಿಕೆಯ ವೇತನ ಪಾವತಿಗಳ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಕಾರ್ಮಿಕರನ್ನು ಸಜ್ಜುಗೊಳಿಸುವುದಕ್ಕೆ ಐಇಸಿ ಚಟುವಟಿಕೆಗಳನ್ನು ಬೆಂಬಲಿಸಲು ಮತ್ತು ಬಲಪಡಿಸಲು ಯಾವುದೇ ನಾಗರಿಕ ಸಮಾಜ ಸಂಸ್ಥೆಗಳನ್ನು ತೊಡಗಿಸಿಕೊಂಡಿರಲಿಲ್ಲ

**ಅನುಬಂಧ–4.4**ರಲ್ಲಿ ವಿವರಿಸಿದಂತೆ, ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿಯೂ ಇದೇ ರೀತಿಯ ಕೊರತೆಯನ್ನು ಗಮನಿಸಲಾಯಿತು.

2023–24ನೇ ಸಾಲಿನಲ್ಲಿ ಮೈಸೂರು ದಸರಾ ಕಲಾ ಪ್ರದರ್ಶನದಲ್ಲಿ ಎಂಜಿಎನ್‌ಆರ್ ಇಜಿ ಎಸ್ ಅಡಿಯಲ್ಲಿ ಗ್ರಾಮೀಣಾಭಿವೃದ್ಧಿ ಕಾರ್ಯಗಳ ಮಾದರಿಗಳನ್ನು ಪ್ರದರ್ಶಿಸಲಾಗಿತ್ತು ಮತ್ತು ಆರ್.ಡಿಪಿಆರ್ ಪ್ರದರ್ಶನವು ಪ್ರಥಮ ಬಹುಮಾನವನ್ನು ಗೆದ್ದಿತ್ತು ಎಂಬುದು ಗಮನಾರ್ಹವಾಗಿದೆ.

ಈ ಕೊರತೆಗೆ ಕಾರಣವನ್ನು ಕೋವಿಡ್–19 ಸಾಂಕ್ರಾಮಿಕ ರೋಗ ಮತ್ತು ಆಡಳಿತಾತ್ಮಕ ವೆಚ್ಚಗಳ ಬಿಡುಗಡೆಯಲ್ಲಿನ ವಿಳಂಬಕ್ಕೆ ರಾಜ್ಯ ಸರ್ಕಾರವು ಅಧ್ಯಾರೋಪಿಸಿತು (ಮೇ 2025).

### *4.7.2 ರೋಜ್ ಗಾರ್ ದಿವಸ ನಡೆಸುವಲ್ಲಿ ಕೊರತೆ*

ಕಾರ್ಯಾಚರಣಾ ಮಾರ್ಗಸೂಚಿಗಳು, 2013ರ ಕಂಡಿಕೆ–3.3 ಪ್ರತಿ ಗ್ರಾಮ ಪಂಚಾಯಿತಿಯು ಪ್ರತಿ ತಿಂಗಳಿಗೊಮ್ಮೆಯಾದರೂ 'ಉದ್ಯೋಗ ಖಾತರಿ ದಿನವನ್ನು (ರೋಜ್ಗಾರ್ ದಿವಸ್)' ಆಯೋಜಿಸಬೇಕು ಎಂದು ಷರತ್ತು ವಿಧಿಸುತ್ತದೆ. ಈ ಕಾರ್ಯಕ್ರಮದಲ್ಲಿ, ಗ್ರಾಮ ಪಂಚಾಯಿತಿಯು ಪ್ರಸ್ತುತ ಮತ್ತು ನಂತರದ ತ್ರೈಮಾಸಿಕಗಳಿಗೆ ಸಂಭಾವ್ಯ ಕಾರ್ಮಿಕರಿಂದ ಕೆಲಸಕ್ಕಾಗಿ ಅರ್ಜಿಗಳನ್ನು ಸಕ್ರಿಯವಾಗಿ ಆಹ್ವಾನಿಸಬೇಕು. ಕೆಲಸದ ಅರ್ಜಿಗಳನ್ನು ಕಾರ್ಯಗತಗೊಳಿಸಲು ಹಾಗೂ ಮಾಹಿತಿಯನ್ನು ಬಹಿರಂಗಪಡಿಸುವುದು, ಕೆಲಸದ ಹಂಚಿಕೆ, ವೇತನ ಪಾವತಿ ಮತ್ತು ನಿರುದ್ಯೋಗ ಭತ್ಯೆಗಳ ಪಾವತಿಯಂತಹ ಸಂಬಂಧಿತ ಚಟುವಟಿಕೆಗಳಿಗೆ ರೋಜ್ಗಾರ್ ದಿವಸ್ ಅನ್ನು ಮೀಸಲಿಡಬೇಕು. ರಾಜ್ಯ ಸರ್ಕಾರವು ರೋಜ್ಗಾರ್ ದಿವಸ್‌ಅನ್ನು ನಡೆಸಿದ ಬಗ್ಗೆ (ಎಎಂಸಿ, 2019–20ರ ಕಂಡಿಕೆ–4.5.1(ಡಿ) ಜಿಲ್ಲೆಗಳಿಂದ ವರದಿಗಳನ್ನು ಸ್ವೀಕರಿಸುತ್ತದೆ ಮತ್ತು ಪರಿಶೀಲಿಸುತ್ತದೆ.

ಕೊಪ್ಪಳ ಹೊರತುಪಡಿಸಿ ಪರೀಕ್ಷಾ–ತನಿಖೆ ನಡೆಸಿದ ಎಲ್ಲಾ ಜಿಲ್ಲೆಗಳು 2019–20ರಿಂದ 2023–24ರ ಅವಧಿಯಲ್ಲಿ ಮಾಸಿಕ ರೋಜ್ ಗಾರ್ ದಿವಸ್ ನಡೆಸುವ ನಿರೀಕ್ಷಿತ ಗುರಿಯನ್ನು ಸಾಧಿಸುವಲ್ಲಿ ವಿಫಲವಾಗಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಉಳಿದ ನಾಲ್ಕು ಜಿಲ್ಲೆಗಳಲ್ಲಿ (ಕಲಬುರಗಿ, ಮಂಡ್ಯ, ಶಿವಮೊಗ್ಗ ಮತ್ತು ತುಮಕೂರು) ರೋಜ್ ಗಾರ್ ದಿವಸ್ ಆಯೋಜಿಸುವಲ್ಲಿನ ಕೊರತೆಯು ಶೇಕಡಾ 7ರಿಂದ 65ರ ನಡುವಿನ ವ್ಯಾಪ್ತಿಯಲ್ಲಿದ್ದಿತು (ವಿವರಗಳನ್ನು **ಅನುಬಂಧ–4.5**ರಲ್ಲಿ ನೀಡಲಾಗಿದೆ). ತತ್ಪರಿಣಾಮವಾಗಿ, ಬೇಡಿಕೆಗಳನ್ನು ನೋಂದಾಯಿಸಲು, ಜಾಗೃತಿ ಮೂಡಿಸಲು ಮತ್ತು ಕುಂದುಕೊರತೆಗಳನ್ನು ಪರಿಹರಿಸಲು ಗ್ರಾಮ ಪಂಚಾಯಿತಿಗಳಿಗೆ ಲಭ್ಯವಿರುವ ಪ್ರಮುಖ ವಿಧಾನಗಳಲ್ಲಿ ಒಂದನ್ನು ಸಂಪೂರ್ಣವಾಗಿ ಬಳಸಿಕೊಳ್ಳುವಲ್ಲಿ ಈ ಜಿಲ್ಲೆಗಳು ವಿಫಲವಾದವು.

2019–20 ಮತ್ತು 2020–21ರ ಅವಧಿಯಲ್ಲಿನ ಕೊರತೆಗೆ ರಾಜ್ಯ ಸರ್ಕಾರ (ಮೇ 2025) ಕೋವಿಡ್–19 ಸಾಂಕ್ರಾಮಿಕ ರೋಗವನ್ನು ಉಲ್ಲೇಖಿಸಿತು. ಲೆಕ್ಕಪರಿಶೋಧನೆಗೆ ಒದಗಿಸಲಾದ ದತ್ತಾಂಶವು ಮನೆ ಮನೆಗೆ ಭೇಟಿ ನೀಡಿ ಜಂಟಿಯಾಗಿ ನಡೆಸಲಾದ ರೋಜ್ಗಾರ್ ದಿವಸ್ ಗಳನ್ನು ಒಳಗೊಂಡಿರಲಿಲ್ಲ ಎಂದೂ ತಿಳಿಸಲಾಯಿತು. ಜಿಲ್ಲಾ ಪಂಚಾಯಿತಿಗಳು ಎಂ.ಜಿ.ಎನ್.ಆರ್.ಇ.ಜಿ.ಎಸ್ ಆಯುಕ್ತರಿಗೆ ಒದಗಿಸಿದ ಮಾಹಿತಿಯಿಂದ ದತ್ತಾಂಶವನ್ನು ಸಂಗ್ರಹಿಸಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

**ಜಾಗೃತಿ ಮತ್ತು ಐಇಸಿ ಬಗ್ಗೆ ಫಲಾನುಭವಿಗಳ ಸಮೀಕ್ಷೆಯ ಫಲಿತಾಂಶಗಳು**

- 87 ಫಲಾನುಭವಿಗಳಿಗೆ (ಶೇಕಡಾ 22) ಒಂದು ಕುಟುಂಬವು ಒಂದು ವರ್ಷದಲ್ಲಿ ಎಷ್ಟು ದಿನಗಳ ಕೆಲಸಕ್ಕೆ ಅರ್ಹವಾಗಿತ್ತು ಎಂಬುದರ ಬಗ್ಗೆ ತಿಳಿದಿರಲಿಲ್ಲ
- 81 ಫಲಾನುಭವಿಗಳಿಗೆ (ಶೇಕಡಾ 20) ವೇತನ ಪಾವತಿಯ ಸಮಯದ ಬಗ್ಗೆ ತಿಳಿದಿರಲಿಲ್ಲ.
- 45 ಫಲಾನುಭವಿಗಳಿಗೆ (ಶೇಕಡಾ 11) ಜಾಬ್ ಕಾರ್ಡ್ ಪಡೆದ ನಂತರ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಉದ್ಯೋಗಕ್ಕಾಗಿ ಮನವಿ/ಬೇಡಿಕೆ ಸಲ್ಲಿಸುವ ಬಗ್ಗೆ ತಿಳಿದಿರಲಿಲ್ಲ.
- 209 ಫಲಾನುಭವಿಗಳಿಗೆ (ಶೇಕಡಾ 52) ಕೆಲಸದ ಬೇಡಿಕೆಯಿಟ್ಟ 15 ದಿನಗಳೊಳಗೆ ಕೆಲಸ ನೀಡದಿದ್ದರೆ ನಿರುದ್ಯೋಗ ಭತ್ಯೆಗೆ ಅರ್ಹರಾಗಿರುವ ಬಗ್ಗೆ ತಿಳಿದಿರಲಿಲ್ಲ.
- 234 ಫಲಾನುಭವಿಗಳಿಗೆ (ಶೇಕಡಾ 59) ಎಂಜಿಎನ್ಆರ್ ಇಜಿ ಎಸ್ ಕಾಮಗಾರಿಗಳಲ್ಲಿ ಬಳಸಲು ಅನುಮತಿಸಲಾದ ಯಂತ್ರಗಳ ಪ್ರಕಾರಗಳ ಬಗ್ಗೆ ತಿಳಿದಿರಲಿಲ್ಲ.
- ಎಂ.ಜಿ.ಎನ್.ಆರ್.ಇ.ಜಿ.ಎಸ್ ಕಾಮಗಾರಿಗಳ ವಿವರಗಳನ್ನು ಪಂಚಾಯತ್ ಕಚೇರಿ ಕಟ್ಟಡದ ಗೋಡೆಗಳು ಮತ್ತು ನೋಟೀಸ್ ಬೋರ್ಡುಗಳ ಮೇಲೆ ಚಿತ್ರಿಸಿರಲಿಲ್ಲ ಅಥವಾ ಬರೆದಿರಲಿಲ್ಲ ಎಂಬುದಾಗಿ 98 ಫಲಾನುಭವಿಗಳು (ಶೇಕಡಾ 25) ತಿಳಿಸಿದರು.

ಹೀಗೆ, ಐಇಸಿ ಚಟುವಟಿಕೆಗಳನ್ನು ನಡೆಸುವಲ್ಲಿನ ಕೊರತೆಯು ಪರಿಣಾಮಕಾರಿಯಲ್ಲದ ಸಂವಹನ ತಂತ್ರದಲ್ಲಿ ಪರಿಣಮಿಸಿತು ಮತ್ತು ಫಲಾನುಭವಿಗಳಲ್ಲಿ ಎಂಜಿಎನ್ಆರ್ ಇಜಿ ಎಸ್ ಅಡಿಯಲ್ಲಿ ಲಭ್ಯವಿರುವ ಹಕ್ಕುಗಳು/ಅರ್ಹತೆಗಳ ಕಳಪೆ ಪ್ರಚಾರಕ್ಕೆ ಕಾರಣವಾಯಿತು. ಪರೀಕ್ಷಾ–ತನಿಖೆ ನಡೆಸಿದ ಗ್ರಾಮ ಪಂಚಾಯಿತಿಗಳಲ್ಲಿ ಲೆಕ್ಕಪರಿಶೋಧನೆ ಮಾಡಿದ 400 ಫಲಾನುಭವಿಗಳ ಸಮೀಕ್ಷೆಯಲ್ಲಿಯೂ ಸಹ ಇದು ಕಂಡುಬಂದಿತು. ಎಂಜಿಎನ್ಆರ್ ಇಜಿ ಎಸ್ ಅಡಿಯಲ್ಲಿ ಮೂಲಭೂತ ಅರ್ಹತೆಗಳ ಬಗ್ಗೆ ಅರಿವಿನ ಕೊರತೆಯು ಹಕ್ಕು ಆಧಾರಿತ ಉದ್ಯೋಗ ಪಡೆಯುವುದಕ್ಕೆ ಪ್ರಮುಖ ಅಡಚಣೆಯಾಗಿತ್ತು.

**ಶಿಫಾರಸು–9: ಎಂ.ಜಿ.ಎನ್.ಆರ್.ಇ.ಜಿ.ಎಸ್ ಅಡಿಯಲ್ಲಿ ಲಭ್ಯವಿರುವ ಹಕ್ಕುಗಳು/ಅರ್ಹತೆಗಳ ಬಗ್ಗೆ ಫಲಾನುಭವಿಗಳು ಮತ್ತು ಸಾರ್ವಜನಿಕರಲ್ಲಿ ಸಾಕಷ್ಟು ಜಾಗೃತಿ ಮೂಡಿಸಲು ಐಇಸಿ ಚಟುವಟಿಕೆಗಳನ್ನು ಬಲಪಡಿಸಲು ಇಲಾಖೆಯು ಕ್ರಮ ಕೈಗೊಳ್ಳಬೇಕು**

## 4.8 ನಿರುದ್ಯೋಗ ಭತ್ಯೆ ಪಾವತಿಸದಿರುವುದು

ಅರ್ಜಿಯನ್ನು ಸ್ವೀಕರಿಸಿದ 15 ದಿನಗಳಲ್ಲಿ ಅರ್ಜಿದಾರರಿಗೆ ಉದ್ಯೋಗವನ್ನು ಒದಗಿಸದಿದ್ದರೆ, ಅವನು/ಅವಳು ದೈನಂದಿನ ನಿರುದ್ಯೋಗ ಭತ್ಯೆಗೆ ಅರ್ಹರಾಗುತ್ತಾರೆ, ಅದು ಮೊದಲ 30 ದಿನಗಳವರೆಗೆ ವೇತನ ದರದ ನಾಲ್ಕನೇ ಒಂದು ಭಾಗಕ್ಕಿಂತ ಕಡಿಮೆಯಿರಬಾರದು ಮತ್ತು ಹಣಕಾಸು ವರ್ಷದ ಉಳಿದ ಅವಧಿಯ ವೇತನ ದರದ ಅರ್ಧಕ್ಕಿಂತ ಕಡಿಮೆಯಿರಬಾರದು ಎಂದು ಕಾರ್ಯಾಚರಣಾ ಮಾರ್ಗಸೂಚಿಗಳು, 2013ರ ಕಂಡಿಕೆ–3.5 ನಿಗದಿಪಡಿಸುತ್ತದೆ. ಇದಲ್ಲದೆ, ರಾಜ್ಯ ಸರ್ಕಾರವು ಕಾರ್ಯವಿಧಾನವನ್ನು ನಿಯಂತ್ರಿಸುವ ನಿಯಮಗಳನ್ನು ರೂಪಿಸಬೇಕು ಮತ್ತು ನಿರುದ್ಯೋಗ ಭತ್ಯೆಯನ್ನು ಪಾವತಿಸಲು ಅಗತ್ಯವಾದ ಆಯವ್ಯಯವನ್ನು ಒದಗಿಸಬೇಕು.

ನಿರುದ್ಯೋಗ ಭತ್ಯೆ ಪಾವತಿಸಲು 2019–20ರಿಂದ 2023–24ರ ಅವಧಿಯಲ್ಲಿ ರಾಜ್ಯ ಸರ್ಕಾರವು ಅಗತ್ಯವಾದ ಆಯವ್ಯಯವನ್ನು ಒದಗಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನಾ ಪರಿಶೀಲನೆಯು ತೋರಿಸಿತು. ಆಯ್ದ ಗ್ರಾಮ ಪಂಚಾಯಿತಿಗಳಲ್ಲಿ ಬೇಡಿಕೆ ಸಲ್ಲಿಸಿದ ಮತ್ತು ನೀಡಲಾದ ಉದ್ಯೋಗಕ್ಕಾಗಿ ಬೇಡಿಕೆ ರಿಜಿಸ್ಟರ್ ನಂತಹ ಭೌತಿಕ ದಾಖಲೆಗಳನ್ನು ನಿರ್ವಹಿಸಿರಲಿಲ್ಲ ಅಥವಾ ಭಾಗಶಃ ನಿರ್ವಹಿಸಲಾಗಿತ್ತು. ಪರೀಕ್ಷಾ–ತನಿಖೆ ನಡೆಸಿದ 400 ಕಾಮಗಾರಿಗಳಲ್ಲಿ 172ಕ್ಕೆ (ಶೇಕಡಾ 43) ಸಂಬಂಧಿಸಿದಂತೆ ಕಾರ್ಮಿಕರು ಸಲ್ಲಿಸಿದ ಕೆಲಸದ ಬೇಡಿಕೆಯನ್ನು (ಫಾರ್ಮ್–6) ಬೇಡಿಕೆ ರಿಜಿಸ್ಟರ್ ಗಳಲ್ಲಿ ನಮೂದಿಸಿಲ್ಲದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಹೆಚ್ಚಿನ ಸಂದರ್ಭಗಳಲ್ಲಿ ಕಾರ್ಮಿಕರು ಸಲ್ಲಿಸಿದ ಫಾರ್ಮ್–6ರ

ಉಲ್ಲೇಖವಿಲ್ಲದೆ ಮಸ್ಟರ್ ರೋಲ್ ಗಳ ಪ್ರಕಾರ ಕೆಲಸದ ಬೇಡಿಕೆಯನ್ನು ಕೆಲಸಗಾರರ ನಿಯೋಜನೆಯ ದಿನವೇ ಅಥವಾ ಹಿಂದಿನ ದಿನದಂದು ನಮೂದಿಸಲಾಗಿರುವುದನ್ನು ಎಂಐಎಸ್ ದತ್ತಾಂಶದ ಪರಿಶೀಲನೆಯು ತೋರಿಸಿತು. ಆದ್ದರಿಂದ, ಕಾರ್ಮಿಕರ ಬೇಡಿಕೆಯ ದತ್ತಾಂಶದ ನಿಖರತೆಯನ್ನು ಲೆಕ್ಕಪರಿಶೋಧನೆಯಲ್ಲಿ ದೃಢೀಕರಿಸಲು ಸಾಧ್ಯವಾಗಲಿಲ್ಲ.

ಸಮೀಕ್ಷೆಗೆ ಒಳಗಾದ 400ರಲ್ಲಿ 218 ಫಲಾನುಭವಿಗಳು (ಶೇಕಡಾ 55) ಸಹ ಗ್ರಾಮ ಪಂಚಾಯಿತಿಗಳಿಗೆ ಅವರು ಸಲ್ಲಿಸಿದ ಬೇಡಿಕೆ ವಿನಂತಿಗೆ ದಿನಾಂಕದ ರಸೀದಿಯನ್ನು ನೀಡಿರಲಿಲ್ಲ ಎಂಬುದಾಗಿ ಪ್ರತಿಕ್ರಿಯಿಸಿದ್ದರು.

**ಕಾರ್ಮಿಕರ ಬೇಡಿಕೆಯನ್ನು ತಪ್ಪಾದ ಸೆರೆಹಿಡಿಯುವಿಕೆಯಿಂದಾಗಿ ಪರೀಕ್ಷಾ–ತನಿಖೆ ನಡೆಸಿದ ಗ್ರಾಮ ಪಂಚಾಯಿತಿಗಳಲ್ಲಿ ನಿರುದ್ಯೋಗ ಭತ್ಯೆಗಳ ನಿರಾಕರಣೆಯ ಉದಾಹರಣೆ**

ಪರೀಕ್ಷಾ–ತನಿಖೆ ನಡೆಸಿದ 12 ಗ್ರಾಮ ಪಂಚಾಯಿತಿಗಳ ಎಂಐಎಸ್ ನಲ್ಲಿ ನಿರ್ವಹಿಸಲಾದ ಜಾಬ್ ಕಾರ್ಡ್ /ಉದ್ಯೋಗ ರಿಜಿಸ್ಟರ್ (ಆರ್1.3) ಜೊತೆಗೆ ಆಯ್ದ ಕಾಮಗಾರಿಗಳ ಅರ್ಜಿ ನಮೂನೆಗಳಲ್ಲಿ ಲಭ್ಯವಿರುವ ಉದ್ಯೋಗಾಕಾಂಕ್ಷಿಗಳ ಅರ್ಜಿ ನಮೂನೆಗಳನ್ನು (ನಮೂನೆ–6) ಪರಿಶೀಲಿಸಿದಾಗ (ವಿವರಗಳನ್ನು **ಅನುಬಂಧ–4.6**ರಲ್ಲಿ ನೀಡಲಾಗಿದೆ) 283 ನೋಂದಾಯಿತ ಕುಟುಂಬಗಳಿಂದ ತಲಾ 100 ದಿನಗಳ ಕೆಲಸದ ಬೇಡಿಕೆ ಇದ್ದರೂ, ಅದನ್ನು ಎಂ.ಜಿ.ಎನ್.ಆರ್.ಇ.ಜಿ.ಎ ನಿಬಂಧನೆಯನ್ನು ಉಲ್ಲಂಘಿಸಿ ಅವರಿಗೆ ಉದ್ಯೋಗ ಒದಗಿಸಿರಲಿಲ್ಲ ಎಂಬುದು ತಿಳಿದುಬಂದಿತು. ಎಂಐಎಸ್ ನಲ್ಲಿ ಬೇಡಿಕೆ ಮತ್ತು ನೀಡಲಾದ ಉದ್ಯೋಗವು ಈ ಅರ್ಜಿ ನಮೂನೆಗಳೊಂದಿಗೆ ಹೊಂದಾಣಿಕೆಯಾಗುತ್ತಿರಲಿಲ್ಲ ಎಂಬುದನ್ನು ಪರಿಶೀಲನೆಯು ತೋರಿಸಿತು. ಹೀಗೆ, ಬೇಡಿಕೆಯ ದಾಖಲಿಸಿರುವ ಬಗ್ಗೆ ಯಾವುದೇ ವಿಶ್ವಾಸಾರ್ಹ ಭರವಸೆ ಇರಲಿಲ್ಲ.

ಈ 283 ಕುಟುಂಬಗಳಿಗೆ 100 ದಿನಗಳ ಅಗತ್ಯ ಉದ್ಯೋಗವನ್ನು ಒದಗಿಸದ ಕಾರಣ, ಅವರು ನಿರುದ್ಯೋಗ ಭತ್ಯೆಗೆ ಅರ್ಹರಾಗಿದ್ದರು. ಈ ಕುಟುಂಬಗಳಿಗೆ ಒಟ್ಟು ₹43.63 ಲಕ್ಷ ನಿರುದ್ಯೋಗ ಭತ್ಯೆಯನ್ನು ಪಾವತಿಸಬೇಕಾಗಿತ್ತು ಎಂದು ಲೆಕ್ಕಪರಿಶೋಧನೆ ಲೆಕ್ಕ ಹಾಕಿತು. ಬೇಡಿಕೆಯನ್ನು ತಪ್ಪಾಗಿ ಸೆರೆಹಿಡಿದಿದ್ದು, ಈ ಕುಟುಂಬಗಳಿಗೆ ಅರ್ಹ ನಿರುದ್ಯೋಗ ಭತ್ಯೆಯಿಂದ ವಂಚಿತರನ್ನಾಗಿಸಿತು.

ಹೀಗೆ, ಕಾರ್ಮಿಕರ ಬೇಡಿಕೆಯನ್ನು ತಪ್ಪಾಗಿ ದಾಖಲಿಸಿದ ಕಾರಣ ನಿರುದ್ಯೋಗ ಭತ್ಯೆಗೆ ಅರ್ಹರಾಗಿದ್ದ ಫಲಾನುಭವಿಗಳು ಅದರಿಂದ ವಂಚಿತರಾಗಿದ್ದರು. 2019–20ರಿಂದ 2023–24ರ ಅವಧಿಗೆ ಎಂಐಎಸ್ ನಲ್ಲಿ ಪಾವತಿಸಬೇಕಾಗಿದೆ ಎಂದು ಸೂಚಿಸಿದ್ದ ₹1.28 ಕೋಟಿ ನಿರುದ್ಯೋಗ ಭತ್ಯೆಗೆ ಸಂಬಂಧಿಸಿದಂತೆಯೂ ಅದನ್ನು ಪಾವತಿಸದಿರುವುದನ್ನು (ಅಕ್ಟೋಬರ್ 2024) ಲೆಕ್ಕಪರಿಶೋಧನೆಯು ಗಮನಿಸಿತು. ಫಲಾನುಭವಿಗಳ ಸಮೀಕ್ಷೆಯಲ್ಲಿ 143 ಫಲಾನುಭವಿಗಳು (ಶೇಕಡಾ 36) ಕೆಲಸಕ್ಕಾಗಿ ಬೇಡಿಕೆ/ಅರ್ಜಿ ಸಲ್ಲಿಸಿದ 15 ದಿನಗಳೊಳಗೆ ಕೆಲಸ ನೀಡದಿದ್ದರೂ ನಿರುದ್ಯೋಗ ಭತ್ಯೆಯನ್ನು ನೀಡಲಿಲ್ಲ ಎಂದು ಪ್ರತಿಕ್ರಿಯಿಸಿದ್ದು ಇದನ್ನು ದೃಢೀಕರಿಸಿತು. ಇದಲ್ಲದೆ, ಸಮಯಕ್ಕೆ ಉದ್ಯೋಗವನ್ನು ಒದಗಿಸಲು ವಿಫಲವಾದ ಕಾರ್ಯಕರ್ತರು ಅಥವಾ ಏಜೆನ್ಸಿಗಳನ್ನು ಗುರುತಿಸಲು ಮತ್ತು ಅವರಿಂದ ಹಣವನ್ನು ವಸೂಲಿ ಮಾಡಲು ಯಾವುದೇ ಕ್ರಮ ಕೈಗೊಂಡಿರಲಿಲ್ಲ.

ಇಲಾಖೆಯು ನಿರುದ್ಯೋಗ ಭತ್ಯೆಯನ್ನು ಪಾವತಿಸದಿರುವುದಕ್ಕೆ ಈ ಕೆಳಗಿನ ಕಾರಣಗಳನ್ನು ಅಧ್ಯಾರೋಪಿಸಿತು (ಜುಲೈ 2024) (i) ಕಾರ್ಮಿಕರಿಂದ ನಿರುದ್ಯೋಗ ಭತ್ಯೆಯನ್ನು ಪಾವತಿಸಲು ಯಾವುದೇ ಬೇಡಿಕೆ ಇರಲಿಲ್ಲ, (ii) ನಿರುದ್ಯೋಗ ಭತ್ಯೆ ಖಾತೆಯ ಸಮಸ್ಯೆ ಮತ್ತು ಪಿಎಫ್ಎಂಎಸ್ ನೊಂದಿಗೆ ಅದರ ಮ್ಯಾಪಿಂಗ್ ಮಾಡುವುದು ಮತ್ತು (iii) ಗ್ರಾಮ ಪಂಚಾಯತಿಯ ಉನ್ನತೀಕರಣದಿಂದಾಗಿ ಮರಣಹೊಂದಿರುವ ಕೆಲಸಗಾರ/ಅಸ್ತಿತ್ವದಲ್ಲಿಲ್ಲದ ಜಾಬ್ ಕಾರ್ಡ್ ಅಥವಾ ಕುಟುಂಬವು ಗ್ರಾಮ ಪಂಚಾಯಿತಿಯಿಮದ ಹೊರಗೆ ಹೋಗಿರುವುದು.

ನಿರುದ್ಯೋಗ ಭತ್ಯೆ ಕಾನೂನುಬದ್ಧ ಹಕ್ಕಾಗಿದ್ದು ಮತ್ತು ಅದರ ಪಾವತಿಯನ್ನು ಸ್ವಯಂಚಾಲಿತ ಗೊಳಿಸಬೇಕಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಯಾವುದೇ ಆಯವ್ಯಯ ಅವಕಾಶವಿಲ್ಲದ ಕಾರಣ, ಎಂ.ಜಿ.ಎನ್.ಆರ್.ಇ.ಜಿ.ಎಸ್‌ನ ಈ ಪ್ರಮುಖ ಷರತ್ತನ್ನು ಯೋಜನೆಯ ಅನುಷ್ಠಾನದಲ್ಲಿ ಸೇರಿಸಿರಲಿಲ್ಲ.

ನಿರುದ್ಯೋಗ ಭತ್ಯೆ ಪಾವತಿಗೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಜಿಲ್ಲೆಗಳು /ಬ್ಲಾಕ್ ಗಳು/ಗ್ರಾಮ ಪಂಚಾಯಿತಿಗಳಿಗೆ ನಿರ್ದೇಶನಗಳನ್ನು ನೀಡಲಾಗುವುದು ಎಂದು ರಾಜ್ಯ ಸರ್ಕಾರ ತಿಳಿಸಿತು (ಮೇ 2025).

**ಶಿಫಾರಸು–10: ಕಾರ್ಮಿಕರ ಬೇಡಿಕೆಯನ್ನು ಗ್ರಾಮ ಪಂಚಾಯಿತಿಗಳು ನಿಖರವಾಗಿ ದಾಖಲಿಸಬೇಕು ಮತ್ತು ಅರ್ಹ ನಿರುದ್ಯೋಗ ಭತ್ಯೆಯನ್ನು ಲೆಕ್ಕಾಚಾರ ಮಾಡಲು ವೇತನದ ವಾಸ್ತವಿಕ ನಿಬಂಧನೆಯೊಂದಿಗೆ ಹೊಂದಿಸಬೇಕು. ನಿರುದ್ಯೋಗ ಭತ್ಯೆ ಪಾವತಿಗೆ ಆಯವ್ಯಯ ಹಂಚಿಕೆಯನ್ನು ಒದಗಿಸಲು ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಬೇಕು.**

# ಅಧ್ಯಾಯ–V

# ಕಾಮಗಾರಿಗಳ ಕಾರ್ಯಗತಗೊಳಿಸುವಿಕೆ

## ಅಧ್ಯಾಯ V

### ಕಾಮಗಾರಿಗಳ ಕಾರ್ಯಗತಗೊಳಿಸುವಿಕೆ

ಗಮನಾರ್ಹ ಸಂಖ್ಯೆಯ ಒಂದು ವರ್ಷಕ್ಕೂ ಹೆಚ್ಚು ಕಾಲ ಅಪೂರ್ಣವಾಗಿ ಉಳಿದಿರುವ ಕಾಮಗಾರಿಗಳನ್ನು ಹೊರತುಪಡಿಸಿ, ಯೋಜನೆಯಡಿ ಹೆಚ್ಚಿನ ಸಂಖ್ಯೆಯ ಅನುಮೋದಿತ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿಲ್ಲ. ಎನ್‌ಆರ್‌ಇಜಿಎಸಾಫ್ಟ್ ಸಹ ಅಪೂರ್ಣ/ಉಳಿದಿರುವ ಕಾಮಗಾರಿಗಳ ನಿಖರವಾದ ವಿವರಗಳನ್ನು ಸೆರೆಹಿಡಿಯಲಿಲ್ಲವಾಗಿ ಅದು ಅಪೂರ್ಣ ವರದಿಯನ್ನು ಸೂಚಿಸುತ್ತಿತ್ತು. ಸಂಬಂಧಿತ ಇಲಾಖೆಗಳಲ್ಲಿ ನಿಗದಿತ ಸಾಂಸ್ಥಿಕ ಬೆಂಬಲದ ಅನುಪಸ್ಥಿತಿ ಮತ್ತು ಸಮನ್ವಯದ ಕೊರತೆಯಿಂದಾಗಿ ಇತರ ಇಲಾಖೆಗಳ ತಾಂತ್ರಿಕ/ಆರ್ಥಿಕ ಸಂಪನ್ಮೂಲಗಳನ್ನು ಬಳಸಿಕೊಂಡು ಎಂಜಿಎನ್‌ಆರ್‌ಇಜಿಎಸ್ ಕಾಮಗಾರಿಗಳನ್ನು ಒಟ್ಟುಗೂಡಿಸುವುದು ಪರಿಣಾಮಕಾರಿ ಯಾಗಿರಲಿಲ್ಲ. ವಸತಿ ಕಾಮಗಾರಿಗಳಡಿಯಲ್ಲಿ ಈಗಾಗಲೇ ಪೂರ್ಣಗೊಂಡ ಮನೆಗಳಿಗೆ ಪಾವತಿ, ಅನರ್ಹ ಫಲಾನುಭವಿಗಳಿಗೆ ಪಾವತಿ, ನಿರ್ಮಾಣವನ್ನು ಕೈಗೊಳ್ಳದೆ ಪಾವತಿ, ನಿಗದಿತ ಮಿತಿಗಿಂತ ಹೆಚ್ಚಿನ ಪಾವತಿ, ಮುಂತಾದ ಮೋಸದ ವಹಿವಾಟುಗಳನ್ನು ಗಮನಿಸಲಾಯಿತು. ಹಾಗೆಯೇ, ಘನತ್ಯಾಜ್ಯ ನಿರ್ವಹಣಾ ಶೆಡ್‌ಗಳು, ಚೆಕ್ ಡ್ಯಾಮ್‌ಗಳು ಮತ್ತು ಸಾಮಾಜಿಕ ಅರಣ್ಯೀಕರಣದ ಅಡಿಯಲ್ಲಿ ಸಸಿಗಳನ್ನು ಬೆಳೆಸುವುದಕ್ಕೆ ಸಂಬಂಧಿಸಿದ ಪರೀಕ್ಷಾ-ತನಿಖೆ ನಡೆಸಿದ ಕಾಮಗಾರಿಗಳಡಿಯಲ್ಲಿ ನಕಲಿ ದಾಖಲೆಗಳು ಮತ್ತು ಮೋಸದ ಪಾವತಿಗಳನ್ನು ಗಮನಿಸಲಾಯಿತು..

ಜಿಲ್ಲಾ/ತಾಲ್ಲೂಕು ಮಟ್ಟದಲ್ಲಿ ತಾಂತ್ರಿಕ ಸಮಿತಿಗಳನ್ನು ರಚಿಸದಿರುವುದು, ಅವಾಸ್ತವಿಕ ಅಂದಾಜುಗಳನ್ನು ಸಿದ್ಧಪಡಿಸುವುದು, ಅಸಮರ್ಪಕ ಕಾರ್ಯನಿರ್ವಹಣೆ ಮತ್ತು ಕಾಮಗಾರಿಗಳ ಮೇಲೆ ಅನಿಯಮಿತ ವೆಚ್ಚ ಮುಂತಾದ ಅಕ್ರಮಗಳಲ್ಲಿ ಪರಿಣಮಿಸಿತು. ಈ ಕಾಮಗಾರಿಗಳಲ್ಲಿ ಫಲಾನುಭವಿಗಳ ಕಡ್ಡಾಯ ಉದ್ಯೋಗದ ಪ್ರಕ್ರಿಯೆ ಇಲ್ಲದೆ ವೈಯಕ್ತಿಕ ಫಲಾನುಭವಿಗಳಿಗೆ ಪ್ರಯೋಜನವಾಗುವ ಕಾಮಗಾರಿಗಳನ್ನು ಕಾರ್ಯಗತಗೊಳಿಸಲಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಯೋಜನೆಯ ಮಾರ್ಗಸೂಚಿಗಳಲ್ಲಿ ನಿಗದಿಪಡಿಸಿದಂತೆ ಅಂದಾಜುಗಳನ್ನು ಪರಿಷ್ಕರಿಸದ ಕಾರಣ ಮಂಜೂರಾತಿಗಿಂತ ಹೆಚ್ಚಿನ ವೆಚ್ಚವನ್ನು ಭರಿಸಲಾಗಿತ್ತು. ಮಂಜೂರಾದ ಅಂದಾಜಿನ ಶೇಕಡಾ ಐದಕ್ಕಿಂತ ಕಡಿಮೆ ವೆಚ್ಚವಾಗಿದ್ದರೂ ಸಹ ಕಾಮಗಾರಿಗಳು ಪೂರ್ಣಗೊಂಡಿವೆ ಎಂದು ಸೂಚಿಸಲಾಗಿತ್ತು. ಸರ್ಕಾರದ ಸೂಚನೆಗಳನ್ನು ಉಲ್ಲಂಘಿಸಿ ವೈಯಕ್ತಿಕ ಕೆಲಸಗಳಿಗೆ ಸಾಮಗ್ರಿ ವೆಚ್ಚಗಳನ್ನು ಫಲಾನುಭವಿಗಳ ಬದಲಿಗೆ ನೇರವಾಗಿ ಮಾರಾಟಗಾರರಿಗೆ ಪಾವತಿಸಲಾಯಿತು.

ಈ ಯೋಜನೆಯಡಿ ಕೃಷಿ ಮತ್ತು ಸಂಬಂಧಿತ ಕಾಮಗಾರಿಗಳಿಗೆ ನಿಗದಿಪಡಿಸಿದ್ದ ಶೇಕಡಾ 60ರಷ್ಟು ಗುರಿಯನ್ನು ಬಹುತೇಕ ಜಿಲ್ಲೆಗಳಲ್ಲಿ ಸಾಧಿಸಿರಲಿಲ್ಲ. ಕರ್ನಾಟಕದಲ್ಲಿ ಕ್ಲಸ್ಟರ್ ಫೆಸಿಲಿಟೇಶನ್ ಯೋಜನೆಗೆ ಅಗತ್ಯವಾದ ಆರ್ಥಿಕ ನೆರವು ಸಿಗಲಿಲ್ಲ ಮತ್ತು ಅನುಷ್ಠಾನಗೊಂಡ ತಾಲ್ಲೂಕುಗಳಲ್ಲಿ ಗುರುತಿಸಲಾದ ಬಹುಪಾಲು ಗುರಿಗಳನ್ನು ಸಾಧಿಸುವಲ್ಲಿ ವಿಫಲತೆಯಿದ್ದಿತು.

ಎನ್‌ಆರ್‌ಇಜಿಎಸಾಫ್ಟ್ ಅನ್ನು ಬಳಸದೆ ಮಸ್ಟರ್ ರೋಲ್‌ಗಳನ್ನು ಮುದ್ರಿಸಿರುವುದು ಮತ್ತು ಅಂತಹ ತಿದ್ದಿದ ಮಸ್ಟರ್ ರೋಲ್‌ಗಳ ಮೇಲೆ ಪಾವತಿ ಮಾಡಿರುವಂತಹ ಅಕ್ರಮಗಳನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇಲಾಖಾ ಅಧಿಕಾರಿಗಳೊಂದಿಗೆ ನಡೆಸಲಾದ ಜಂಟಿ ಭೌತಿಕ ಪರಿಶೀಲನೆಯು ಯೋಜನೆಯಡಿಯಲ್ಲಿ ರಚಿಸಲಾದ ಆಸ್ತಿಗಳು ಅಸ್ತಿತ್ವದಲ್ಲಿಲ್ಲದಿರುವುದನ್ನು ಅಥವಾ ಆಸ್ತಿಗಳು ನಿಷ್ಕ್ರಿಯವಾಗಿರುವುದನ್ನು ಬಹಿರಂಗಪಡಿಸಿತು. ಕಾಮಗಾರಿಗಳ ದಾಖಲೆಗಳ ಪರೀಕ್ಷಾ-ತನಿಖೆಯು ಜಿಯೋ-ಟ್ಯಾಗಿಂಗ್, ಮೂರು ಹಂತದ ಛಾಯಾಚಿತ್ರಗಳು, ಗುಣಮಟ್ಟ ಪರಿಶೀಲನೆ, ಯೋಜನೆಯ ಪೂರ್ಣಗೊಳಿಸುವಿಕೆಯ ವರದಿ ಮುಂತಾದ ನಿಗದಿತ ಅಗತ್ಯತೆಗಳ ಅನುಪಸ್ಥಿತಿಯನ್ನು ಬಹಿರಂಗಪಡಿಸಿತು.

ಎಂಜಿಎನ್‌ಆರ್‌ಇಜಿಎಸ್ ಬಾಳಿಕೆ ಬರುವ ಸ್ವತ್ತುಗಳನ್ನು ಸೃಷ್ಟಿಸುವ ಮೂಲಕ ಗ್ರಾಮೀಣ ಪ್ರದೇಶಗಳನ್ನು ಪರಿವರ್ತಿಸುವ ಸಾಮರ್ಥ್ಯವನ್ನು ಹೊಂದಿದೆ ಮತ್ತು ಗ್ರಾಮೀಣ ಬಡವರ ಜೀವನೋಪಾಯದ ಭದ್ರತೆಯನ್ನು ಹೆಚ್ಚಿಸುವುದಲ್ಲದೆ ಗ್ರಾಮೀಣ ಪ್ರದೇಶಗಳಲ್ಲಿ ಗಣನೀಯವಾಗಿ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸುವಲ್ಲಿ ಪರಿಣಮಿಸುತ್ತದೆ. ಗ್ರಾಮ ಪಂಚಾಯಿತಿಗಳು ಮತ್ತು ಇತರ ಸಂಬಂಧಿತ ಇಲಾಖೆಗಳಲ್ಲಿ ಲಭ್ಯವಿರುವ ಇತರ ಕಾರ್ಯಕ್ರಮಗಳು/ಯೋಜನೆಗಳ ಸಂಪನ್ಮೂಲಗಳೊಂದಿಗೆ ಎಂಜಿಎನ್‌ಆರ್‌ಇಜಿಎಸ್ ಕಾಮಗಾರಿಗಳನ್ನು ಒಗ್ಗೂಡಿಸುವ ಮೂಲಕ ಬಾಳಿಕೆ ಬರುವ ಸ್ವತ್ತುಗಳ ಸೃಷ್ಟಿ ಮತ್ತು ಗ್ರಾಮೀಣ ಕುಟುಂಬಗಳ ಜೀವನೋಪಾಯ ಭದ್ರತೆಯನ್ನು ಸುಗಮಗೊಳಿಸಬಹುದು. ಈ ಸಂಪನ್ಮೂಲಗಳು ಹಣದ ಲಭ್ಯತೆಗೆ ಮಾತ್ರ ಸೀಮಿತವಾಗಿರದೇ ತಾಂತ್ರಿಕ ಪರಿಣತಿ ಮತ್ತು ಸಂಬಂಧಿತ ಇಲಾಖೆಗಳ ಅಧಿಕಾರಿಗಳಿಗೆ ನೀಡಬಹುದಾದ ಜ್ಞಾನವನ್ನು ಒಳಗೊಂಡಿರುತ್ತವೆ.

ಎಂಜಿಎನ್‌ಆರ್‌ಇಜಿಎಯ ಸೆಕ್ಷನ್–4(3), ಅನುಸೂಚಿ–1 ಕೆಳಗಿನ **ನಕ್ಷೆ–5.1** ರಲ್ಲಿ ತೋರಿಸಿರುವಂತೆ ಎಂಜಿಎನ್‌ಆರ್‌ಇಜಿಎಸ್ ಅಡಿಯಲ್ಲಿ ಕೈಗೆತ್ತಿಕೊಂಡ ಕಾಮಗಾರಿಗಳನ್ನು ನಾಲ್ಕು ವರ್ಗಗಳಾಗಿ ವರ್ಗೀಕರಿಸಿದೆ:

**ನಕ್ಷೆ–5.1: ಎಂಜಿಎನ್‌ಆರ್‌ಇಜಿಎಸ್ ಅಡಿಯಲ್ಲಿ ಕಾಮಗಾರಿಗಳ ವರ್ಗಗಳು**




**ಮೂಲ: ಎಂಜಿಎನ್‌ಆರ್‌ಇಜಿಎ, 2005**

### 5.1 ಕಾಮಗಾರಿಗಳ ಪೂರ್ಣಗೊಂಡ ಸ್ಥಿತಿ

ಕಾರ್ಯಾಚರಣಾ ಮಾರ್ಗಸೂಚಿಗಳು, 2013ರ ಕಂಡಿಕೆ 7.17 ಅಪೂರ್ಣ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕಾರ್ಯತಂತ್ರ ತಯಾರಿಸಬೇಕು ಎಂದು ನಿಗದಿಪಡಿಸಿದೆ. ಇದಲ್ಲದೆ, ಕಂಡಿಕೆ–7.17.4 ಕಾಮಗಾರಿಗಳನ್ನು ಪ್ರಸ್ತಾವಿಸಿದ ಒಂದು ಹಣಕಾಸು ವರ್ಷಕ್ಕಿಂತ ಹೆಚ್ಚು ಕಾಲ ಕಾಮಗಾರಿಗಳನ್ನು ಪೂರ್ಣಗೊಳಿಸದಿರುವ ಯೋಜನಾ ಅನುಷ್ಠಾನ ಏಜೆನ್ಸಿಗಳಿಗೆ (ಪಿಐಎಗಳು) ಯಾವುದೇ ಮಂಜೂರಾತಿಯನ್ನು ನೀಡಬಾರದು ಎಂದು ಷರತ್ತು ವಿಧಿಸುತ್ತದೆ. ಹೀಗೆ, ಸ್ಥಳೀಯ ಸಮುದಾಯಕ್ಕೆ ಅರ್ಥಪೂರ್ಣ ಪ್ರಯೋಜನಗಳನ್ನು ನೀಡುವುದನ್ನು ಖಚಿತಪಡಿಸಿಕೊಳ್ಳಲು ಪ್ರಾರಂಭಿಸಿದ ಕಾಮಗಾರಿಗಳನ್ನು ಸಮಯೋಚಿತವಾಗಿ ಪೂರ್ಣಗೊಳಿಸಬೇಕಾಗಿತ್ತು.

2019–20ರಿಂದ 2023–24ರ ಅವಧಿಯಲ್ಲಿ ರಾಜ್ಯ ಮಟ್ಟದಲ್ಲಿ ಅನುಮೋದಿಸಲ್ಪಟ್ಟ, ಪೂರ್ಣಗೊಂಡ ಮತ್ತು ಪ್ರಗತಿಯಲ್ಲಿರುವ ಕಾಮಗಾರಿಗಳ ವಿವರಗಳನ್ನು **ಕೋಷ್ಟಕ–5.1**ರಲ್ಲಿ ನೀಡಲಾಗಿದೆ.

**ಕೋಷ್ಟಕ–5.1: ಅನುಮೋದಿತ ಮತ್ತು ಪೂರ್ಣಗೊಂಡ ಕಾಮಗಾರಿಗಳ ವಿವರಗಳು (ರಾಜ್ಯ ಮಟ್ಟದಲ್ಲಿ)**

**(₹ ಕೋಟಿಯಲ್ಲಿ)**

| ವರ್ಷ | ಅನುಮೋದಿತ ಕಾಮಗಾರಿಗಳು | | ಪೂರ್ಣಗೊಂಡವು/ ಭೌತಿಕವಾಗಿ ಪೂರ್ಣಗೊಂಡವ ಕಾಮಗಾರಿಹಳು[18] | | ಪ್ರಗತಿಯಲ್ಲಿರುವ ಕಾಮಗಾರಿಗಳು | | ಕೈಗೆತ್ತಿಕೊಳ್ಳದ ಕಾಮಗಾರಿಗಳು |
|---|---|---|---|---|---|---|---|
| | ಸಂಖ್ಯೆ | ಮಂಜೂರಾತಿ ವೆಚ್ಚ | ಸಂಖ್ಯೆ (%) | ವೆಚ್ಚ | ಸಂಖ್ಯೆ | ವೆಚ್ಚ | ಸಂಖ್ಯೆ (%) |
| 2019–20 | 6,12,330 | 3,274.21 | 3,51,883 (57) | 3,260.13 | 629 | 14.08 | 2,59,818 (42) |
| 2020–21 | 13,39,640 | 4,223.73 | 7,01,409 (52) | 4,222.51 | 74 | 1.22 | 6,38,157 (48) |
| 2021–22 | 15,10,478 | 5,901.75 | 7,48,584 (50) | 5,731.06 | 18,064 | 170.69 | 7,43,830 (49) |
| 2022–23 | 13,77,595 | 6,208.73 | 5,77,046 (42) | 4,218.25 | 2,37,579 | 1,990.48 | 5,62,970 (41) |
| 2023–24 | 13,60,674 | 7,286.74 | 2,06,449 (15) | 1,962.65 | 6,81,478 | 5,324.08 | 4,72,747 (35) |
| **ಒಟ್ಟು** | **62,00,717** | **26,895.16** | **25,85,371 (42)** | **19,394.61** | **9,37,824** | **7,500.55** | **26,77,522 (43)** |

**ಮೂಲ: ಇಲಾಖೆ ಒದಗಿಸಿದ ಮಾಹಿತಿ (ಮೇ 2024)**

ಪೂರ್ಣಗೊಂಡ/ಭೌತಿಕವಾಗಿ ಪೂರ್ಣಗೊಂಡ ಕಾಮಗಾರಿಗಳ ಶೇಕಡಾವಾರಿನಲ್ಲಿ ಇಳಿಕೆ ಕಂಡುಬಂದಿತ್ತು ಮತ್ತು ಪ್ರಸ್ತುತ ನಡೆಯುತ್ತಿರುವ ಕಾಮಗಾರಿಗಳ ವೆಚ್ಚವು ಒಟ್ಟು ಅನುಮೋದಿತ ವೆಚ್ಚದ ಶೇಕಡಾ 28ರಷ್ಟಿತ್ತು. ಅಪೂರ್ಣ ಕಾಮಗಾರಿಗಳು ವ್ಯಕ್ತಿಗೆ ವೇತನದ ನಿರೀಕ್ಷಿತ ಪ್ರಯೋಜನಗಳನ್ನು ವಿಳಂಬಗೊಳಿಸುವುದಲ್ಲದೆ, ಅಪೂರ್ಣ ಆಸ್ತಿಗಳು ಸಮುದಾಯಕ್ಕೆ ನಿಷ್ಪ್ರಯೋಜಕವಾಗಿ ಉಳಿಯುತ್ತವೆ. ಇದಲ್ಲದೆ, ಕೈಗೆತ್ತಿಕೊಳ್ಳದ ಕಾಮಗಾರಿಗಳ ಸಂಖ್ಯೆ (₹26.77 ಲಕ್ಷ) ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆಗಿಂತ ಹೆಚ್ಚಾಗಿದ್ದು, ಇದು ಈಗಾಗಲೇ ಕೈಗೆತ್ತಿಕೊಂಡ ಕಾಮಗಾರಿಗಳನ್ನು ಪೂರ್ಣಗೊಳಿಸುವ ಬದಲು ವಾಡಿಕೆಯ ರೀತಿಯಲ್ಲಿ ಕಾಮಗಾರಿಗಳನ್ನು ಅನುಮೋದಿಸಲಾಗುತ್ತಿದೆ ಎಂಬುದನ್ನು ತೋರಿಸುತ್ತದೆ. ಹೀಗೆ, ಬಾಳಿಕೆ ಬರುವ ಸ್ವತ್ತುಗಳನ್ನು ಸೃಷ್ಟಿಸುವ ಮೂಲಕ ಗ್ರಾಮಸ್ಥರ ಜೀವನದ ಗುಣಮಟ್ಟವನ್ನು ಸುಧಾರಿಸುವ ಯೋಜನೆಯಡಿಯಲ್ಲಿನ ಪ್ರಯತ್ನಗಳು ಕಾಮಗಾರಿಗಳನ್ನು ಸಮಯಕ್ಕೆ ಸರಿಯಾಗಿ ಪೂರ್ಣಗೊಳಿಸ ದಿದ್ದುದರಿಂದ ಗುರಿ ತಲುಪಲು ಸಾಧ್ಯವಾಗಲಿಲ್ಲ. ಒಂದು ಹಣಕಾಸು ವರ್ಷಕ್ಕಿಂತ ಹೆಚ್ಚು ಕಾಲ ಕಾಮಗಾರಿಗಳು ಅಪೂರ್ಣವಾಗಿದ್ದರೂ ಹೊಸ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು ಕಾರ್ಯಾಚರಣಾ ಮಾರ್ಗಸೂಚಿಗಳ ಕಂಡಿಕೆ–7.17.4ರ ನಿಬಂಧನೆಗಳನ್ನು ಉಲ್ಲಂಘನೆಯಾಗಿತ್ತು.

2019–20ರಿಂದ 2021–22ರ ಅವಧಿಯಲ್ಲಿ ಬಹುತೇಕ ಸಂಪೂರ್ಣ ಮಂಜೂರಾದ ವೆಚ್ಚವನ್ನು ಶೇಕಡಾ 50ರಿಂದ 57ರಷ್ಟು ಕಾಮಗಾರಿಗಳಿಗೆ ಭರಿಸಲಾಗಿತ್ತು ಎಂಬುದನ್ನು ಗಮನಿಸಬಹುದು. ಇದು ಅನುಕ್ರಮವಾಗಿ **ಕಂಡಿಕೆ–5.4** ಮತ್ತು **5.7**ರಲ್ಲಿ ವಿವರಿಸಿದಂತೆ ಅವಾಸ್ತವಿಕ ಅಂದಾಜುಗಳ ತಯಾರಿಕೆ ಅಥವಾ ಅಂದಾಜು ವೆಚ್ಚಗಳ ಪರಿಷ್ಕರಣೆ ಮಾಡದಿರುವುದನ್ನು ಸಾಬೀತುಪಡಿಸುತ್ತದೆ.

2019–20ರಿಂದ 2023–24ರವರೆಗಿನ ಅವಧಿಯಲ್ಲಿ ಪರೀಕ್ಷಾ–ತನಿಖೆ ನಡೆಸಿದ ಐದು ಜಿಲ್ಲೆಗಳಲ್ಲಿ ₹1,007.83 ಕೋಟಿ ವೆಚ್ಚವನ್ನು ಒಳಗೊಂಡ 1,22,868 ಕಾಮಗಾರಿಗಳು ಒಂದು ಹಣಕಾಸು ವರ್ಷಕ್ಕೂ ಹೆಚ್ಚು ಕಾಲ ಅಪೂರ್ಣವಾಗಿದ್ದವು ಎಂದು ಎಂಐಎಸ್ ಆರ್6.12 ವರದಿಗಳ ಪರಿಶೀಲನೆಯು ತೋರಿಸಿತು. 1,22,868ರಲ್ಲಿ 36,644 ಕಾಮಗಾರಿಗಳ ಪ್ರಾರಂಭದ ದಿನಾಂಕಗಳು ಎಂಐಎಸ್ ವರದಿಗಳಲ್ಲಿ ಉಲ್ಲೇಖಿಸಲಾದ ಕಾಮಗಾರಿಗಳ ಪ್ರಾರಂಭದ ಹಣಕಾಸು ವರ್ಷಕ್ಕೆ (2019–20ರಿಂದ 2023–24) ಅನುಗುಣವಾಗಿರಲಿಲ್ಲ ಎಂಬುದು ಲೆಕ್ಕಪರಿಶೋಧನಾ ಪರಿಶೀಲನೆಯಿಂದ ತಿಳಿದುಬಂದಿತು. ಈ 36,644 ಕಾಮಗಾರಿಗಳ ಪೈಕಿ 1,968 ಕಾಮಗಾರಿಗಳ ಪ್ರಾರಂಭದ ದಿನಾಂಕಗಳು ಹಿಂದಿನ ಅವಧಿ 2008–09ರಿಂದ 2018–19ರವರೆಗಿನ ಅವಧಿಗೆ ಸಂಬಂಧಿಸಿದ್ದಾಗಿದ್ದವು. 14,228 ಕಾಮಗಾರಿಗಳಲ್ಲಿ ಕಾಮಗಾರಿ ಪ್ರಾರಂಭದ

[18] ಪೂರ್ಣಗೊಂಡ ಆದರೆ ಇನ್ನೂ ಎಂಐಎಸ್ ನಲ್ಲಿ ಇಂದೀಕರಿಸದ ಕಾಮಗಾರಿಗಳು.

ದಿನಾಂಕಗಳನ್ನು ನಮೂದಿಸಿರಲಿಲ್ಲ ಎಂಬುದನ್ನು ಎಂಐಎಸ್ ನಿಂದ ಗಮನಿಸಲಾಯಿತು. ಹೀಗೆ, ಉಳಿದಿರುವ/ಅಪೂರ್ಣ ಕಾಮಗಾರಿಗಳಿಗೆ ಸಂಬಂಧಿಸಿದ ದತ್ತಾಂಶವು ಸರಿಯಾಗಿರಲಿಲ್ಲ. ಇದು ಸಾರ್ವಜನಿಕ ಡೋಮೆನ್ ನಲ್ಲಿ ಲಭ್ಯವಿರುವ ದತ್ತಾಂಶದ ವಿಶ್ವಾಸಾರ್ಹತೆ ಮತ್ತು ಸಮಗ್ರತೆಯ ಬಗ್ಗೆ ಅನುಮಾನವನ್ನು ಹುಟ್ಟುಹಾಕುತ್ತದೆ. ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ 2019–20ರಿಂದ 2023–24ರ ಅವಧಿಯಲ್ಲಿ ಪ್ರಾರಂಭವಾದ 9,266 ಕಾಮಗಾರಿಗಳು ಅಪೂರ್ಣವಾಗಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು, ಈ ಕಾಮಗಾರಿಗಳ ವೆಚ್ಚವು ಮಂಜೂರಾದ ಅಂದಾಜು ವೆಚ್ಚದ ಶೇಕಡಾ ಐದಕ್ಕಿಂತ ಕಡಿಮೆಯಿದ್ದು ಸಮಯ ಕಳೆದಂತೆ ವ್ಯರ್ಥವಾಗಬಹುದು. **ಅನುಬಂಧ–5.1**ರಲ್ಲಿ ವಿವರಿಸಿದಂತೆ, ಈ ಕಾಮಗಾರಿಗಳ ವೆಚ್ಚವು ₹3.62 ಕೋಟಿಗಳಾಗಿತ್ತು (ಆಗಸ್ಟ್ 2024).

ಶೇಕಡಾ5ಕ್ಕಿಂತ ಕಡಿಮೆ ವೆಚ್ಚ ಭರಿಸಿರುವ ಅಪೂರ್ಣ ಕಾಮಗಾರಿಗಳ ವಿಷಯವನ್ನು ಪರಿಶೀಲಿಸಲಾಗುತ್ತಿದೆ ಎಂದು ಇಲಾಖೆ ತಿಳಿಸಿತು (ನವೆಂಬರ್ 2024). ದೀರ್ಘಕಾಲದಿಂದ ಬಾಕಿ ಉಳಿದಿರುವ ಕಾಮಗಾರಿಗಳನ್ನು ಸ್ಥಗಿತಗೊಳಿಸಲಾಗಿದೆ ಎಂದು ಗುರುತಿಸಲು ಮತ್ತು ಸಂಬಂಧಪಟ್ಟ ಪ್ರಾಧಿಕಾರದಿಂದ ಭರಿಸಿದ ವೆಚ್ಚವನ್ನು ವಸೂಲಿ ಮಾಡಲು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂದೂ ಸಹ ತಿಳಿಸಲಾಯಿತು.

**ಶಿಫಾರಸು–11: ಇಲಾಖೆಯು ಬಾಕಿ ಇರುವ ಕಾಮಗಾರಿಗಳ ಸ್ಥಿತಿಯನ್ನು ಪರಿಶೀಲಿಸಬೇಕು ಮತ್ತು ಅವುಗಳನ್ನು ಪೂರ್ಣಗೊಳಿಸಲು ಅಥವಾ ಸ್ಥಗಿತಗೊಳಿಸಲು ಕಾರ್ಯ ಯೋಜನೆಯನ್ನು ಸಿದ್ಧಪಡಿಸಬೇಕು ಮತ್ತು ವಿತ್ತೀಯ ನಷ್ಟಕ್ಕೆ ಹೊಣೆಗಾರಿಕೆಯನ್ನು ನಿಗದಿಪಡಿಸಬೇಕು.**

## 5.2 ಒಮ್ಮುಖ ಕಾಮಗಾರಿಗಳ ಅನುಷ್ಠಾನ

ಕಾರ್ಯಾಚರಣಾ ಮಾರ್ಗಸೂಚಿಗಳು, 2013ರ ಅಧ್ಯಾಯ–15ರ ಪ್ರಕಾರ, ಎಂಜಿಎನ್ಆರ್ಇಜಿಎಸ್ ಉದ್ದೇಶಗಳನ್ನು, ಅಂದರೆ ಬಾಳಿಕೆ ಬರುವ ಸ್ವತ್ತುಗಳ ಸೃಷ್ಟಿ ಮತ್ತು ಗ್ರಾಮೀಣ ಕುಟುಂಬಗಳ ಜೀವನೋಪಾಯವನ್ನು ಭದ್ರಪಡಿಸುವುದನ್ನು, ಗ್ರಾಮ ಪಂಚಾಯಿತಿಗಳು ಮತ್ತು ಇತರ ಇಲಾಖೆಗಳೊಂದಿಗೆ ಲಭ್ಯವಿರುವ ಇತರ ಕಾರ್ಯಕ್ರಮಗಳು/ಯೋಜನೆಗಳ[19] ಸಂಪನ್ಮೂಲಗಳೊಂದಿಗೆ ಎಂಜಿಎನ್ಆರ್ಇಜಿಎಸ್ ಕಾಮಗಾರಿಗಳನ್ನು ಒಮ್ಮುಖಗೊಳಿಸುವ ಮೂಲಕ ಸುಗಮಗೊಳಿಸಬಹುದು. ಒದಗಿಸಲಾದ ಈ ಸಂಪನ್ಮೂಲಗಳು ನಿಧಿಯ ಲಭ್ಯತೆ ಅಥವಾ ತಾಂತ್ರಿಕ ಪರಿಣತಿ/ಸಂಬಂಧಿತ ಇಲಾಖೆಗಳ ಅಧಿಕಾರಿಗಳ ಜ್ಞಾನದ ಸ್ವರೂಪದಲ್ಲಿರಬಹುದು. ಪರೀಕ್ಷಾ–ತನಿಖೆ ನಡೆಸಿದ 40 ಗ್ರಾಮ ಪಂಚಾಯಿತಿಗಳಲ್ಲಿನ 400 ಕಾಮಗಾರಿಗಳಲ್ಲಿ, 81 ಇತರ ಇಲಾಖೆಗಳ ಒಮ್ಮುಖ ಕಾಮಗಾರಿಗಳಾಗಿದ್ದವು. ಈ ನಿಟ್ಟಿನಲ್ಲಿ ಲೆಕ್ಕಪರಿಶೋಧನೆಯ ಅವಲೋಕನಗಳು ಕೆಳಗಿನಂತಿವೆ:

### *5.2.1 ಒಮ್ಮುಖವನ್ನು ಸಾಧಿಸಲು ಸಾಂಸ್ಥಿಕ ಚೌಕಟ್ಟಿನ ಅನುಪಸ್ಥಿತಿ*

ಒಟ್ಟುಗೂಡಿಸಲು ಗುರುತಿಸಲಾದ ಯೋಜನೆಗಳನ್ನು ಯೋಜನಾ ಪ್ರದೇಶದಲ್ಲಿರುವ ಗ್ರಾಮ ಸಭೆಗಳಲ್ಲಿ ಚರ್ಚಿಸುವ ಅಗತ್ಯವಿತ್ತು. ಕಾಮಗಾರಿಗಳ ಯೋಜನೆ ಮತ್ತು ಒಟ್ಟುಗೂಡಿಸುವಿಕೆಯನ್ನು ನಿರ್ವಹಿಸಲು ಸಮರ್ಪಕ ಸಮನ್ವಯಕ್ಕಾಗಿ ಜಿಲ್ಲಾ, ಬ್ಲಾಕ್ ಮತ್ತು ಗ್ರಾಮ ಮಟ್ಟದಲ್ಲಿ ಸಾಂಸ್ಥಿಕ ವ್ಯವಸ್ಥೆಗಳ ಅಗತ್ಯವಿದ್ದಿತು. ಗ್ರಾಮ ಪಂಚಾಯಿತಿಗಳು ಕಾಮಗಾರಿಗಳ ಜೀವಿತಾವಧಿಯ ಪಾಲಕರಾಗಿದ್ದರಿಂದ, ಅದೇ ಗ್ರಾಮ ಪಂಚಾಯಿತಿಯಲ್ಲಿ ಕೆಲಸ ಮಾಡುವ ಇತರ ಪಿಐಎಗಳು ಪ್ರಸ್ತಾವಿಸಿದ ಎಲ್ಲಾ ಕಾಮಗಾರಿಗಳನ್ನು ತಮ್ಮ ಪ್ರಸ್ತಾವನೆಗಳನ್ನು ಗ್ರಾಮಸಭೆಯಲ್ಲಿ ಅಂಗೀಕರಿಸಲಾಗಿದೆ ಮತ್ತು ಗ್ರಾಮ ಪಂಚಾಯಿತಿಯ ವಾರ್ಷಿಕ ಅಭಿವೃದ್ಧಿ ಯೋಜನೆಯಲ್ಲಿ ಸೇರಿಸಲಾಗಿದೆಯೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

[19] ಹಣಕಾಸು ಆಯೋಗ ಅನುದಾನ, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್, ಸಮಗ್ರ ಜಲಾನಯನ ನಿರ್ವಹಣಾ ಕಾರ್ಯಕ್ರಮ, ಸಂಪೂರ್ಣ ನೈರ್ಮಲ್ಯ ಕಾರ್ಯಕ್ರಮ, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ, ರಾಷ್ಟ್ರೀಯ ಅರಣ್ಯೀಕರಣ ಕಾರ್ಯಕ್ರಮ, ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ, ರಾಷ್ಟ್ರೀಯ ತೋಟಗಾರಿಕೆ ಮಿಷನ್ ಇತ್ಯಾದಿ.

ಲೆಕ್ಕಪರಿಶೋಧನೆಯು ಕೆಳಗಿನ ಅಂಶಗಳನ್ನು ಗಮನಿಸಿತು:

1) ಗ್ರಾಮ ಪಂಚಾಯಿತಿಗಳನ್ನು ಹೊರತುಪಡಿಸಿ ಇತರ ಏಜೆನ್ಸಿಗಳು ಅನುಷ್ಠಾನಗೊಳಿಸಿದ 81 ಒಮ್ಮುಖ ಕಾಮಗಾರಿಗಳಲ್ಲಿ 60ರ ಬಗ್ಗೆ ಗ್ರಾಮಸಭೆಯಲ್ಲಿ ಯಾವುದೇ ಚರ್ಚೆ ನಡೆದಿರಲಿಲ್ಲ
2) ಕಾರ್ಯಾಚರಣಾ ಮಾರ್ಗದರ್ಶಿ ಸೂತ್ರಗಳು, 2013ರ ಕಂಡಿಕೆ 15.3.1.3ರಡಿಯಲ್ಲಿ ಕಡ್ಡಾಯಗೊಳಿಸಲಾಗಿದ್ದರೂ, ಪರೀಕ್ಷಾ-ತನಿಖೆ ನಡೆಸಿದ ಯಾವುದೇ ಜಿಲ್ಲೆಗಳು, ತಾಲ್ಲೂಕುಗಳು ಮತ್ತು ಗ್ರಾಮ ಪಂಚಾಯಿತಿಗಳಲ್ಲಿ ಯೋಜಿತ ಜಿಲ್ಲಾ ಸಂಪನ್ಮೂಲ ಗುಂಪು (ಡಿಆರ್‌ಜಿ), ಬ್ಲಾಕ್ ಸಂಪನ್ಮೂಲ ಗುಂಪು (ಬಿಆರ್‌ಜಿ) ಮತ್ತು ಗ್ರಾಮ ಸಂಪನ್ಮೂಲ ಗುಂಪು (ವಿಆರ್‌ಜಿ) ಗಳನ್ನು ರಚಿಸಿರಲಿಲ್ಲ.
3) ಎಂಜಿಎನ್‌ಆರ್‌ಇಜಿಎಸ್ ಮತ್ತು ಪಿಎಂಜಿಎಸ್‌ವೈ ನಡುವೆ ಒಮ್ಮುಖ ಮಾರ್ಗದರ್ಶಿ ಸೂತ್ರಗಳನ್ನು ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯ ಹೊರಡಿಸಿತ್ತು (ನವೆಂಬರ್ 2013). ಆದರೆ, ಈ ಒಮ್ಮುಖ ಮಾರ್ಗಸೂಚಿಗಳನ್ನು ಕಾರ್ಯಗತಗೊಳಿಸಲು ರಾಜ್ಯ ಸರ್ಕಾರವು ಪಿಎಂಜಿಎಸ್‌ವೈ ಮತ್ತು ಎಂಜಿಎನ್‌ಆರ್‌ಇಜಿಎಸ್‌ನ ಹಿರಿಯ ಅಧಿಕಾರಿಗಳನ್ನು ಒಳಗೊಂಡ ಒಮ್ಮುಖ ತಂಡವನ್ನು ರಚಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆ ಗಮನಿಸಿತು.
4) ಜಿಪಿಡಿಪಿಯ ಸಂಪೂರ್ಣ ಪ್ರಕ್ರಿಯೆಯನ್ನು ಕೈಗೆತ್ತಿಕೊಳ್ಳಲು ಮತ್ತು ಮುಂದುವರಿಸಲು ಅವುಗಳನ್ನು ಓರಿಯೆಂಟ್ ಮಾಡಲು ಮತ್ತು ಸಕ್ರಿಯಗೊಳಿಸಲು ಸಂಪೂರ್ಣ ಯೋಜನಾ ಪ್ರಕ್ರಿಯೆಯ ಹಂಚಿಕೆಯ ತಿಳುವಳಿಕೆ ಮತ್ತು ಅನುಕೂಲಕ್ಕಾಗಿ ಪ್ರತಿ ಗ್ರಾಮ ಪಂಚಾಯಿತಿಗೆ ಗ್ರಾಮ ಪಂಚಾಯಿತಿ ಯೋಜನಾ ಸೌಲಭ್ಯ ತಂಡವನ್ನು (ಜಿಪಿಪಿಎಫ್‌ಟಿ) ರೂಪಿಸಬೇಕು ಎಂದು ಜಿಪಿಡಿಪಿಗಾಗಿನ ಗ್ರಾಮೀಣಾಭವೃದ್ಧಿ ಸಚಿವಾಲಯದ ಮಾರ್ಗಸೂಚಿಗಳು ನಿಗದಿಪಡಿಸಿವೆ. ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದ ಸಮನ್ವಯ ಸಮಿತಿಯನ್ನು (ಡಿಎಲ್‌ಸಿಸಿ) ರಚಿಸಬೇಕು ಎಂದು ಕಡ್ಡಾಯಗೊಳಿಸಲಾಗಿತ್ತು, ಅದು ಕಾಲಮಿತಿಯಲ್ಲಿ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಜಿಪಿಡಿಪಿಯನ್ನು ರಚಿಸುವುದನ್ನು ಖಚಿತಪಡಿಸುತ್ತದೆ. ಆದರೆ ಪರೀಕ್ಷಾ-ತನಿಖೆ ನಡೆಸಿದ ಐದು ಜಿಲ್ಲೆಗಳಲ್ಲಿ ಯಾವುದೇ ಡಿಎಲ್‌ಸಿಸಿಗಳನ್ನು ರಚಿಸಿರಲಿಲ್ಲ ಮತ್ತು ಪರೀಕ್ಷಾ-ತನಿಖೆ ನಡೆಸಿದ ನಾಲ್ಕು[20] ಜಿಲ್ಲೆಗಳಲ್ಲಿ ಜಿಪಿಪಿಎಫ್‌ಟಿಗಳನ್ನು ರಚಿಸಿರಲಿಲ್ಲ.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ಅಭಿಪ್ರಾಯವನ್ನು ಒಪ್ಪಿಕೊಂಡಿತು (ಮೇ 2025) ಮತ್ತು ಸರಿಪಡಿಸುವ ಕ್ರಮವನ್ನು ಪ್ರಾರಂಭಿಸಲಾಗುವುದು ಎಂದು ಭರವಸೆ ನೀಡಿತು.
ಹೀಗೆ, ಒಮ್ಮುಖಕ್ಕೆ ಅಗತ್ಯವಾದ ಸಾಂಸ್ಥಿಕ ಬೆಂಬಲವನ್ನು ಒದಗಿಸಿರಲಿಲ್ಲ, ಇದು ಮುಂದಿನ ಕಂಡಿಕೆಗಳಲ್ಲಿ ವಿವರಿಸಿದಂತೆ ಒಮ್ಮುಖ ಕಾಮಗಾರಿಗಳ ಅನುಷ್ಠಾನದಲ್ಲಿ ವಿವಿಧ ನ್ಯೂನತೆಗಳಿಗೆ ಕಾರಣವಾಯಿತು.

### *5.2.2 ವಸತಿ ಕಾಮಗಾರಿಗಳಿಗೆ ಮೋಸದ ಪಾವತಿ*

**ಗ್ರಾಮೀಣಾಭಿವೃದ್ಧಿ ಸಚಿವಾಲಯ ಹೊರಡಿಸಿದ (ಜುಲೈ 2014) ಮತ್ತು 06 ಜುಲೈ 2016ರ ರಾಜ್ಯ ಸರ್ಕಾರದ ಆದೇಶದಡಿಯಲ್ಲಿ (25 ಅಕ್ಟೋಬರ್ 2022ರಂದು ಪರಿಷ್ಕರಿಸಲಾಗಿದೆ) ಮನೆಗಳ ನಿರ್ಮಾಣವನ್ನು ಒಮ್ಮುಖಗೊಳಿಸುವ ಮಾರ್ಗಸೂಚಿಗಳ ಪ್ರಕಾರ, ಯಾವುದೇ ರಾಜ್ಯ ಅಥವಾ ಕೇಂದ್ರ ಸರ್ಕಾರದ ವಸತಿ ಯೋಜನೆಯಡಿಯಲ್ಲಿ ಫಲಾನುಭವಿಯು ಕಟ್ಟಡ ನಿರ್ಮಾಣ ಕಾರ್ಯವನ್ನು ಸ್ವತ: ಕೈಗೆತ್ತಿಕೊಂಡಿದ್ದರೆ ಎಂಜಿಎನ್‌ಆರ್‌ಇಜಿಎಸ್ ಅಡಿಯಲ್ಲಿ 90 ಮಾನವ ದಿನಗಳ ಕೌಶಲ್ಯರಹಿತ ಮಜೂರಿ ಘಟಕಕ್ಕೆ ಅರ್ಹನಾಗಿರುತ್ತಾನೆ. ಹಿಂದೆ ನೀಡದ ವೇತನ ಉದ್ಯೋಗಕ್ಕಾಗಿ ಫಲಾನುಭವಿಗೆ ಪರಿಹಾರ ನೀಡುವುದು ಇದರ ಉದ್ದೇಶವಾಗಿತ್ತು. ಕೆಳಗಿನ ಕೋಷ್ಟಕ-5.2ರಲ್ಲಿ ವಿವರಿಸಿದಂತೆ ನಿರ್ಮಾಣದ ಹಂತಗಳ ಆಧಾರದ ಮೇಲೆ 90 ದಿನಗಳ ವೇತನ ಪಾವತಿಗಳನ್ನು ಮಾಡಬೇಕಾಗಿತ್ತು. ಈಗಾಗಲೇ ಪೂರ್ಣಗೊಂಡ**

[20] ಕಲಬುರಗಿ, ಕೊಪ್ಪಳ, ಮಂಡ್ಯ ಮತ್ತು ಶಿವಮೊಗ್ಗ

**ಮನೆಗಳ ಪ್ರತಿಯಾಗಿ ಮಸ್ಟರ್ ರೋಲ್‌ಗಳನ್ನು ರಚಿಸಲು ಯಾವುದೇ ರಾಜ್ಯಕ್ಕೆ ಅವಕಾಶವಿಲ್ಲ ಎಂದು ಗ್ರಾಮೀಣಾಭಿವೃದ್ಧಿ ಸಚಿವಾಲಯ ಸೂಚನೆ ನೀಡಿತ್ತು.**

**ಕೋಷ್ಟಕ–5.2: ಮನೆ ನಿರ್ಮಾಣಕ್ಕೆ ಒದಗಿಸಬೇಕಿದ್ದ ವ್ಯಕ್ತಿ ದಿನಗಳು**

| ಕ್ರಮ ಸಂಖ್ಯೆ | ಮನೆ ನಿರ್ಮಾಣದ ಹಂತ | ಒದಗಿಸಬೇಕಿದ್ದ ವ್ಯಕ್ತಿ ದಿನಗಳು (ಸರ್ಕಾರಿ ಆದೇಶ ದಿನಾಂಕ 06.07.2016) | ಒದಗಿಸಬೇಕಿದ್ದ ವ್ಯಕ್ತಿ ದಿನಗಳು (ಸರ್ಕಾರಿ ಆದೇಶ ದಿನಾಂಕ 25.10.2022) |
|---|---|---|---|
| 1. | ಪ್ಲಿಂತ್ ಮಟ್ಟದವರೆಗೆ | 28 | 28 |
| 2. | ಪ್ಲಿಂತ್ ಹಂತದಿಂದ ಲಿಂಟೆಲ್ ಹಂತದವರೆಗೆ | 24 | 24 |
| 3. | ಪ್ಲಿಂತ್ ಹಂತದಿಂದ ಛಾವಣಿ ಹಂತದವರೆಗೆ | 10 | 38 |
| 4. | ಛಾವಣಿ ಹಂತದಿಂದ ಪೂರ್ಣವಾಗುವವರೆಗೆ | 28 | – |
| | **ಒಟ್ಟು** | **90** | **90** |

**ಮೂಲ: ಸರ್ಕಾರೀ ಆದೇಶಗಳು ದಿನಾಂಕ 06.07.2016 ಮತ್ತು 25.10.2022**

**2019–20ರಿಂದ 2023–24ರ ಅವಧಿಗೆ ಎಂಐಎಸ್ ವರದಿ ಸಂಖ್ಯೆ ಆರ್6.12 (ಮೇಲ್ವಿಚಾರಣೆ ಮತ್ತು ಕಾಮಗಾರಿಗಳ ವಿವರಗಳಿಗಾಗಿ ಡೈನಾಮಿಕ್ ವರದಿ) ಪ್ರಕಾರ, ಆಯ್ದ 39 ಗ್ರಾಮ ಪಂಚಾಯಿತಿಗಳಲ್ಲಿ[21] ₹5.04 ಕೋಟಿ ವೆಚ್ಚವನ್ನು ಒಳಗೊಂಡ 2,560 ವಸತಿ ಕಾಮಗಾರಿಗಳಿದ್ದವು. ಆ ಪೈಕಿ ಲೆಕ್ಕಪರಿಶೋಧನೆಯು 847 ಕಾಮಗಾರಿಗಳನ್ನು (₹1.91 ಕೋಟಿ ವೆಚ್ಚ) ಪರಿಶೀಲಿಸಿತು ಮತ್ತು ಅವುಗಳನ್ನು ವಸತಿ ಯೋಜನೆಯ ವೆಬ್‌ಸೈಟ್‌ನಲ್ಲಿ[22] ಲಭ್ಯವಿರುವ ಹಂತವಾರು ನಿರ್ಮಾಣದ ವಿವರಗಳೊಂದಿಗೆ ಹೋಲಿಸಿತು.**

**ಈ ಕೆಳಗಿನ ಕಾರಣಗಳಿಂದಾಗಿ 653 ಪ್ರಕರಣಗಳಲ್ಲಿ (ಪರೀಕ್ಷಾ–ತನಿಖೆ ನಡೆಸಿದ 847 ಕಾಮಗಾರಿಗಳಲ್ಲಿ ಶೇಕಡಾ 77) ಒಟ್ಟು ₹1.19 (₹1.91 ಕೋಟಿಯ ಶೇಕಡಾ 62) ಕೋಟಿ ಪಾವತಿ ಅಕ್ರಮವಾಗಿತ್ತು ಎಂದು ಪರಿಶೀಲನೆಯು ತೋರಿಸಿತು:**

**ಅ) 462 ಪ್ರಕರಣಗಳಲ್ಲಿ ನಿರ್ಮಾಣದ ವಿವಿಧ ಹಂತಗಳಿಗೆ (ಅಡಿಪಾಯ, ಲಿಂಟೆಲ್, ಮೇಲ್ಛಾವಣಿ, ಇತ್ಯಾದಿ) ಮಸ್ಟರ್ ರೋಲ್‌ಗಳನ್ನು ಸೃಷ್ಟಿಸುವ ಮೂಲಕ ಎಂಜಿಎನ್‌ಆರ್‌ಇಜಿಎಸ್ ಅಡಿಯಲ್ಲಿ ಪಾವತಿಗಳನ್ನು ಮಾಡಲಾಗಿತ್ತು. ಆದರೆ, ವಸತಿ ಯೋಜನೆಗಳ ವೆಬ್‌ಸೈಟ್‌ಗಳಿಂದ ಪಡೆದ ಮಾಹಿತಿಯು ಮನೆಗಳು ಹಿಂದಿನ ಅವಧಿಯಲ್ಲಿಯೇ ಪೂರ್ಣಗೊಂಡಿದ್ದವು ಎಂಬುದನ್ನು ಸೂಚಿಸಿತು (ನಿದರ್ಶನ–1 ಮತ್ತು 2).**

**ಆ) 8 ಪ್ರಕರಣಗಳಲ್ಲಿ ಅಗತ್ಯ ಭೂಮಿಯನ್ನು ಹೊಂದಿಲ್ಲದ ಅಥವಾ ಈಗಾಗಲೇ ನಿರ್ಮಿಸಲಾದ ಮನೆಗಳಿಗೆ ವಸತಿ ಯೋಜನೆಯ ಪ್ರಯೋಜನಗಳನ್ನು ಪಡೆದ ಅನರ್ಹ ಫಲಾನುಭವಿಗಳಿಗೆ ವಸತಿ ಯೋಜನೆಗಳ ಅಡಿಯಲ್ಲಿ ಕೌಶಲ್ಯರಹಿತ ವೇತನ ಉದ್ಯೋಗವನ್ನು ಒದಗಿಸಲಾಗಿತ್ತು.**

[21] ಆಯ್ದ 40 ಗ್ರಾಮ ಪಂಚಾಯಿತಿಗಳ ಪೈಕಿ, 2019–20ರಿಂದ 2023–24ರವರೆಗೆ ಒಂದು ಗ್ರಾಮ ಪಂಚಾಯಿತಿಯಲ್ಲಿ (ಕಲಬುರಗಿ ಜಿಲ್ಲೆಯ ಕಮಲಾಪುರ ತಾಲ್ಲೂಕಿನ ಅಂಬಳಗ) ಯಾವುದೇ ವಸತಿ ಕಾಮಗಾರಿಗಳು ಇರಲಿಲ್ಲ.

[22] https://awaassoft.nic.in/netiay/Benificiary.aspx ಪಿಎಮ್‌ಎವೈ ಗ್ರಾಮೀಣ್ ಗಾಗಿ ಮತ್ತು www.ashrya. karnataka.gov.in ಇತರ ವಸತಿ ಯೋಜನೆಗಳಿಗೆ

ಇ) **117** ಪ್ರಕರಣಗಳಲ್ಲಿ, ಮನೆಗಳ ಹಂತವಾರು ನಿರ್ಮಾಣಕ್ಕೆ ಅನುಮತಿಸಿದ ಮಿತಿಗಿಂತ ಹೆಚ್ಚಿನ ಮಾನವ ದಿನಗಳನ್ನು ಪಾವತಿಸಲಾಯಿತು (ನಿದರ್ಶನ–3).]

ಈ) ಭುವನ್ ಪೋರ್ಟಲ್‌ನಲ್ಲಿ ಗಮನಿಸಿದಂತೆ ಯಾವುದೇ ಕಾಮಗಾರಿಯನ್ನು ಕಾರ್ಯಗತಗೊಳಿಸದಿದ್ದರೂ **12** ಪ್ರಕರಣಗಳಲ್ಲಿ ಮಸ್ಟರ್ ರೋಲ್‌ಗಳ ಮೇಲೆ ಪಾವತಿಗಳನ್ನು ಮಾಡಲಾಗಿತ್ತು ಮತ್ತು ಕಾಮಗಾರಿಯ ವಿವಿಧ ಹಂತಗಳಿಗೆ ಅದೇ ಛಾಯಾಚಿತ್ರಗಳನ್ನು ಅಪ್‌ಲೋಡ್ ಮಾಡಲಾಗಿತ್ತು (ನಿದರ್ಶನ–4 ಮತ್ತು 5).

ಉ) ಕೇಂದ್ರ/ರಾಜ್ಯ ವಸತಿ ಯೋಜನೆಗಳಡಿಯಲ್ಲಿ ಅನುಮೋದನೆ ನೀಡದ ಮತ್ತು ಕೈಗೆತ್ತಿಕೊಳ್ಳದ ಮನೆಗಳ ನಿರ್ಮಾಣಕ್ಕೆ ಏಳು ಪ್ರಕರಣಗಳಲ್ಲಿ ವೇತನವನ್ನು ಪಾವತಿಸಲಾಗಿತ್ತು (ನಿದರ್ಶನ–6).

ಊ) **47** ಪ್ರಕರಣಗಳಲ್ಲಿ, ನಿಗದಿಪಡಿಸಿದ್ದ **90** ದಿನಗಳಿಗಿಂತ ಹೆಚ್ಚಿನ ಮಾನವ ದಿನಗಳನ್ನು ಒದಗಿಸಲಾಗಿತ್ತು ಅಥವಾ ಫಲಾನುಭವಿಗೆ ಸೇರದ ಮನೆಗೆ ಯೋಜನೆಯಡಿ ಪಾವತಿ ಮಾಡಲಾಗಿತ್ತು (ನಿದರ್ಶನ–7).

ವಿವರಣಾತ್ಮಕ ಪ್ರಕರಣಗಳನ್ನು ಅನುಬಂಧ–5.2 ರಲ್ಲಿ ನೀಡಲಾಗಿದೆ. ತಾಲ್ಲೂಕುವಾರು ವಿವರಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ (ಕೋಷ್ಟಕ 5.3) ಮತ್ತು ಗ್ರಾಮ ಪಂಚಾಯಿತಿವಾರು ವಿವರಗಳನ್ನು ಅನುಬಂಧ–5.3 ರಲ್ಲಿ ನೀಡಲಾಗಿದೆ.

**ಕೋಷ್ಟಕ–5.3: ವಸತಿ ಕಾಮಗಾರಿಗಳಿಗೆ ಅಕ್ರಮ ವೆಚ್ಚ (ತಾಲ್ಲೂಕುವಾರು)**

| ಜಿಲ್ಲೆ | ತಾಲ್ಲೂಕು | ಆಯ್ದ 39 ಗ್ರಾಮ ಪಂಚಾಯಿತಿಗಳಲ್ಲಿ ವಸತಿ ಕಾಮಗಾರಿಗಳು | ಲೆಕ್ಕಪರಿಶೋಧನೆಯಿಂದ ಪರೀಕ್ಷಾ–ತನಿಖೆ ಮಾಡಲ್ಪಟ್ಟ ವಸತಿ ಕಾಮಗಾರಿಗಳು | | ಆಕ್ಷೇಪಣೆಗಳನ್ನು ಗಮನಿಸಿದ ವಸತಿ ಕಾಮಗಾರಿಗಳು | |
|---|---|---|---|---|---|---|
| | | | ಸಂಖ್ಯೆ | ವೆಚ್ಚ ಲಕ್ಷಗಳಲ್ಲಿ | ಸಂಖ್ಯೆ (ಪರೀಕ್ಷಾ–ತನಿಖೆ ಮಾಡಿದ ಕಾಮಗಾರಿಗಳಿಗೆ ಶೇಕಡಾವಾರು) | ವೆಚ್ಚ ಲಕ್ಷಗಳಲ್ಲಿ (%) |
| ಕಲಬುರಗಿ | ಆಲಂದ್ | 46 | 45 | 8.77 | 27 (60) | 4.29 (49) |
| | ಕಮಲಾಪುರ | 194 | 60 | 12.47 | 34 (57) | 5.74 (46) |
| ಕೊಪ್ಪಳ | ಗಂಗಾವತಿ | 307 | 127 | 25.30 | 117 (92) | 23.36 (92) |
| | ಯಲಬುರ್ಗ | 488 | 113 | 24.36 | 112 (**99**) | 21.77 (89) |
| ಮಂಡ್ಯ | ಮದ್ದೂರು | 197 | 78 | 18.38 | 48 (62) | 8.04 (44) |
| | ಮಂಡ್ಯ | 175 | 80 | 17.54 | 45 (**56**) | 5.83 (33) |
| ಶಿವಮೊಗ್ಗ | ಸಾಗರ | 234 | 80 | 20.80 | 63 (79) | 10.77 (52) |
| | ಶಿಕಾರಿಪುರ | 125 | 80 | 19.61 | 47 (59) | 6.67 (34) |
| ತುಮಕೂರು | ತಿಪಟೂರು | 587 | 105 | 24.53 | 94 (90) | 18.10 (74) |
| | ತುರುವೇಕೆರೆ | 207 | 79 | 18.80 | 66 (84) | 14.01 (75) |
| **ಒಟ್ಟು** | | **2560** | **847** | **190.56** | **653 (77)** | **118.58 (62)** |

**ಮೂಲ: ಎಂಐಎಸ್ ವರದಿ ಆರ್6.12 ದಿನಾಂಕ 28.10.2024**

ಆಯ್ದ ತಾಲ್ಲೂಕುಗಳಲ್ಲಿ ಪರೀಕ್ಷಾ–ತನಿಖೆ ನಡೆಸಿದ ಕಾಮಗಾರಿಗಳಲ್ಲಿ ಶೇಕಡಾ **56**ರಿಂದ **99**ರವರೆಗಿನ ವ್ಯಾಪ್ತಿಯಲ್ಲಿ ಇಂತಹ ಅಕ್ರಮಗಳು ನಡೆದಿರುವುದನ್ನು ಗಮನಿಸಬಹುದು. ಇದು ಪರಿಶೀಲನೆಗಳನ್ನು ಸಮರ್ಪಕವಾಗಿ ಮಾಡಿರಲಿಲ್ಲ ಎಂಬುದನ್ನು ಸೂಚಿಸುತ್ತದೆ ಮತ್ತು **₹1.19** ಕೋಟಿ ಅಕ್ರಮ ಪಾವತಿಯಲ್ಲಿ ಪರಿಣಮಿಸಿತು. ಕಾಮಗಾರಿಯ ಸ್ಥಳಗಳಲ್ಲಿ ಅಳತೆಗಳನ್ನು ತೆಗೆದುಕೊಳ್ಳದೆ ಪಾವತಿಗಳನ್ನು ಮಾಡಲಾಗಿತ್ತು. ಇಂತಹ ಅಕ್ರಮಗಳ ಹೆಚ್ಚಿನ ಪ್ರಕರಣಗಳು ವಿವಿಧ ಹಂತಗಳಲ್ಲಿ ಮೇಲ್ವಿಚಾರಣೆಯ ಕೊರತೆಯನ್ನು ಸೂಚಿಸುತ್ತವೆ ಮತ್ತು ಎಂಜಿಎನ್‌ಆರ್‌ಇಜಿಎಸ್ ನಿಧಿಯ ಸೋರಿಕೆ ಮತ್ತು ದುರುಪಯೋಗಕ್ಕೆ ಕಾರಣವಾಗುತ್ತವೆ. ಎಲ್ಲಿ ಸಾಮಾಜಿಕ ಲೆಕ್ಕಪರಿಶೋಧನೆಯನ್ನು ನಡೆಸಲಾಯಿತೋ, ಅಲ್ಲಿಯೂ ಸಹ

ಅಂತಹ ಯಾವುದೇ ನ್ಯೂನತೆಗಳನ್ನು ಎತ್ತಿ ತೋರಿಸಲಿಲ್ಲ. ಇವು ಕೇವಲ ನಿದರ್ಶನಾತ್ಮಕ ಪ್ರಕರಣಗಳಾಗಿದ್ದು ಇತರ ಗ್ರಾಮ ಪಂಚಾಯಿತಿಗಳಲ್ಲಿ ಅಂತಹ ಹೆಚ್ಚಿನ ಪ್ರಕರಣಗಳ ಸಾಧ್ಯತೆಯನ್ನು ತಳ್ಳಿಹಾಕಲಾಗುವುದಿಲ್ಲ. ರಾಜ್ಯ ಸರ್ಕಾರವು ಲೆಕ್ಕಪರಿಶೋಧನೆಯ ಅವಲೋಕನಗಳನ್ನು ಒಪ್ಪಿಕೊಂಡಿತು (ಮೇ 2025) ಮತ್ತು ಹೊಣೆಗಾರರಾದ ಅಧಿಕಾರಿ ಮತ್ತು ಸಿಬ್ಬಂದಿಯ ಮೇಲೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿತು. ಲೆಕ್ಕಪರಿಶೋಧಕರು ಮಾಡಿದ ಅಭಿಪ್ರಾಯಗಳ ಆಧಾರದ ಮೇಲೆ ರಾಜ್ಯವು ಎಲ್ಲಾ ಸಿಇಒಗಳಿಗೆ ವಿವರವಾದ ಮಾರ್ಗಸೂಚಿಗಳನ್ನು ಒದಗಿಸುತ್ತದೆ ಎಂದೂ ಸಹ ತಿಳಿಸಲಾಯಿತು ಮತ್ತು ಅಂತಹ ಪ್ರಕರಣಗಳು ಪುನರಾವರ್ತನೆಯಾಗುವುದನ್ನು ತಪ್ಪಿಸುವ ಭರವಸೆ ನೀಡಲಾಯಿತು.

### *5.2.3 ಘನತ್ಯಾಜ್ಯ ನಿರ್ವಹಣಾ ಶೆಡ್ ಗಳ ನಿರ್ಮಾಣದಲ್ಲಿ ವ್ಯತ್ಯಾಸಗಳು*

#### *i) ದಾಖಲೆಗಳ ನಕಲಿ ಮತ್ತು ಕಾರ್ಯಗತಗೊಳಿಸದ ಕೆಲಸಗಳಿಗೆ ಮೋಸದ ಪಾವತಿ*

ಕಲಬುರಗಿ ಜಿಲ್ಲೆಯ ಕಮಲಾಪುರ ತಾಲ್ಲೂಕಿನ ಬಬಲಾಡ್ ಗ್ರಾಮ ಪಂಚಾಯಿತಿಯಲ್ಲಿ ಘನತ್ಯಾಜ್ಯ ನಿರ್ವಹಣೆ (ಎಸ್ ಡಬ್ಲ್ಯುಎಂ ಕಾಂಪೋಸ್ಟ್ ಪಿಟ್ ಶೆಡ್) ನಿರ್ಮಾಣದ ಕಾಮಗಾರಿಯನ್ನು (ಕೋಡ್–1515005/ಆರ್ ಎಸ್/93393042892277606) 2020–21ನೇ ಸಾಲಿನ ವಾರ್ಷಿಕ ಕಾರ್ಯ ಯೋಜನೆಯಲ್ಲಿ ಸೇರಿಸಲಾಗಿತ್ತು. ಈ ಕಾಮಗಾರಿಯ ಅಂದಾಜು ವೆಚ್ಚವು ₹19.45 ಲಕ್ಷವಾಗಿದ್ದು ಇಇ, ಕಲಬುರಗಿಯ ಪಂಚಾಯತ್ ರಾಜ್ ಎಂಜಿನಿಯರಿಂಗ್ ವಿಭಾಗವು (ಪಿರ್‌ಇ) ಅನುಷ್ಠಾನ ಸಂಸ್ಥೆಯಾಗಿತ್ತು. ಜುಲೈ/ಆಗಸ್ಟ್ 2021ರ ಅವಧಿಯಲ್ಲಿ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಅನುಮೋದನೆಗಳನ್ನು ನೀಡಲಾಗಿತ್ತು. ದಾಖಲೆಗಳ ಪ್ರಕಾರ, ಏಪ್ರಿಲ್ 2023ರಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲಾಯಿತು ಮತ್ತು 18.45 ಲಕ್ಷ[23] ವೆಚ್ಚವನ್ನು ಭರಿಸಲಾಗಿತ್ತು (ನವೆಂಬರ್ 2024). ಕಾಮಗಾರಿ ಇನ್ನೂ ಪ್ರಗತಿಯಲ್ಲಿದೆ. ಜಿಯೋ–ಟ್ಯಾಗ್ ಮಾಡಿದ ಛಾಯಾಚಿತ್ರ ಸೇರಿದಂತೆ ಎನ್‌ಎಂಆರ್‌ಗಳು, ಸಾಮಗ್ರಿ ಬೆಲೆಪಟ್ಟಿಗಳು ಮತ್ತು ಸಾಮಗ್ರಿ ಬಿಲ್ಲುಗಳಂತಹ ದಾಖಲೆಗಳನ್ನು ಕೆಳಗೆ ವಿವರಿಸಿದಂತೆ ತಿದ್ದಲಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು:

- ಕಲಬುರಗಿಯ ಪಂಚಾಯತ್ ರಾಜ್ ಎಂಜಿನಿಯರಿಂಗ್ ಉಪ ವಿಭಾಗದ ಎಇಇ 24 ಏಪ್ರಿಲ್ 2023ರಿಂದ ಮೇಲಿನ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ ಎಂದು ಪಿಡಿಒ, ಬಾಬಲದ್ ಗೆ (ಐಕೆ) ತಿಳಿಸಿದರು. ಆದರೆ, ಕಾಮಗಾರಿಯ ಮೊದಲ ಎನ್‌ಎಂಆರ್ ಅನ್ನು ಈಗಾಗಲೇ 24 ಮಾರ್ಚ್ 2023ರಿಂದ 29 ಮಾರ್ಚ್ 2023ರವರೆಗಿನ ಅವಧಿಗೆ (ಏಪ್ರಿಲ್ 2023ರ ಮೊದಲು) ಮಾಡಲಾಗಿತ್ತು ಮತ್ತು 19 ಮೇ 2023ರಂದು 50 ಮಾನವ ದಿನಗಳಿಗೆ ₹15,450 ಗಳನ್ನು ಪಾವತಿಸಲಾಗಿತ್ತು.
- ಈ ಕಾಮಗಾರಿಯಲ್ಲಿ ಬಳಸಲಾದ 20 ಎನ್‌ಎಂಆರ್.ಗಳಲ್ಲಿ ಯಾವುದನ್ನೂ ಎನ್‌ಆರ್‌ಇಜಿಎಸಾಫ್ಟ್ ಮೂಲಕ ಸೃಷ್ಟಿಸಿರಲಿಲ್ಲ, ಇದು ಕಾರ್ಮಿಕರ ಬ್ಯಾಂಕ್ ಖಾತೆ ಸಂಖ್ಯೆಗಳ ವಿವರಗಳ ಅನುಪಸ್ಥಿತಿಯಿಂದ ಸ್ಪಷ್ಟವಾಗುತ್ತದೆ. ಇದಲ್ಲದೆ, ಇವುಗಳಲ್ಲಿ ಯಾವುದೂ ಮಾಪನ ಪುಸ್ತಕದ (ಎಂಬಿ) ಅನುಗುಣವಾದ ಪುಟ ಸಂಖ್ಯೆಗಳ ಬಗ್ಗೆ ಉಲ್ಲೇಖಿಸಿಲ್ಲ. ಇದಲ್ಲದೆ, ಮಾಪನ ಪುಸ್ತಕ ದಾಖಲೆಯಿಲ್ಲದೆ ₹1.17 ಲಕ್ಷ ವೇತನ ಪಾವತಿಯನ್ನು (24 ಮಾರ್ಚ್ 2023ರಿಂದ 17 ಅಕ್ಟೋಬರ್ 2023 ರವರೆಗಿನ ಅವಧಿಯಲ್ಲಿ ಕಾರ್ಯಗತಗೊಳಿಸಿದ ಕಾಮಗಾರಿಯ ಅವಧಿಗೆ ಎಂಟು ಎನ್‌ಎಂಆರ್ ಗಳಿಗೆ) ಮಾಡಲಾಗಿತ್ತು. ಮೊದಲ ಮಾಪನ ಪುಸ್ತಕ ರೆಕಾರ್ಡಿಂಗ್ ಅನ್ನು ನಂತರ 02 ನವೆಂಬರ್ 2023ರಂದು ಮಾಡಲಾಯಿತು.
- ಕೆಟಿಪಿಪಿ ಕಾಯ್ದೆಯ ನಿಬಂಧನೆಗಳನ್ನು ಉಲ್ಲಂಘಿಸಿ ಟೆಂಡರ್ ಪ್ರಕ್ರಿಯೆಯನ್ನು ಅನುಸರಿಸದೇ ಬೆಲೆಪಟ್ಟಿಗಳನ್ನು ಆಹ್ವಾನಿಸುವ ಮೂಲಕ ಇಲಾಖೆಯು ₹15.06 ಲಕ್ಷ ಮೌಲ್ಯದ ವಸ್ತುಗಳನ್ನು

[23] ವೇತನ–₹3.39 ಲಕ್ಷ ಮತ್ತು ಸಾಮಗ್ರಿ–₹15.06 ಲಕ್ಷ

ಖರೀದಿಸಿತ್ತು. ಬಿಲೆಪಟ್ಟಿಗಳು ದಿನಾಂಕಗಳು ಮತ್ತು ಮಾರಾಟಗಾರರು/ಪೂರೈಕೆದಾರರ ಸಹಿಗಳನ್ನು ಹೊಂದಿರಲಿಲ್ಲ, ಇದು ವಹಿವಾಟಿನ ನೈಜತೆಯನ್ನು ಪ್ರಶ್ನೆ ಮಾಡುತ್ತದೆ.

- ಎಲ್ಲಾ 20 ಎನ್‌ಎಂರ್.ಗಳು ಮಾರ್ಚ್ 2023ರಿಂದ ನವೆಂಬರ್ 2023ರವರೆಗಿನ ಅವಧಿಗೆ ಕಾರ್ಮಿಕರನ್ನು ತೊಡಗಿಸಿಕೊಂಡಿರುವುದನ್ನು ತೋರಿಸುತ್ತಿದ್ದವು. ಆದರೆ, ₹5.99 ಲಕ್ಷ ವೆಚ್ಚದ ಅಗತ್ಯ ಸಾಮಗ್ರಿಗಳನ್ನು (ಇಟ್ಟಿಗೆ, ಸಿಮೆಂಟ್, ಮರಳು, ಉಕ್ಕು ಮತ್ತು ಸುಣ್ಣದಕಲ್ಲುಗಳು) 01 ಫೆಬ್ರವರಿ 2024ರ ಬಿಲೆಪಟ್ಟಿಗಳ ಮೂಲಕ ಖರೀದಿಸಲಾಗಿತ್ತು. ಕಾಮಗಾರಿಯು ಪೂರ್ಣಗೊಂಡ ನಂತರ ಈ ಸಾಮಗ್ರಿಗಳನ್ನು ಖರೀದಿಸಿರುವುದನ್ನು ವಿವರಿಸಲಾಗದು ಮತ್ತು ಕೈಗೊಂಡ ಕಾಮಗಾರಿಯ ಸತ್ಯಾಸತ್ಯತೆಯ ಬಗ್ಗೆ ಅನುಮಾನವನ್ನು ಹುಟ್ಟುಹಾಕುತ್ತದೆ.
- ಭುವನ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾದ ಜಿಯೋ–ಟ್ಯಾಗ್ ಮಾಡಿದ ಛಾಯಾಚಿತ್ರಗಳ (ಹಂತ–2) ಪರಿಶೀಲನೆಯ ಸಮಯದಲ್ಲಿ (30 ಜನವರಿ 2024), ಬಾಬಲಾದ್ ನಲ್ಲಿ (ಐಕೆ) ಕಾಮಗಾರಿಯ ಕಾರ್ಯಗತಗೊಳಿಸುವಿಕೆಯನ್ನು ತೋರಿಸಲು ಅಸ್ತಿತ್ವದಲ್ಲಿರುವ ಮತ್ತೊಂದು ತ್ಯಾಜ್ಯ ನಿರ್ವಹಣಾ ಶೆಡ್ಡಿನ ಛಾಯಾಚಿತ್ರವನ್ನು ಅಪ್‌ಲೋಡ್ ಮಾಡಲಾಗಿತ್ತು (ಪ್ರದರ್ಶಿಕೆ–5.1). 24 ಆಗಸ್ಟ್ 2024ರಂದು ಲೆಕ್ಕಪರಿಶೋಧನೆಯಿಂದ ನಡೆಸಿದ ಭೌತಿಕ ಪರಿಶೀಲನೆಯು ಆ ಸ್ಥಳದಲ್ಲಿ ಯಾವುದೇ ರಚನೆ/ಶೆಡ್/ಕಟ್ಟಡ ಲಭ್ಯವಿರಲಿಲ್ಲ ಎಂಬುದನ್ನು ಬಹಿರಂಗಪಡಿಸಿತು. (ಪ್ರದರ್ಶಿಕೆ–5.2).




ಪ್ರದರ್ಶಿಕೆ–5.1: ಭುವನ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿದ ಕಲ್ಪಿತ ಛಾಯಾಚಿತ್ರ (30.01.2024)




ಪ್ರದರ್ಶಿಕೆ–5.2: ಭೌತಿಕ ಪರಿಶೀಲನೆಯ ಸಮಯದಲ್ಲಿ (24.08.2024) ನೋಡಿದಂತೆ ಯಾವುದೇ ಶೆಡ್ ನಿರ್ಮಿಸಲಾಗಿಲ್ಲ

ಮೇಲಿನ ಕಾಮಗಾರಿಗಾಗಿ ಅಕ್ರಮ ಪಾವತಿಗೆ ಅನುಕೂಲವಾಗುವಂತೆ ಎನ್‌ಎಂಆರ್‌ಗಳು, ಸಾಮಗ್ರಿ ಬಿಲ್ಲುಗಳು, ಛಾಯಾಚಿತ್ರಗಳು ಮುಂತಾದ ಕಡ್ಡಾಯ ದಾಖಲೆಗಳನ್ನು ಕೈಚಳಕದಿಂದ ನಿರ್ವಹಿಸಲಾಗಿತ್ತು ಎಂಬುದನ್ನು ಇದು ತೋರಿಸುತ್ತದೆ. ಇದು ಸರ್ಕಾರಿ ಹಣದ ಸಂಭವನೀಯ ದುರುಪಯೋಗವಾಗಿರುತ್ತದೆ.

***ii)* ಎಸ್ ಡಬ್ಲ್ಯುಎಂ ಶೆಡ್ ಗಳ ಅಪೂರ್ಣ ಅನುಷ್ಠಾನಕ್ಕೆ ಪೂರ್ಣ ಪಾವತಿ ಮಾಡಿರುವುದು**

ಆಲಂದ್ ತಾಲೂಕಿನ ಕಮಲಾನಗರ ಗ್ರಾಮ ಪಂಚಾಯಿತಿಯಲ್ಲಿ ಎಂಜಿಎನ್‌ಆರ್‌ಇಜಿಎಸ್ ಅಡಿಯಲ್ಲಿ ಎಸ್ ಡಬ್ಲ್ಯುಎಂ ಕಾಂಪೋಸ್ಟ್ ಪಿಟ್ ಶೆಡ್ ನಿರ್ಮಾಣವನ್ನು ₹19.45 ಲಕ್ಷಕ್ಕೆ ಅಂದಾಜಿಸಲಾಗಿತ್ತು. ಈ ಕಾಮಗಾರಿಯನ್ನು ಆಲಂದ್ ನ ಪಿಆರ್.ಇಡಿ ಕಾರ್ಯಗತಗೊಳಿಸಿತು. ಎಂಐಎಸ್ ದತ್ತಾಂಶದ ಪ್ರಕಾರ (25.10.2024), ಕಾಮಗಾರಿಯನ್ನು 19 ಜನವರಿ 2022ರಂದು ಪ್ರಾರಂಭಿಸಲಾಯಿತು ಮತ್ತು 24 ಮಾರ್ಚ್ 2023ರಂದು ₹17.09 ಲಕ್ಷ ವೆಚ್ಚದಲ್ಲಿ ಪೂರ್ಣಗೊಳಿಸಲಾಯಿತು ಎಂದು ಸೂಚಿಸುತ್ತದೆ. ಲೆಕ್ಕಪರಿಶೋಧನಾ ಪರಿಶೀಲನೆಯು ಕೆಳಗಿನ ಅಂಶಗಳನ್ನು ತೋರಿಸಿತು:

- ₹15.45 ಲಕ್ಷ ಮೌಲ್ಯದ ಸಾಮಗ್ರಿಗಳನ್ನು ಟೆಂಡರ್ ಕರೆಯದೆ ಖರೀದಿಸಲಾಗಿತ್ತು.
- ಮಾಪನ ಪುಸ್ತಕವನ್ನು ದಾಖಲೆಯಲ್ಲಿ ಇರಿಸಿರಲಿಲ್ಲ. ತತ್ಪರಿಣಾಮವಾಗಿ, ಮಾಡಿದ ಪಾವತಿಯ ನಿಖರತೆಯನ್ನು ಕಂಡುಹಿಡಿಯಲು ಸಾಧ್ಯವಾಗಲಿಲ್ಲ.

- **ಯೋಜನೆಯ ಪೂರ್ಣಗೊಳಿಸುವಿಕೆಯ ವರದಿ, ಹಂತ–3ರ ಜಿಯೋ–ಟ್ಯಾಗ್ ಮಾಡಿದ ಛಾಯಾಚಿತ್ರ ಮತ್ತು ಗುಣಮಟ್ಟ ನಿಯಂತ್ರಣ ವರದಿಗಳು ಸಹ ದಾಖಲೆಯಲ್ಲಿ ಇರಲಿಲ್ಲ.**
- **₹1.64 ಲಕ್ಷ ವೇತನ ವೆಚ್ಚ ಮತ್ತು ₹15.45 ಲಕ್ಷ ಸಾಮಗ್ರಿ ವೆಚ್ಚ ಸೇರಿದಂತೆ ₹17.09 ಲಕ್ಷ ವೆಚ್ಚದ ನಂತರ ಈ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿತ್ತು.**

ಅನುಮೋದಿತ ಅಂದಾಜು ಮತ್ತು ಕಟ್ಟಡ ಯೋಜನೆಯ ಪ್ರಕಾರ, ನಾಲ್ಕು ಕಾಂಪೋಸ್ಟ್ ಗುಂಡಿಗಳು, ಐದು ಒಣ ತ್ಯಾಜ್ಯ ಮಳಿಗೆಗಳು, ಒಂದು ಕಚೇರಿ ಕೊಠಡಿ, ಎರಡು ಶೌಚಾಲಯಗಳು, ವಿದ್ಯುದ್ದೀಕರಣ ಕಾರ್ಯಗಳು ಮತ್ತು ಸೈನ್ ಬೋರ್ಡ್ ಗಳನ್ನು ಎಸ್ ಡಬ್ಲ್ಯುಎಂ ಶೆಡ್ ಕಾಮಗಾರಿಯ ವ್ಯಾಪ್ತಿಯಲ್ಲಿ ಸೇರಿಸಲಾಗಿತ್ತು. ಆದರೆ, ಜಂಟಿ ಭೌತಿಕ ಪರಿಶೀಲನೆಯು (05 ಆಗಸ್ಟ್ 2024) ಹೊರಗಿನ ರಚನೆಯೊಂದಿಗೆ ಶೆಡ್ ಮಾತ್ರ ಪೂರ್ಣಗೊಂಡಿರುವುದನ್ನು ಮತ್ತು ಕಾಮಗಾರಿಯ ವ್ಯಾಪ್ತಿಯಲ್ಲಿ ಸೇರಿಸಲಾದ ಉಳಿದ ಯಾವುದೇ ಘಟಕಗಳನ್ನು ಕಾರ್ಯಗತಗೊಳಿಸಿರಲಿಲ್ಲ ಎಂಬುದನ್ನು ತೋರಿಸಿತು. ಆದರೂ, ಕೆಳಗಿನ ಪ್ರದರ್ಶಿಕೆ–5.3ರಲ್ಲಿ ತೋರಿಸಿರುವಂತೆ. ₹6.00 ಲಕ್ಷ[24] ವೆಚ್ಚದ ಘಟಕಗಳನ್ನು ಕಾರ್ಯಗತಗೊಳಿಸಬೇಕಾಗಿದ್ದರೂ ಸಹ ಎಂಐಎಸ್ ನಲ್ಲಿ ಕಾಮಗಾರಿಯು ಪೂರ್ಣಗೊಂಡಿದೆ ಎಂದು ತೋರಿಸಲಾಗಿತ್ತು.



**ಪ್ರದರ್ಶಿಕೆ–5.3: ಕಾಂಪೋಸ್ಟ್ ಗುಂಡಿಗಳು, ಒಣ ತ್ಯಾಜ್ಯ ಮಳಿಗೆಗಳು, ಕಚೇರಿ ಕೊಠಡಿ ಮುಂತಾದ ಘಟಕಗಳನ್ನು ಕಾರ್ಯಗತಗೊಳಿಸದಿರುವುದನ್ನು ತೋರಿಸುವ ಜಂಟಿ ಭೌತಿಕ ಪರಿಶೀಲನೆಯ ಛಾಯಾಚಿತ್ರ (05.08.2024).**

ಇದು ಎಸ್‌ಡಬ್ಲ್ಯೂಎಂ ಕಾಂಪೋಸ್ಟ್ ಪಿಟ್ ಶೆಡ್ ನಿರ್ಮಿಸುವ ಮೂಲ ಉದ್ದೇಶವನ್ನು ಸಾಧಿಸದ ಜೊತೆಗೆ ಅಪೂರ್ಣ ಕಾಮಗಾರಿಗೆ ಸಂಪೂರ್ಣ ಪಾವತಿ ಮಾಡುವ ಮೂಲಕ ಆರ್ಥಿಕ ಅಕ್ರಮದಲ್ಲಿ ಪರಿಣಮಿಸಿತು. ಎರಡೂ ಪ್ರಕರಣಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳು/ಸಿಬ್ಬಂದಿಯಿಂದ ವಿವರಣೆಯನ್ನು ಕೇಳಲಾಗುವುದು ಮತ್ತು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ರಾಜ್ಯ ಸರ್ಕಾರ ತಿಳಿಸಿತು (ಮೇ 2025). ಇಂತಹ ಗಂಭೀರ ಅಕ್ರಮಗಳ ಹಿನ್ನೆಲೆಯಲ್ಲಿ ಈ ವಿಷಯವನ್ನು ತ್ವರಿತಗೊಳಿಸಬಹುದು.

### *5.2.4 ವಾಸ್ತವಿಕವಾಗಿ ಕಾರ್ಯಗತಗೊಳಿಸದ ಚೆಕ್ ಡ್ಯಾಂಗಳ ನಿರ್ಮಾಣಕ್ಕೆ ಮಾಡಿದ ಪಾವತಿಗಳು*

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ತಲಕೇರಿ ಗ್ರಾಮ ಪಂಚಾಯಿತಿಯಲ್ಲಿ ತಲಾ ₹10.00 ಲಕ್ಷ ಅಂದಾಜು ವೆಚ್ಚದಲ್ಲಿ ಚೆಕ್ ಡ್ಯಾಂ ನಿರ್ಮಾಣಕ್ಕಾಗಿ ಪಿಆರ್‌ಇಡಿ, ಯಲಬುರ್ಗಾ (2019–20) ಎರಡು ಕಾಮಗಾರಿಗಳನ್ನು ಕೈಗೆತ್ತಿಕೊಂಡಿತು. ಕಾಮಗಾರಿಗಳನ್ನು ಕಾರ್ಯಗತಗೊಳಿಸದೆ ₹14.42 ಲಕ್ಷವನ್ನು (ಅಕ್ಟೋಬರ್ 2019 ರಿಂದ ಆಗಸ್ಟ್ 2022 ರವರೆಗೆ) ಮೋಸದಿಂದ ಪಾವತಿಸಲು ದಾಖಲೆಗಳನ್ನು ತಿದ್ದಿರುವುದನ್ನು ಲೆಕ್ಕಪರಿಶೋಧನಾ ಪರಿಶೀಲನೆಯು ಬಹಿರಂಗಪಡಿಸಿತು. ವಿವರಗಳು ಈ ಕೆಳಗಿನಂತಿವೆ:

[24] 32 ಸಿವಿಲ್ ಸಾಮಗ್ರಿಗಳು, 10 ವಿದ್ಯುತ್ ಸಾಮಗ್ರಿಗಳು ಮತ್ತು ಸೈನ್ ಬೋರ್ಡ್ ಗಳ ವೆಚ್ಚವನ್ನು ಅಂದಾಜುಗಳಲ್ಲಿ ಸೇರಿಸಲಾಗಿತ್ತು ಆದರೆ ಕಾರ್ಯಗತಗೊಳಿಸಿರಲಿಲ್ಲ.

- ಎಎಂಸಿ, 2019–20ರ ಕಂಡಿಕೆ–7.1.5ರ ಪ್ರಕಾರ, ಯಾವುದೇ ಕಾಮಗಾರಿಯ ಫಲಿತಾಂಶ/ ಪ್ರಯೋಜನವು ಕಾಮಗಾರಿಯು ಸಂಪೂರ್ಣವಾಗಿ ಪೂರ್ಣಗೊಳ್ಳುವುದನ್ನು ಅವಲಂಬಿಸಿರುತ್ತದೆ ಮತ್ತು, ಅದನ್ನು ಸಣ್ಣ ಕಾಮಗಾರಿಗಳಾಗಿ ವಿಂಗಡಿಸಬಾರದು. ಆದರೆ, ಎಂಟು ಕಮಾನುಗಳನ್ನು ಹೊಂದಿರುವ ಚೆಕ್ ಡ್ಯಾಮ್ ನಿರ್ಮಾಣದ ಕಾಮಗಾರಿಯನ್ನು ಎರಡು ಕಾಮಗಾರಿಗಳಾಗಿ ವಿಂಗಡಿಸಲಾಯಿತು (ತಲಾ ನಾಲ್ಕು ಕಮಾನುಗಳು) ಮತ್ತು ಸಕ್ಷಮ ಪ್ರಾಧಿಕಾರದ (ಇಇ, ಪಿಆರ್‌ಇಡಿ) ಅನುಮತಿಯನ್ನು ತಪ್ಪಿಸಲು ಅಂದಾಜು ವೆಚ್ಚವನ್ನು ತಲಾ ₹10 ಲಕ್ಷಕ್ಕೆ ಸೀಮಿತಗೊಳಿಸಲಾಯಿತು.
- ಈ ಎರಡು ಕಾಮಗಾರಿಗಳ ಫೈಲ್ ಗಳಲ್ಲಿನ ಮಸ್ಟರ್ ರೋಲ್ ಗಳನ್ನು ಎನ್‌ಆರ್‌ಇಜಿಎಸಾಫ್ಟ್ ಮೂಲಕ ಸೃರಲಿಲ್ಲವಾಗಿ ಅವುಗಳ ಸತ್ಯಾಸತ್ಯತೆಯು ಅನುಮಾನಾಸ್ಪದವಾಗಿದೆ. ಉದಾಹರಣೆಗೆ, ಎರಡನೇ ಕಾಮಗಾರಿ ಫೈಲ್ (1520004/WC/93393042892253342) ನಲ್ಲಿರುವ ಮಸ್ಟರ್ ರೋಲ್‌ಗಳಲ್ಲಿ (No. 7570) ಒಂದನ್ನು ಇನ್ನೊಂದು ಕಾಮಗಾರಿ ಫೈಲ್‌ನ (1520004/WC/93393042892253335) ಮಸ್ಟರ್ ರೋಲನ್ನು ತಿದ್ದುವ ಮೂಲಕ ಸೃಷ್ಟಿಸಲಾಗಿತ್ತು. ಒಂದೇ ಜಿಎಸ್ಟಿ ಸಂಖ್ಯೆಯ ಬಳಕೆ, ದಿನಾಂಕಗಳನ್ನು ತಿದ್ದಿರುವುದು ಇತ್ಯಾದಿಗಳಿಂದ ಸಾಮಗ್ರಿ ಬಿಲ್ಲುಗಳ ಬೆಲೆಪಟ್ಟಿಗಳು ಸಹ ನಕಲಿಯಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ.
- ಈ ಎರಡೂ ಕಾಮಗಾರಿಗಳಲ್ಲಿ, ಸಾಮಗ್ರಿ ಪೂರೈಕೆಗಾಗಿ ಮೆ.ಅಮರೇಶ್ವರ ಎಂಟರ್ ಪ್ರೈಸಸ್ ಯಾವುದೇ ಬೆಲೆಪಟ್ಟಿಯನ್ನು ಸಲ್ಲಿಸಿರಲಿಲ್ಲ. ಆದರೆ. ₹10.25 ಲಕ್ಷವನ್ನು (ಒಟ್ಟು ಸಾಮಗ್ರಿ ವೆಚ್ಚವಾದ ₹12.03 ಲಕ್ಷದ ಶೇಕಡಾ 85ರಷ್ಟು) ಅಮರೇಶ್ವರ ಎಂಟರ್‌ಪ್ರೈಸಸ್‌ಗೆ ಪಾವತಿಸಲಾಗಿತ್ತು. ಅಕ್ರಮ ಪಾವತಿಗೆ ಅನುಕೂಲವಾಗುವಂತೆ ಹೊಂದಾಣಿಕೆಯ ಸಾಧ್ಯತೆಯನ್ನು ತಳ್ಳಿಹಾಕಲಾಗುವುದಿಲ್ಲ.
- ಈ ಎರಡು ಕಾಮಗಾರಿಗಳ ಮಸ್ಟರ್ ರೋಲ್‌ಗಳ ಪ್ರಕಾರ, 07 ಸೆಪ್ಟೆಂಬರ್ 2019ರಿಂದ 02 ಅಕ್ಟೋಬರ್ 2019ರ ಅವಧಿಯಲ್ಲಿ 960 ಮಾನವ ದಿನಗಳನ್ನು (₹2.39 ಲಕ್ಷ) ಒದಗಿಸುವ ಮೂಲಕ ದೈಹಿಕ ಕೆಲಸವನ್ನು ಕೈಗೊಳ್ಳಲಾಯಿತು ಮತ್ತು ಸಾಮಗ್ರಿ ಖರೀದಿಗಾಗಿ ₹12.03 ಲಕ್ಷವನ್ನು ಪಾವತಿಸಲಾಯಿತು. ಭುವನ್ ಪೋರ್ಟಲ್‌ನಲ್ಲಿ ಪಿಆರ್.ಇಡಿ ಅಪ್‌ಲೋಡ್ ಮಾಡಿದ ಹಂತ–2ರ ಛಾಯಾಚಿತ್ರಗಳು (05 ಅಕ್ಟೋಬರ್ 2019) ಕಟ್ಟಡವು ಅಕ್ಟೋಬರ್ 2019ರೊಳಗೆ ಪೂರ್ಣಗೊಂಡಿದೆ ಎಂದು ತೋರಿಸಿತ್ತು. ಇದರ ಸತ್ಯಾಸತ್ಯತೆಯನ್ನು ಕಂಡುಹಿಡಿಯಲು, ಲೆಕ್ಕಪರಿಶೋಧನೆಯು ಗೂಗಲ್ ಅರ್ಥ್ ಮತ್ತು ಅದರ ಐತಿಹಾಸಿಕ ಚಿತ್ರಣವನ್ನು (ಟೈಮ್ ಲೈನ್) ಬಳಸಿಕೊಂಡು ವಿವರಗಳನ್ನು ಮರು ಪರಿಶೀಲಿಸಿತು. ಜನವರಿ 2020ರವರೆಗೆ ಕಾಮಗಾರಿಯ ಸ್ಥಳದಲ್ಲಿ ಯಾವುದೇ ಕಾಮಗಾರಿ/ರಚನೆ (ಚೆಕ್ ಡ್ಯಾಮ್) ಲಭ್ಯವಿಲ್ಲದಿರುವುದನ್ನು ಗಮನಿಸಲಾಯಿತು (ಪ್ರದರ್ಶಿಕೆ–5.4).

| |
|---|
| **ಎಂಜಿಎನ್‌ಆರ್‌ಇಜಿಎಸ್ ಕಾಮಗಾರಿ ಕೋಡ್:** 1520004/WC/93393042892253348 |
| **ಭುವನ್ ಪೋರ್ಟಲ್ ನಿಂದ ಜಿಪಿಎಸ್ ಗುಣಲಕ್ಷಣಗಳು:** 15.6579959,76.28729026 (ಮೊದಲು) |



**ಪ್ರದರ್ಶಿಕೆ–5.4: 14.01.2020 ರ ಗೂಗಲ್ ಅರ್ಥ್ ಫೋಟೋದಲ್ಲಿ ಯಾವುದೇ ಚೆಕ್ ಡ್ಯಾಮ್ ಗೋಚರಿಸಲಿಲ್ಲ**

ಹೀಗೆ, ಪಿಆರ್.ಇಡಿ, ಯಲಬುರ್ಗಾ ಎಂಜಿಎನ್‌ಆರ್‌ಇಜಿಎಸ್ ಅಡಿಯಲ್ಲಿ ₹14.42 ಲಕ್ಷಗಳ ಅಕ್ರಮ ಪಾವತಿಯನ್ನು ಕ್ಲೈಮ್ ಮಾಡಲು ಸುಳ್ಳು ದಾಖಲೆಗಳನ್ನು ಸೃಷ್ಟಿಸಿತ್ತು. ಅಪ್‌ಲೋಡ್ ಸಂಬಂಧಪಟ್ಟ ಅಧಿಕಾರಿಗಳು/ಸಿಬ್ಬಂದಿಯಿಂದ ವಿವರಣೆ ಪಡೆಯಲಾಗುವುದು ಮತ್ತು ಅವಲೋಕನಗಳು ಸರಿಯಾಗಿದ್ದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ರಾಜ್ಯ ಸರ್ಕಾರ ತಿಳಿಸಿತು (ಮೇ 2025). ಉತ್ತರವು ನಿರ್ದಿಷ್ಟವಾಗಿರುವ ಬದಲು, ಗೂಗಲ್ ಅರ್ಥ್ ನ ಚಿತ್ರಣದ ಸಾಮಾನ್ಯ ಮಿತಿಗಳನ್ನು ಉಲ್ಲೇಖಿಸಿತು, ಉದಾಹರಣೆಗೆ ಚಿತ್ರಗಳನ್ನು ಇಂದೀಕರಿಸದಿರುವುದು, ಕಡಿಮೆ ರೆಸಲ್ಯೂಶನ್ ಕ್ಲೌಡ್ ಕವರ್ ಇತ್ಯಾದಿ. ಉತ್ತರದಲ್ಲಿ ಬದ್ಧತೆಯಿರಲಿಲ್ಲ ಮತ್ತು ಪ್ರಸ್ತುತ ಪ್ರಕರಣದಲ್ಲಿ ಲಭ್ಯವಿರುವ ಚಿತ್ರವು (14.01.2020) ಅಂತಹ ಮಿತಿಗಳಿಂದ ಬಳಲದಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

### *5.2.5 ಸಸಿಗಳನ್ನು ಬೆಳೆಸುವುದಕ್ಕೆ ಅನುಮಾನಾಸ್ಪದ ವೆಚ್ಚ (ಸಾಮಾಜಿಕ ಅರಣ್ಯ)*

**ಎಂಜಿಎನ್‌ಆರ್‌ಇಜಿಎಸ್ ಅಡಿಯಲ್ಲಿ ಪ್ರತಿಯೊಂದು ಆಸ್ತಿಯನ್ನು (ನವೆಂಬರ್ 2017 ರಿಂದ) ಮೂರು ಹಂತಗಳ ಎರಡು ಛಾಯಾಚಿತ್ರಗಳೊಂದಿಗೆ ಜಿಯೋಟ್ಯಾಗ್ ಮಾಡಬೇಕಾಗಿತ್ತು, ಅವುಗಳೆಂದರೆ, (i) ಕಾಮಗಾರಿಯನ್ನು ಪ್ರಾರಂಭಿಸುವ ಮೊದಲು (ii) ಕಾಮಗಾರಿಯನ್ನು ಕಾರ್ಯಗತಗೊಳಿಸುವ ಸಮಯದಲ್ಲಿ ಮತ್ತು (iii) ಕಾಮಗಾರಿ ಪೂರ್ಣಗೊಂಡ ನಂತರ.**

**ಯಲಬುರ್ಗ ತಾಲ್ಲೂಕಿನ ಸಾಮಾಜಿಕ ಅರಣ್ಯ ಇಲಾಖೆಯ ಆರ್.ಎಫ್‌ಒ ವತಿಯಿಂದ ಕೇಂದ್ರ ನರ್ಸರಿಯಲ್ಲಿ (ಕುಡರಿಕೋಟಗಿ) ಸಸಿ ಬೆಳೆಸುವಿಕೆಗೆ ಸಂಬಂಧಿಸಿದ ಮೂರು ಕಾಮಗಾರಿಗಳಲ್ಲಿ, ದಾಖಲಿಸಿದ ಅಳತೆಗಳು ಮತ್ತು ಜಿಯೋಟ್ಯಾಗ್ ಮಾಡಿದ ಛಾಯಾಚಿತ್ರಗಳ ನಡುವೆ ಹೊಂದಾಣಿಕೆ ಯಿಲ್ಲದಿರುವುದನ್ನು ಮತ್ತು ಖರೀದಿ ಪ್ರಕ್ರಿಯೆಯಲ್ಲಿ ಭಾಗವಹಿಸದ ಮಾರಾಟಗಾರರಿಗೆ ಸಾಮಗ್ರಿ ಬಿಲ್ ಗಳನ್ನು ಪಾವತಿಸಿರುವುದು ಮುಂತಾದ ಅಸಂಗತೆಗಳನ್ನು ಗಮನಿಸಲಾಯಿತು. ವಿವರಗಳನ್ನು ಕೆಳಗೆ ನೀಡಲಾಗಿದೆ:**

- **ಮೊದಲ ಕಾಮಗಾರಿಯ[25] ಎಂಬಿಯಲ್ಲಿ ಸೂಚಿಸಲಾದ ದಾಖಲೆಗಳ ಪ್ರಕಾರ, ಮೇ 2020ರಿಂದ ಸೆಪ್ಟೆಂಬರ್ 2020ರವರೆಗೆ ನರ್ಸರಿಯಲ್ಲಿ ಸಸಿಗಳನ್ನು ಬೆಳೆಸಲಾಯಿತು ಮತ್ತು 10×16 ಗಾತ್ರದ ಸಸಿಗಳಿಗೆ ದಿನಕ್ಕೆ ಎರಡು ಬಾರಿ (01 ಸೆಪ್ಟೆಂಬರ್ 2020ರ ವರೆಗೆ) ನೀರುಣಿಸಲಾಯಿತು ಮತ್ತು ₹3.35 ಲಕ್ಷ ವೆಚ್ಚವನ್ನು ಭರಿಸಲಾಯಿತು. ಆದರೆ ಭುವನ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾದ ಛಾಯಾಚಿತ್ರ (ಹಂತ–1) (06 ಸೆಪ್ಟೆಂಬರ್ 2020) ನಿವೇಶನದಲ್ಲಿ ಯಾವುದೇ ಸಸಿಗಳನ್ನು ತೋರಿಸಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. (ಪ್ರದರ್ಶಿಕೆ–5.5).**

[25] 2020–21ನೇ ಸಾಲಿನಲ್ಲಿ 10x16 ಗಾತ್ರದ ಪಿಬಿ ಸಸಿಗಳನ್ನು (1520004/ಡಿಪಿ/93393042892249759) ಬೆಳೆಸುವ ಕಾಮಗಾರಿ, ಹಿರೇವಂಕಲಕುಂಟ ಗ್ರಾಮ ಪಂಚಾಯಿತಿ

**ಪ್ರದರ್ಶಿಕೆ–5.5: ಹಂ ಸಸಿಗಳು ಕಾಣದ ಸಸಿ ಕಾಮಗಾರಿಯ ಹಂತ–1ರ ಛಾಯಾಚಿತ್ರ (06.09.2020)**







- **ಎರಡನೇ ಕಾಮಗಾರಿಗೆ[26] ಸಂಬಂಧಿಸಿದಂತೆ, 4"x6" ಪಾಲಿಥೀನ್ ಚೀಲಗಳನ್ನು 8"x12" ಪಾಲಿಥೀನ್ ಚೀಲಗಳಿಗೆ ಬದಲಾಯಿಸಿ ನಾಟಿ ಮಾಡುವುದು ಮತ್ತು ಸಸಿಗಳನ್ನು ಹೊಂದಿರುವ 50,000 ಪಾಲಿಥೀನ್ ಚೀಲಗಳಿಗೆ ದಿನಕ್ಕೆ ಎರಡು ಬಾರಿ ನೀರು ಹಾಕುವ ಕಾರ್ಯವನ್ನು 29 ಸೆಪ್ಟೆಂಬರ್ 2020ರಿಂದ 30 ನವೆಂಬರ್ 2020ರ ಅವಧಿಯಲ್ಲಿ ಕೈಗೊಳ್ಳಲಾಯಿತು. ಇದಕ್ಕಾಗಿ ಈ ಅವಧಿಯಲ್ಲಿ ₹11.89 ಲಕ್ಷ ವೆಚ್ಚವನ್ನು ಭರಿಸಲಾಯಿತು ಆದರೆ, ಭುವನ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾದ ಹಂತ–1 ಮತ್ತು ಹಂತ–2ರ ಛಾಯಾಚಿತ್ರಗಳಿಂದ ಇದನ್ನು ದೃಢೀಕರಿಸಿರಲಿಲ್ಲ (ಪ್ರದರ್ಶಿಕೆ–5.6):**

**ಪ್ರದರ್ಶಿಕೆ–5.6: 8 X 12 ಗಾತ್ರದ ಸಸಿಗಳ ಯಾವುದೇ ಚಿಹ್ನೆಗಳಿಲ್ಲದ ಕಾಮಗಾರಿ ಹಂತ–1 (02.12.2020) ಮತ್ತು ಹಂತ–2 (04.12.2020) ಛಾಯಾಚಿತ್ರಗಳು**





- **ಅದೇ ರೀತಿ, ಮೂರನೇ ಕಾಮಗಾರಿಗೆ[27] ಸಂಬಂಧಿಸಿದಂತೆ, 4"x6" ಪಾಲಿಥೀನ್ ಚೀಲಗಳನ್ನು 8"x12" ಪಾಲಿಥೀನ್ ಚೀಲಗಳಿಗೆ ಬದಲಾಯಿಸಿ ನಾಟಿ ಮಾಡುವುದು ಮತ್ತು ಸಸಿಗಳನ್ನು ಹೊಂದಿರುವ 50,000 ಪಾಲಿಥೀನ್ ಚೀಲಗಳಿಗೆ ದಿನಕ್ಕೆ ಎರಡು ಬಾರಿ ನೀರು ಹಾಕುವ ಕಾರ್ಯವನ್ನು 09 ಅಕ್ಟೋಬರ್ 2021ರಿಂದ 31 ಅಕ್ಟೋಬರ್ 2021ರ ಅವಧಿಯಲ್ಲಿ ₹7.75 ಲಕ್ಷ ವೆಚ್ಚದಲ್ಲಿ ಕೈಗೊಳ್ಳಲಾಯಿತು. ಆದರೆ, ಭುವನ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾದ ಹಂತ–1ರ ಛಾಯಾಚಿತ್ರ (29.10.2021) ಇದನ್ನು ಬೆಂಬಲಿಸಲಿಲ್ಲ (ಪ್ರದರ್ಶಿಕೆ–5.7).**

---

[26] 2020–21 ರಲ್ಲಿ 8x12 Pb ಸಸಿಗಳನ್ನು (1520004/DP/93393042892257741) ಬೆಳೆಸುವ ಕೆಲಸ, ಗೆದ್ದಿಗೇರಿ ಗ್ರಾಮ ಪಂಚಾಯಿತಿ

[27] 2021–22ನೇ ಸಾಲಿನಲ್ಲಿ 8x12 ಗಾತ್ರದ ಪಿಬಿ ಸಸಿಗಳನ್ನು (1520004/ಡಿಪಿ/93393042892305796) ಬೆಳೆಸುವ ಕಾಮಗಾರಿ, ಗೆದ್ದಿಗೇರಿ ಗ್ರಾಮ ಪಂಚಾಯಿತಿ

**ಪ್ರದರ್ಶಿಕೆ–5.7: ಸಸಿಗಳಿಲ್ಲದ ಕಾಮಗಾರಿಯ ಛಾಯಾಚಿತ್ರ (29.10.2021)**







- **ಮೂರು[28] ಏಜೆನ್ಸಿಗಳಿಗೆ, ಅವರು ಎಲ್–1 ಬಿಡ್ಡರ್ ಆಗಿರದಿದ್ದರೂ ಅಥವಾ ಯಾವುದೇ ಬಿಲ್ ಸಲ್ಲಿಸಿಲ್ಲದಿದ್ದರೂ, ಒಟ್ಟು ₹6.60 ಲಕ್ಷ ಸಾಮಗ್ರಿ ಮೊತ್ತವನ್ನು ಪಾವತಿಸಲಾಗಿತ್ತು.**
- **ಮೂರನೇ ಕಾಮಗಾರಿಯ ಅಂದಾಜಿನ ಪ್ರಕಾರ, ಕಾರ್ಮಿಕ ಘಟಕವು ₹1.31 ಲಕ್ಷ (454 ಮಾನವ ದಿನಗಳು) ಮತ್ತು ಸಾಮಗ್ರಿ ಘಟಕವು ₹16.36 ಲಕ್ಷವಾಗಿತ್ತು. ಆದರೆ, ಕೇವಲ ಒಂದು ಮಾನವ ದಿನವನ್ನು (₹289) ಉತ್ಪಾದಿಸಲಾಯಿತು ಮತ್ತು ಉಳಿದ ಸಂಪೂರ್ಣ ಮೊತ್ತವಾದ ₹14.77 ಲಕ್ಷವನ್ನು ಮಾರಾಟಗಾರರಿಗೆ ಪಾವತಿಸಲಾಯಿತು. ವೇತನ ಪಾವತಿಯು ಸಾಮಗ್ರಿ ಪಾವತಿಗೆ ಮುಂಚಿತವಾಗಿ ಇರಬೇಕು ಎಂದು ಸೂಚಿಸುವ ಎಎಂಸಿ 2029–20ರ ಕಂಡಿಕೆ–7.17(ಎಫ್)ರ ನಿಬಂಧನೆಯನ್ನು ತಪ್ಪಿಸಲು ಏಕ ಮಾನವ ದಿನವನ್ನು ಸೃಷ್ಟಿಸಿರುವ ಸಾಧ್ಯತೆಯನ್ನು ತಳ್ಳಿಹಾಕಲಾಗುವುದಿಲ್ಲ.**
- **ಮೊದಲ ಕಾಮಗಾರಿಗಾಗಿನ ಮಸ್ಟರ್ ರೋಲ್‌ಗಳು ಸೆಪ್ಟೆಂಬರ್ 2020ರಿಂದ ಫೆಬ್ರವರಿ 2021 ರವರೆಗಿನ ಅವಧಿಗೆ ಸಂಬಂಧಿಸಿದ್ದಾಗಿದ್ದವು ಮತ್ತು ಎರಡನೇ ಕಾಮಗಾರಿಗಾಗಿನ ಮಸ್ಟರ್ ರೋಲ್‌ಗಳು ಡಿಸೆಂಬರ್ 2020ರಿಂದ ಮಾರ್ಚ್ 2021 ರವರೆಗಿನ ಅವಧಿಗೆ ಸಂಬಂಧಿಸಿದ್ದಾಗಿದ್ದವು. ಹೀಗೆ, ಡಿಸೆಂಬರ್ 2020ರಿಂದ ಸಸಿಗಳು ಗೋಚರಿಸಬೇಕು. ಸೆಂಟ್ರಲ್ ನರ್ಸರಿ (ಕುಡರಿಕೋಟಗಿ) ಸ್ಥಳದ ಐತಿಹಾಸಿಕ ಚಿತ್ರಣವು ಡಿಸೆಂಬರ್ 2020ರಲ್ಲಿ ಯಾವುದೇ ಸಸಿಗಳನ್ನು ಬೆಳಸಿರಲಿಲ್ಲ ಎಂಬುದನ್ನು ತೋರಿಸಿತು (ಪ್ರದರ್ಶಿಕೆ–5.8):**

[28] ಮೆ.ಪ್ರಗತಿ ಎಂಟರ್ ಪ್ರೈಸಸ್– ₹2.19 ಲಕ್ಷ (1520004/DP/93393042892305796) ಮತ್ತು ₹1.90 ಲಕ್ಷ (1520004/DP/93393042892257741); ಮೆ.ಆರ್.ಎಮ್.ಆರ್. ಎಂಟರ್ ಪ್ರೈಸಸ್ – ₹2.00 ಲಕ್ಷ (1520004/DP/93393042892305796); ಮೆ.ಬಾಲಾಜಿ ಪಾಲಿಮರ್ಸ್– ₹0.51 ಲಕ್ಷ (1520004/DP/93393042892249759)

**ಪ್ರದರ್ಶಿಕೆ–5.8:**
**ಡಿಸೆಂಬರ್ 2020ರಲ್ಲಿ ಸೆಂಟ್ರಲ್ ನರ್ಸರಿಯಲ್ಲಿ (15.6137528,76.0489659) ಯಾವುದೇ ಸಸಿಗಳು ಕಂಡುಬಂದಿಲ್ಲ**




**ಈ ಅಸಾಂಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಯಲಬುರ್ಗಾ ತಾಲೂಕಿನ ಮೂರು ಸಾಮಾಜಿಕ ಅರಣ್ಯೀಕರಣ ಕಾಮಗಾರಿಗಳಿಗೆ ಭರಿಸಿರುವ ಒಟ್ಟು ₹34.55 ಲಕ್ಷ[29] ಸಂಶಯಾಸ್ಪದವಾಗಿದೆ.**

**ತಾಂತ್ರಿಕ ದೋಷದಿಂದಾಗಿ ಭುವನ್ ಪೋರ್ಟಲ್‌ನಲ್ಲಿ ಅನುಚಿತ ಫೋಟೋಗಳನ್ನು ಅಪ್‌ಲೋಡ್ ಮಾಡಲಾಗಿದೆ ಮತ್ತು ಅಂತಹ ತಪ್ಪುಗಳು ಪುನರಾವರ್ತನೆಯಾಗುವುದಿಲ್ಲ ಎಂದು ರಾಜ್ಯ ಸರ್ಕಾರ ತಿಳಿಸಿತು (ಮೇ 2025). ಜಿಯೋಟ್ಯಾಗ್ ಮಾಡಿದ ಫೋಟೋವನ್ನು ಆಸ್ತಿ ಸ್ಥಳದಲ್ಲಿ ತೆಗೆದುಕೊಳ್ಳಬೇಕಾಗಿರುವುದರಿಂದ ಮತ್ತು ಅನುಚಿತ ಫೋಟೋವನ್ನು ಅಪ್‌ಲೋಡ್ ಮಾಡಲು ಸಾಧ್ಯವಾಗದ ಕಾರಣ ಉತ್ತರವನ್ನು ಒಪ್ಪಲಾಗುವುದಿಲ್ಲ.**

**ಶಿಫಾರಸು–12: ಒಮ್ಮುಖ ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಎಂಜಿಎನ್‌ಆರ್‌ಇಜಿಎಸ್ ನಲ್ಲಿ ಕಲ್ಪಿಸಲಾದ ಸಾಂಸ್ಥಿಕ ಚೌಕಟ್ಟಿಗೆ ಸರ್ಕಾರ ಬದ್ಧವಾಗಿರಬೇಕು.**

**ಶಿಫಾರಸು–13: ಸರ್ಕಾರವು ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಇದೇ ರೀತಿಯ ಪ್ರಕರಣಗಳನ್ನು ತನಿಖೆ ಮಾಡಬೇಕು, ಮಾಡಿದ ಪಾವತಿಗಳನ್ನು ವಸೂಲಿ ಮಾಡುವುದನ್ನು ಖಚಿತಪಡಿಸಿಕೊಳ್ಳಬೇಕು ಮತ್ತು ತಪ್ಪಿತಸ್ಥ ಅಧಿಕಾರಿಗಳ ಮೇಲೆ ಹೊಣೆಗಾರಿಕೆಯನ್ನು ನಿಗದಿಪಡಿಸಬೇಕು.**

## 5.3 ಜಿಲ್ಲಾ/ತಾಲ್ಲೂಕು ಮಟ್ಟದಲ್ಲಿ ತಾಂತ್ರಿಕ ಸಮಿತಿಗಳನ್ನು ರಚಿಸದಿರುವುದು

ಎಂಜಿಎನ್‌ಆರ್‌ಇಜಿಎಸ್ ಅನುಷ್ಠಾನಕ್ಕೆ ಮಾರ್ಗದರ್ಶನ ನೀಡಲು ಜಿಲ್ಲಾ ಮಟ್ಟದ ತಾಂತ್ರಿಕ ಸಮಿತಿಯನ್ನು ರಚಿಸಬಹುದು ಎಂದು ಕಾರ್ಯಾಚರಣಾ ಮಾರ್ಗಸೂಚಿ 2013ರ ಕಂಡಿಕೆ–4.4.3 ತಿಳಿಸುತ್ತದೆ. ಎಂಜಿಎನ್‌ಆರ್‌ಇಜಿಎಸ್ ಕಾಮಗಾರಿಗಳ ಅಂದಾಜುಗಳ ವೈಜ್ಞಾನಿಕ ತಯಾರಿಕೆ, ಸಮಯೋಚಿತ ತಾಂತ್ರಿಕ ಮಂಜೂರಾತಿಗಳು, ಸಾಕಷ್ಟು ಜಿಯೋ–ಟ್ಯಾಗಿಂಗ್ ಮತ್ತು ಗುಣಮಟ್ಟದ ಕಾಮಗಾರಿಗಳ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ತಾಂತ್ರಿಕ ಸಮಿತಿಗಳನ್ನು ರಚಿಸಲು ರಾಜ್ಯ ಸರ್ಕಾರ ಸೂಚನೆ ನೀಡಿತು (ಜನವರಿ 2021). ಎಂಜಿಎನ್‌ಆರ್‌ಇಜಿಎಸ್ ಕಾಮಗಾರಿಗಳ ತಾಂತ್ರಿಕ ಅಂಶಗಳನ್ನು ಪರಿಶೀಲಿಸಲು ಈ ಸಮಿತಿಗಳು ಪ್ರತಿ 15 ದಿನಗಳಿಗೊಮ್ಮೆ ಸಭೆ ಸೇರಬೇಕಾಗಿತ್ತು.

ಎರಡು ಜಿಲ್ಲೆಗಳಲ್ಲಿ (ಕಲಬುರಗಿ ಮತ್ತು ತುಮಕೂರು) ಜಿಲ್ಲಾ ಮಟ್ಟದ ತಾಂತ್ರಿಕ ಸಮಿತಿಗಳನ್ನು (ಡಿಎಲ್‌ಟಿಸಿಗಳು) ರಚಿಸಿರಲಿಲ್ಲ ಎಂಬುದನ್ನು ಗಮನಿಸಲಾಯಿತು. ಉಳಿದ ಮೂರು ಆಯ್ದ ಜಿಲ್ಲೆಗಳಲ್ಲಿ (ಕೊಪ್ಪಳ,

29 ₹5.14 ಲಕ್ಷ + ₹14.64 ಲಕ್ಷ + ₹14.77 ಲಕ್ಷ

ಮಂಡ್ಯ ಮತ್ತು ಶಿವಮೊಗ್ಗ) ಡಿಎಲ್‌ಟಿಸಿಗಳನ್ನು ರಚಿಸಲಾಗಿದ್ದರೂ, ಈ ಸಮಿತಿಗಳು ನಿಗದಿತ 15 ದಿನಗಳ ಮಧ್ಯಂತರದಲ್ಲಿ ಸಭೆ ಸೇರಿರಲಿಲ್ಲ. ಆಯ್ದ ಹತ್ತು ತಾಲ್ಲೂಕುಗಳಲ್ಲಿ ಶಿಕಾರಿಪುರ ತಾಲ್ಲೂಕಿನಲ್ಲಿ ಮಾತ್ರ ತಾಲ್ಲೂಕು ಮಟ್ಟದ ತಾಂತ್ರಿಕ ಸಮಿತಿಗಳನ್ನು ರಚಿಸಲಾಗಿತ್ತು ಎಂಬುದನ್ನು ಗಮನಿಸಲಾಯಿತು. ಅಗತ್ಯವಾದ ತಾಂತ್ರಿಕ ಸಮಿತಿಗಳನ್ನು ರಚಿಸದಿರುವುದು ಮತ್ತು ನಿಗದಿತ ಮಧ್ಯಂತರದಲ್ಲಿ ಸಭೆಗಳನ್ನು ನಡೆಸಲು ವಿಫಲವಾದದ್ದು ಎಂಜಿಎನ್‌ಆರ್‌ಇಜಿಎಸ್ ಕಾಮಗಾರಿಗಳ ಅನುಷ್ಠಾನದ ಮೇಲೆ ಪ್ರತಿಕೂಲ ಪರಿಣಾಮ ಬೀರಿತು.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ಅಭಿಪ್ರಾಯವನ್ನು ಒಪ್ಪಿಕೊಂಡಿತು ಮತ್ತು ಎಲ್ಲಾ ಜಿಲ್ಲೆಗಳಿಗೆ ಅಗತ್ಯ ನಿರ್ದೇಶನಗಳನ್ನು ನೀಡಲಾಗುವುದು ಎಂದು ತಿಳಿಸಿತು (ಮೇ 2025).

## 5.4 ಅಂದಾಜುಗಳ ತಯಾರಿಕೆಯಲ್ಲಿ ವ್ಯತ್ಯಾಸಗಳು

### *5.4.1 ಅವಾಸ್ತವಿಕ ಅಂದಾಜುಗಳು*

ಗ್ರಾಮಾಭಿವೃದ್ಧಿ ಸಚಿವಾಲಯವು ಹೊರಡಿಸಿದ ಕೇಸ್ ರೆಕಾರ್ಡ್/ವರ್ಕ್ ಫೈಲ್ ಗಾಗಿನ ಸೂಚಕ ಚೌಕಟ್ಟು (ಜುಲೈ 2017) ಪ್ರತಿ ಕಾಮಗಾರಿಗೂ ತಾಂತ್ರಿಕ ಅಂದಾಜು ಸಿದ್ಧಪಡಿಸುವುದು ಕಡ್ಡಾಯವಾಗಿದೆ ಎಂದು ಷರತ್ತು ವಿಧಿಸಿತ್ತು. ತಾಂತ್ರಿಕ ಅಂದಾಜು ತಯಾರಿಸುವ ಮೊದಲು, ಪ್ರಾಥಮಿಕ ಮತ್ತು ದ್ವಿತೀಯ ದತ್ತಾಂಶವನ್ನು ಸಂಗ್ರಹಿಸಬೇಕಾಗಿತ್ತು ಮತ್ತು ಅದರ ಆಧಾರದ ಮೇಲೆ ಕೆಲಸದ ರೇಖಾಚಿತ್ರ ಮತ್ತು ವಿನ್ಯಾಸವನ್ನು ಸಿದ್ಧಪಡಿಸಬೇಕು. ತಾಂತ್ರಿಕ ಅನುಮತಿಯನ್ನು ಸಕ್ಷಮ ಪ್ರಾಧಿಕಾರವು ನೀಡಬೇಕಾಗಿತ್ತು.

37 ಕಾಮಗಾರಿಗಳ ಅಂದಾಜುಗಳಲ್ಲಿ ಅರೆ–ನುರಿತ ಮತ್ತು ನುರಿತ ಕಾರ್ಮಿಕರನ್ನು ತೊಡಗಿಸಿಕೊಳ್ಳಲು ₹4.89 ಲಕ್ಷ ಮೊತ್ತವನ್ನು ಒಳಗೊಂಡಿದ್ದರೂ, ಅವರನ್ನು ನಿಯೋಜಿಸಿರಲಿಲ್ಲ ಮತ್ತು ಈ ಘಟಕದ ಮೇಲೆ ಯಾವುದೇ ವೆಚ್ಚವನ್ನು ಮಾಡಿರಲಿಲ್ಲ ಎಂಬುದನ್ನು ಪರೀಕ್ಷಾ–ತನಿಖೆ ನಡೆಸಿದ ಎಂಟು ಗ್ರಾಮಪಂಚಾಯಿತಿಗಳ ದಾಖಲೆಗಳ ಪರಿಶೀಲನೆಯು ತೋರಿಸಿತು (**ಅನುಬಂಧ–5.4**ರಲ್ಲಿ ವಿವರಿಸಲಾಗಿದೆ). ಇದಕ್ಕೆ ವ್ಯತಿರಿಕ್ತವಾಗಿ, ಎರಡು ಗ್ರಾಮ ಪಂಚಾಯಿತಿಗಳಲ್ಲಿನ ಮೂರು ಕಾಮಗಾರಿಗಳಲ್ಲಿ, ಅಂದಾಜು ಅರೆ–ನುರಿತ ಕಾರ್ಮಿಕರಿಗೆ ₹40,065 ರೂ.ಗಳನ್ನು[30] ಒಳಗೊಂಡಿತ್ತು, ಆದರೆ ನುರಿತ ಕಾರ್ಮಿಕರ ಮೇಲೆ ₹69,452[31] ವೆಚ್ಚವನ್ನು ಭರಿಸಲಾಗಿತ್ತು.

ಏಳು ಗ್ರಾಮ ಪಂಚಾಯಿತಿಗಳ 22 ಕಾಮಗಾರಿಗಳಲ್ಲಿ ಮಂಜೂರಾದ ಅಂದಾಜು ಮೊತ್ತಕ್ಕೆ (**ಅನುಬಂಧ–5.5**ರಲ್ಲಿ ವಿವರಿಸಲಾಗಿದೆ) ಹೋಲಿಸಿದರೆ ಸಾಮಗ್ರಿ ಘಟಕದ ಮೇಲಿನ ವಾಸ್ತವಿಕ ವೆಚ್ಚವು ತುಂಬಾ ಕಡಿಮೆಯಿದ್ದಿತು (ಶೇಕಡಾ 60ರಿಂದ 100ರ ವ್ಯಾಪ್ತಿ) ಎಂಬುದನ್ನು ದಾಖಲೆಗಳು ತೋರಿಸಿದವು. ಕೆಲವು ಅಂದಾಜುಗಳಲ್ಲಿ ಕಾಮಗಾರಿಯ ಅವಾಸ್ತವಿಕ ವ್ಯಾಪ್ತಿಯ ನಿದರ್ಶನಗಳನ್ನು ಸಹ ಗಮನಿಸಲಾಯಿತು. ವಿವರಗಳನ್ನು ಕೆಳಗೆ ನೀಡಲಾಗಿದೆ:

| **ನಿದರ್ಶನಗಳು (ಅವಾಸ್ತವಿಕ ಅಂದಾಜುಗಳು)** | |
|---|---|
| 1. | ಗೆಡ್ಡಿಗೇರಿ ಗ್ರಾಮ ಪಂಚಾಯಿತಿಯ ಸರ್ವೆ ಸಂಖ್ಯೆ 116ರಲ್ಲಿ ಚರಂಡಿ ಸುಧಾರಣೆ (1520004020/ಡಬ್ಲ್ಯೂಎಚ್/93393042892217634) – ಮಂಜೂರಾದ ಅಂದಾಜಿನಲ್ಲಿ ದಾಖಲಾದ ಚರಂಡಿಯ ಅಗಲ 35 ಮೀಟರ್‌ನಿಂದ 25 ಮೀಟರ್ ವ್ಯಾಪ್ತಿಯಲ್ಲಿದ್ದರೆ, ಮಾಪನ ಪುಸ್ತಕದಲ್ಲಿ ತೋರಿಸಿದಂತೆ ಅದರ ವಾಸ್ತವಿಕ ಅಗಲ 2.7 ಮೀಟರ್‌ನಿಂದ 2.9 ಮೀಟರ್ ವ್ಯಾಪ್ತಿಯಲ್ಲಿತ್ತು. |

[30] ₹4,390 (1521002003/IC/GIS/286377) ಮತ್ತು ₹31,075 (1521002003/WC/GIS/804398) ಚಿಕ್ಕರಸಿನಕೆರೆ ಗ್ರಾಮ ಪಂಚಾಯಿತಿಯಲ್ಲಿ, ₹4,600 (1521002035/IC/GIS/225880) ಡಿ.ಎ.ಕೆರೆ ಗ್ರಾಮಪಂಚಾಯಿತಿಯಲ್ಲಿ.

[31] ಅನುಕ್ರಮವಾಗಿ ₹4,206, ₹60,796 and ₹4,450.

| | |
|---|---|
| 2. | ಗೆಡ್ಡಿಗೇರಿ ಗ್ರಾಮ ಪಂಚಾಯಿತಿಯ ತಲ್ಲೂರು ಗ್ರಾಮದಲ್ಲಿ ಕೆರೆಯ ದಕ್ಷಿಣ ಭಾಗದಲ್ಲಿ ಹೂಳು ತೆಗೆಯುವಿಕೆ (1520004020/ಡಬ್ಲ್ಯುಸಿ/93393042892420413)– ಅಂದಾಜಿನಲ್ಲಿ ದಾಖಲಾದ ಕೆರೆಯ ಅಗಲ 42 ಮೀಟರ್‌ನಿಂದ 20 ಮೀಟರ್ ವ್ಯಾಪ್ತಿಯಲ್ಲಿದ್ದರೆ, ಅದರ ನಿಜವಾದ ಅಗಲವು, ಮಾಪನ ಪುಸ್ತಕದಲ್ಲಿ ತೋರಿಸಿದಂತೆ 1.0 ಮೀಟರ್‌ನಿಂದ 15 ಮೀಟರ್ ವ್ಯಾಪ್ತಿಯಲ್ಲಿದ್ದಿತು. |
| 3. | ಗುನ್ನಾಲ್ ಗ್ರಾಮ ಪಂಚಾಯಿತಿಯ ಹುಣಸಿಹಾಲ್ ಗ್ರಾಮದಲ್ಲಿ ಚರಂಡಿ (ನಾಲಾ) ಸುಧಾರಣೆ (1520004007/WH/93393042892221219) – ಚರಂಡಿಯ ಅಗಲವನ್ನು (ನಾಲಾ) 10 ಮೀಟರ್ ಎಂದು ತೆಗೆದುಕೊಂಡರೆ ಜಂಟಿ ತಪಾಸಣೆಯಲ್ಲಿ (19.07.2024) ಕಂಡುಬಂದಂತೆ ಕಾರ್ಯಗತಗೊಳಿಸಿದ್ದು ಕೇವಲ 3.5 ಮೀಟರ್‌ನಿಂದ 4ಮೀಟರ್ ಆಗಿತ್ತು. |

ಸಮೀಕ್ಷೆ ನಡೆಸುವ ಮೂಲಕ ಅಂದಾಜುಗಳನ್ನು ತಯಾರಿಸುವಾಗ ಮತ್ತು ಕಾರ್ಯಗತಗೊಳಿಸಿದ ಕಾಮಗಾರಿಗೆ ಸಂಬಂಧಿಸಿದಂತೆ ಅಗತ್ಯವಾದ ದತ್ತಾಂಶವನ್ನು ಸಂಗ್ರಹಿಸುವಾಗ ಸೂಕ್ತ ಶ್ರದ್ಧೆಯನ್ನು ವಹಿಸಲಿಲ್ಲ ಎಂಬುದನ್ನು ಇದು ತೋರಿಸುತ್ತದೆ.

2025–26ನೇ ಸಾಲಿನಿಂದ ಪ್ರತಿ ಕಾಮಗಾರಿಯ ಪೂರ್ವ–ಮಾಪನ ಸೆರೆಹಿಡಿಯುವುದನ್ನು ಪರಿಚಯಿಸಲಾಗಿದ್ದು. ಅದು ಅಂದಾಜುಗಳು ಮತ್ತು ಕಾರ್ಯಗತಗೊಳಿಸುವಿಕೆಯಲ್ಲಿ ಹೆಚ್ಚಿನ ನಿಖರತೆಯನ್ನು ತರುತ್ತದೆ ಎಂದು ರಾಜ್ಯ ಸರ್ಕಾರ ತಿಳಿಸಿತು (ಮೇ 2025).

### *5.4.2 ಅಂದಾಜುಗಳ ತಯಾರಿಕೆಯಲ್ಲಿ ಅಸಂಗತೆಗಳು*

ಭಾರತದಲ್ಲಿ ಎಂಜಿಎನ್‌ಆರ್‌ಇಜಿಎಸ್ ಕಾಮಗಾರಿಗಳ ಅಂದಾಜುಗಳನ್ನು ಸಿದ್ಧಪಡಿಸಲು ಗ್ರಾಮೀಣ ಉದ್ಯೋಗ ದರಗಳನ್ನು ಬಳಸಿಕೊಂಡು ಅಂದಾಜು ಲೆಕ್ಕಾಚಾರದ ತಂತ್ರಜ್ಞಾನವನ್ನು (ಸೆಕ್ಯೂರ್) 01 ಏಪ್ರಿಲ್ 2018 ರಿಂದ ಜಾರಿಗೆ ತರಲಾಯಿತು. ಇದು ಎಂಜಿಎನ್‌ಆರ್‌ಇಜಿಎಸ್ ಕಾಮಗಾರಿಗಳಿಗೆ ಅಂದಾಜು ತಯಾರಿಕೆ, ಆಡಳಿತಾತ್ಮಕ ಮಂಜೂರಾತಿ ಮತ್ತು ತಾಂತ್ರಿಕ ಮಂಜೂರಾತಿಗಳನ್ನು ಒಳಗೊಂಡಿರುವ ವರ್ಕ್ ಫ್ಲೋ ಆಧಾರಿತ ವೆಬ್ ಅಪ್ಲಿಕೇಶನ್ ಆಗಿದೆ. ಟೆಂಪ್ಲೇಟ್ ಗಳನ್ನು ಒದಗಿಸುವ ಮೂಲಕ ಅಂದಾಜು ರಚನೆಯ ಪ್ರಕ್ರಿಯೆಯನ್ನು ನಿಗದಿತ ಮಟ್ಟದಲ್ಲಿದೆ ಎಂದು ಖಚಿತಪಡಿಸಿಕೊಳ್ಳುವುದು ಸೆಕ್ಯೂರ್ ನ ಪ್ರಯೋಜನಗಳು/ಉದ್ದೇಶಗಳಲ್ಲಿ ಒಂದಾಗಿದ್ದಿತು.

ಲೆಕ್ಕಪರಿಶೋಧನಾ ಅವಧಿಯಲ್ಲಿ (2019–20ರಿಂದ 2023–24) ಆಯ್ದ ಗ್ರಾಮ ಪಂಚಾಯಿತಿಗಳಲ್ಲಿ ಸೆಕ್ಯೂರ್ ಮೂಲಕ ಅಂದಾಜುಗಳ ತಯಾರಿಕೆಯಲ್ಲಿ ಸ್ಥಿರತೆಯನ್ನು ಕಂಡುಹಿಡಿಯಲು, ಲೆಕ್ಕಪರಿಶೋಧನೆಯು ಎರಡು ಪ್ರತ್ಯೇಕ ಕಾಮಗಾರಿಗಳ 2464 ಅನುಮೋದಿತ ಅಂದಾಜುಗಳನ್ನು ವಿಶ್ಲೇಷಿಸಿತು; ಅವುಗಳೆಂದರೆ (i) ಜಾನುವಾರು ಕೊಟ್ಟಿಗೆಯ ನಿರ್ಮಾಣ (ಅಂದಾಜು ವೆಚ್ಚ ₹57,000) ಮತ್ತು (ii) ವೇತನ ಮತ್ತು ಸಾಮಗ್ರಿ ಘಟಕಗಳ ಅನುಪಾತವನ್ನು ನಿರ್ಣಯಿಸಲು ಇಂಗು ಗುಂಡಿ ನಿರ್ಮಾಣ (ಅಂದಾಜು ವೆಚ್ಚ ₹14,000). ರಾಜ್ಯ ಸರ್ಕಾರವು ಮಾದರಿ ಅಂದಾಜುಗಳನ್ನು ಸಿದ್ಧಪಡಿಸಿತ್ತು, ಇದರಲ್ಲಿ ಸಾಮಗ್ರಿಗಳಿಗೆ ಕೌಶಲ್ಯರಹಿತ ವೇತನದ ನಿಗದಿತ ಅನುಪಾತವು ಕ್ರಮವಾಗಿ 14:86 ಮತ್ತು 37:63 ಆಗಿತ್ತು.

ಆದರೆ, ಈ ಕೆಳಗೆ ವಿವರಿಸಿದಂತೆ, ಆಯ್ದ ಗ್ರಾಮ ಪಂಚಾಯಿತಿಗಳಲ್ಲಿ ಈ ಎರಡು ಕಾಮಗಾರಿಗಳ ಮಂಜೂರಾದ ಅಂದಾಜುಗಳಲ್ಲಿ ಯಾವುದೇ ಸ್ಥಿರತೆ ಇರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯ ಪರಿಶೀಲನೆಯು ತೋರಿಸಿತು:

- **ಜಾನುವಾರು ಕೊಟ್ಟಿಗೆಯ ನಿರ್ಮಾಣ** – ₹57,000 ಗಳ ಮಂಜೂರಾದ ಅಂದಾಜು ವೆಚ್ಚದಲ್ಲಿ 669 ಕಾಮಗಾರಿಗಳು ನಡೆದಿದ್ದವು. ಆ ಕಾಮಗಾರಿಗಳಲ್ಲಿ ಮಂಜೂರಾದ ವೇತನ ಮೊತ್ತವು

₹4,834ರಿಂದ (ಶೇಕಡಾ 8) ₹16,956 ವರೆಗಿನ (ಶೇಕಡಾ 30) ವ್ಯಾಪ್ತಿಯಲ್ಲಿತ್ತು. ಹಾಗೆಯೇ, ಸಾಮಗ್ರಿಗಳಿಗೆ ಕೌಶಲ್ಯರಹಿತ ಕಾರ್ಮಿಕರ ಅನುಪಾತವು 8:92ರಿಂದ 30:70 ರವರೆಗೆ ಇದ್ದಿತು.

- **ಇಂಗು ಗುಂಡಿ ನಿರ್ಮಾಣ –** ₹14,000 ಗಳ ಮಂಜೂರಾದ ಅಂದಾಜು ವೆಚ್ಚದೊಂದಿಗೆ 1,795 ಸೋಕ್ ಪಿಟ್ ಕಾಮಗಾರಿಗಳಲ್ಲಿ, ವೇತನ ಅಂಶವು ₹2,808ರಿಂದ (ಶೇಕಡಾ 20) ₹7,018 ವರೆಗಿನ (ಶೇಕಡಾ 50) ವ್ಯಾಪ್ತಿಯಲ್ಲಿತ್ತು. ತತ್ಪರಿಣಾಮವಾಗಿ, ಸಾಮಗ್ರಿಗಳಿಗೆ ಕೌಶಲ್ಯರಹಿತ ಕಾರ್ಮಿಕರ ಅನುಪಾತವು 20:80ರಿಂದ 50:50ರ ವ್ಯಾಪ್ತಿಯಲ್ಲಿತ್ತು.

ಹೀಗೆ, ಸೆಕ್ಯೂರ್ ನಲ್ಲಿ ಪ್ರಮಾಣೀಕೃತ ಟೆಂಪ್ಲೇಟ್ ಅನ್ನು ಒದಗಿಸಿದ್ದರೂ, ಅಂದಾಜುಗಳ ತಯಾರಿಕೆಯಲ್ಲಿ ಯಾವುದೇ ಸ್ಥಿರತೆ ಇರಲಿಲ್ಲ.

ಸಾಮಗ್ರಿಗೆ ವೇತನ ಅನುಪಾತವನ್ನು ನಿರ್ವಹಿಸುವ ಬಗ್ಗೆ ಜಿಲ್ಲೆಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡಲಾಗುವುದು ಎಂದು ರಾಜ್ಯ ಸರ್ಕಾರ ತಿಳಿಸಿತು (ಮೇ 2025).

**ಶಿಫಾರಸು–14: ಎಂಜಿಎನ್‌ಆರ್‌ಇಜಿಎಸ್** ಅಡಿಯಲ್ಲಿ ಕೈಗೆತ್ತಿಕೊಳ್ಳಲಾದ ಕಾಮಗಾರಿಗಳಿಗೆ ಅಂದಾಜುಗಳನ್ನು ತಯಾರಿಸುವಲ್ಲಿ ನಿಗದಿತ ಮಟ್ಟದಲ್ಲಿರುವುದನ್ನು ಮತ್ತು ಸ್ಥಿರತೆಗಾಗಿ ಸೆಕ್ಯೂರ್ ಸಾಫ್ಟ್‌ವೇರ್ ಬಳಕೆಯನ್ನು ಇಲಾಖೆ ಖಚಿತಪಡಿಸಿಕೊಳ್ಳಬೇಕು

## 5.5 ವೈಯಕ್ತಿಕ ಆಸ್ತಿಗಳನ್ನು ರಚಿಸುವ ಕಾಮಗಾರಿಗಳ ಮೇಲೆ ಅಕ್ರಮ ವೆಚ್ಚ

ಬಾಳಿಕೆ ಬರುವ ಸ್ವತ್ತುಗಳ ಸೃಷ್ಟಿ, ಸುಧಾರಿತ ನೀರಿನ ಭದ್ರತೆ, ಮಣ್ಣಿನ ಸಂರಕ್ಷಣೆ ಮತ್ತು ಹೆಚ್ಚಿನ ಭೂ ಉತ್ಪಾದಕತೆಯ ಮೂಲಕ ಬಡವರಿಗೆ ಜೀವನೋಪಾಯದ ಭದ್ರತೆಯನ್ನು ಒದಗಿಸುವುದು ಎಂಜಿಎನ್‌ಆರ್‌ಇಜಿಎ ಗುರಿಗಳಲ್ಲಿ ಒಂದಾಗಿದ್ದಿತು. ಎಂಜಿಎನ್‌ಆರ್‌ಇಜಿಎ ಅನುಸೂಚಿ–1ರ ಕಂಡಿಕೆ–5 ಮತ್ತು 02 ಆಗಸ್ಟ್ 2021ರ ಸರ್ಕಾರಿ ಆದೇಶವು ವೈಯಕ್ತಿಕ ಸ್ವತ್ತುಗಳನ್ನು ರಚಿಸುವ ಕಾಮಗಾರಿಗಳಿಗೆ ವಿವಿಧ ವರ್ಗಗಳಿಗೆ[32] ಸೇರಿದ ಕುಟುಂಬಗಳ ಒಡೆತನದ ಭೂಮಿ ಅಥವಾ ಮನೆಗೆ ಆದ್ಯತೆ ನೀಡಬೇಕು ಮತ್ತು ಎಂಜಿಎನ್‌ಆರ್‌ಇಜಿಎಸ್ ಅಡಿಯಲ್ಲಿ ವೈಯಕ್ತಿಕ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಾಗ ಈ ಕೆಳಗಿನ ಎರಡು ಷರತ್ತುಗಳನ್ನು ಖಚಿತಪಡಿಸಿಕೊಳ್ಳಬೇಕು ಎಂದು ತಿಳಿಸಿತ್ತು:

1) ಆಯ್ದ ಫಲಾನುಭವಿಯ ಕುಟುಂಬವು ಜಾಬ್ ಕಾರ್ಡ್ ಹೊಂದಿರಬೇಕು; ಮತ್ತು
2) ಆಯ್ದ ಫಲಾನುಭವಿಯ ಮನೆಯ ಕನಿಷ್ಠ ಒಬ್ಬ ಸದಸ್ಯರನ್ನು ಅಂತಹ ವೈಯಕ್ತಿಕ ಕಾಮಗಾರಿಯಲ್ಲಿ ನೇಮಿಸಿಕೊಳ್ಳಬೇಕು

ಕಾಮಗಾರಿಯನ್ನು ಕೈಗೆತ್ತಿಕೊಂಡ ಖಾಸಗಿ ಭೂಮಿ ಅಥವಾ ಮನೆಯ ಮಾಲೀಕರ ಜಾಬ್ ಕಾರ್ಡ್ ಸಂಖ್ಯೆಯನ್ನು ಕೆಲಸದ ವಿವರಗಳೊಂದಿಗೆ ನಮೂದಿಸಬೇಕು ಎಂಬುದನ್ನು ಖಚಿತಪಡಿಸಿಕೊಳ್ಳಲು ಎನ್‌ಆರ್‌ಇಜಿಎಸಾಫ್ಟ್ ನಲ್ಲಿ ಅಂತರ್ಗತ ಪರಿಶೀಲನೆಯನ್ನು ಒದಗಿಸಲಾಗಿದೆ (ಕಾರ್ಯಾಚರಣಾ ಮಾರ್ಗಸೂಚಿಗಳು, 2013ರ ಕಂಡಿಕೆ–11.5 (xiv)). 'ವೈಯಕ್ತಿಕ ಲಾಭದ ಕೆಲಸವನ್ನು ಸೆರೆಹಿಡಿಯುವುದು' ಎಂಬ ಶೀರ್ಷಿಕೆಯ ಎನ್‌ಆರ್‌ಇಜಿಎಸಾಫ್ಟ್ ವರದಿಗಳು ಅನುಮೋದಿತ ವೈಯಕ್ತಿಕ ಕೆಲಸಗಳ ವಿವರಗಳು ಮತ್ತು ವೈಯಕ್ತಿಕ ಪ್ರಯೋಜನವನ್ನು ಒದಗಿಸಬೇಕಾದ ಸಂಬಂಧಪಟ್ಟ ಕುಟುಂಬದ ಜಾಬ್ ಕಾರ್ಡ್ ಅನ್ನು ಒಳಗೊಂಡಿವೆ. ಕಾಮಗಾರಿಯನ್ನು ರಚಿಸುವಾಗ ಈ ವಿವರಗಳನ್ನು ಪಿಐಎ ಮಟ್ಟದಲ್ಲಿ ನಮೂದಿಸಬೇಕು.

ಆಯ್ದ 40 ಗ್ರಾಮ ಪಂಚಾಯಿತಿಗಳ 'ವೈಯಕ್ತಿಕ ಲಾಭದ ಕೆಲಸವನ್ನು ಸೆರೆಹಿಡಿಯುವುದು' ವರದಿಗಳು ಮತ್ತು ವರದಿ 6.12ರ (ಮೇಲ್ವಿಚಾರಣೆ ಮತ್ತು ಕಾಮಗಾರಿಗಳ ವಿವರಗಳಿಗಾಗಿ ಡೈನಾಮಿಕ್ ವರದಿ) ಲೆಕ್ಕಪರಿಶೋಧನೆಯು ಪಾವತಿಗಳನ್ನು ಮಾಡಿದ್ದ 18,459 ವೈಯಕ್ತಿಕ ಕಾಮಗಾರಿಗಳಿದ್ದವು ಎಂಬುದನ್ನು

[32] ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲೆಮಾರಿ ಬುಡಕಟ್ಟು, ಅಧಿಸೂಚಿತ ಬುಡಕಟ್ಟುಗಳು, ಇತರ ಬಿಪಿಎಲ್ ಕುಟುಂಬಗಳು, ಮಹಿಳಾ ನೇತೃತ್ವದ ಕುಟುಂಬಗಳು, ದೈಹಿಕ ಅಂಗವಿಕಲರ ನೇತೃತ್ವದ ಕುಟುಂಬಗಳು ಇತ್ಯಾದಿ.

ಬಹಿರಂಗಪಡಿಸಿತು. ಲೆಕ್ಕಪರಿಶೋಧನೆಯು ಈ ಕಾಮಗಾರಿಗಳಲ್ಲಿ ಕೆಲಸ ಮಾಡಿದ ಕಾರ್ಮಿಕರ ವಿವರಗಳನ್ನು ಆಯುಕ್ತರ ಕಚೇರಿಯಿಂದ (ಸೆಪ್ಟೆಂಬರ್ ನಿಂದ ಡಿಸೆಂಬರ್ 2024) ಪಡೆದುಕೊಂಡಿತು.

18,459 ಕಾಮಗಾರಿಗಳಲ್ಲಿ, ಸಂಬಂಧಪಟ್ಟ ಕುಟುಂಬದ ಸದಸ್ಯರು (ಅಂದರೆ ವೈಯಕ್ತಿಕ ಕೆಲಸವನ್ನು ಮಂಜೂರು ಮಾಡಿದ ಕುಟುಂಬ) ಕೇವಲ 9,835 ಕಾಮಗಾರಿಗಳಲ್ಲಿ (ಶೇಕಡಾ 53) ಮಾತ್ರ ಕೆಲಸ ಮಾಡಿದ್ದರು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ₹22.10 ಕೋಟಿ ವೆಚ್ಚವನ್ನು ಭರಿಸಿದ (ಅಕ್ಟೋಬರ್ 2024) ಉಳಿದ 8,624 ಕಾಮಗಾರಿಗಳಲ್ಲಿ[33], ಸಂಬಂಧಪಟ್ಟ ಕುಟುಂಬದ ಯಾವುದೇ ಸದಸ್ಯರು ಉದ್ಯೋಗಿಯಾಗಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಒಂದು ನಿದರ್ಶನಾತ್ಮಕ ಪ್ರಕರಣವನ್ನು ಕೆಳಗೆ ನೀಡಲಾಗಿದೆ:

**ನಿದರ್ಶನ**

***ಕಾಮಗಾರಿ – ಶಿವಮೊಗ್ಗದ ಶಿಕಾರಿಪುರ ತಾಲ್ಲೂಕಿನ ಸಾಲೂರು ಗ್ರಾಮದ ಶ್ರೀಮತಿ ಕಮಲಿಬಾಯಿ ನಾಗನಾಯಕ ರವರ ಪತ್ನಿ ಅವರ ಮನೆಯಲ್ಲಿ ಇಂಗುಗುಂಡಿ ನಿರ್ಮಾಣ (ಕಾಮಗಾರಿ ಕೋಡ್–1524004010/ಐಎಫ್/93393042892552015)***

ಫಲಾನುಭವಿ ಕುಟುಂಬದ ಜಾಬ್ ಕಾರ್ಡ್ (ಜೆಸಿ) ಸಂಖ್ಯೆ (ಶ್ರೀಮತಿ ಕಮಾಲಿಬಾಯಿ) ಕೆಎನ್–24–004–010–001/533 ಆಗಿತ್ತು. ಆಸ್ತಿ ರಿಜಿಸ್ಟರ್ ಪ್ರಕಾರ, ಒಟ್ಟು ವೆಚ್ಚ ₹14,004/– ಆಗಿತ್ತು ಮತ್ತು ಈ ಕಾಮಗಾರಿಯಲ್ಲಿ ಕೆಲಸ ಮಾಡಿದ ವ್ಯಕ್ತಿಗಳು (14 ಮಾನವ ದಿನಗಳು) ಶ್ರೀಮತಿ ಲಲಿತಾಬಾಯಿ ಮತ್ತು ಶ್ರೀ ಚನ್ನನಾಯಕ (ಜೆಸಿ ಸಂಖ್ಯೆ KN–24–004–010–001/540) ಆಗಿದ್ದರು.

ಶ್ರೀಮತಿ ಕಮಲಿಬಾಯಿ ಅವರ ಕುಟುಂಬಕ್ಕೆ ಸಂಬಂಧಿಸಿದ ವೈಯಕ್ತಿಕ ಕೆಲಸವಾಗಿದ್ದು ಅವರ ಕುಟುಂಬದ ಯಾವುದೇ ಸದಸ್ಯರು ಈ ಕೆಲಸದಲ್ಲಿ ಭಾಗವಹಿಸಿರಲಿಲ್ಲವಾದ್ದರಿಮದ ಮೇಲಿನ ₹14,004/– ವೆಚ್ಚವು ಅಕ್ರಮವಾಗಿತ್ತು. ಇದು ಎಂಜಿಎನ್ಆರ್ಇಜಿಎಸ್ ನಿಬಂಧನೆಗಳ ಉಲ್ಲಂಘನೆಯಾಗಿತ್ತು.

ಹೀಗೆ, ಯೋಜನೆಯಡಿ ಉದ್ಯೋಗ ಬಾಧ್ಯತೆಗಳನ್ನು ಪೂರೈಸದ ಕುಟುಂಬಗಳಿಗೆ ವೈಯಕ್ತಿಕ ಸ್ವತ್ತುಗಳನ್ನು ರಚಿಸಲಾಗಿತ್ತು. ಇದು ₹22.10 ಕೋಟಿ ಅಕ್ರಮ ವೆಚ್ಚಕ್ಕೆ ಕಾರಣವಾಯಿತಲ್ಲದೆ (**ಅನುಬಂಧ–5.6**ರಲ್ಲಿ ವಿವರಿಸಲಾಗಿದೆ) ಅರ್ಹ ಕುಟುಂಬಗಳಿಗೆ ಜೀವನೋಪಾಯದ ಭದ್ರತೆಯನ್ನು ವಂಚಿಸಿತು. ಇವು ಮಾದರಿ ಗ್ರಾಮ ಪಂಚಾಯಿತಿಗಳಲ್ಲಿ ಕೇವಲ ನಿದರ್ಶನಾತ್ಮಕ ಪ್ರಕರಣಗಳಾಗಿರುವುದರಿಂದ, ರಾಜ್ಯದ ಇತರ ಗ್ರಾಮ ಪಂಚಾಯಿತಿಗಳಲ್ಲಿ ಇದೇ ರೀತಿಯ ಲೋಪದ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ಅಭಿಪ್ರಾಯವನ್ನು ಒಪ್ಪಿಕೊಂಡಿತು ಮತ್ತು ಅಂತಹ ಅಕ್ರಮಗಳನ್ನು ತಡೆಗಟ್ಟಲು ಸರಿಪಡಿಸುವ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ತಿಳಿಸಿತು (ಮೇ 2025).

### 5.6 ಕಾಮಗಾರಿಗಳ ಅಕ್ರಮ ವಿಭಜನೆ

ಯಾವುದೇ ಕಾಮಗಾರಿಯ ಫಲಿತಾಂಶ/ಪ್ರಯೋಜನವು ಸಂಪೂರ್ಣವಾಗಿ ಪೂರ್ಣಗೊಂಡ ಕಾಮಗಾರಿಯನ್ನು ಅವಲಂಬಿಸಿರುತ್ತದೋ, ಅದನ್ನು ಸಣ್ಣ ಕಾಮಗಾರಿಗಳಾಗಿ ವಿಂಗಡಿಸಬಾರದು ಎಂದು ಎಎಂಸಿ, 2019–20ರ ಕಂಡಿಕೆ–7.1.5 ಷರತ್ತು ವಿಧಿಸುತ್ತದೆ. ಉದಾಹರಣೆಗೆ 10 ಕಿಲೋಮೀಟರ್‌ವರೆಗೆ ಕಾಲುವೆಯ ಹೂಳು ತೆಗೆಯುವ ಕಾಮಗಾರಿಯನ್ನು ಮಾಡಬೇಕಾದರೆ, ಅದರ ಅಂದಾಜನ್ನು ಸಣ್ಣ ತುಂಡುಗಳಾಗಿ ವಿಭಜಿಸಬಾರದು. ಸ್ಪರ್ಶಸಾಧ್ಯವಲ್ಲದ, ಅಳೆಯಲಾಗದ ಮತ್ತು ಪುನರಾವರ್ತಿತ ಸ್ವರೂಪದ ಕಾಮಗಾರಿಗಳನ್ನು ಎಂಜಿಎನ್ಆರ್ಇಜಿಎಸ್ ಅಡಿಯಲ್ಲಿ ಕೈಗೆತ್ತಿಕೊಳ್ಳಬಾರದು ಎಂದು ಕಂಡಿಕೆ–7.2.2ರಲ್ಲಿ ಷರತ್ತು ವಿಧಿಸುತ್ತದೆ.

[33] ₹34.74 ಕೋಟಿ ಅನುಮೋದಿತ ವೆಚ್ಚದೊಂದಿಗೆ

ಗ್ರಾಮ ಪಂಚಾಯಿತಿ ಕಾಮಗಾರಿಗಳಿಗೆ ತಾಂತ್ರಿಕ/ಆಡಳಿತಾತ್ಮಕ ಮಂಜೂರಾತಿಗಾಗಿ (₹30 ಲಕ್ಷದವರೆಗೆ) ಹಣಕಾಸು ನಿಯೋಜನೆಯ ಅಧಿಕಾರ ಈ ಕೆಳಗಿನಂತಿದೆ (ಕೋಷ್ಟಕ 5.4):

**ಕೋಷ್ಟಕ–5.4: ₹30 ಲಕ್ಷದವರೆಗಿನ ಗ್ರಾಮ ಪಂಚಾಯಿತಿ ಕಾಮಗಾರಿಗಳಿಗೆ ಹಣಕಾಸು/ಆಡಳಿತಾತ್ಮಕ ಮಂಜೂರಾತಿ ಮಾಡಲು ಹಣಕಾಸಿನ ನಿಯೋಜನೆ**

| ಕಾಮಗಾರಿಯ ವೆಚ್ಚ (₹) | ತಾಂತ್ರಿಕ ಮಂಜೂರಾತಿ ಪ್ರಾಧಿಕಾರ | ಆಡಳಿತಾತ್ಮಕ ಅನುಮೋದನೆ ಪ್ರಾಧಿಕಾರ |
|---|---|---|
| 0 ಯಿಂದ 3 ಲಕ್ಷ | ತಾಂತ್ರಿಕ ಸಂಯೋಜಕ | ಪಿಡಿಒ ಮತ್ತು ಅಧ್ಯಕ್ಷರು |
| >3 ಲಕ್ಷದಿಂದ 10 ಲಕ್ಷ | ಎಇಇ, ಪಿಆರ್‌ಇಡಿ | |
| >10 ಲಕ್ಷದಿಂದ to 30 ಲಕ್ಷ | ಇಇ, ಪಿಆರ್‌ಇಡಿ | ಇಒ, ಟಿಪಿ |

2019–20ರಿಂದ 2023–24ರ ಅವಧಿಗೆ ಮಾದರಿ ಗ್ರಾಮ ಪಂಚಾಯಿತಿಗಳ ಎಂಐಎಸ್ ವರದಿ ಆರ್6.12ರ (ಮೇಲ್ವಿಚಾರಣೆ ಮತ್ತು ಕಾಮಗಾರಿಗಳ ವಿವರಗಳಿಗಾಗಿ ಡೈನಾಮಿಕ್ ವರದಿ) ಪರಿಶೀಲನೆಯು 13 ಗ್ರಾಮ ಪಂಚಾಯಿತಿಗಳು 65 ಕಾಮಗಾರಿಗಳನ್ನು (ಅಂದಾಜು ವೆಚ್ಚ ₹42.15 ಕೋಟಿ) ₹2.41 ಲಕ್ಷದಿಂದ ₹10 ಲಕ್ಷ ವೆಚ್ಚದ ವ್ಯಾಪ್ತಿಯ 463 ಕಾಮಗಾರಿಗಳಾಗಿ ವಿಂಗಡಿಸಿದ್ದವು ಎಂಬುದನ್ನು ತೋರಿಸಿತು. ವಿವರಗಳನ್ನು **ಅನುಬಂಧ–5.7**ರಲ್ಲಿ ನೀಡಲಾಗಿದೆ.

ಈ ಎಲ್ಲಾ ಕಾಮಗಾರಿಗಳು (ಗಂಗಾವತಿ ತಾಲ್ಲೂಕಿನ ಮರಾಳಿ ಗ್ರಾಮ ಪಂಚಾಯಿತಿಯಲ್ಲಿ ಕಾಂಪೌಂಡ್ ಗೋಡೆ ನಿರ್ಮಾಣದ ಒಂದು ಕಾಮಗಾರಿಯನ್ನು ಹೊರತುಪಡಿಸಿ) ಪುನರಾವರ್ತಿತ ಸ್ವಭಾವದ ಅಳತೆ ಸಾಧ್ಯವಿಲ್ಲದ ಹೂಳು ತೆಗೆಯುವ ಕಾಮಗಾರಿಗಳಾಗಿದ್ದವು. ಆದ್ದರಿಂದ, ಅಂತಹ ಕಾಮಗಾರಿಗಳನ್ನು ಕಾರ್ಯಗತಗೊಳಿಸುವುದು ಮತ್ತು ಸಣ್ಣ ಕಾಮಗಾರಿಗಳಾಗಿ ವಿಭಜಿಸುವುದು ಎಎಂಸಿಯಲ್ಲಿ ನಿಗದಿಪಡಿಸಿದ ನಿಬಂಧನೆಗಳನ್ನು ಉಲ್ಲಂಘಿಸುತ್ತದೆ. ಇದು ಸಕ್ಷಮ ಪ್ರಾಧಿಕಾರದ ಅನುಮತಿ ಪಡೆಯದೆ ಈ ಕಾಮಗಾರಿಗಳಿಗೆ (ಅಕ್ಟೋಬರ್ 2024) ₹28.17 ಕೋಟಿ ಅಕ್ರಮ ವೆಚ್ಚ ಭರಿಸುವಲ್ಲಿ ಪರಿಣಮಿಸಿತು. ಭುವನ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾದ ಈ ಪ್ರಕರಣಗಳಲ್ಲಿನ ಕೆಲವು ಛಾಯಾಚಿತ್ರಗಳು ನೈಜವಾಗಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು, ಏಕೆಂದರೆ ಅವುಗಳನ್ನು ಕಾಮಗಾರಿಯ ಸ್ಥಳಗಳಿಂದ ತೆಗೆದಿರಲಿಲ್ಲ ಆದರೆ ಅಸ್ತಿತ್ವದಲ್ಲಿರುವ/ಹಳೆಯ ಛಾಯಾಚಿತ್ರಗಳಿಂದ ತೆಗೆದುಕೊಳ್ಳಲಾಗಿತ್ತು (**ಪ್ರದರ್ಶಿಕೆ–5.9 ಮತ್ತು 5.10**). ಮೇಲಿನ ಅಭ್ಯಾಸಗಳು ಕಾಮಗಾರಿಯ ಪಾರದರ್ಶಕತೆ ಮತ್ತು ನೈಜತೆಯ ಬಗ್ಗೆ ಅನುಮಾನ ಹುಟ್ಟುಹಾಕುತ್ತವೆ.



**ಪ್ರದರ್ಶಿಕೆ–5.9: ಹಂತ–2 ಕಲ್ಕೇರಿ ಕೆರೆಯ ಭಾಗ–9ರಲ್ಲಿ ಹೂಳು ತೆಗೆಯುವ ಛಾಯಾಚಿತ್ರ (1520001006/WC/93393042892548217)**



**ಪ್ರದರ್ಶಿಕೆ–5.10: ಹಂತ–2 ಕಲ್ಕೇರಿ ಕೆರೆಯ ಭಾಗ–10ರಲ್ಲಿ ಹೂಳು ತೆಗೆಯುವ ಛಾಯಾಚಿತ್ರ (1520001006/WC/93393042892548218)**

ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ಅಭಿಪ್ರಾಯವನ್ನು ಒಪ್ಪಿಕೊಂಡಿತು (ಮೇ 2025) ಮತ್ತು ಯಾವುದೇ ಕಾಮಗಾರಿಗಳನ್ನು ವಿಭಜಿಸದಂತೆ ನಿರ್ದೇಶನಗಳನ್ನು ನೀಡಲಾಗಿದೆ ಎಂದು ತಿಳಿಸಿತು.

## 5.7 ಮಂಜೂರಾತಿಗಿಂತ ಹೆಚ್ಚಿನ ವೆಚ್ಚ

ಕಾರ್ಯಾಚರಣೆಯ ಮಾರ್ಗಸೂಚಿ 2013ರ ಕಂಡಿಕೆ 7.17.3 ಮತ್ತು ಎಎಂಸಿ, 2019–20ರ ಕಂಡಿಕೆ–21.6.4ರ ಪ್ರಕಾರ ದರಗಳ ಅನುಸೂಚಿಯನ್ನು (ಎಸ್‌ಒಆರ್) ಪರಿಷ್ಕರಿಸಿದಾಗ ಕಾರ್ಯಗತಗೊಳ್ಳುತ್ತಿರುವ ಯೋಜನೆಗಳಿಗೆ ಸಂಬಂಧಿಸಿದಂತೆ, ಜಿಲ್ಲಾ ಕಾರ್ಯಕ್ರಮ ಸಂಯೋಜಕರು ಅಪೂರ್ಣವಾಗಿರುವ ಕಾಮಗಾರಿಗಳ ಮೌಲ್ಯವನ್ನು ಮರು ಅಂದಾಜು ಮಾಡುವ ಸಮೀಕ್ಷೆಯನ್ನು ನಡೆಸಬೇಕು. ಈ ಕಾಮಗಾರಿಗಳ ಅಂದಾಜುಗಳನ್ನು ಕೌಶಲ್ಯರಹಿತ ವೇತನದ ಹೊಸ ದರದ ಆಧಾರದ ಮೇಲೆ ಮರುಲೆಕ್ಕಾಚಾರ ಮಾಡಬೇಕು ಮತ್ತು ಸಾಮಗ್ರಿ ದರ/ಅರೆ–ನುರಿತ/ನುರಿತ ಕಾರ್ಮಿಕ ಘಟಕವನ್ನು ಪರಿಷ್ಕರಿಸಬೇಕಾಗಿಲ್ಲ. ಮರು ಅಂದಾಜಿನ ಸಂಪೂರ್ಣ ಪ್ರಕ್ರಿಯೆಯನ್ನು ಎಸ್.ಒ.ಆರ್.ಗಳ ಪರಿಷ್ಕರಣೆಯ ಒಂದು ತಿಂಗಳ ಅವಧಿಯೊಳಗೆ ಮಾಡಬೇಕು. ಹಾಗೆಯೇ, ಇನ್ನೂ ಪ್ರಾರಂಭಿಸದ ಯೋಜನೆಗಳಿಗೆ ಸಂಬಂಧಿಸಿದಂತೆ, ಜಿಲ್ಲಾ ಕಾರ್ಯಕ್ರಮ ಸಂಯೋಜಕರು ಸ್ವಯಂಪ್ರೇರಿತವಾಗಿ ಅನುಮೋದಿತ ಅಂದಾಜುಗಳನ್ನು ಪರಿಷ್ಕರಿಸಬೇಕು ಮತ್ತು ತಿಳಿಸಲಾದ ಪರಿಷ್ಕೃತ ಅಂದಾಜುಗಳ ಅನುಮೋದನೆಯನ್ನು ಪಿಐಎಗಳಿಗೆ ತಿಳಿಸಬೇಕು. ಮೂಲ ಅಂದಾಜಿನ ಪ್ರಕ್ರಿಯೆಯನ್ನೇ ಅನುಸರಿಸಿ ಪರಿಷ್ಕೃತ ಅಂದಾಜನ್ನು ಎನ್‌ಆರ್‌ಇಜಿಎಸಾಫ್ಟ್ ನಲ್ಲಿ ನಮೂದಿಸಬೇಕು.

2016–17ನೇ ಸಾಲಿನ ಹಣಕಾಸು ವರ್ಷದವರೆಗಿನ ಅಪೂರ್ಣ/ಪ್ರಗತಿಯಲ್ಲಿರುವ ಕಾಮಗಾರಿಗಳ ಸ್ಥಿತಿಯನ್ನು ಪರಿಶೀಲಿಸುವಾಗ, ಮಂಜೂರಾದ ವೆಚ್ಚಕ್ಕಿಂತ ಹೆಚ್ಚಿನ ವೆಚ್ಚ ಭರಿಸಿರುವ ಕಾಮಗಾರಿಗಳನ್ನು ಪರಿಶೀಲಿಸಬೇಕು ಮತ್ತು ಈ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮೀಣಾಭಿವೃದ್ಧಿ ಸಚಿವಾಲಯವು ಸೂಚನೆ ನೀಡಿತ್ತು (ಫೆಬ್ರವರಿ 2018).

2019–20ರಿಂದ 2023–24ರ ಅವಧಿಗೆ ಪರೀಕ್ಷಾ–ತನಿಖೆ ನಡೆಸಿದ ಐದು ಜಿಲ್ಲೆಗಳ (ಕಲಬುರಗಿ, ಕೊಪ್ಪಳ, ಮಂಡ್ಯ, ಶಿವಮೊಗ್ಗ ಮತ್ತು ತುಮಕೂರು) ಎಂಐಎಸ್ ವರದಿ ಆರ್6.12ರ (ಮೇಲ್ವಿಚಾರಣೆ ಮತ್ತು ಕಾಮಗಾರಿಗಳ ವಿವರಗಳಿಗಾಗಿ ಡೈನಾಮಿಕ್ ವರದಿ) ವಿಶ್ಲೇಷಣೆಯು 17,816 ಕಾಮಗಾರಿಗಳಿಗೆ (4,109 ಸಮುದಾಯ ಕಾಮಗಾರಿಗಳು ಮತ್ತು 13,707 ವೈಯಕ್ತಿಕ ಕಾಮಗಾರಿಗಳು) ಮಂಜೂರಾತಿಗಿಂತ ₹14.29 ಕೋಟಿಗಳನ್ನು ಅಧಿಕವಾಗಿ ವೆಚ್ಚ ಮಾಡಲಾಗಿತ್ತು ಎಂಬುದನ್ನು ತಿಳಿಯಪಡಿಸಿತು. ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ ಅಂದಾಜುಗಳನ್ನು ಪರಿಷ್ಕರಿಸುವಾಗ ಸಂಬಂಧಿತ ಸೂಚನೆಗಳನ್ನು ಪಾಲಿಸಿರಲಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ ಮತ್ತು ಇದು ಮಂಜೂರಾತಿಗಿಂತ ₹14.29 ಕೋಟಿ ಹೆಚ್ಚು ವೆಚ್ಚದಲ್ಲಿ ಪರಿಣಮಿಸಿತು. ಜಿಲ್ಲಾವಾರು ವಿವರಗಳನ್ನು **ಅನುಬಂಧ–5.8** ರಲ್ಲಿ ನೀಡಲಾಗಿದೆ.

ಮುಂದಿನ ವರ್ಷಕ್ಕೆ ಕಾಮಗಾರಿಗಳು ಬಾಕಿ ಉಳಿದಾಗ ಹೆಚ್ಚುವರಿ ವೆಚ್ಚವು ವೇತನ ಪರಿಷ್ಕರಣೆಗೆ ಸಂಬಂಧಿಸಿರುತ್ತದೆ ಎಂದು ರಾಜ್ಯ ಸರ್ಕಾರ ತಿಳಿಸಿತು (ಮೇ 2025). 2023–24ರಿಂದ, ವೇತನ ಅಥವಾ ಸಾಮಗ್ರಿ ವೆಚ್ಚವನ್ನು ಮೀರದಂತೆ ಪೂರ್ವನಿಯೋಜಿತವಾಗಿ (ಅಂತರ್ಗತ ವ್ಯವಸ್ಥೆಯಲ್ಲಿ) ಪರಿಶೀಲನಾ ವ್ಯವಸ್ಥೆ ಅಸ್ತಿತ್ವದಲ್ಲಿದೆ ಎಂದೂ ಸಹ ತಿಳಿಸಲಾಯಿತು. ಬಾಕಿ ಉಳಿದಿರುವ ಕಾಮಗಾರಿಗಳ ಅಂದಾಜುಗಳನ್ನು ಅಗತ್ಯಕ್ಕೆ ತಕ್ಕಂತೆ ಪರಿಷ್ಕರಿಸಿರಲಿಲ್ಲ ಎಂಬ ಲೆಕ್ಕಪರಿಶೋಧನಾ ವಾದವನ್ನು ಉತ್ತರವು ದೃಢಪಡಿಸುತ್ತದೆ. ಒದಗಿಸಿದ ನೀಡಿರುವ ಉತ್ತರಕ್ಕೆ ವಿರುದ್ಧವಾಗಿ 2023–24ನೇ ವರ್ಷಕ್ಕೆ ಸಂಬಂಧಿಸಿದ 126 (43+83) ಕಾಮಗಾರಿಗಳಲ್ಲಿ ಹೆಚ್ಚುವರಿ ವೆಚ್ಚ ಭರಿಸಿರುವುದನ್ನೂ ಸಹ ಲೆಕ್ಕಪರಿಶೋಧನೆಯು ಗಮನಿಸಿತು.

## 5.8 ಮಂಜೂರಾದ ಅಂದಾಜಿನ ಶೇಕಡಾ ಐದಕ್ಕಿಂತ ಕಡಿಮೆ ವೆಚ್ಚದ ನಂತರವೂ ಪೂರ್ಣಗೊಂಡಿವೆ ಎಂದು ವರದಿಯಾಗಿರುವ ಕಾಮಗಾರಿಗಳು

2019–20ರಿಂದ 2023–24ರ ಅವಧಿಗೆ ಪರೀಕ್ಷಾ–ತನಿಖೆ ನಡೆಸಿದ ಐದು ಜಿಲ್ಲೆಗಳ ಎಂಐಎಸ್ ವರದಿ ಸಂಖ್ಯೆ ಆರ್6.12ನ (ಮೇಲ್ವಿಚಾರಣೆ ಮತ್ತು ಕಾಮಗಾರಿಗಳ ವಿವರಗಳಿಗಾಗಿ ಡೈನಾಮಿಕ್ ವರದಿ) ಲೆಕ್ಕಪರಿಶೋಧನಾ ಪರಿಶೀಲನೆಯು (ಜುಲೈ 2024) 1,929 ಕಾಮಗಾರಿಗಳು (421 ಸಮುದಾಯ

ಕಾಮಗಾರಿಗಳು ಮತ್ತು 1,508 ವೈಯಕ್ತಿಕ ಕಾಮಗಾರಿಗಳು), ಮಾಡಿದ ವೆಚ್ಚವು ಮಂಜೂರಾದ ಅಂದಾಜು ವೆಚ್ಚದ ಶೇಕಡಾ 5ಕ್ಕಿಂತ ಕಡಿಮೆಯಿದ್ದರೂ, ಪೂರ್ಣಗೊಂಡಿವೆ ಎಂದು ವರದಿ ಮಾಡಿರುವುದನ್ನು ತೋರಿಸಿತು. ಈ ಕಾಮಗಾರಿಗಳಿಗೆ ಭರಿಸಿದ ಒಟ್ಟು ವೆಚ್ಚ ₹58.16 ಲಕ್ಷವಾಗಿತ್ತು (**ಅನುಬಂಧ–5.9**). ಸಾಧಿಸಿದ ಭೌತಿಕ ಪ್ರಗತಿಗೆ ಸಂಬಂಧಿಸಿದ ವಿವರಗಳು ಎಂಐಎಸ್ ನಲ್ಲಿ ಲಭ್ಯವಿರಲಿಲ್ಲ.

ಹೆಚ್ಚಿನ ಪರಿಶೀಲನೆಯು ಈ ಕಾಮಗಾರಿಗಳಲ್ಲಿ ಹೆಚ್ಚಿನ ವೆಚ್ಚವನ್ನು ಕೌಶಲ್ಯರಹಿತ ವೇತನ ಘಟಕದ ಭಾಗಶಃ ಪಾವತಿಗಾಗಿ ಮಾಡಲಾಗಿತ್ತು ಮತ್ತು ಅಂದಾಜುಗಳಲ್ಲಿ ಅವಕಾಶವಿರುವುದರ ಹೊರತಾಗಿಯೂ ಸಾಮಗ್ರಿಗಳ ಮೇಲೆ ಯಾವುದೇ ವೆಚ್ಚವನ್ನು ಭರಿಸಿರಲಿಲ್ಲ ಎಂಬುದನ್ನು ತೋರಿಸಿತು.

ಆರಂಭಿಕ ವೆಚ್ಚವನ್ನು ಭರಿಸಿದ ನಂತರ ಈ ಕಾಮಗಾರಿಗಳನ್ನು ಸ್ಥಗಿತಗೊಳಿಸಲಾಗಿತ್ತು ಮತ್ತು ಎಂಐಎಸ್ ನಲ್ಲಿ ಪೂರ್ಣಗೊಂಡಿದೆ ಎಂದು ವರದಿ ಮಾಡಿರುವುದನ್ನು ಭುವನ್ ಪೋರ್ಟಲ್‌ನಲ್ಲಿ ಲಭ್ಯವಿರುವ ಛಾಯಾಚಿತ್ರಗಳು ಮತ್ತು ಆಸ್ತಿ ರಿಜಿಸ್ಟರ್ ನ ವಿವರಗಳ ಪರೀಕ್ಷಾ–ತನಿಖೆಯು ತಿಳಿಯಪಡಿಸಿತು. ಕೆಲವು ಛಾಯಾಚಿತ್ರಗಳನ್ನು ಕೆಳಗೆ ನೀಡಲಾಗಿದೆ (**ಪ್ರದರ್ಶಿಕೆ–5.11**):

**ಪ್ರದರ್ಶಿಕೆ–5.11: ಅಂದಾಜು ವೆಚ್ಚದ ಶೇಕಡಾ 5ಕ್ಕಿಂತ ಕಡಿಮೆ ವೆಚ್ಚದೊಂದಿಗೆ ಪೂರ್ಣಗೊಂಡ ಕಾಮಗಾರಿಗಳ ಸ್ಥಿತಿಯನ್ನು ತೋರಿಸುವ ಛಾಯಾಚಿತ್ರಗಳು**

| | | |
|---|---|---|
|  |  |  |
| ತುಮಕೂರಿನಲ್ಲಿ ಸಮುದಾಯ ಕಾಮಗಾರಿ | ಕೊಪ್ಪಳದಲ್ಲಿ ಸಮುದಾಯ ಕಾಮಗಾರಿ | ಶಿವಮೊಗ್ಗದಲ್ಲಿ ವೈಯಕ್ತಿಕ ಕಾಮಗಾರಿ |
| ಕಾಮಗಾರಿ ಕೋಡ್ – 1525003016/ RC/93393042892273049 | ಕಾಮಗಾರಿ ಕೋಡ್– 1520001/WC/ 93393042892222421 | ಕಾಮಗಾರಿ ಕೋಡ್– 1524004022/IF/GIS/417469 |
| ₹9.93 ಲಕ್ಷ ಅಂದಾಜು ವೆಚ್ಚದ ಸಿಸಿ ರಸ್ತೆ ನಿರ್ಮಾಣ ಕಾಮಗಾರಿಯನ್ನು ₹12,375 ಗಳ ವೆಚ್ಚದ ನಂತರ (18–03–2024) ಪೂರ್ಣಗೊಂಡಿದೆ ಎಂದು ತೋರಿಸಲಾಗಿದೆ. | ₹9.90 ಲಕ್ಷ ಅಂದಾಜು ವೆಚ್ಚದಲ್ಲಿ ಚೆಕ್ ಡ್ಯಾಂ ನಿರ್ಮಿಸಬೇಕಿತ್ತು. ಜೂನ್ 2019ರಲ್ಲಿ ₹47,808/– ವೆಚ್ಚವನ್ನು ಮಾಡಲಾಗಿತ್ತು ಮತ್ತು ಕಾಮಗಾರಿ ಪೂರ್ಣಗೊಂಡಿದೆ ಎಂದು ತೋರಿಸಲಾಗಿದೆ (1–04–2021) | ₹0.57 ಲಕ್ಷ ಅಂದಾಜು ವೆಚ್ಚದಲ್ಲಿ ಜಾನುವಾರು ಕೊಟ್ಟಿಗೆಯನ್ನು ನಿರ್ಮಿಸಲು ಪ್ರಸ್ತಾವಿಸಲಾಗಿತ್ತು. ₹2,781 ಕೌಶಲ್ಯರಹಿತ ವೇತನವನ್ನು ಪಾವತಿಸಿದ ನಂತರ (13.03.2024) ಕಾಮಗಾರಿ ಪೂರ್ಣಗೊಂಡಿದೆ ಎಂದು ತೋರಿಸಲಾಗಿದೆ. |

ಹೀಗೆ, ಸಮುದಾಯಕ್ಕೆ ಬಾಳಿಕೆ ಬರುವ ಸ್ವತ್ತುಗಳನ್ನು ಸೃಷ್ಟಿಸುವ ಮತ್ತು ಗ್ರಾಮೀಣ ಕುಟುಂಬಗಳಿಗೆ ವೈಯಕ್ತಿಕ ಪ್ರಯೋಜನಗಳನ್ನು ವಿಸ್ತರಿಸುವ ಉದ್ದೇಶಗಳನ್ನು ಸಾಧಿಸಲಾಗಲಿಲ್ಲ. ಇದು ಈ ಅಪೂರ್ಣ ಕಾಮಗಾರಿಗಳಿಗೆ ₹58.16 ಲಕ್ಷ ವ್ಯರ್ಥ ವೆಚ್ಚ ಭರಿಸುವಲ್ಲಿ ಪರಿಣಮಿಸಿತು. ಇವು ಪರೀಕ್ಷಾ–ತನಿಖೆ ನಡೆಸಿದ ಪ್ರಕರಣಗಳಾಗಿದ್ದು ಇದೇ ರೀತಿಯ ಪ್ರಕರಣಗಳ ಸಾಧ್ಯತೆಯನ್ನು ತಳ್ಳಿಹಾಕಲಾಗುವುದಿಲ್ಲ.

ಈ ಕಾಮಗಾರಿಗಳಿಗೆ ಮಾಡಿದ ಪಾವತಿಯನ್ನು ಸಂಬಂಧಪಟ್ಟವರಿಂದ ವಸೂಲಿ ಮಾಡಲು ಮತ್ತು ಅದನ್ನು ಎಸ್‌ಇಜಿಸಿ ಖಾತೆಗೆ ಜಮಾ ಮಾಡುವಂತೆ ಜಿಲ್ಲಾ ಪಂಚಾಯಿತಿಗಳ ಸಿಇಒಗಳಿಗೆ ಸೂಚನೆ ನೀಡಲಾಗಿದೆ ಎಂದು ರಾಜ್ಯ ಸರ್ಕಾರ ತಿಳಿಸಿತು (ಮೇ 2025). ಸಾಮಗ್ರಿ ಘಟಕದ ಮೇಲಿನ ಬಾಕಿ ಪಾವತಿಯನ್ನು ಪಾವತಿಸಲು ಅಗತ್ಯ ನಿರ್ದೇಶನಗಳನ್ನು ನೀಡಲಾಗಿದೆ ಎಂದೂ ಸಹ ತಿಳಿಸಲಾಯಿತು.

## 5.9 ಸಾಮಗ್ರಿ ಪಾವತಿಗಾಗಿ ಏಜೆನ್ಸಿಗಳಿಗೆ ಅಕ್ರಮ ವೆಚ್ಚ

ವೈಯಕ್ತಿಕ ಕಾಮಗಾರಿಗಳ ಸಾಮಗ್ರಿ ವೆಚ್ಚದ ಪೂರ್ಣ ಮೊತ್ತವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಪಾವತಿಸಬೇಕು ಎಂದು ಎಂಜಿಎನ್‌ಆರ್‌ಇಜಿಎಸ್ ಆಯುಕ್ತರು (ಅಕ್ಟೋಬರ್ 2013 ಮತ್ತು ಡಿಸೆಂಬರ್ 2021) ಸೂಚನೆ ನೀಡಿದ್ದರು. ಗ್ರಾಮಾಭಿವೃದ್ಧಿ ಸಚಿವಾಲಯವು ಕಳುಹಿಸಿದ ವೈಯಕ್ತಿಕ ಪ್ರಯೋಜನಗಳ ಮಾದರಿ ಐಇಸಿ ಟೆಂಪ್ಲೇಟ್ ನಲ್ಲಿ (ಮಾರ್ಚ್ 2020) ಇದನ್ನು ಪುನರುಚ್ಚರಿಸಲಾಗಿತ್ತು.

2019-20ರಿಂದ 2023-24ರ ಅವಧಿಗೆ ಪರೀಕ್ಷಾ-ತನಿಖೆ ನಡೆಸಿದ ಗ್ರಾಮ ಪಂಚಾಯಿತಿಗಳ ಮಾರಾಟಗಾರರ ವೆಚ್ಚ ವರದಿಗಳ (ಎಂಐಎಸ್ ನ ವರದಿ ಎಸ್-5.13) ಪರಿಶೀಲನೆಯು ಪರೀಕ್ಷಾ-ತನಿಖೆ ನಡೆಸಿದ 40 ಗ್ರಾಮ ಪಂಚಾಯಿತಿಗಳಲ್ಲಿ (ಶಿಕಾರಿಪುರ ತಾಲ್ಲೂಕಿನ ಉಡುಗಣಿ ಗ್ರಾಮ ಪಂಚಾಯತಿಯನ್ನು ಹೊರತುಪಡಿಸಿ) 39ರ 3,695 ವೈಯಕ್ತಿಕ ಕಾಮಗಾರಿಗಳಿಗೆ ಸಂಬಂಧಿಸಿದ ಸಾಮಗ್ರಿ ವೆಚ್ಚವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಪಾವತಿಸುವ ಬದಲು ನೇರವಾಗಿ ಏಜೆನ್ಸಿಗಳಿಗೆ (ಮಾರಾಟಗಾರರು) ಪಾವತಿಸಿರುವುದನ್ನು ತೋರಿಸಿತು. 146 ಸಾಮಗ್ರಿ ಪೂರೈಕೆದಾರರಿಗೆ (ಏಜೆನ್ಸಿಗಳು) ಪಾವತಿಸಬೇಕಾದ ₹4.27 ಕೋಟಿಯಲ್ಲಿ, ಈಗಾಗಲೇ ₹4.13 ಕೋಟಿಯನ್ನು ಪಾವತಿಸಲಾಗಿತ್ತು ಮತ್ತು ₹13.66 ಲಕ್ಷ ಪಾವತಿಸಲು ಬಾಕಿ ಉಳಿದಿತ್ತು (ಅಕ್ಟೋಬರ್ 2024). ತಾಲ್ಲೂಕುವಾರು ಮತ್ತು ಗ್ರಾಮ ಪಂಚಾಯಿತಿವಾರು ವಿವರಗಳನ್ನು **ಅನುಬಂಧ-5.10** ರಲ್ಲಿ ನೀಡಲಾಗಿದೆ.

ಸಾಮಗ್ರಿ ಪೂರೈಕೆದಾರರಿಗೆ ಅಕ್ರಮವಾಗಿ ಮಾಡಿರುವುದರಿಂದ, ಇದು ಗ್ರಾಮೀಣಾಭಿವೃದ್ಧಿ ಸಚಿವಾಲಯ ಮತ್ತು ಎಂಜಿಎನ್‌ಆರ್‌ಇಜಿಎಸ್ ಆಯುಕ್ತರ ನಿರ್ದಿಷ್ಟ ನಿರ್ದೇಶನಗಳಿಗೆ ವಿರುದ್ಧವಾಗಿತ್ತಲ್ಲದೇ ನೇರ ಪಾವತಿ ಅನಗತ್ಯ ಹಣಕಾಸಿನ ಸಹಾಯವನ್ನು ಸಹ ವಿಸ್ತರಿಸಿದಂತಾಯಿತು.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ಅವಲೋಕನವನ್ನು ಒಪ್ಪಿಕೊಂಡಿತು (ಮೇ 2025) ಮತ್ತು ಅದನ್ನು ಮುಖ್ಯವಾಗಿ ಅಗತ್ಯ ಸಾಮಗ್ರಿಗಳನ್ನು ಖರೀದಿಸಲು ಫಲಾನುಭವಿಗಳ ಅಸಮರ್ಥತೆಗೆ ಅಧ್ಯಾರೋಪಿಸಿತು. ಆದರೆ, ಅದು ತನ್ನದೇ ಆದ ನಿರ್ದೇಶನಗಳಿಗೆ ವಿರುದ್ಧವಾಗಿತ್ತು.

## 5.10 ಕೃಷಿ ಸಂಬಂಧಿತ ಕಾಮಗಾರಿಗಳು ಮತ್ತು ನೈಸರ್ಗಿಕ ಸಂಪನ್ಮೂಲ ನಿರ್ವಹಣಾ ಕಾಮಗಾರಿಗಳ ಮೇಲಿನ ವೆಚ್ಚದ ಗುರಿಗಳನ್ನು ಸಾಧಿಸದಿರುವುದು

ಎಂಜಿಎನ್‌ಆರ್‌ಇಜಿಎ ಅನುಸೂಚಿ-1ರ ಕಂಡಿಕೆ-4(2)ರ ನಿಬಂಧನೆಯು ಜಿಲ್ಲಾ ಕಾರ್ಯಕ್ರಮ ಸಂಯೋಜಕರನ್ನು ವೆಚ್ಚದ ದೃಷ್ಟಿಯಿಂದ ಜಿಲ್ಲೆಯಲ್ಲಿ ಕೈಗೆತ್ತಿಕೊಳ್ಳುವ ಕನಿಷ್ಠ ಶೇಕಡಾ 60ರಷ್ಟು ಕಾಮಗಾರಿಗಳು ಭೂಮಿ, ನೀರು ಮತ್ತು ಮರಗಳ ಅಭಿವೃದ್ಧಿಯ ಮೂಲಕ ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಿಗೆ ನೇರವಾಗಿ ಸಂಬಂಧಿಸಿದ ಉತ್ಪಾದಕ ಸ್ವತ್ತುಗಳ ಸೃಷ್ಟಿಗೆ ಸಂಬಂಧಪಟ್ಟಿರಬೇಕು ಎಂಬುದನ್ನು ಖಚಿತಪಡಿಸಿಕೊಳ್ಳಲು ಜಿಲ್ಲಾ ಕಾರ್ಯಕ್ರಮ ಸಂಯೋಜಕರನ್ನು ಹೊಣೆಗಾರರನ್ನಾಗಿ ಮಾಡಿದೆ.

ಒದಗಿಸಿದ ಮಾಹಿತಿಯ ಪರಿಶೀಲನೆಯು ಕೃಷಿ ಮತ್ತು ಸಂಬಂಧಿತ ಕಾಮಗಾರಿಗಳ ಮೇಲೆ ಶೇಕಡಾ 60ಕ್ಕಿಂತ ಕಡಿಮೆ ವೆಚ್ಚವನ್ನು ಭರಿಸಿರುವ ಜಿಲ್ಲೆಗಳ ಸಂಖ್ಯೆ 6ರಿಂದ (2021-22) 30ರವರೆಗೆ (2023-24) ಇದ್ದಿತು ಎಂಬುದನ್ನು ತೋರಿಸಿತು. ವಿವರಗಳನ್ನು **ಅನುಬಂಧ-5.11**ರಲ್ಲಿ ನೀಡಲಾಗಿದೆ. 2019-20ರಿಂದ 2021-22ರ ಅವಧಿಯಲ್ಲಿ ಕೃಷಿ ಮತ್ತು ಸಂಬಂಧಿತ ಕಾಮಗಾರಿಗಳ ವೆಚ್ಚವು ಗಮನಾರ್ಹವಾಗಿ

ಏರಿಕೆಯಾಗಿದ್ದಿತು ಮತ್ತು ನಂತರ ಇಳಿಕೆಯಾಗಿತ್ತು (**ನಕ್ಷೆ–5.2ರಲ್ಲಿ** ಪ್ರದರ್ಶಿಸಲಾಗಿದೆ). ಇದು ಕೃಷಿ ಉತ್ಪಾದಕತೆ ಮತ್ತು ಆದಾಯ ಉತ್ಪಾದನೆಯನ್ನು ಹೆಚ್ಚಿಸುವ ಮೂಲಕ ಗ್ರಾಮೀಣ ಸಮುದಾಯಗಳ ಜೀವನೋಪಾಯವನ್ನು ಸುಧಾರಿಸುವ ಉದ್ದೇಶದ ಮೇಲೆ ಪ್ರತಿಕೂಲ ಪರಿಣಾಮ ಬೀರಿತು.

**ನಕ್ಷೆ–5.2: ಕೃಷಿ ಮತ್ತು ಸಂಬಂಧಿತ ಕಾಮಗಾರಿಗಳ ಮೇಲಿನ ವೆಚ್ಚದ ಗುರಿಗಳನ್ನು ಸಾಧಿಸದಿರುವುದು**




**ಮೂಲ: ಇಲಾಖೆಯಿಂದ ಒದಗಿಸಲಾದ ಮಾಹಿತಿ (ಡಿಸೆಂಬರ್ 2024)**

ಹಾಗೆಯೇ, ಕರ್ನಾಟಕದ 78 ಮಿಷನ್ ಜಲ ಸಂರಕ್ಷಣಾ ಬ್ಲಾಕ್ ಗಳಲ್ಲಿ[34] (ಎಂಡಬ್ಲ್ಯೂಸಿ) ನೈಸರ್ಗಿಕ ಸಂಪನ್ಮೂಲ ನಿರ್ವಹಣಾ (ಎನ್‌ಆರ್ ಎಂ) ಕಾಮಗಾರಿಗಳಿಗೆ[35] ಅಗತ್ಯವಾದ ಶೇಕಡಾವಾರು (ಶೇಕಡಾ 65) ವೆಚ್ಚವನ್ನು 15ರಿಂದ 77 ಎಂಡಬ್ಲ್ಯೂಸಿ ಬ್ಲಾಕ್ ಗಳಲ್ಲಿ ನಿರ್ವಹಿಸಿರಲಿಲ್ಲ.

ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳ ಮೇಲಿನ ವೆಚ್ಚದ ಶೇಕಡಾವಾರು ಪ್ರಮಾಣವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ರಾಜ್ಯ ಸರ್ಕಾರ ತಿಳಿಸಿತು (ಮೇ 2025). 2019–20ನೇ ಸಾಲನ್ನು ಹೊರತುಪಡಿಸಿ ನಿಗದಿತ ಎನ್‌ಆರ್ ಎಂ ವೆಚ್ಚವನ್ನು ನಿರ್ವಹಿಸಲಾಗಿದೆ ಎಂದೂ ತಿಳಿಸಲಾಯಿತು. ಒದಗಿಸಿದ ಮಾಹಿತಿಯು ರಾಜ್ಯದ ಒಟ್ಟಾರೆ ಸ್ಥಿತಿಗೆ ಸಂಬಂಧಿಸಿದ್ದು, ಎಂಡಬ್ಲ್ಯೂಸಿ ಬ್ಲಾಕ್‌ಗಳಲ್ಲಿ ಎನ್‌ಆರ್‌ಎಂ ವೆಚ್ಚದಲ್ಲಿ ಕೊರತೆ ಇದ್ದುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

### 5.11 ಮಿಷನ್ ಅಮೃತ್ ಸರೋವರ್–ಮಾನದಂಡಗಳನ್ನು ಕಡೆಗಣಿಸಿ ಕಾರ್ಯಗತಗೊಳಿಸಿದ ಕಾಮಗಾರಿಗಳು

"ದೇಶದ ಪ್ರತಿ ಜಿಲ್ಲೆಯಲ್ಲಿ ಕನಿಷ್ಠ 75 ಅಮೃತ ಸರೋವರಗಳ (ಕೊಳಗಳ) ನಿರ್ಮಾಣ/ಅಭಿವೃದ್ಧಿ" ಉದ್ದೇಶದಿಂದ ಮಾನ್ಯ ಪ್ರಧಾನ ಮಂತ್ರಿಯವರು 24 ಏಪ್ರಿಲ್ 2022ರಂದು ಮಿಷನ್ ಅಮೃತ್ ಸರೋವರ್ ಯೋಜನೆಯನ್ನು ಪ್ರಾರಂಭಿಸಿದರು. ಮಾರ್ಗಸೂಚಿಗಳ ಪ್ರಕಾರ, ಪ್ರತಿ ಅಮೃತ್ ಸರೋವರ್ ಸುಮಾರು 10,000 ಘನ ಮೀಟರ್ ನೀರು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯದೊಂದಿಗೆ ಕನಿಷ್ಠ ಒಂದು ಎಕರೆ (0.4 ಹೆಕ್ಟೇರ್) ಕೊಳ ಪ್ರದೇಶವನ್ನು ಹೊಂದಿರಬೇಕು. ಈ ಚಟುವಟಿಕೆಗೆ ಹಣವನ್ನು ಎಂಜಿಎನ್‌ಆರ್‌ಇಜಿಎ ಇಂದ ಪಡೆಯಬಹುದು ಎಂದು ಮಾರ್ಗಸೂಚಿಗಳು ತಿಳಿಸುತ್ತವೆ.

ಲೆಕ್ಕಪರಿಶೋಧನೆಗೆ ಒದಗಿಸಿದ ಮಾಹಿತಿಯ ಪ್ರಕಾರ (ಜುಲೈ 2024 ಮತ್ತು ನವೆಂಬರ್ 2025), ಕರ್ನಾಟಕದಲ್ಲಿ ವಿವಿಧ ಯೋಜನೆಗಳ ಅಡಿಯಲ್ಲಿ 4,177 ಅಮೃತ ಸರೋವರ ಕಾಮಗಾರಿಗಳನ್ನು

[34] ಅಂತರ್ಜಲ ಶೋಷಣೆಗೆ ಸಂಬಂಧಿಸಿದಂತೆ ಹೆಚ್ಚು ಒತ್ತಡಕ್ಕೊಳಗಾದ ಪ್ರದೇಶಗಳೆಂದು ಗುರುತಿಸಲಾಗಿದೆ.

[35] ಜಲಾನಯನ ನಿರ್ವಹಣಾ ಕಾರ್ಯಗಳು (ಕಾಂಟೂರ್ ಕಂದಕಗಳು, ಟೆರೇಸಿಂಗ್, ಕಾಂಟೂರ್ ಕಟ್ಟುಗಳು, ಬಂಡೆಗಳ ತಪಾಸಣೆಗಳು, ಇತ್ಯಾದಿ), ನೀರಾವರಿ ಟ್ಯಾಂಕ್‌ಗಳ ಹೂಳು ತೆಗೆಯುವುದು ಸೇರಿದಂತೆ ಸಾಂಪ್ರದಾಯಿಕ ಜಲಮೂಲಗಳ ನವೀಕರಣ, ಅರಣ್ಯೀಕರಣ, ಮರ ನೆಡುವಿಕೆ, ಸಾಮಾನ್ಯ ಭೂಮಿಯಲ್ಲಿ ಭೂ ಅಭಿವೃದ್ಧಿ ಕಾರ್ಯಗಳು ಇತ್ಯಾದಿ.

ಕೈಗೆತ್ತಿಕೊಳ್ಳಲಾಗಿದ್ದು, ಈ ಪೈಕಿ 4,056 ಕಾಮಗಾರಿಗಳು ಪೂರ್ಣಗೊಂಡಿವೆ ಎಂದು ವರದಿಯಾಗಿತ್ತು. ಎಂಜಿಎನ್ಆರ್ಇಜಿಎಸ್ ಅಡಿಯಲ್ಲಿ 3,118 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿತ್ತು ಮತ್ತು 3,031 ಕಾಮಗಾರಿಗಳು ಪೂರ್ಣಗೊಂಡಿದ್ದವು (ಸೆಪ್ಟೆಂಬರ್ 2024) ಎಂದೂ ತಿಳಿಸಲಾಯಿತು.

ಪೂರ್ಣಗೊಂಡ 1,115 ಕಾಮಗಾರಿಗಳಲ್ಲಿ (ಶೇಕಡಾ 37) ಕನಿಷ್ಠ ಒಂದು ಎಕರೆ (0.4 ಹೆಕ್ಟೇರ್) ಕೊಳ ಪ್ರದೇಶ ಮತ್ತು ಸುಮಾರು 10,000 ಘನ ಮೀಟರ್ ನೀರು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯದ ನಿಗದಿತ ಮಾನದಂಡಗಳನ್ನು ಅನುಸರಿಸಿರಲಿಲ್ಲ ಎಂಬುದು ಲೆಕ್ಕಪರಿಶೋಧನಾ ಪರಿಶೀಲನೆಯಿಂದ ತಿಳಿದುಬಂದಿತು. ಇದು ಅಗತ್ಯ ಮಾನದಂಡಗಳನ್ನು ಪೂರೈಸದಿರುವ ಈ 1,115 ಕಾಮಗಾರಿಗಳಿಗೆ ₹51.61 ಕೋಟಿ ವೆಚ್ಚವನ್ನು ಭರಿಸುವಲ್ಲಿ ಪರಿಣಮಿಸಿತು,

ಸಾಕಷ್ಟು ತೆರೆದ ಸ್ಥಳಗಳ ಕೊರತೆ, ಟ್ಯಾಂಕಗಳನ್ನು ಗ್ರನೈಟ್ ಅಥವಾ ಗಟ್ಟಿ ಕಲ್ಲುಗಳಿಂದ ಫಿಕ್ ಮಾಡಿರುವುದು ಮತ್ತು ಸಾಂಸ್ಕೃತಿಕ ಐತಿಹಾಸಿಕ ಮಹತ್ವವನ್ನು ಹೊಂದಿರುವ ಕಾರಣದಿಂದ ಈ ಜಲಮೂಲಗಳ ವಿಸ್ತರಣೆಗೆ ಅಡ್ಡಿಯಾಗಿದೆ ಎಂದು ಉಲ್ಲೇಖಿಸಿ ಅಂತಹ ಸೂಕ್ತವಲ್ಲದ ಅಮೃತ್ ಸರೋವರ್ ಕಾಮಗಾರಿಗಳನ್ನು ಸಕ್ರಮಗೊಳಿಸಲು ಅನುಮೋದನೆ ನೀಡುವಂತೆ ಎಂಜಿಎನ್ಆರ್ಇಜಿಎಸ್ ಆಯುಕ್ತರು (25.01.2024) ಭಾರತ ಸರ್ಕಾರವನ್ನು ವಿನಂತಿಸಿದ್ದರು. ಅನುಮೋದನೆಯನ್ನು ನಿರೀಕ್ಷಿಸಲಾಗಿದೆ (ಅಕ್ಟೋಬರ್ 2024).

ಲೆಕ್ಕಪರಿಶೊಧನಾ ಅವಕಲೋಕನವನ್ನು ಒಪ್ಪಿಕೊಳ್ಳುತ್ತಾ ಪ್ರಕರಣವನ್ನು ಸಕ್ರಮಗೊಳಿಸುವ ಪ್ರಸ್ತಾವನೆಯು ಭಾರತ ಸರ್ಕಾರದಲ್ಲಿ ಬಾಕಿ ಉಳಿದಿದೆ ಎಂದು ಸರ್ಕಾರವು ತಿಳಿಸಿತು (ಮೇ 2025).

### 5.12 ಕ್ಲಸ್ಟರ್ ಫೆಸಿಲಿಟೇಶನ್ ಯೋಜನೆಯ ಉದ್ದೇಶಗಳನ್ನು ಸಾಧಿಸದಿರುವುದು

ದೇಶಾದ್ಯಂತ 117 ಮಹತ್ವಾಕಾಂಕ್ಷೆಯ ಜಿಲ್ಲೆಗಳ 250 ಬ್ಲಾಕ್ ಗಳಲ್ಲಿ ಮತ್ತು ಇತರ ಹಿಂದುಳಿದ ಪ್ರದೇಶಗಳ 50 ಬ್ಲಾಕ್ ಗಳಲ್ಲಿ ಉತ್ತಮ ಸಮನ್ವಯ, ಯೋಜನೆ ಮತ್ತು ಅನುಷ್ಠಾನದ ಮೂಲಕ ಎಂಜಿಎನ್ಆರ್ಇಜಿಎಸ್ ನೊಂದಿಗೆ ಕೇಂದ್ರ ಸರ್ಕಾರ/ರಾಜ್ಯ ಸರ್ಕಾರದ ವಿವಿಧ ಪ್ರಮುಖ ಕಾರ್ಯಕ್ರಮಗಳ ಸಮನ್ವಯವನ್ನು ಬಳಸಿಕೊಳ್ಳುವ ಬಹುಮುಖಿ ಕಾರ್ಯತಂತ್ರದ ಮೂಲಕ ಬಡತನವನ್ನು ಪರಿಹರಿಸುವ ದೃಷ್ಟಿಯಿಂದ ಕ್ಲಸ್ಟರ್ ಫೆಸಿಲಿಟೇಶನ್ ಯೋಜನೆಯನ್ನು (ಸಿಎಫ್‌ಪಿ) ಪ್ರಾರಂಭಿಸಲಾಯಿತು. ಸಿಎಫ್.ಪಿಯ ವೆಚ್ಚದ ಶೇಕಡಾ 100 ರಷ್ಟನ್ನು ಗ್ರಾಮೀಣಾಭಿವೃದ್ಧಿ ಸಚಿವಾಲಯವು ಭರಿಸಬೇಕಿತ್ತು ಮತ್ತು ಸಿಎಫ್.ಪಿಯ ಯೋಜನಾ ಅವಧಿಯು 1 ಏಪ್ರಿಲ್ 2020ರಿಂದ 31 ಮಾರ್ಚ್ 2023ರವರೆಗೆ ಇದ್ದಿತು. ಕಾರ್ಯಕ್ಷಮತೆ ಮತ್ತು ಸಿಎಫ್.ಪಿಯ ಅಗತ್ಯವನ್ನು ಅವಲಂಬಿಸಿ ಅವಧಿಯನ್ನು ಎರಡು ವರ್ಷಗಳ ಅವಧಿಗೆ ವಿಸ್ತರಿಸಬಹುದು. ಕರ್ನಾಟಕದಲ್ಲಿ ಐದು ತಾಲ್ಲೂಕುಗಳು (ಚಿಂಚೋಳಿ, ದೇವದುರ್ಗ, ರಾಯಚೂರು, ಯಾದಗಿರಿ ಮತ್ತು ಶೋರಾಪುರ) ಸಿಎಫ್.ಪಿಗೆ ಆಯ್ಕೆಯಾಗಿದ್ದವು.

ಕರ್ನಾಟಕದಲ್ಲಿ ಸಿಎಫ್.ಪಿಗೆ ಅಗತ್ಯವಾದ ಹಣಕಾಸಿನ ಬೆಂಬಲ ಸಿಗಲಿಲ್ಲ ಮತ್ತು ಈ ಕೆಳಗೆ ವಿವರಿಸಿದಂತೆ ಗುರುತಿಸಲಾದ ಬಹುಪಾಲು ವಿತರಣೆಗಳನ್ನು ಸಾಧಿಸಲು ವಿಫಲವಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು:

i) ಕರ್ನಾಟಕದಲ್ಲಿ ಸಿಎಫ್.ಪಿ ಮಾರ್ಚ್ 2021ರಿಂದ ಕಾರ್ಯರೂಪಕ್ಕೆ ಬಂದಿತು. ಯೋಜನೆಯನ್ನು ಆರಂಭದಲ್ಲಿ 31 ಮಾರ್ಚ್ 2024ರವರೆಗಿನ ಒಂದು ಹಣಕಾಸು ವರ್ಷಕ್ಕೆ ವಿಸ್ತರಿಸಲಾಯಿತು ಮತ್ತು ನಂತರ 31 ಮಾರ್ಚ್ 2025ರವರೆಗೆ ವಿಸ್ತರಿಸಲಾಯಿತು. ಯೋಜನೆಯ ಅನುಷ್ಠಾನಕ್ಕಾಗಿ, ಇಲಾಖೆಯು ಎಂಜಿಎನ್ಆರ್ಇಜಿಎಸ್ ಅಡಿಯಲ್ಲಿ ಸಿಎಫ್‌ಪಿಯ ಆಯವ್ಯಯ ಶೀರ್ಷಿಕೆ "ಸಾಮರ್ಥ್ಯ ವರ್ಧನೆ ಮತ್ತು ತಾಂತ್ರಿಕ ಬೆಂಬಲ" ಅಡಿಯಲ್ಲಿ ₹384.37 ಲಕ್ಷ ಮೊತ್ತಕ್ಕಾಗಿ (2020–21ರಲ್ಲಿ ₹268.87 ಲಕ್ಷ ಮತ್ತು 2023–24ರಲ್ಲಿ ₹115.50 ಲಕ್ಷ) ಬೇಡಿಕೆ ಇಟ್ಟಿತ್ತು,
   ಈ ಬೇಡಿಕೆಗೆ ಪ್ರತಿಯಾಗಿ, 2020–21ರಲ್ಲಿ ಕೇವಲ ₹67.22 ಲಕ್ಷವನ್ನು (ಶೇಕಡಾ 17) ಮಾತ್ರ ಬಿಡುಗಡೆ ಮಾಡಲಾಗಿತ್ತು. ಮಾರ್ಚ್ 2024ರಲ್ಲಿದ್ದಂತೆ ಆಯ್ದ ಐದು ತಾಲ್ಲೂಕುಗಳಲ್ಲಿ ಸಿಎಫ್.ಪಿ

ಅಡಿಯಲ್ಲಿ ಒಟ್ಟು ₹294.56 ಲಕ್ಷ ವೆಚ್ಚವನ್ನು ಭರಿಸಲಾಗಿತ್ತು, ಇದರಲ್ಲಿ ಎಂಜಿಎನ್‌ಆರ್‌ಇಜಿಎಸ್ ನಿಧಿಯಿಂದ ₹9.39 ಲಕ್ಷ ಬಡ್ಡಿಯೊಂದಿಗೆ ಮಾರ್ಗಪಲ್ಲಟ ಮಾಡಲಾದ ₹217.95 ಲಕ್ಷ ಹಣವು ಸೇರಿತ್ತು.

ii) ಸಿಎಫ್.ಪಿ ಮಾರ್ಗದರ್ಶಿ ಸೂತ್ರಗಳ ಕಂಡಿಕೆ–12.1 ಮತ್ತು 12.2ರಲ್ಲಿ ಸಿಎಫ್.ಪಿ ಆರಂಭದಿಂದ ಸಾಧಿಸಬಹುದಾದ ವಿತರಣೆಗಳ ಬಗ್ಗೆ ನಿರ್ದಿಷ್ಟಪಡಿಸಲಾಗಿದೆ. ಯೋಜನೆಯ ಪ್ರಾರಂಭದಿಂದ 18 ತಿಂಗಳಲ್ಲಿ ಗುರಿಯನ್ನು ಸಾಧಿಸಿದ ನಂತರ, ಸಿಎಫ್‌ಪಿ ಮುಂದಿನ ಬ್ಲಾಕ್‌ಗೆ ಸ್ಥಳಾಂತರಗೊಳ್ಳುತ್ತದೆ. ಈ ಆಯ್ದ ಐದು ಸಿಎಫ್‌ಪಿ ತಾಲ್ಲೂಕುಗಳಲ್ಲಿನ ಗುರಿಗಳಿಗೆ ಪ್ರತಿಯಾಗಿ ಸಾಧನೆಗಳ ವಿವರಗಳು **(ಅನುಬಂಧ–5.12)** ಹತ್ತು (14 ರಲ್ಲಿ) ವಿತರಣೆಗಳಲ್ಲಿ ಸಾಧನೆಯು ಗುರಿಗಿಂತ ಕಡಿಮೆಯಾಗಿತ್ತು ಎಂಬುದನ್ನು ಬಹಿರಂಗಪಡಿಸಿತು. **ಕೋಷ್ಟಕ–5.5ರಲ್ಲಿ** ವಿವರಿಸಿದಂತೆ ಐದು ವಿತರಣೆಗಳಲ್ಲಿ, ಸಾಧನೆಯು ಗುರಿಗಿಂತ ತುಂಬಾ ಕಡಿಮೆಯಾಗಿತ್ತು.

**ಕೋಷ್ಟಕ–5.5: ಸಿಎಫ್.ಪಿ ಅಡಿಯಲ್ಲಿ ಗುರಿಗಳು ಮತ್ತು ಸಾಧನೆಗಳ ವಿವರಗಳು**

| ವಿತರಣೆಗಳು | ಗುರಿ | ಸಾಧನೆಯ ವ್ಯಾಪ್ತಿ |
|---|---|---|
| ಎನ್.ಆರ್.ಎಂ. ಕಾಮಗಾರಿಗಳ ಅಡಿಯಲ್ಲಿ ವೆಚ್ಚ | 65 | ಶೇಕಡಾ 36ರಿಂದ (ಶೋರಾಪುರ) ಶೇಕಡಾ 53 (ಯಾದಗಿರಿ) |
| ವೈಯಕ್ತಿಕ ಕಾಮಗಾರಿಗಳ ವೆಚ್ಚ | 60 | ಶೇಕಡಾ 34ರಿಂದ (ಚಿಂಚೋಲಿ) ಶೇಕಡಾ 58 (ಶೋರಾಪುರ) |
| ಕೃಷಿ ಮತ್ತು ಸಂಬಂಧಿತ ಕಾಮಗಾರಿಗಳ ವೆಚ್ಚ | 60 | ಶೇಕಡಾ 20 (ರಾಯಚೂರು) ಮತ್ತು ಶೇ.48 (ಶೋರಾಪುರ) |
| ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕುಟುಂಬಗಳು. | ಜಿಲ್ಲೆಯ ಸರಾಸರಿಗಿಂತ ಶೇಕಡಾ 10 ರಷ್ಟು ಹೆಚ್ಚು ಮಾನವ ದಿನಗಳು | ದೇವದುರ್ಗ, ರಾಯಚೂರು, ಯಾದಗಿರಿ ಮತ್ತು ಶೋರಾಪುರ ತಾಲ್ಲೂಕುಗಳಲ್ಲಿ ಸಾಧಿಸಲಾಗಿಲ್ಲ |
| ಜಿಐಎಸ್ ಆಧಾರಿತ ಐಎನ್‌ಆರ್‌ಎಂ ಯೋಜನೆಯ ಪ್ರಕಾರ ಕೈಗೆತ್ತಿಕೊಳ್ಳಬೇಕಾದ ಕಾಮಗಾರಿಗಳು | 100 | ಶೇಕಡಾ 41ರಿಂದ (ದೇವದುರ್ಗ) ಶೇಕಡಾ 69 (ಶೋರಾಪುರ) |

iii) ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಅನುಕ್ರಮವಾಗಿ ತಿಂಗಳಿಗೊಮ್ಮೆ ಮತ್ತು ವಾರಕ್ಕೊಮ್ಮೆ ಪರಿಶೀಲನಾ ಸಭೆ ನಡೆಸಬೇಕಿತ್ತು. 2021–22ರಿಂದ 2023–24ರ ಅವಧಿಯಲ್ಲಿ ಮೂರು ಸಿಎಫ್‌ಪಿ ತಾಲ್ಲೂಕುಗಳಲ್ಲಿ (ದೇವದುರ್ಗ, ರಾಯಚೂರು ಮತ್ತು ಶೋರಾಪುರ) ಸಾಪ್ತಾಹಿಕ ಪರಿಶೀಲನಾ ಸಭೆಗಳನ್ನು[36] ನಡೆಸುವಲ್ಲಿ ಕೊರತೆಯಿರುವುದನ್ನು ಇಲಾಖೆಯು ಒದಗಿಸಿದ ಮಾಹಿತಿಯ ಪರಿಶೀಲನೆಯು ತೋರಿಸಿತು.

ಹೀಗೆ, ₹294.56 ಲಕ್ಷ ವೆಚ್ಚದ ಹೊರತಾಗಿಯೂ, ಉತ್ತಮ ಯೋಜನೆ, ಸಮನ್ವಯ ಮತ್ತು ಮೇಲ್ವಿಚಾರಣೆಯ ಮೂಲಕ ಎಂಜಿಎನ್‌ಆರ್‌ಇಜಿಎಸ್ ಪರಿಣಾಮಕಾರಿ ಅನುಷ್ಠಾನದ ಮೂಲ ಉದ್ದೇಶವನ್ನು ಸಾಧಿಸಲು ಸಿಎಫ್.ಪಿ ವಿಫಲವಾಗಿತ್ತು.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ಅಭಿಪ್ರಾಯವನ್ನು ಒಪ್ಪಿಕೊಂಡಿತು ಮತ್ತು ಸಂಬಂಧಪಟ್ಟ ಜಿಲ್ಲೆಗಳು ಮತ್ತು ಕ್ಲಸ್ಟರ್ ಗಳಿಗೆ ಅಗತ್ಯ ನಿರ್ದೇಶನಗಳನ್ನು ನೀಡಲಾಗುವುದು ಎಂದು ತಿಳಿಸಿತು (ಮೇ 2025).

[36] ಸಾಪ್ತಾಹಿಕ ಪರಿಶೀಲನಾ ಸಭೆಗಳಲ್ಲಿ ಕೊರತೆ – ದೇವದುರ್ಗ ತಾಲ್ಲೂಕು (5ರಿಂದ 7), ರಾಯಚೂರು (3–ರಿಂದ 5), ಶೋರಾಪುರ (16 ರಿಂದ 24).

### 5.13 ಉನ್ನತಿ ಯೋಜನೆಯ ಅನುಷ್ಠಾನ

ಪ್ರಾಜೆಕ್ಟ್ 'ಉನ್ನತಿ', ಕೌಶಲ್ಯ ಯೋಜನೆ (2020-21 ರಲ್ಲಿ ಪ್ರಾರಂಭಿಸಲಾದ), ಎಂಜಿಎನ್‌ಆರ್‌ಇಜಿಎಸ್ ಫಲಾನುಭವಿಗಳ ಕೌಶಲ್ಯ ನೆಲೆಯನ್ನು ಉನ್ನತೀಕರಿಸುವ ಉದ್ದೇಶವನ್ನು ಹೊಂದಿದೆ ಮತ್ತು ಆ ಮೂಲಕ ಅವರ ಜೀವನೋಪಾಯವನ್ನು ಸುಧಾರಿಸುತ್ತದೆ. ಇದರಿಂದ ಅವರು ಪ್ರಸಕ್ತ ಭಾಗಶಃ ಉದ್ಯೋಗದಿಂದ ಪೂರ್ಣ ಸಮಯದ ಉದ್ಯೋಗಕ್ಕೆ ಹೋಗಬಹುದು. ಎಂಜಿಎನ್‌ಆರ್‌ಇಜಿಎಸ್ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವುದು ಇದರ ಉದ್ದೇಶವಾಗಿತ್ತು.

ಹಿಂದಿನ ಹಣಕಾಸು ವರ್ಷಗಳಲ್ಲಿ ಎಂಜಿಎನ್‌ಆರ್‌ಇಜಿಎಸ್ ಅಡಿಯಲ್ಲಿ 100 ದಿನಗಳ ಕೆಲಸವನ್ನು ಪೂರ್ಣಗೊಳಿಸಿದ ಕುಟುಂಬದ ಒಬ್ಬ ವಯಸ್ಕ ಸದಸ್ಯರಿಗೆ ತರಬೇತಿ ನೀಡುವುದು ಈ ಯೋಜನೆಯ ಉದ್ದೇಶವಾಗಿತ್ತು. ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ (ಡಿಡಿಯು-ಜಿಕೆವೈ), ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ (ಆರ್‌ಎಸ್‌ಇಟಿಐ) ಮತ್ತು ಕೃಷಿ ವಿಜ್ಞಾನ ಕೇಂದ್ರ (ಕೆವಿಕೆ) ಮುಂತಾದ ಸಂಸ್ಥೆಗಳು ಹೈನುಗಾರಿಕೆ, ಅಣಬೆ ಕೃಷಿ, ಕುರಿ ಸಾಕಾಣಿಕೆ ಮುಂತಾದ ಕ್ಷೇತ್ರಗಳಲ್ಲಿ ಉನ್ನತಿ ಅಡಿಯಲ್ಲಿ ತರಬೇತಿ ನೀಡಬೇಕಾಗಿತ್ತು

ಅದರ ಅನುಷ್ಠಾನದಲ್ಲಿ ದಾಖಲೆಗಳ ಪರಿಶೀಲನೆಯು ಈ ಕೆಳಗಿನ ನ್ಯೂನತೆಗಳನ್ನು ತೋರಿಸಿತು:

i) 2020-21ರಿಂದ 2023-24ರ ಅವಧಿಯಲ್ಲಿ ಡಿಡಿಯು-ಜಿಕೆವೈ ಮತ್ತು ಕೆವಿಕೆ ತರಬೇತಿ ಕಾರ್ಯಕ್ರಮಗಳ ಅಡಿಯಲ್ಲಿ ಯಾವುದೇ ತರಬೇತಿಯನ್ನು ನೀಡಿರಲಿಲ್ಲ

ii) ಇಡೀ ರಾಜ್ಯದಲ್ಲಿ 7,963 ಫಲಾನುಭವಿಗಳಿಗೆ ತರಬೇತಿ ನೀಡುವ ಗುರಿಯ ಪ್ರತಿಯಾಗಿ, 2020-21ರಿಂದ 2023-24ರ ಅವಧಿಯಲ್ಲಿ 3,712 ಫಲಾನುಭವಿಗಳಿಗೆ (ಶೇಕಡಾ 47) ಆರ್‌ಎಸ್‌ಇಟಿಐಗಳಿಂದ ತರಬೇತಿ ನೀಡಲಾಗಿತ್ತು.

iii) ಆರ್.ಎಸ್.ಇ.ಟಿ.ಐ. ತರಬೇತಿಗೆ ಹಾಜರಾದ ನಂತರ ನುರಿತ ಕಾರ್ಮಿಕ ಅಥವಾ ಸ್ವಯಂ ಉದ್ಯೋಗಿಯಾಗಿ ಸ್ಥಳಾಂತರಗೊಂಡ ಕೌಶಲ್ಯರಹಿತ ಕಾರ್ಮಿಕರ ಬಗ್ಗೆ ಇಲಾಖೆಯ ಬಳಿ ಯಾವುದೇ ಮಾಹಿತಿ ಇರಲಿಲ್ಲ. ಆದರೆ, ಸಂಬಂಧಪಟ್ಟ ಜಾಬ್ ಕಾರ್ಡ್ ಗಳೊಂದಿಗೆ ತರಬೇತಿ ವಿವರಗಳನ್ನು ಹೋಲಿಕೆ ಮಾಡಿದಾಗ, ಅಭ್ಯರ್ಥಿಗಳು ಕೆಳಗೆ ವಿವರಿಸಿದಂತೆ ಎಂಜಿಎನ್‌ಆರ್‌ಇಜಿಎಸ್ ಅಡಿಯಲ್ಲಿ ಕೌಶಲ್ಯರಹಿತ ಕಾರ್ಮಿಕರಾಗಿ ಕೆಲಸ ಮಾಡುವುದನ್ನು ಮುಂದುವರಿಸಿದ್ದರು ಎಂಬುದನ್ನು ತೋರಿಸಿತು:

**ನಿದರ್ಶನ**

ಅಭ್ಯರ್ಥಿ ಹೆಸರು: ಶ್ರೀ ಕೆ.ಸಿ. ದೊಡ್ಡೇಗೌಡ ಅವರು ಕೋಡಿಹಳ್ಳಿ ಗ್ರಾಮ, ಗ್ಯಾರಘಟ್ಟ ಗ್ರಾಮ ಪಂಚಾಯಿತಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ (ಜಾಬ್ ಕಾರ್ಡ್ ಸಂಖ್ಯೆ. KN-25-008-005-017/77) ಇವರು 18 ಸೆಪ್ಟೆಂಬರ್ 2021ರಿಂದ 30 ಸೆಪ್ಟೆಂಬರ್ 2021ರವರೆಗೆ (13 ದಿನಗಳು) ಆರ್.ಎಸ್.ಇ.ಟಿ.ಐ ಯೋಜನೆಯಡಿ ತರಬೇತಿಗೆ ಹಾಜರಾಗಿದ್ದರು ಮತ್ತು ₹.3,757/- ತರಬೇತಿ ಭತ್ಯೆಯನ್ನು ಸಹ ಪಾವತಿಸಲಾಗಿತ್ತು.

ಅಭ್ಯರ್ಥಿಯು ಕೌಶಲ್ಯರಹಿತ ಕೆಲಸಗಾರನಾಗಿ ನೇಮಕಗೊಂಡ ಇತ್ತೀಚಿನ ಎಂಜಿಎನ್‌ಆರ್‌ಇಜಿಎಸ್ ಕೆಲಸವೆಂದರೆ ಸ್ಮಶಾನ ಅಭಿವೃದ್ಧಿ ಕಾರ್ಯ (ಡಿಸೆಂಬರ್ 2024) (ಕೋಡ್- 1525008005/ಎವಿ/93393042892343077).

ಹೀಗೆ, ಪ್ರಸಕ್ತ ಭಾಗಶಃ ಉದ್ಯೋಗದಿಂದ ಪೂರ್ಣ ಸಮಯದ ಉದ್ಯೋಗಕ್ಕೆ ಹೋಗಲು ಮತ್ತು ಎಂಜಿಎನ್‌ಆರ್ ಜಿಎಸ್ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು ಅನುವು ಮಾಡಿಕೊಡುವ ಮತ್ತು

ಫಲಾನುಭವಿಗಳ ಜೀವನೋಪಾಯವನ್ನು ಸುಧಾರಿಸುವ ಗುರಿಯನ್ನು ಹೊಂದಿರುವ ಕೌಶಲ್ಯ ಯೋಜನೆಯಾದ ಉನ್ನತಿಯನ್ನು ಕಾರ್ಯಗತಗೊಳಿಸಲು ಇಲಾಖೆ ವಿಫಲವಾಗಿತ್ತು.

ಅನುಮೋದಿತ ಯೋಜನೆಗಳ ಪ್ರಕಾರ ತರಬೇತಿ ನಡೆಸಲು ಅಗತ್ಯ ನಿರ್ದೇಶನಗಳನ್ನು ನೀಡಲಾಗುವುದು ಮತ್ತು ಅಭ್ಯರ್ಥಿಗಳ ಅಗತ್ಯ ದತ್ತಾಂಶವನ್ನು ಸಂಗ್ರಹಿಸಲಾಗುವುದು ಎಂದು ರಾಜ್ಯ ಸರ್ಕಾರ ತಿಳಿಸಿತು (ಮೇ 2025).

## 5.14 ಪರೀಕ್ಷಾ–ತನಿಖೆ ನಡೆಸಿದ ಕಾಮಗಾರಿಗಳ ಅನುಷ್ಠಾನದಲ್ಲಿ ಇತರ ಅಕ್ರಮಗಳು/ನ್ಯೂನತೆಗಳು

ಅಧ್ಯಾಯ–IIರಲ್ಲಿ ಹೇಳಿರುವಂತೆ, ಲೆಕ್ಕಪರಿಶೋಧನೆಯು 400 ಕಾಮಗಾರಿಗಳನ್ನು (40 ಗ್ರಾಮಪಂಚಾಯಿತಿಗಳಲ್ಲಿ ಪ್ರತಿಯೊಂದರಲ್ಲೂ 10 ಕಾಮಗಾರಿಗಳು) ಜಂಟಿ ಭೌತಿಕ ಪರಿಶೀಲನೆಗಾಗಿ ಆಯ್ಕೆ ಮಾಡಿತು. ಇದರಲ್ಲಿ 319 ಗ್ರಾಮ ಪಂಚಾಯಿತಿ ಕಾಮಗಾರಿಗಳು ಮತ್ತು 81 ಒಮ್ಮುಖ ಕಾಮಗಾರಿಗಳು ಸೇರಿದ್ದವು.

ಎಎಂಸಿ, 2019–20ರ. ಕಂಡಿಕೆ 7.12.5ರಂತೆ ಪ್ರತಿ ಕಾಮಗಾರಿಯ ಕಡತಕ್ಕೆ ಸೂಚಕ ಚೌಕಟ್ಟು ಮತ್ತು ಎಂಜಿಎನ್‌ಆರ್‌ಇಜಿಎಸ್ ಅಡಿಯಲ್ಲಿ ಪ್ರತಿ ಕಾಮಗಾರಿಗೆ ನಿರ್ವಹಿಸಬೇಕಾದ ನಿರ್ದಿಷ್ಟ ಪ್ರಮಾಣಿತ ದಾಖಲೆಗಳನ್ನು ಒಳಗೊಂಡಿದೆ. ಇದು ಕಾರ್ಯಗತಗೊಳಿಸುವ ಸಮಯದಲ್ಲಿ ಮತ್ತು ಅನುಷ್ಠಾನದ ನಂತರ ಕಾಮಗಾರಿಯ ಅನುಷ್ಠಾನದ ಪರಿಶೀಲನೆ, ಮೇಲ್ವಿಚಾರಣೆ ಮತ್ತು ಲೆಕ್ಕಪರಿಶೋಧನೆಗೆ ಅನುವು ಮಾಡಿಕೊಡುತ್ತದೆ.

ಪರೀಕ್ಷಾ–ತನಿಖೆ ನಡೆಸಿದ ಕಾಮಗಾರಿಗಳ ದಾಖಲೆಗಳನ್ನು ಪರಿಶೀಲಿಸುವಾಗ ಗಮನಿಸಲಾದ ನ್ಯೂನತೆಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ:

### *5.14.1 ಕೈಗೆತ್ತಿಕೊಳ್ಳಬೇಕಾದ ಕಾಮಗಾರಿಗಳಿಗೆ ಆದ್ಯತೆ ನೀಡದಿರುವುದು*

ಎಂಜಿಎನ್‌ಆರ್‌ಇಜಿಎಸ್ ಅಡಿಯಲ್ಲಿ ಒಂದು ಮಾದರಿ ಬದಲಾವಣೆಯೆಂದರೆ, ಕೈಗೊಳ್ಳಬೇಕಾದ ಕಾಮಗಾರಿಗಳ ಸ್ವರೂಪ ಮತ್ತು ಆಯ್ಕೆ, ಪ್ರತಿ ಕಾಮಗಾರಿಯನ್ನು ಆದ್ಯತೀಕರಿಸಬೇಕಾದ ಕ್ರಮ (ಆದ್ಯತೆ), ಸ್ಥಳ ಆಯ್ಕೆ, ಇತ್ಯಾದಿಗಳ ಬಗ್ಗೆ ಯೋಜನೆಗಳು ಮತ್ತು ನಿರ್ಧಾರಗಳನ್ನು ಗ್ರಾಮಸಭೆಯ ಮುಕ್ತ ಸಭೆಗಳಲ್ಲಿ ಮಾಡಬೇಕು ಮತ್ತು ಗ್ರಾಮ ಪಂಚಾಯಿತಿಯಿಂದ ಅನುಮೋದಿತವಾಗಬೇಕು (ಕಂಡಿಕೆ–1.4(x) ಮತ್ತು ಕಾರ್ಯಾಚರಣಾ ಮಾರ್ಗಸೂಚಿ, 2013ರ ಕಂಡಿಕೆ–7.1.5). ಸ್ಥಳೀಯ ಪ್ರದೇಶದ ಸಾಮರ್ಥ್ಯ, ಅದರ ಅಗತ್ಯತೆಗಳು ಮತ್ತು ಸ್ಥಳೀಯ ಸಂಪನ್ಮೂಲಗಳನ್ನು ಗಮನದಲ್ಲಿಟ್ಟುಕೊಂಡು ಕಾಮಗಾರಿಗಳ ಆದ್ಯತೆಯ ಕ್ರಮವನ್ನು ನಿರ್ಧರಿಸಬೇಕು (ಕಾಯಿದೆಯ ಅನುಸೂಚಿ–1 ರ ಕಂಡಿಕೆ–4 (2).

ಪರೀಕ್ಷಾ–ತನಿಖೆ ನಡೆಸಿದ ಗ್ರಾಮ ಪಂಚಾಯಿತಿಗಳು (10ರಲ್ಲಿ ಎಂಟು[37] ತಾಲ್ಲೂಕುಗಳಲ್ಲಿ) ಮುಂದಿನ ವರ್ಷದಲ್ಲಿ ಕಾರ್ಯಗತಗೊಳಿಸಬೇಕಾದ ಕೆಲಸಗಳಿಗೆ ಆದ್ಯತೆ ನೀಡುವ ಮೂಲಕ ಕಾರ್ಯಾಚರಣಾ ಮಾರ್ಗಸೂಚಿಗಳಲ್ಲಿ ನಿಗದಿಪಡಿಸಿದಂತೆ ಸರಿಯಾದ ವಾರ್ಷಿಕ ಯೋಜನೆಗಳನ್ನು ಸಿದ್ಧಪಡಿಸಲಿಲ್ಲ ಮತ್ತು ನಿಗದಿಪಡಿಸಿದಂತೆ ಸ್ವತ್ತುಗಳನ್ನು ರಚಿಸುವಲ್ಲಿ ಲಭ್ಯವಿರುವ ಸೀಮಿತ ಸಂಪನ್ಮೂಲಗಳ ಗರಿಷ್ಠ ಬಳಕೆಯನ್ನು ಖಚಿತಪಡಿಸಿಕೊಳ್ಳಲು ವ್ಯವಸ್ಥಿತ ವಿಧಾನದ ಕೊರತೆಯಿವುದು ಕಂಡುಬಂದಿತು.

2025–26ರಿಂದ ಕಾರ್ಯ ಯೋಜನೆಯ ಆನ್‌ಲೈನ್ ತಯಾರಿಕೆಯನ್ನು ಪರಿಚಯಿಸುವುದರಿಂದ ಅಂತಹ ಸಮಸ್ಯೆಗಳು ಬಗೆಹರಿಯುವವು ಎಂದು ರಾಜ್ಯ ಸರ್ಕಾರ ತಿಳಿಸಿತು (ಮೇ 2025).

---

[37] ಆಲಂದ್, ಗಂಗಾವತಿ, ಯಲಬುರ್ಗಾ, ಮಂಡ್ಯ, ಮದ್ದೂರು, ಸಾಗರ, ತಿಪಟೂರು ಮತ್ತು ತುರುವೇಕೆರೆ.

### *5.14.2 ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ನೀಡದಿರುವುದು*

ಯೋಜನೆಯಡಿ ಕೈಗೆತ್ತಿಕೊಂಡ ಕಾಮಗಾರಿಗಳ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ಆದೇಶಗಳ ಪ್ರತಿಗಳನ್ನು ಕಾಮಗಾರಿಯ ಕಡತದಲ್ಲಿ ಇಡಬೇಕು ಎಂದು ಎಎಂಸಿ 2019–20ರ ಕಂಡಿಕೆ–7.12.5 ಷರತ್ತು ವಿಧಿಸುತ್ತದೆ.

ಆಯ್ದ ಕಾಮಗಾರಿಗಳ ಲೆಕ್ಕಪರಿಶೋಧನಾ ಪರಿಶೀಲನೆಯು ಈ ಕೆಳಗಿನವುಗಳನ್ನು ಬಹಿರಂಗಪಡಿಸಿತು:

1) ಪರೀಕ್ಷಾ–ತನಿಖೆ ನಡೆಸಿದ 24 ಕಾಮಗಾರಿಗಳಲ್ಲಿ ಆಡಳಿತಾತ್ಮಕ ಮಂಜೂರಾತಿಗಳು ದಾಖಲೆಯಲ್ಲಿ ಇರಲಿಲ್ಲ ಅಥವಾ ಸಕ್ಷಮ ಪ್ರಾಧಿಕಾರದಿಂದ ಮಂಜೂರಾತಿ ನೀಡಲ್ಪಟ್ಟಿರಲಿಲ್ಲ;
2) 25 ಕಾಮಗಾರಿಗಳಿಗೆ ಸಕ್ಷಮ ಪ್ರಾಧಿಕಾರ ತಾಂತ್ರಿಕ ಅನುಮತಿ ನೀಡಿರಲಿಲ್ಲ.
3) ತಾಂತ್ರಿಕ ಮಂಜೂರಾತಿ (64 ಕಾಮಗಾರಿಗಳು) ಮತ್ತು ಆಡಳಿತಾತ್ಮಕ ಅನುಮೋದನೆ (48 ಕಾಮಗಾರಿಗಳು) ದಿನಾಂಕಗಳನ್ನು ನಮೂದಿಸಿರಲಿಲ್ಲ.

ಅಗತ್ಯ ಮಂಜೂರಾತಿಗಳು/ವಿವರಗಳ ಅನುಪಸ್ಥಿತಿಯಲ್ಲಿ, ಕಾಮಗಾರಿಗಳನ್ನು ಅನಧಿಕೃತವಾಗಿ ಕಾರ್ಯಗತಗೊಳಿಸುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಸಂಬಂಧಪಟ್ಟ ಅಧಿಕಾರಿಗಳು ಕಾಮಗಾರಿಯ ಕಡತದ ಚೆಕ್ ಲಿಸ್ಟ್ ಅನ್ನು ಸಂಪೂರ್ಣವಾಗಿ ಪರಿಶೀಲಿಸುತ್ತಿದ್ದಾರೆ ಎಂದು ರಾಜ್ಯ ಸರ್ಕಾರ ತಿಳಿಸಿತು (ಮೇ 2025). ಲೆಕ್ಕಪರಿಶೋಧನೆಯು ಸೂಚಿಸಿದ ನಿರ್ದಿಷ್ಟ ಲೋಪಗಳ ಅವಲೋಕನದ ಬಗ್ಗೆ ಉತ್ತರವು ಮೌನವಾಗಿತ್ತು.

### *5.14.3 ಕಾಮಗಾರಿಗಳ ಮಾಪನ*

ಕಾರ್ಯಾಚರಣಾ ಮಾರ್ಗಸೂಚಿಗಳು, 2013ರ ಕಂಡಿಕೆ–7.13.2ರ ಪ್ರಕಾರ ಕಾಮಗಾರಿಗಳ ಸಾಪ್ತಾಹಿಕ ಮಾಪನವನ್ನು ಮಾಪನ ಅಧಿಕಾರಿಗಳು (ತಾಂತ್ರಿಕ ಸಹಾಯಕರು/ಕಿರಿಯ ಎಂಜಿನಿಯರ್ ಗಳು) ಕೈಗೊಳ್ಳಬೇಕು. ಸಾಪ್ತಾಹಿಕ ಮಸ್ಟರ್ ರೋಲ್‌ಗಳನ್ನು ಮುಕ್ತಾಯಗೊಳಿಸಿದ ನಂತರದ ಮೂರು ದಿನಗಳೊಳಗೆ ಎಲ್ಲಾ ಮಾಪನಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಮಾಪನ ಅಧಿಕಾರಿಗಳು ಖಚಿತಪಡಿಸಿಕೊಳ್ಳಬೇಕು. ಸಕಾಲದಲ್ಲಿ ವೇತನ ಪಾವತಿಗೆ ಇದು ನಿರ್ಣಾಯಕವಾಗಿತ್ತು.

ಮಾದರಿ ಜಿಲ್ಲೆಗಳಲ್ಲಿನ ಕಾಮಗಾರಿ ಕಡತಗಳ ಪರೀಕ್ಷಾ–ತನಿಖೆಯು (i) 150 ಕಾಮಗಾರಿಗಳಲ್ಲಿ (ಶೇಕಡಾ 38) ತಾಂತ್ರಿಕ ಅಧಿಕಾರಿಗಳು ಕಾಮಗಾರಿಗಳ ಸಾಪ್ತಾಹಿಕ ಮಾಪನಗಳನ್ನು ಕೈಗೊಂಡಿರಲಿಲ್ಲ ಮತ್ತು (ii) 115 ಕಾಮಗಾರಿಗಳಲ್ಲಿ ಮಸ್ಟರ್ ರೋಲ್‌ಗಳನ್ನು ಮುಕ್ತಾಯಗೊಳಿಸಿದ ಮೂರು ದಿನಗಳಲ್ಲಿ (ಶೇಕಡಾ 29) ಮಾಪನಗಳನ್ನು ತೆಗೆದುಕೊಂಡಿರಲಿಲ್ಲ ಎಂಬುದನ್ನು ತೋರಿಸಿತು, ಇದಲ್ಲದೆ, ಪರೀಕ್ಷಾ–ತನಿಖೆ ನಡೆಸಿದ 400ರಲ್ಲಿ 163 ಕಾಮಗಾರಿಗಳಲ್ಲಿ (ಶೇಕಡಾ 41) ಸಕ್ಷಮ ಪ್ರಾಧಿಕಾರದಿಂದ ಅಗತ್ಯವಾದ ತಪಾಸಣೆ ಮಾಪನಗಳನ್ನು ಮಾಡಿರಲಿಲ್ಲ.

ಇನ್ವಾಯ್ಸ್ ಗಳು/ಮಾಪನ ಪುಸ್ತಕಗಳಲ್ಲಿ (ಎಂಬಿ) ಉಲ್ಲೇಖಿಸಲಾದ ವಿವರಗಳಿಗೆ ಹೋಲಿಸಿದಾಗ ಸಾಮಗ್ರಿ ಪಾವತಿಯಲ್ಲಿ ವ್ಯತ್ಯಾಸಗಳಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು:

- ಪರೀಕ್ಷಾ–ತನಿಖೆ ನಡೆಸಿದ 23 ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಮಾರಾಟಗಾರರು/ಪೂರೈಕೆದಾರರಿಗೆ ₹132.26 ಲಕ್ಷ ಪಾವತಿಸಲಾಗಿತ್ತು, ಆದರೆ ಇನ್ ವಾಯ್ಸಗಳು/ಎಂಬಿಗಳ ಪ್ರಕಾರ ಪಾವತಿಸಬೇಕಾದ ಮೊತ್ತವು ₹60.20 ಲಕ್ಷವಾಗಿತ್ತು. ಇದು ₹72.06 ಲಕ್ಷ ಹೆಚ್ಚುವರಿ ಪಾವತಿಯಲ್ಲಿ ಪರಿಣಮಿಸಿತು.

- 32 ಕಾಮಗಾರಿಗಳಲ್ಲಿ, ಇನ್ ವಾಯ್ಸ್ ಗಳ ಪ್ರಕಾರ ಒಟ್ಟು ಮೊತ್ತವು ₹127.60 ಲಕ್ಷವಾಗಿದ್ದರೂ, ಎಂಐಎಸ್ ಪ್ರಕಾರ ದಾಖಲಾದ ಪಾವತಿಯು ₹110.56 ಲಕ್ಷವಾಗಿದ್ದು, ₹17.04 ಲಕ್ಷದ ಕಡಿಮೆ ಪಾವತಿಯನ್ನು ಸೂಚಿಸುತ್ತದೆ.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ಅವಲೋಕನವನ್ನು ಒಪ್ಪಿಕೊಂಡಿತು (ಮೇ 2025) ಮತ್ತು ಎಂಜಿನಿಯರ್ ಗಳ ಹೆಚ್ಚುವರಿ ಕೆಲಸದ ಹೊರೆಗೆ ಅಧ್ಯಾರೋಪಿಸಿತು. ಮಾಡಿದ ಪಾವತಿಗಳ ಸತ್ಯಾಸತ್ಯತೆ ಪ್ರಶ್ನಾರ್ಹವಾಗಿದೆ ಎಂಬುದು ವಾಸ್ತವಾಂಶವಾಗಿದೆ ಮತ್ತು ತನಿಖೆಯ ಅಗತ್ಯವಿದೆ.

### *5.14.4 ಗುಣಮಟ್ಟ ನಿಯಂತ್ರಣ ಮತ್ತು ಪಾರದರ್ಶಕತೆ*

ಪಾರದರ್ಶಕತೆಯನ್ನು ಸುಧಾರಿಸುವ ಉದ್ದೇಶದಿಂದ, ಗ್ರಾಮಾಭಿವೃದ್ಧಿ ಸಚಿವಾಲಯವು ಎಲ್ಲಾ ಎಂಜಿಎನ್‌ಆರ್‌ಇಜಿಎಸ್ ಸ್ವತ್ತುಗಳಿಗೆ ಮೂರು ಹಂತಗಳಲ್ಲಿ, ಅಂದರೆ – ಕಾಮಗಾರಿಯ ಆರಂಭ, ಮಧ್ಯಂತರ ಮತ್ತು ಕಾಮಗಾರಿ ಪೂರ್ಣಗೊಂಡಾಗ ಜಿಯೋ–ಟ್ಯಾಗಿಂಗ್ ಮಾಡುವುದನ್ನು ಕಡ್ಡಾಯಗೊಳಿಸಿತ್ತು. ಪ್ರತಿಯೊಂದು ಛಾಯಾಚಿತ್ರವನ್ನು ಒಂದೇ ಕೋನದಿಂದ ಮತ್ತು ಹೆಗುರುತಿನಿಂದ ತೆಗೆಯಬೇಕಾಗಿತ್ತು ಹಾಗೂ ಅದರ ಮೇಲೆ ದಿನಾಂಕವನ್ನು ಮುದ್ರಿಸಬೇಕಾಗಿತ್ತು. ಕಾಮಗಾರಿಯ ದಾಖಲೆ/ಕಡತದಲ್ಲಿ ಆಸ್ತಿಯ ಕನಿಷ್ಠ ಒಂದು ಜಿಯೋ–ಟ್ಯಾಗ್ ಮಾಡಿದ ಛಾಯಾಚಿತ್ರವನ್ನು ಲಗತ್ತಿಸಬೇಕಾಗಿತ್ತು. (ಎಎಂಸಿ, 2019–20ರ ಕಂಡಿಕೆ–7.12.5).

ಪರೀಕ್ಷಾ–ತನಿಖೆ ನಡೆಸಿದ ಗ್ರಾಮ ಪಂಚಾಯಿತಿಗಳಲ್ಲಿನ ಕಾಮಗಾರಿಗಳ ಕಡತಗಳ ಲೆಕ್ಕಪರಿಶೋಧನೆಯು ಈ ಕೆಳಗೆ ವಿವರಿಸಲಾದ ವಿವಿಧ ನ್ಯೂನತೆಗಳನ್ನು ತಿಳಿಯಪಡಿಸಿತು:

- ➢ ಪೂರ್ಣಗೊಂಡ 163 ಕಾಮಗಾರಿಗಳ ಕಡತಗಳಲ್ಲಿ ಸ್ವತ್ತಿನ ಜಿಯೋ–ಟ್ಯಾಗ್ ಮಾಡಿದ ಒಂದೇ ಒಂದು ಛಾಯಾಚಿತ್ರವನ್ನು ಲಗತ್ತಿಸಿರಲಿಲ್ಲ.
- ➢ 275 ಕಾಮಗಾರಿಗಳಲ್ಲಿ ದಿನಾಂಕವನ್ನು ಮುದ್ರಿಸಲಾಗಿದ್ದ ಛಾಯಾಚಿತ್ರಗಳನ್ನು ಒಂದೇ ಕೋನದಿಂದ/ ಹೆಗ್ಗುರುತಿನಿಂದ ತೆಗೆದಿರಲಿಲ್ಲ.
- ➢ ಪೂರ್ಣಗೊಂಡ 362ರಲ್ಲಿ 64 ಕಾಮಗಾರಿಗಳಲ್ಲಿ (18 ಶೇಕಡಾ) ಮೂರನೇ ಹಂತದ ಛಾಯಾಚಿತ್ರಗಳನ್ನು ಅಪ್‌ಲೋಡ್ ಮಾಡಿರಲಿಲ್ಲ. ಪೂರ್ಣಗೊಂಡ 129 (36 ಶೇಕಡಾ) ಕಾಮಗಾರಿಗಳ ಪ್ರಕರಣದಲ್ಲಿ, 3ನೇ ಹಂತದ ಛಾಯಾಚಿತ್ರವನ್ನು ನಿಗದಿತ 30 ದಿನಗಳನ್ನು ಮೀರಿದ ನಂತರ ಅಪ್‌ಲೋಡ್ ಮಾಡಲಾಗಿತ್ತು.
- ➢ ಪರೀಕ್ಷಾ–ತನಿಖೆ ನಡೆಸಿದ 398 ಕಾಮಗಾರಿಗಳಲ್ಲಿ ಗುಣಮಟ್ಟ ಪರಿಶೀಲನೆ/ನಿಯಂತ್ರಣವನ್ನು ನಡೆಸಿದ ಬಗ್ಗೆ ಯಾವುದೇ ದಾಖಲೆಗಳಿರಲಿಲ್ಲ.
- ➢ ಜಂಟಿ ಭೌತಿಕ ಪರಿಶೀಲನೆ ಸಮಯದಲ್ಲಿ, 265 ಕಾಮಗಾರಿಗಳ (ಶೇಕಡಾ 66) ಸ್ಥಳಗಳಲ್ಲಿ ಅಗತ್ಯವಾದ ನಾಗರಿಕ ಮಾಹಿತಿ ಫಲಕಗಳನ್ನು ಒದಗಿಸಿರಲಿಲ್ಲ ಎಂಬುದನ್ನು ಗಮನಿಸಲಾಯಿತು. ಭುವನ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾದ ಛಾಯಾಚಿತ್ರಗಳ ಪರೀಕ್ಷಾ–ತನಿಖೆಯು 153 (ಶೇಕಡಾ 38) ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮಾಹಿತಿ ಫಲಕಗಳು ಗೋಚರಿಸುತ್ತಿರಲಿಲ್ಲ ಎಂಬುದನ್ನು ತಿಳಿಯಪಡಿಸಿತು.
- ➢ ಕಾರ್ಯಾಚರಣೆಯ ಮಾರ್ಗಸೂಚಿ 2013ರ ಕಂಡಿಕೆ–7.16.1ರ ಪ್ರಕಾರ, ಪ್ರತಿ ಯೋಜನೆಯು ಪೂರ್ಣಗೊಂಡ ನಂತರ, ಕಾಮಗಾರಿ ರಿಜಿಸ್ಟರ್ ನಲ್ಲಿ ನಿಗದಿತ ನಮೂನೆಯ ಪ್ರಕಾರ ಯೋಜನಾ ಪೂರ್ಣಗೊಳಿಸುವಿಕೆಯ ವರದಿಯನ್ನು (ಪಿಸಿಆರ್) ಸಿದ್ಧಪಡಿಸಬೇಕು. ಆದರೆ, ಪೂರ್ಣಗೊಂಡ

362 ಕಾಮಗಾರಿಗಳ ಕಡತಗಳಲ್ಲಿ 160ರಲ್ಲಿ (ಶೇಕಡಾ 44) ಪಿಸಿಆರ್ ಲಭ್ಯವಿರಲಿಲ್ಲ ಅಥವಾ ನಿಗದಿತ ನಮೂನೆಯಲ್ಲಿರಲಿಲ್ಲ.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ಅಭಿಪ್ರಾಯವನ್ನು ಒಪ್ಪಿಕೊಂಡಿತು (ಮೇ 2025) ಮತ್ತು ಕಾರ್ಯವಿಧಾನಗಳನ್ನು ಅನುಸರಿಸಲು ಅನುಷ್ಠಾನಗೊಳಿಸುವ ಏಜೆನ್ಸಿಗಳಿಗೆ ಅಗತ್ಯ ನಿರ್ದೇಶನಗಳನ್ನು ನೀಡುವುದಾಗಿ ಭರವಸೆ ನೀಡಿತು.

### *5.14.5 ಫಲಪ್ರದವಲ್ಲದ/ವ್ಯರ್ಥ ವೆಚ್ಚ*

ಬಾಳಿಕೆ ಬರುವ ಸ್ವತ್ತುಗಳ ಸೃಷ್ಟಿ ಮತ್ತು ಗ್ರಾಮೀಣ ಜೀವನೋಪಾಯದ ನೆಲೆಯನ್ನು ಬಲಪಡಿಸುವುದು ಯೋಜನೆಯ ಪ್ರಮುಖ ಉದ್ದೇಶಗಳಾಗಿದ್ದವು. ಆದರೆ ಇಲಾಖಾ ಅಧಿಕಾರಿಗಳೊಂದಿಗೆ, ಪರೀಕ್ಷಾ–ತನಿಖೆ ನಡೆಸಿದ ಕಾಮಗಾರಿಗಳ ಜಂಟಿ ಭೌತಿಕ ಪರಿಶೀಲನೆಯು ಕೆಳಗಿನವುಗಳನ್ನು ಬಹಿರಂಗಪಡಿಸಿತು:

i) ಪರೀಕ್ಷಾ–ತನಿಖೆ ನಡೆಸಿದ 19 ಪ್ರಕರಣಗಳಲ್ಲಿ, ಕಾಮಗಾರಿಗಳು (ಇಂಗು ಗುಂಡಿಗಳು, ಸಿಸಿ ರಸ್ತೆಗಳು /ಚರಂಡಿಗಳು ಇತ್ಯಾದಿ) ನಿಷ್ಕ್ರಿಯವಾಗಿದ್ದವು ಅಥವಾ ಬಳಕೆಯಲ್ಲಿರಲಿಲ್ಲ. ತತ್ಪರಿಣಾಮವಾಗಿ, ಈ 19 ಕಾಮಗಾರಿಗಳಿಗೆ ಭರಿಸಿದ ₹80.17 ಲಕ್ಷ ವೆಚ್ಚವು ನಿಷ್ಫಲವಾಯಿತು. ಕೆಲವು ದೃಷ್ಟಾಂತ ಪ್ರಕರಣಗಳನ್ನು ಕೆಳಗೆ ನೀಡಲಾಗಿದೆ (**ಪ್ರದರ್ಶಿಕೆ–5.12 ರಿಂದ 5.14**):









| | | |
|---|---|---|
| **ಪ್ರದರ್ಶಿಕೆ–5.12 ಕೋಡ್–** 1515002014/ RC/ 93393042892366875 | **ಪ್ರದರ್ಶಿಕೆ–5.13 ಕೋಡ್–** 1525008019/ WC/ 93393042892206702 | **ಪ್ರದರ್ಶಿಕೆ–5.14 ಕೋಡ್–** 1525010022/ FP/ 93393042892271444 |
| ಅಂಬಲಗದಲ್ಲಿ (ಕಮಲಾಪುರ ತಾಲ್ಲೂಕು, ಕಲಬುರಗಿ ಜಿಲ್ಲೆ) ನಿರ್ಮಿಸಲಾದ ಮಣ್ಣಿನ (ಕಚ್ಚಾ) ರಸ್ತೆಯನ್ನು ಮೇಲ್ದರ್ಜೆಗೇರಿಸದ ಕಾರಣ ಉಪಯೋಗಕ್ಕೆ ಯೋಗ್ಯವಾಗಿರಲಿಲ್ಲ | ದಾಸರಿಘಟ್ಟದಲ್ಲಿ (ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ) ನಿರ್ಮಿಸಲಾದ ನೀರಿನ ಕಾಲುವೆ ನಿರ್ವಹಣೆಯ ಕೊರತೆಯಿಂದ ನಿಷ್ಕ್ರಿಯಗೊಂಡಿದೆ | ಹುಲ್ಲೇಕೆರೆಯಲ್ಲಿ (ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕು) ನಿರ್ಮಿಸಲಾದ ಸಿಸಿ ಚರಂಡಿ ಬಂಡೆಗಳಿಂದ ಮತ್ತು ಕಳೆಗಳಿಂದ ಮುಚ್ಚಿಹೋಗಿದೆ. |

ii) ಎಎಂಸಿ, 2019–20ರ ಕಂಡಿಕೆ–7.12.2ರ ಪ್ರಕಾರ, ನೀರಿನ ಸಂರಕ್ಷಣೆ ಮತ್ತು ನೀರು ಕೊಯ್ಲು ಕಾಮಗಾರಿಗಳ (ಕೃಷಿ ಕೊಳಗಳ ನಿರ್ಮಾಣ ಸೇರಿದಂತೆ) ನಿರೀಕ್ಷಿತ ಬಾಳಿಕೆ 15–25 ವರ್ಷಗಳು (ಪಕ್ಕಾ ಕೆಲಸಗಳು) ಮತ್ತು 5–10 ವರ್ಷಗಳಾಗಿದ್ದಿತು (ಕಚ್ಚಾ ಕೆಲಸಗಳು).

ಪರೀಕ್ಷಾ–ತನಿಖೆ ನಡೆಸಿದ ಎರಡು ಗ್ರಾಮ ಪಂಚಾಯಿತಿಗಳಲ್ಲಿ (ಕ್ಯಾತಘಟ್ಟ ಮತ್ತು ಮುದಗಂದೂರು) ₹2.25 ಲಕ್ಷ ವೆಚ್ಚದಲ್ಲಿ (ಮೇ 2021ರಿಂದ ಏಪ್ರಿಲ್ 2023ರ ನಡುವೆ) ನಿರ್ಮಿಸಲಾಗಿದೆ ಎಂದು

ಹೇಳಲಾದ ಮೂರು ಕೃಷಿ ಕೊಳಗಳು[38] ಅಸ್ತಿತ್ವದಲ್ಲಿರಲಿಲ್ಲ ಎಂಬುದು ಆಗಸ್ಟ್ 2024ರಲ್ಲಿ ನಡೆಸಿದ ಜಂಟಿ ಭೌತಿಕ ಪರಿಶೀಲನೆಯಲ್ಲಿ ತಿಳಿದುಬಂದಿತು. ಪಿಡಿಒಗಳು ಲೆಕ್ಕಪರಿಶೋಧನಾ ಅವಲೋಕನವನ್ನು ಒಪ್ಪಿಕೊಂಡರು (ಜುಲೈ 2024) ಹಾಗೂ ವೈಯಕ್ತಿಕ ಫಲಾನುಭವಿಗಳಿಗೆ ನೋಟಿಸ್ ಜಾರಿ ಮಾಡಲಾಗುವುದು ಮತ್ತು ಯೋಜನಾ ಮಾರ್ಗಸೂಚಿಗಳ ಪ್ರಕಾರ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

iii) ಅದೇ ರೀತಿ, ತುರುವೇಕೆರೆ ತಾಲ್ಲೂಕಿನ ಬೈತರಹೊಸಹಳ್ಳಿ ಗ್ರಾಮ ಪಂಚಾಯಿತಿಯು ಭರಿಸಿದ ₹15.93 ಲಕ್ಷ ವೆಚ್ಚವು ಅಸಮರ್ಪಕ ಕಾರ್ಯನಿರ್ವಹಣೆ/ತಪ್ಪಾದ ಆಯ್ಕೆಯಿಂದಾಗಿ ವ್ಯರ್ಥವಾಗಿತ್ತು (**ಕೋಷ್ಟಕ–5.6**).

**ಕೋಷ್ಟಕ–5.6: ಬೈತರಹೊಸಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ವ್ಯರ್ಥ ವೆಚ್ಚ**

| ಕಾಮಗಾರಿ ಕೋಡ್ | ಕಾಮಗಾರಿ ಹೆಸರು | ವೆಚ್ಚ ಲಕ್ಷದಲ್ಲಿ | ಷರಾ |
|---|---|---|---|
| 1525010020/FP/ 93393042892238223 | ವೈಟಿ ರಸ್ತೆಯಿಂದ ಗ್ರಾಮದ ಹಿಂಭಾಗದವರೆಗೆ ಪ್ರವಾಹ ನಿಯಂತ್ರಣ ಕಾಮಗಾರಿ | 8.38 | ನಿವೇಶನದ ಪರಿಸ್ಥಿತಿಗಳು ಮತ್ತು ಯೋಜನೆಯ ಪ್ರಕಾರ, ಚರಂಡಿಯನ್ನು ನೇರವಾಗಿ ರಸ್ತೆಯ ತುದಿಯವರೆಗೆ ನಿರ್ಮಿಸಬೇಕಿತ್ತು. ಆದರೆ, ಈ ಸ್ಥಳದಲ್ಲಿ ಒಂದು ದೇವಾಲಯವಿದ್ದಿತು ಮತ್ತು ರಸ್ತೆಯ ಇನ್ನೊಂದು ಬದಿಗೆ ಚರಂಡಿಯನ್ನು 110 ಮೀಟರ್ ತಿರುಗಿಸಿ ಪ್ರದೇಶದ ಕೆಲವು ಮನೆಗಳ ಹಿಂದೆ ನಾಲೆ ಕಡೆಗೆ ಹರಿಯಲಾಯಿತು, ತತ್ಪರಿಣಾಮವಾಗಿ ಈ ಪ್ರದೇಶದಲ್ಲಿ ನೀರು ಕಲುಷಿತವಾಯಿತು. |
| 1525010020/RC/ 93393042892286371 | ವರಾಹಸಂದ್ರ ಗ್ರಾಮದಲ್ಲಿ ಜಲ್ಲಿ ರಸ್ತೆ ನಿರ್ಮಾಣ | 7.55 | ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರದ ಕಡೆಗೆ ನಿರ್ಮಿಸಲಾದ ಡಬ್ಲ್ಯುಬಿಎಂ ರಸ್ತೆ ಸವೆದಿತ್ತು. ಒಣ ತ್ಯಾಜ್ಯ ಸಂಗ್ರಹ ಕೇಂದ್ರವು ಎತ್ತರದ ಕಲ್ಲಿನ ಭೂಪ್ರದೇಶದಲ್ಲಿದ್ದರಿಂದ ಅದನ್ನು ಪರಿತ್ಯಜಿಸಲಾಯಿತು. |
| **ಒಟ್ಟು** | | **15.93** | |

**ಮೂಲ: ಪರೀಕ್ಷಾ–ತನಿಖೆ ನಡೆಸಿದ ಕಾಮಗಾರಿಗಳ ಫೈಲ್ ಗಳು**

ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ಅಭಿಪ್ರಾಯವನ್ನು ಒಪ್ಪಿಕೊಂಡಿತು ಮತ್ತು ಸೂಕ್ತ ಕ್ರಮವನ್ನು ಅನುಸರಿಸಲಾಗುವುದು ಎಂದು ತಿಳಿಸಿತು (ಮೇ 2025).

### *5.14.6 ಅನುಮತಿಸಲಾಗದ ಕಾಮಗಾರಿಯ ಕಾರ್ಯಗತಗೊಳಿಸುವಿಕೆ*



ಎಂಜಿಎನ್‌ಆರ್‌ಇಜಿ ಅಡಿಯಲ್ಲಿ ಚಿತಾಗಾರಕ್ಕೆ ಪಕ್ಕಾ ಗಡಿ ಗೋಡೆ (ಆರ್‌ಸಿಸಿ/ಕಲ್ಲು) ನಿರ್ಮಾಣ ಮಾಡಲು ಅನುಮತಿ ಇರಲಿಲ್ಲ.

ಅದಕ್ಕೆ ವ್ಯತಿರಿಕ್ತವಾಗಿ, ಆಲಂದ್ ತಾಲ್ಲೂಕಿನ ಕಿನ್ನಿ ಸುಲ್ತಾನ್ ಗ್ರಾಮ ಪಂಚಾಯಿತಿಯ ತೆಲಕುನಿ ಗ್ರಾಮದಲ್ಲಿ ಸ್ಮಶಾನದ ಸುತ್ತಲೂ (ಎಂಜಿಎನ್‌ಆರ್‌ಇಜಿಎಸ್ ಕಾಮಗಾರಿ ಕೋಡ್–1515002/ಆರ್‌ಎಎಸ್/

[38] 1521002/IF/93393042893018142 (₹92,480), 1521002022/IF/GIS/89148 (₹68,259) and 1521004077/IF/93393042892496864 (₹63,840)

93393042892299161) ಪಕ್ಕಾ (ಆರ್‌ಸಿಸಿ/ಕಲ್ಲು) ಗಡಿ ಗೋಡೆಯನ್ನು ನಿರ್ಮಿಸಲು ಕಲಬುರಗಿ ಜಿಲ್ಲೆಯ ಎಇಇ, ಪಿಆರ್.ಇಡಿ ₹8 ಲಕ್ಷದ ಅಂದಾಜು ಸಿದ್ಧಪಡಿಸಿದರು (ಮಾರ್ಚ್ 2023). ₹6.89 ಲಕ್ಷ ವೆಚ್ಚವನ್ನು ಭರಿಸಿದ ನಂತರ ಕಾಮಗಾರಿ ಪೂರ್ಣಗೊಂಡಿತು (ನವೆಂಬರ್ 2024).

ಗ್ರಾಮೀಣಾಭಿವೃದ್ಧಿ ಸಚಿವಾಲಯವು ಹೊರಡಿಸಿದ ಸಲಹಾ ಸೂಚನೆಯ ಪ್ರಕಾರ (20.10.2021) ಅನುಮತಿಸಲಾಗದ ಕಾಮಗಾರಿಗಾಗಿ ಮಾಡಿದ ₹6.89 ಲಕ್ಷ ಅಕ್ರಮ ವೆಚ್ಚವನ್ನು ಸಂಬಂಧಪಟ್ಟ ಅಧಿಕಾರಿಗಳು/ಏಜೆನ್ಸಿಯಿಂದ ವಸೂಲಿ ಮಾಡಬಹುದಾಗಿದೆ. ರಾಜ್ಯ ಸರ್ಕಾರವು ಅಂತಹ ವೆಚ್ಚವನ್ನು ವಸೂಲಿ ಮಾಡುವುದನ್ನು ಖಚಿತಪಡಿಸಿಕೊಳ್ಳಬೇಕು ಮತ್ತು ಸಚಿವಾಲಯಕ್ಕೆ ತಿಳಿಸುವ ಮೂಲಕ ವಸೂಲಿ ಮಾಡಿದ ಮೊತ್ತವನ್ನು ಎಸ್‌ಇಜಿಎಫ್ ಖಾತೆಗೆ ಜಮಾ ಮಾಡಬೇಕು.

ಸಂಬಂಧಪಟ್ಟ ಅಧಿಕಾರಿಯಿಂದ ವಿವರಣೆ ಕೇಳಲಾಗುವುದು ಮತ್ತು ಅದಕ್ಕನುಗುಣವಾಗಿ ಕ್ರಮ ಕೈಗೊಳ್ಳಲಾಗುವುದು ಎಂದು ರಾಜ್ಯ ಸರ್ಕಾರ ತಿಳಿಸಿತು (ಮೇ 2025).

### *5.14.7 ಮಸ್ಟರ್ ರೋಲ್‌ಗಳಲ್ಲಿ ಅಸಾಂಗತ್ಯಗಳು*

**ವಿಶಿಷ್ಟವಾದ ಎಂಐಎಸ್ ಸೃಷ್ಟಿಸಿದ ಮಸ್ಟರ್ ರೋಲ್ ಸಂಖ್ಯೆಯನ್ನು ಹೊಂದಿರುವ ಕಾಮಗಾರಿ ಸ್ಥಳಕ್ಕೆ ನಿಯೋಜಿಸಲಾದ ಕಾರ್ಮಿಕರ ಪೂರ್ವ-ಮುದ್ರಿತ ಹೆಸರಿನೊಂದಿಗೆ ಎಲೆಕ್ಟ್ರಾನಿಕ್ ಮಸ್ಟರ್ ರೋಲ್‌ಗಳನ್ನು (ಇ-ಮಸ್ಟರ್ ರೋಲ್‌ಗಳು) ಸೃಷ್ಟಿಸಿದ ಅವಕಾಶವನ್ನು ಎನ್‌ಆರ್‌ಇಜಿಎಸಾಫ್ಟ್ ಒಳಗೊಂಡಿತ್ತು. ಎಎಂಸಿ, 2019-20ರ ಕಂಡಿಕೆ-12.3ರ ಪ್ರಕಾರ, ಕಾರ್ಮಿಕರ ಹಾಜರಾತಿಯನ್ನು ಗುರುತಿಸಲು ಅಗತ್ಯವಾದ ಮಸ್ಟರ್ ರೋಲ್‌ಗಳನ್ನು ನೀಡಲು ಕಾರ್ಯಕ್ರಮ ಅಧಿಕಾರಿ ಸಕ್ಷಮ ಅಧಿಕಾರಿಯಾಗಿದ್ದವು. ಸಕ್ಷಮ ಅಧಿಕಾರಿ ಸಹಿ ಹಾಕಿದ/ಪ್ರಮಾಣೀಕರಿಸಿದ ಮಸ್ಟರ್ ರೋಲ್‌ಗಳನ್ನು ಮಾತ್ರ ವೇತನ ಆದೇಶಗಳ ಸೃಷ್ಟಿಗೆ ಅಧಿಕೃತವೆಂದು ಪರಿಗಣಿಸಲಾಗುತ್ತಿತ್ತು. ಜಿಲ್ಲಾ ಕಾರ್ಯಕ್ರಮ ಸಂಯೋಜಕರು ಮಸ್ಟರ್ ರೋಲ್‌ಗಳ ನಿಯತಕಾಲಿಕ ಪರಿಶೀಲನೆಯನ್ನು ಖಚಿತಪಡಿಸಿಕೊಳ್ಳುವ ಹೊಣೆಗಾರಿಕೆಯನ್ನು ಹೊಂದಿದ್ದರು ಮತ್ತು ಸಾಮಾಜಿಕ ಲೆಕ್ಕಪರಿಶೋಧನೆಯು ವೇತನ ಅನ್ವೇಷಕರನ್ನು ಸಂಪರ್ಕಿಸುವ ಮೂಲಕ ಅದರ ನಿಖರತೆಯನ್ನು ಪರಿಶೀಲಿಸಬೇಕಾಗಿತ್ತು (ಕಾರ್ಯಾಚರಣಾ ಮಾರ್ಗಸೂಚಿಗಳ ಕಂಡಿಕೆಗಳು-2.3.1 ಮತ್ತು 13.3.4).**

**ಪರೀಕ್ಷಾ-ತನಿಖೆ ನಡೆಸಿದ ಕಾಮಗಾರಿ ದಾಖಲೆಗಳ ಪರಿಶೀಲನೆಯು ಮಸ್ಟರ್ ರೋಲ್‌ಗಳಲ್ಲಿ ಈ ಕೆಳಗಿನ ಅಸಾಂಗತ್ಯಗಳನ್ನು ತೋರಿಸಿತು:**

**i) ಮಸ್ಟರ್ ರೋಲ್‌ಗಳನ್ನು ತಿದ್ದಿರುವುದು – ಪರೀಕ್ಷಾ-ತನಿಖೆ ನಡೆಸಿದ 39 ಗ್ರಾಮಪಂಚಾಯಿತಿಗಳ (ಕಿನ್ನಿ ಸುಲ್ತಾನ್ ಹೊರತುಪಡಿಸಿ) 257 ಕಾಮಗಾರಿಗಳಲ್ಲಿ ಹಾಜರಾತಿಯನ್ನು ಗುರುತಿಸಲು ಬಳಸಲಾದ 1,799 ಮಸ್ಟರ್ ರೋಲ್‌ಗಳಲ್ಲಿ, ಇ-ಮಸ್ಟರ್ ರೋಲ್‌ಗಳನ್ನು ಎನ್‌ಆರ್‌ಇಜಿಎಸಾಫ್ಟ್ ಮೂಲಕ ರಚಿಸಿರಲಿಲ್ಲ ಆದರೆ www.scientysoft.com ನಂತಹ ಅನಧಿಕೃತ ಮೂಲ/ತಂತ್ರಾಂಶದ ಮೂಲಕ ಉತ್ಪಾದಿಸಲಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಫಲಾನುಭವಿಯ ಬ್ಯಾಂಕ್ ಖಾತೆ ವಿವರಗಳು, ಹಣಕಾಸು ವರ್ಷಕ್ಕೆ ಸಂಬಂಧಿಸಿದ ವಿವರಗಳು, ಯೋಜನೆ/ಕಾಮಗಾರಿಯ ಹೆಸರು, ಎಂಜಿಎನ್‌ಆರ್ ಇಜಿಎಸ್ ಲೋಗೋ ಮುಂತಾದ ಶೀರ್ಷಿಕೆಗಳಂತಹ ಅಗತ್ಯ ಮಾಹಿತಿಗಳು ಎನ್‌ಆರ್‌ಇಜಿಎಸಾಫ್ಟ್ ಹೊರತುಪಡಿಸಿ ಇತರ ಮೂಲಗಳಿಂದ ಸೃಷ್ಟಿಸುವ ಮಸ್ಟರ್ ರೋಲ್‌ಗಳಲ್ಲಿ ಲಭ್ಯವಿಲ್ಲದ್ದು ಲೆಕ್ಕಪರಿಶೋಧನೆಯ ಅನುಮಾನವನ್ನು ದೃಢಪಡಿಸಿತ್ತು. ಸಿಸ್ಟಮ್-ಜನರೇಟೆಡ್ (ಎನ್‌ಆರ್‌ಇಜಿಎಸಾಫ್ಟ್) ಮಸ್ಟರ್ ರೋಲ್ ಮತ್ತು ಅನಧಿಕೃತ ಮಸ್ಟರ್ ರೋಲ್‌ನ ನಿದರ್ಶನಾತ್ಮಕ ಪ್ರಕರಣಗಳನ್ನು ಕೆಳಗೆ ನೀಡಲಾಗಿದೆ (ಪ್ರದರ್ಶಿಕೆ-5.15 ಮತ್ತು 5.16).**




**ಪ್ರದರ್ಶಿಕೆ 5.15: ಎನ್.ಆರ್.ಇ.ಜಿ.ಎ ಸಾಫ್ಟ ಮೂಲಕ ರಚಿಸಲಾದ ಮಸ್ಟರ್ ರೋಲ್ (ನೈಜ್ಯ) ಮಾದರಿ.**




**ಪ್ರದರ್ಶಿಕೆ 5.16: ಬ್ಯಾಂಕ್ ಖಾತೆ ಸಂಖ್ಯೆಗಳು ಕಾಣೆಯಾಗಿರುವ ಅನಧಿಕೃತ ಮಸ್ಟರ್ ರೋಲ್**

ಆಯ್ದ ಹತ್ತು ತಾಲ್ಲೂಕುಗಳ 39 ಗ್ರಾಮ ಪಂಚಾಯಿತಿಗಳಲ್ಲಿ ಈ ಅನಧಿಕೃತ ಮಸ್ಟರ್ ರೋಲ್‌ಗಳನ್ನು ಬಳಸಿಕೊಂಡು ಎಂಜಿಎನ್‌ಆರ್ ಇಜಿಎಸ್ ಅಡಿಯಲ್ಲಿ ₹4.21 ಕೋಟಿ ವೇತನವನ್ನು ಪಾವತಿಸಿರುವುದು ಲೆಕ್ಕಪರಿಶೋಧನಾ ಪರಿಶೀಲನೆಯಿಂದ ತಿಳಿದುಬಂದಿತು (ಅನುಬಂಧ–5.13).

ವೇತನ ಪಾವತಿಗಳನ್ನು ಮಾಡಲು (ನಿಧಿ ವರ್ಗಾವಣೆ ಆದೇಶಗಳನ್ನು ಸೃಷ್ಟಿಸಲು) ಮಸ್ಟರ್ ರೋಲ್‌ಗಳು ಆಧಾರವಾಗಿದ್ದರಿಂದ, ಈ ಮಸ್ಟರ್ ರೋಲ್‌ಗಳ ಮೇಲೆ ಮಾಡಿದ ₹4.21 ಕೋಟಿ ಪಾವತಿಯು ಪ್ರಶ್ನಾರ್ಹ ಮಾತ್ರವಲ್ಲದೆ ಅನುಮಾನಾಸ್ಪದವೂ ಆಗಿತ್ತು. ಅಂತಹ ಅನಧಿಕೃತ ಮಸ್ಟರ್ ರೋಲ್‌ಗಳ ಬಳಕೆಯು ಗಂಭೀರವಾದ ಕಳವಳಕಾರಿ ವಿಷಯವಾಗಿತ್ತು, ಏಕೆಂದರೆ ಮಸ್ಟರ್ ರೋಲ್‌ಗಳ ಬಳಕೆಗೆ ಸೂಚಿಸಲಾದ ನಿಯಂತ್ರಣಗಳನ್ನು ಇದು ದುರ್ಬಲಗೊಳಿಸಿತ್ತು ಮತ್ತು ಯೋಜನಾ ನಿಧಿಯ ದುರುಪಯೋಗದ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಅನಧಿಕೃತ ಮೂಲಗಳಿಂದ ಎನ್‌ಎಂಆರ್ ಗಳನ್ನು ಬಳಸದಂತೆ ಜಿಲ್ಲಾ ಪಂಚಾಯಿತಿಗಳಿಗೆ ಸೂಚನೆಗಳನ್ನು ನೀಡಲಾಗುವುದು ಎಂದು ರಾಜ್ಯ ಸರ್ಕಾರ ತಿಳಿಸಿತು (ಮೇ 2025).

**ii)** ಅಕ್ರಮ ವೇತನ ಪಾವತಿ – ಕಾಮಗಾರಿಯನ್ನು ಪ್ರಾರಂಭಿಸಲು ಕಾರ್ಯಕ್ರಮ ಅಧಿಕಾರಿ ಘೋಷಿಸಿದ ಮೂರು ದಿನಗಳೊಳಗೆ ಅನುಷ್ಠಾನ ಏಜೆನ್ಸಿಗಳಿಗೆ ಮಸ್ಟರ್ ರೋಲ್‌ಗಳನ್ನು ನೀಡಬೇಕು ಎಂದು ಎಎಂಸಿ, 2019–20ರ ಕಂಡಿಕೆ–12.3(ಎಫ್) ಷರತ್ತು ವಿಧಿಸುತ್ತದೆ. ಕಾರ್ಮಿಕರ ಹಾಜರಾತಿಯನ್ನು

**ನಿಗದಿತ ಮಸ್ಟರ್ ರೋಲ್‌ಗಳಲ್ಲಿ (ಗ್ರಾಮ ರೋಜ್ಗಾರ್ ಸಹಾಯಕ /ಸಹೋದ್ಯೋಗಿಗಳ) ಪ್ರತಿದಿನ ತೆಗೆದುಕೊಳ್ಳಬೇಕಾಗಿತ್ತು ಮತ್ತು ಹಾಜರಾತಿಯನ್ನು ದಾಖಲಿಸಲು ಯಾವುದೇ ಕಚ್ಚಾ ಮಸ್ಟರ್ ರೋಲ್‌ಗಳನ್ನು ಬಳಸುವಂತಿರಲಿಲ್ಲ (ಕಂಡಿಕೆ–20.1(ಎಫ್) ಮತ್ತು 7.12.5).**

ಮುದ್ರಣದ ದಿನಾಂಕಕ್ಕೆ ಮುಂಚಿನ ಅವಧಿಗೆ (ದಿನಾಂಕಗಳು) ಮಸ್ಟರ್ ರೋಲ್‌ನಲ್ಲಿ ಹಾಜರಾತಿಯನ್ನು ಗುರುತಿಸಿದ ನಿದರ್ಶನಗಳನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಉದಾಹರಣೆಗೆ, ಮಸ್ಟರ್ ರೋಲ್ ಸಂಖ್ಯೆ 18471ಅನ್ನು 15 ಫೆಬ್ರವರಿ 2021ರಂದು ಮುದ್ರಿಸಲಾಗಿತ್ತು ಆದರೆ 11 ಫೆಬ್ರವರಿ 2021ರಿಂದ 17 ಫೆಬ್ರವರಿ 2021ರವರೆಗಿನ ಅವಧಿಯ ಕಾರ್ಮಿಕರ[39] ಹಾಜರಾತಿಯನ್ನು ಅದರಲ್ಲಿ ದಾಖಲಿಸಲಾಗಿತ್ತು. ಹೀಗೆ, ಫೆಬ್ರವರಿ 15 ರಂದು ಮುದ್ರಿಸಲಾದ ಮಸ್ಟರ್ ರೋಲ್‌ನಲ್ಲಿ ಫೆಬ್ರವರಿ 11 ರಿಂದ ಫೆಬ್ರವರಿ 14 ರವರೆಗಿನ ಅವಧಿಯ ಹಾಜರಾತಿಯನ್ನು ದಾಖಲಿಸಿರುವುದು ಅಕ್ರಮವಾಗಿತ್ತು, ಇದು ಈ ಮಸ್ಟರ್ ರೋಲ್‌ನಲ್ಲಿ ₹0.45 ಲಕ್ಷ ಅಕ್ರಮ ವೇತನವನ್ನು ಪಾವತಿಸುವಲ್ಲಿ ಪರಿಣಮಿಸಿತು.

ಪರೀಕ್ಷಾ–ತನಿಖೆ ನಡೆಸಿದ 38 ಗ್ರಾಮ ಪಂಚಾಯಿತಿಗಳ (ಗೆಡಿಗೇರಿ ಮತ್ತು ಉಡುಗನಿ ಹೊರತುಪಡಿಸಿ) 185 ಕಾಮಗಾರಿಗಳಲ್ಲಿ ಪರೀಕ್ಷಾ–ತನಿಖೆ ನಡೆಸಿದ 958 ಮಸ್ಟರ್ ರೋಲ್‌ಗಳಲ್ಲಿ ಇದೇ ರೀತಿಯ ಅಕ್ರಮಗಳನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದರಲ್ಲಿ, ಅನುಬಂಧ–5.14 ರಲ್ಲಿ ವಿವರಿಸಿದಂತೆ, ₹79.16 ಲಕ್ಷ ವೇತನವನ್ನು ಅಕ್ರಮವಾಗಿ ಪಾವತಿಸಲಾಗಿತ್ತು.

ಎನ್.ಎಂಆರ್ ದಿನಾಂಕ ಶ್ರೇಣಿಯ ನಡುವೆ ಎನ್.ಎಂಆರ್ ಅನ್ನು ಮುದ್ರಿಸುವ ಆಯ್ಕೆ ಇದ್ದಿತು ಮತ್ತು ಹಾಜರಾತಿಯನ್ನು ಸಹೋದ್ಯೋಗಿಗಳು ಕಚ್ಚಾ ಪುಸ್ತಕದಲ್ಲಿ ತೆಗೆದುಕೊಂಡಿದ್ದರು ಎಂದು ರಾಜ್ಯ ಸರ್ಕಾರ ತಿಳಿಸಿತು (ಮೇ 2025). ಆದರೆ, ಎಎಂಸಿಯ ಕಂಡಿಕೆ–7.12.5ರ ಪ್ರಕಾರ ದೈನಂದಿನ ಹಾಜರಾತಿಯನ್ನು ದಾಖಲಿಸಲು ಕಚ್ಚಾ ಮಸ್ಟರ್ ರೋಲ್ ಅನ್ನು ಬಳಸಲು ಅನುಮತಿ ಇರುವುದಿಲ್ಲ.

**iii)** **ಖಾಲಿ/ಸಹಿ ಮಾಡದ ಮಸ್ಟರ್ ರೋಲ್‌ಗಳು – ಕಾರ್ಮಿಕರ ಹಾಜರಾತಿ ಮತ್ತು ಪಾವತಿಸಿದ ವೇತನವನ್ನು ಪ್ರತಿ ಹೆಸರಿನ ಮುಂದೆ ಕಾರ್ಮಿಕರ ಸಹಿ/ಹೆಬ್ಬೆರಳಿನ ಗುರುತನ್ನು ತೋರಿಸಬೇಕು ಎಂದು ಕಾರ್ಯಾಚರಣಾ ಮಾರ್ಗಸೂಚಿಗಳು, 2013ರ ಕಂಡಿಕೆ–7.11.3 ಷರತ್ತು ವಿಧಿಸುತ್ತದೆ**

ಪರೀಕ್ಷಾ–ತನಿಖೆ ನಡೆಸಿದ ಏಳು[40] ಗ್ರಾಮ ಪಂಚಾಯಿತಿಗಳಲ್ಲಿನ 10 ಕಾಮಗಾರಿಗಳಲ್ಲಿ ಪರೀಕ್ಷಾ–ತನಿಖೆ ಮಾಡಿದ 50 ಮಸ್ಟರ್ ರೋಲ್‌ಗಳಲ್ಲಿ ಕಾರ್ಮಿಕರ ಹಾಜರಾತಿಯನ್ನು ನಮೂದಿಸಿರಲಿಲ್ಲ ಅಥವಾ ಕಾರ್ಮಿಕರ ಸಹಿ/ಹೆಬ್ಬೆರಳ ಗುರುತನ್ನು ಪಡೆದಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದರ ಹೊರತಾಗಿಯೂ, ಕಾರ್ಮಿಕರಿಗೆ ₹5.51 ಲಕ್ಷವನ್ನು ಪಾವತಿಸಲಾಗಿತ್ತು, ಇದು ಕಾರ್ಯಾಚರಣಾ ಮಾರ್ಗಸೂಚಿಗಳ ನಿಬಂಧನೆಗಳನ್ನು ಉಲ್ಲಂಘಿಸಿದ್ದಲ್ಲದೆ ಉದ್ಯೋಗದ ನೈಜತೆಯ ಬಗ್ಗೆ ಅನುಮಾನವನ್ನು ಹುಟ್ಟುಹಾಕಿತ್ತು.

ರಾಜ್ಯ ಸರ್ಕಾರವು (ಮೇ 2025) ಸಹೋದ್ಯೋಗಿಗಳು/ಜಿಕೆಎಂನ ಅಪೂರ್ಣ ಕೆಲಸಕ್ಕೆ ಅದನ್ನು ಅಧ್ಯಾರೋಪಿಸಿತು ಮತ್ತು ಹಾಜರಾತಿಯ ತೃಪ್ತಿದಾಯಕ ಪರಿಶೀಲನೆಯ ನಂತರವೇ ವೇತನ ಪಟ್ಟಿಯನ್ನು ರಚಿಸಲು ಸೂಚನೆಗಳನ್ನು ನೀಡಲಾಗಿದೆ ಎಂದು ತಿಳಿಸಿತು.

**iv)** **ವೇತನವನ್ನು ಪಾವತಿಸದಿರುವುದು – ಕಾರ್ಯಾಚರಣಾ ಮಾರ್ಗಸೂಚಿ 2013ರ ಕಂಡಿಕೆ–7.11.7ರ ಪ್ರಕಾರ, ವೇತನ ಪಟ್ಟಿ/ನಿಧಿ ವರ್ಗಾವಣೆ ಆದೇಶವನ್ನು (ಎಫ್ ಟಿಒ) ರಚಿಸಲು ಭೌತಿಕ ಮಸ್ಟರ್ ರೋಲ್ ಪ್ರಕಾರ ದಾಖಲಾದ ಹಾಜರಾತಿಯನ್ನು ಎನ್‌ಆರ್‌ಇಜಿಎಸಾಫ್ಟ್ ನಲ್ಲಿ ನಮೂದಿಸಬೇಕು.**

[39] ಹಿರೇವಂಕಲ್ಕುಂಟಾ ಗ್ರಾಮ ಪಂಚಾಯತಿ (ಯೆಲ್ಬುರ್ಗಾ ತಾ.ಪಂ) ನಲ್ಲಿರುವ ನಿಲೋಗಲ್ ಕೆರೆಯ ಹೂಳು ತೆಗೆಯುವ ಕೆಲಸಕ್ಕಾಗಿ.

[40] ಅಂಬಲಗ, ಬಾಬಲಾದ್ (ಐಕೆ), ಭೋಧನ್, ಗನಡಲು, ಹಿರೋಲಿ, ಕಮಲಾನಗರ ಮತ್ತು ಕಿನ್ನಿ ಸುಲ್ತಾನ್

**13[41] ಗ್ರಾಮ ಪಂಚಾಯಿತಿಗಳ 17 ಕಾಮಗಾರಿಗಳಲ್ಲಿ 497 ಕಾರ್ಮಿಕರನ್ನು (35 ಮಸ್ಟರ್ ರೋಲ್‌ಗಳು) ನಿಯೋಜಿಸಲಾಗಿತ್ತು ಎಂಬುದು ಪರಿಶೀಲನೆಯಿಂದ ತಿಳಿದುಬಂದಿತು. ಕಾಮಗಾರಿಯ ಸ್ಥಳಗಳಲ್ಲಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದರೂ (ದಾಖಲೆಗಳು/ಕಡತಗಳಲ್ಲಿ ಲಭ್ಯವಿರುವ ಎನ್‌ಎಂಆರ್ ಗಳಿಂದ ಗಮನಿಸಿದಂತೆ), ಈ ಕಾರ್ಮಿಕರಿಗೆ ಒಟ್ಟು ₹10.98 ಲಕ್ಷ ವೇತನವನ್ನು ಪಾವತಿಸಿರಲಿಲ್ಲ. ಎಂಜಿಎನ್‌ಆರ್‌ಇಜಿಎಸ್ ಅಡಿಯಲ್ಲಿ ಕೆಲಸ ಮಾಡಿದರೂ ಫಲಾನುಭವಿಗಳಿಗೆ ವೇತನವನ್ನು ನಿರಾಕರಿಸುವುದು ಯೋಜನೆಯ ಮೂಲ ಉದ್ದೇಶಕ್ಕೆ ವಿರುದ್ಧವಾಗಿತ್ತು.**

**ವೇತನ ವಿಲೇವಾರಿಗಾಗಿ ಈ ವಿಷಯವನ್ನು ಎನ್‌ಐಸಿಗೆ ರವಾನಿಸಲಾಗುವುದು ಎಂದು ರಾಜ್ಯ ಸರ್ಕಾರ ತಿಳಿಸಿತು (ಮೇ 2025).**

**v) ವೇತನದ ಹೆಚ್ಚುವರಿ ಪಾವತಿ – ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವಾಗ ಮೂಲ ಮಸ್ಟರ್ ರೋಲ್‌ಗಳು ದಾಖಲೆಯಲ್ಲಿ ಲಭ್ಯವಿರದ ಅಥವಾ ಹೆಚ್ಚುವರಿ ಹಾಜರಾತಿಯನ್ನು ಗುರುತಿಸಿದ ಉದಾಹರಣೆಗಳಿದ್ದವು. ಇದು ಪರೀಕ್ಷಾ–ತನಿಖೆ ನಡೆಸಿದ 26 ಕಾಮಗಾರಿಗಳಲ್ಲಿ ಒಟ್ಟು ₹39.47 ಲಕ್ಷ ಹೆಚ್ಚುವರಿ ವೇತನ ಪಾವತಿಸುವಲ್ಲಿ ಪರಿಣಮಿಸಿತು. ಎಫ್‌ಟಿಓ ಉತ್ಪಾದನೆಯ ಸಮಯದಲ್ಲಿ ಕಾರ್ಮಿಕರ ಕೆಲಸದ ದಿನಗಳನ್ನು ಹೆಚ್ಚಿಸುವ ಮೂಲಕ ಕಾರ್ಮಿಕರಿಗೆ ಅನಗತ್ಯ ಒಲವು ತೋರಿರುವ ಸಾಧ್ಯತೆಯನ್ನು ತಳ್ಳಿಹಾಕಲಾಗುವುದಿಲ್ಲ.**

**ಎಂಬಿ ರೆಕಾರ್ಡಿಂಗ್, ಚೆಕ್ ಮಾಪನ ಮತ್ತು ಜಾಬ್ ಕಾರ್ಡ್ ಇಂದೀಕರಣದ ಆಧಾರದ ಮೇಲೆ ಕಾರ್ಮಿಕರು ಪಾವತಿಯನ್ನು ಪಡೆಯಬಹುದು ಎಂದು ರಾಜ್ಯ ಸರ್ಕಾರ ತಿಳಿಸಿತು (ಮೇ 2025). ಆನ್ ಲೈನ್ ನಲ್ಲಿ ದತ್ತಾಂಶವನ್ನು ನಮೂದಿಸುವಾಗ ಹೆಚ್ಚುವರಿ ಹಾಜರಾತಿಯನ್ನು ನೀಡಿರುವುದನ್ನು ಒಳಗೊಂಡಿರುವ ಲೆಕ್ಕಪರಿಶೋಧನೆ ಸೂಚಿಸಿದ ಪ್ರಕರಣಗಳಿಗೆ ಯಾವುದೇ ಪ್ರತಿಕ್ರಿಯೆಯಿಲ್ಲ.**

***ಶಿಫಾರಸು–15: ಮಸ್ಟರ್ ರೋಲ್‌ಗಳಲ್ಲಿನ ಲೋಪದೋಷಗಳ ಬಗ್ಗೆ ಸರ್ಕಾರವು ವಿವರವಾದ ತನಿಖೆ ನಡೆಸಬೇಕು, ಇತರ ಗ್ರಾಮ ಪಂಚಾಯಿತಿಗಳಲ್ಲಿ ಇದೇ ರೀತಿಯ ಪ್ರಕರಣಗಳನ್ನು ಪರಿಶೀಲಿಸಬೇಕು ಮತ್ತು ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ದಂಡನಾ ಕ್ರಮವನ್ನು ಕೈಗೊಳ್ಳಬೇಕು.***

### *5.14.8 ಕೆಟಿಪಿಪಿ ಕಾಯಿದೆ ಉಲ್ಲಂಘನೆ*

ಕೆಟಿಪಿಪಿ ಕಾಯ್ದೆಯ ಅನುಚ್ಛೇದ–4(ಇ)(ii) ಪ್ರಕಾರ, ಖರೀದಿಯಲ್ಲಿ ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲು ಖಾಸಗಿ ಏಜೆನ್ಸಿಯಿಂದ ಖರೀದಿ ಮಾಡಿದಾಗಲೆಲ್ಲಾ ಮತ್ತು ಸರಕುಗಳ ಮೌಲ್ಯವು ಒಂದು ಲಕ್ಷ ರೂಪಾಯಿಗಳನ್ನು ಮೀರಿದಾಗ (27 ಏಪ್ರಿಲ್ 2020ರಿಂದ ಜಾರಿಗೆ ಬರುವಂತೆ ಐದು ಲಕ್ಷ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ) ಟೆಂಡರ್ ಪ್ರಕ್ರಿಯೆಯನ್ನು ಅನುಸರಿಸಬೇಕು. ಅಲ್ಲದೆ, ರಾಜ್ಯ ಸರ್ಕಾರವು ಕೆಟಿಪಿಪಿ ಕಾಯ್ದೆಯಡಿ ಎಂಜಿಎನ್‌ಆರ್‌ಇಜಿಎಸ್ ಕಾಮಗಾರಿಗಳಿಗೆ ಐದು ಲಕ್ಷ ರೂಪಾಯಿಗಳವರೆಗಿನ ಸಾಮಗ್ರಿಗಳ ಖರೀದಿಗೆ (ಅಕ್ಟೋಬರ್ 2021) ವಿನಾಯಿತಿ ನೀಡಿತ್ತು.

ಆದರೆ, ಪರೀಕ್ಷಾ–ತನಿಖೆ ನಡೆಸಿದ ಒಂಬತ್ತು ತಾಲ್ಲೂಕುಗಳ (ಆಲಂದ್ ಹೊರತುಪಡಿಸಿ) ಪರೀಕ್ಷಾ–ತನಿಖೆ ನಡೆಸಿದ 61 ಕಾಮಗಾರಿಗಳಲ್ಲಿ, ಈ ಪ್ರತಿಯೊಂದು ಕಾಮಗಾರಿಗಳಲ್ಲಿ ಸಾಮಗ್ರಿಗಳ ವೆಚ್ಚವು ಐದು ಲಕ್ಷ ರೂಪಾಯಿಗಳ ಮಿತಿಯನ್ನು ಮೀರಿದ್ದರೂ ಸಹ ಟೆಂಡರ್ ಕರೆದಿರಲಿಲ್ಲ ಎಂಬುದನ್ನು ಗಮನಿಸಲಾಯಿತು. ಬದಲಿಗೆ, ಬೆಲೆಪಟ್ಟಿಗಳನ್ನು ಮಾತ್ರ ಆಹ್ವಾನಿಸುವ ಮೂಲಕ ₹5.68 ಕೋಟಿ ಮೌಲ್ಯದ ವಸ್ತುಗಳನ್ನು ಖರೀದಿಸಲಾಗಿತ್ತು (**ಅನುಬಂಧ–5.15**).

[41] ಭೋಧನ್, ಸಿಎ ಕೆರೆ, ಡಾ ಕೆರೆ, ಗಣದಲು, ಗುನ್ನಲ್, ಹಿರೇವಂಕುಂಟ, ಹುಲ್ಲೇಕೆರೆ, ಕಮಲನಗರ, ಕೇಸರಹಟ್ಟಿ, ಮರಳಿ, ಒಕಾಲಿ, ಸೊಂತ್ ಮತ್ತು ತಾಳಕೆರೆ

ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ಅಭಿಪ್ರಾಯವನ್ನು ಒಪ್ಪಿಕೊಂಡಿತು (ಮೇ 2025) ಮತ್ತು ಭವಿಷ್ಯದಲ್ಲಿ ಇಂತಹ ನಿದರ್ಶನಗಳನ್ನು ತಪ್ಪಿಸಲು ಜನವರಿ 2024ರಿಂದ ಸಾಮಗ್ರಿ ಪಾವತಿಯ ಹೊಸ ಆನ್ ಲೈನ್ ವ್ಯವಸ್ಥೆಯನ್ನು ಪರಿಚಯಿಸಲಾಗಿದೆ ಎಂದು ತಿಳಿಸಿತು. ಲೆಕ್ಕಪರಿಶೋಧನೆಯಲ್ಲಿ ತೋರಿಸಿದ ಪ್ರಕರಣಗಳ ಮೇಲಿನ ಕ್ರಮದ ಬಗ್ಗೆ ಉತ್ತರವು ಮೌನವಾಗಿತ್ತು.

### 5.15 ಕಾಮಗಾರಿಯ ಸ್ಥಳಗಳಲ್ಲಿ ಸೌಲಭ್ಯಗಳನ್ನು ಒದಗಿಸದಿರುವುದು

ಕಾರ್ಯಾಚರಣಾ ಮಾರ್ಗಸೂಚಿಗಳು, 2013ರ ಕಂಡಿಕೆ–7.12 ಕಾಮಗಾರಿ ಸ್ಥಳಗಳಲ್ಲಿ ಸೌಲಭ್ಯಗಳನ್ನು (ವೈದ್ಯಕೀಯ ನೆರವು, ಕುಡಿಯುವ ನೀರು ಮತ್ತು ನೆರಳು) ಒದಗಿಸಬೇಕು ಎಂದು ಷರತ್ತು ವಿಧಿಸುತ್ತದೆ. ಪ್ರಥಮ ಚಿಕಿತ್ಸಾ ಪೆಟ್ಟಿಗೆಯನ್ನು ಅಗತ್ಯವಿದ್ದಾಗ ಮರುಭರ್ತಿ ಮಾಡಬೇಕು ಮತ್ತು ಅವಧಿ ಮೀರಿದ ಔಷಧಿಗಳನ್ನು ಹೊಂದಿರಬಾರದು. ಕುಡಿಯುವ ನೀರನ್ನು ಒದಗಿಸಲು ದೂರದಿಂದ ನೀರು ತರಲು ಟ್ರಾಲಿಗಳು ಬೇಕಾಗುತ್ತವೆ. ಯಾವುದೇ ಸ್ಥಳದಲ್ಲಿ ಮಹಿಳಾ ಕಾರ್ಮಿಕರೊಂದಿಗೆ ಆರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಐದು ಅಥವಾ ಅದಕ್ಕಿಂತ ಹೆಚ್ಚು ಮಕ್ಕಳು ಇದ್ದರೆ, ಶಿಶುಪಾಲನಾ ಕೇಂದ್ರವನ್ನು ಒದಗಿಸಬೇಕು.

ಕೆಳಗಿನ ನಕ್ಷೆ–5.3ರಲ್ಲಿ ತೋರಿಸಿರುವಂತೆ, ಕಾಮಗಾರಿಯ ಸ್ಥಳಗಳಲ್ಲಿನ ಸೌಲಭ್ಯಗಳು, (ವಿಶೇಷವಾಗಿ ಮಕ್ಕಳ ಆರೈಕೆ ಸೌಲಭ್ಯ, ವೈದ್ಯಕೀಯ ನೆರಳು ಮತ್ತು ನೆರಳು) ಸಮರ್ಪಕವಾಗಿರಲಿಲ್ಲ ಎಂದು ಲೆಕ್ಕಪರಿಶೋಧನಾ ಪ್ರಶ್ನೆಗಳಿಗೆ ಫಲಾನುಭವಿಗಳ ಪ್ರತಿಕ್ರಿಯೆಗಳು ತೋರಿಸಿದವು:

**ನಕ್ಷೆ–5.3: ಫಲಾನುಭವಿಗಳ ಸಮೀಕ್ಷೆಯ ಪ್ರಕಾರ ಕಾಮಗಾರಿ ಸ್ಥಳಗಳಲ್ಲಿ ಸೌಲಭ್ಯಗಳ ಲಭ್ಯತೆ**




**ಮೂಲ: ಲೆಕ್ಕಪರಿಶೋಧನೆ ನಡೆಸಲಾದ ಫಲಾನುಭವಿಗಳ ಸಮೀಕ್ಷೆ (ಜುಲೈ–ಸೆಪ್ಟೆಂಬರ್ 2024)**

ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ 400 ಫಲಾನುಭವಿಗಳ ಪೈಕಿ 397[42] ಫಲಾನುಭವಿಗಳ ಪ್ರತಿಕ್ರಿಯೆಗಳ ವಿಶ್ಲೇಷಣೆಯು ಈ ಕೆಳಗಿನ ಅಂಶಗಳನ್ನು ತಿಳಿಯಪಡಿಸಿತು.

- 239 ಫಲಾನುಭವಿಗಳು (ಶೇಕಡಾ 60) ಕಾಮಗಾರಿಯ ಸ್ಥಳಗಳಲ್ಲಿ ಮಕ್ಕಳ ಆರೈಕೆ ಸೌಲಭ್ಯಗಳು ಲಭ್ಯವಿರಲಿಲ್ಲ ಎಂದು ಹೇಳಿದ್ದಾರೆ.
- 193 ಫಲಾನುಭವಿಗಳು (ಶೇಕಡಾ 49) ಕಾಮಗಾರಿಯ ಸ್ಥಳಗಳಲ್ಲಿ ಪ್ರಥಮ ಚಿಕಿತ್ಸಾ ಪೆಟ್ಟಿಗೆಗಳು (ವೈದ್ಯಕೀಯ ನೆರವು) ಲಭ್ಯವಿರಲಿಲ್ಲ ಎಂದು ಹೇಳಿದ್ದಾರೆ.
- 118 ಫಲಾನುಭವಿಗಳು (ಶೇಕಡಾ 30) ಕಾಮಗಾರಿಯ ಸ್ಥಳಗಳಲ್ಲಿ ನೆರಳು ಇರಲಿಲ್ಲ ಎಂದು ಹೇಳಿದ್ದಾರೆ.
- 34 ಫಲಾನುಭವಿಗಳು (ಶೇಕಡಾ 9) ಕಾಮಗಾರಿಯ ಸ್ಥಳಗಳಲ್ಲಿ ಕುಡಿಯುವ ನೀರು ಲಭ್ಯವಿರಲಿಲ್ಲ ಎಂದು ಹೇಳಿದ್ದಾರೆ.

[42] ಕುದರೂರು ಗ್ರಾಮ ಪಂಚಾಯತಿಯ (ಸಾಗರ ತಾ.ಪಂ., ಶಿವಮೊಗ್ಗ ಜಿಲ್ಲಾ ಪಂಚಾಯ್ತಿ) ಮೂವರು ಫಲಾನುಭವಿಗಳು ಎಂ.ಜಿ.ಎನ್.ಆರ್.ಇ.ಜಿ.ಎಸ್. ಅಡಿಯಲ್ಲಿ ಕೆಲಸ ಮಾಡಿರಲಿಲ್ಲ.

ಕಾಮಗಾರಿಯ ಸ್ಥಳಗಳಲ್ಲಿ ಸೌಲಭ್ಯಗಳು, ವಿಶೇಷವಾಗಿ ಮಕ್ಕಳ ಆರೈಕೆ ಸೌಲಭ್ಯಗಳು, ವೈದ್ಯಕೀಯ ನೆರವು ಮತ್ತು ನೆರಳುಗಳ ಅನುಪಸ್ಥಿತಿಯು ಸಣ್ಣ ಮಕ್ಕಳನ್ನು ಹೊಂದಿರುವ ಮಹಿಳೆಯರು ಮತ್ತು ವೃದ್ಧ ಫಲಾನುಭವಿಗಳನ್ನು ಎಂಜಿಎನ್‌ಆರ್‌ಇಜಿಎಸ್‌ನಲ್ಲಿ ಕೆಲಸ ಮಾಡುವುದನ್ನು ನಿರುತ್ಸಾಹಗೊಳಿಸುತ್ತದೆ.

ರಾಜ್ಯ ಸರ್ಕಾರ ಲೆಕ್ಕಪರಿಶೋಧನಾ ಅಭಿಪ್ರಾಯವನ್ನು ಒಪ್ಪಿಕೊಂಡಿತು (ಮೇ 2025) ಮತ್ತು ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಮಟ್ಟದ ಎಲ್ಲಾ ಅಧಿಕಾರಿಗಳಿಗೆ ಕಾಮಗಾರಿ ಸ್ಥಳಗಳಲ್ಲಿ ಅಗತ್ಯವಾದ ಸೌಲಭ್ಯಗಳನ್ನು ಕಡ್ಡಾಯವಾಗಿ ಒದಗಿಸಲು ನಿರ್ದೇಶನ ನೀಡಲಾಗುವುದು ಎಂದು ತಿಳಿಸಿತು.

# ಅಧ್ಯಾಯ–VI

# ಮೇಲ್ವಿಚಾರಣೆ, ಸಾಮಾಜಿಕ ಲೆಕ್ಕಪರಿಶೋಧನೆ ಮತ್ತು ಕುಂದುಕೊರತೆ ಪರಿಹಾರ

## ಅಧ್ಯಾಯ VI

## ಮೇಲ್ವಿಚಾರಣೆ, ಸಾಮಾಜಿಕ ಲೆಕ್ಕಪರಿಶೋಧನೆ ಮತ್ತು ಕುಂದುಕೊರತೆ ಪರಿಹಾರ

ಲೆಕ್ಕಪರಿಶೋಧನಾ ಅವಧಿಯಲ್ಲಿ ರಾಜ್ಯ ಉದ್ಯೋಗ ಖಾತರಿ ಪರಿಷತ್ (ಎಸ್‌ಇಜಿಸಿ) ಒಮ್ಮೆ ಮಾತ್ರ ಸಭೆ ಸೇರಿದ್ದರಿಂದ ಮತ್ತು ಎಸ್‌ಇಜಿಸಿಯ ನಿಗದಿತ ಉಪ-ಸಮಿತಿಗಳು ನಿಷ್ಕ್ರಿಯವಾಗಿದ್ದರಿಂದ ಯೋಜನೆಯ ನಿಗದಿತ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನದಲ್ಲಿ ಕೊರತೆಯಿದ್ದಿತು. ಯೋಜನೆಯಲ್ಲಿನ ಅಕ್ರಮಗಳನ್ನು ಪತ್ತೆಹಚ್ಚುವ ಜವಾಬ್ದಾರಿಯನ್ನು ಹೊತ್ತಿರುವ ಜಾಗೃತ ಘಟಕಗಳನ್ನು ರಾಜ್ಯ/ಜಿಲ್ಲೆ/ಗ್ರಾಮ ಪಂಚಾಯಿತಿಯಲ್ಲಿ ರಚಿಸಿರಲಿಲ್ಲ. ರಾಜ್ಯ ಗುಣಮಟ್ಟ ನಿರ್ವಹಣಾ ಘಟಕ ಮತ್ತು ಜಿಲ್ಲಾ ಗುಣಮಟ್ಟ ಪರಿವೀಕ್ಷಣಾ ಘಟಕಗಳ ರಚನೆಗೆ ಸಂಬಂಧಿಸಿದಂತೆ ಯೋಜನೆಯ ನಿಬಂಧನೆಗಳನ್ನು ಪಾಲಿಸಿರಲಿಲ್ಲ ಮತ್ತು ಕಾಮಗಾರಿಗಳ ನಿಗದಿತ ತಪಾಸಣೆಯನ್ನು ಕೈಗೊಂಡಿರಲಿಲ್ಲ.

ನಿರ್ದೇಶಕರ ನೇಮಕಾತಿಯಲ್ಲಿ ಮಾನದಂಡಗಳ ವಿಚಲನ, ಸಿಬ್ಬಂದಿಯ ಕೊರತೆ, ಹಣದ ಕೊರತೆ/ಹಣದ ಬಿಡುಗಡೆಯಲ್ಲಿ ವಿಳಂಬ ಮತ್ತು ಲೆಕ್ಕಪರಿಶೋಧನೆಗೆ ದಾಖಲೆಗಳ ಅಲಭ್ಯತೆಯಂತಹ ಸಾಂಸ್ಥಿಕ ದೌರ್ಬಲ್ಯಗಳಿಂದ ಸಾಮಾಜಿಕ ಲೆಕ್ಕಪರಿಶೋಧನಾ ಘಟಕವು ಬಳಲುತ್ತಿತ್ತು. ತತ್ಪರಿಣಾಮವಾಗಿ, ಸಾಮಾಜಿಕ ಲೆಕ್ಕಪರಿಶೋಧನೆ ನಡೆಸುವಲ್ಲಿನ ಕೊರತೆಯು 2019-20ರಲ್ಲಿ ಶೇಕಡಾ 1ರಿಂದ 2023-24ರಲ್ಲಿ ಶೇಕಡಾ 57ಕ್ಕೆ ಏರಿತ್ತು. ಸಾಮಾಜಿಕ ಲೆಕ್ಕಪರಿಶೋಧನೆಯ ಅವಲೋಕನಗಳ ಇತ್ಯರ್ಥದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬಾಕಿ ಮತ್ತು ದುರುಪಯೋಗ ಇತ್ಯರ್ಥದಲ್ಲಿ ಅಕ್ರಮಗಳು ಇರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ನಿಗದಿತವಾಗಿ ವರದಿ ಮಾಡುವುದು, ಪರಿಹಾರ ಮತ್ತು ಅನುಸರಣಾ ಕಾರ್ಯವಿಧಾನಗಳು ಅಸ್ತಿತ್ವದಲ್ಲಿಲ್ಲದ ಕಾರಣ ಕುಂದುಕೊರತೆ ಪರಿಹಾರ ಕಾರ್ಯವಿಧಾನವು ಪರಿಣಾಮಕಾರಿಯಾಗಿರಲಿಲ್ಲ. ಎಲ್ಲಾ ಜಿಲ್ಲೆಗಳಲ್ಲಿ ಒಂಬುಡ್ಸ್ ಪರ್ಸನ್ ಗಳನ್ನು ನೇಮಿಸಲಾಗಿದ್ದರೂ, ಹೆಚ್ಚಿನ ಸಂಖ್ಯೆಯ ದೂರುಗಳು ವಿಲೇವಾರಿಗಾಗಿ ಬಾಕಿ ಉಳಿದಿದ್ದವು. ಪರೀಕ್ಷಾ-ತನಿಖೆ ನಡೆಸಿದ ಜಿಲ್ಲೆಗಳಲ್ಲಿ ಒಂಬುಡ್ಸ್ ಪರ್ಸನ್ ವಿಧಿಸಿದ ದಂಡದ ಶೇಕಡಾ 20ಕ್ಕಿಂತ ಕಡಿಮೆ ಹಣವನ್ನು ವಸೂಲಿ ಮಾಡಲಾಗಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

2013, ಜಾಗೃತಿ ಮತ್ತು ಮೇಲ್ವಿಚಾರಣಾ ಸಮಿತಿಗಳು, ಜಿಲ್ಲಾ ಗುಣಮಟ್ಟ ಪರಿವೀಕ್ಷಕರು, ರಾಜ್ಯ ಗುಣಮಟ್ಟ ಪರಿವೀಕ್ಷಕರು, ರಾಷ್ಟ್ರೀಯ ಮಟ್ಟದ ಪರಿವೀಕ್ಷಕರು, ರಾಜ್ಯ ಉದ್ಯೋಗ ಖಾತರಿ ಪರಿಷತ್ ಮತ್ತು ಸಾಮಾಜಿಕ ಲೆಕ್ಕಪರಿಶೋಧನಾ ಘಟಕದಿಂದ ಸಾಮಾಜಿಕ ಲೆಕ್ಕಪರಿಶೋಧನೆ ಇವುಗಳ ಮೂಲಕ ಮೇಲ್ವಿಚಾರಣೆ ನಡೆಸಬೇಕೆಂದು ಎಂಜಿಎನ್‌ಆರ ಇಜಿಎ, 2005 ಮತ್ತು ಕಾರ್ಯಾಚರಣಾ ಮಾರ್ಗಸೂಚಿಗಳು,2013 ನಿಗದಿಪಡಿಸುತ್ತವೆ. ವಿವರಗಳನ್ನು ಕೆಳಗಿನ **ನಕ್ಷೆ-6.1**ರಲ್ಲಿ ನೀಡಲಾಗಿದೆ:

**ನಕ್ಷೆ-6.1: ರಾಜ್ಯ ಮಟ್ಟದಲ್ಲಿ ಎಂಜಿಎನ್‌ಆರ್ ಇಜಿಎಸ್ ಕಾಮಗಾರಿಗಳ ಮೇಲ್ವಿಚಾರಣಾ ಚೌಕಟ್ಟು**




**ಮೂಲ: ಎಂ.ಜಿ.ಎನ್.ಆರ್.ಇ.ಜಿ.ಎ 2005 ಮತ್ತು ಕಾರ್ಯಾಚರಣಾ ಮಾರ್ಗಸೂಚಿಗಳು, 2013**

ಯೋಜನೆಯಡಿಯಲ್ಲಿ ಮೇಲ್ವಿಚಾರಣೆ, ಮೌಲ್ಯಮಾಪನ ಮತ್ತು ಪರಿಶೀಲನೆಗೆ ಸಂಬಂಧಿಸಿದ ಲೆಕ್ಕಪರಿಶೋಧನಾ ಅವಲೋಕನಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

### 6.1 ರಾಜ್ಯ ಉದ್ಯೋಗ ಖಾತರಿ ಮಂಡಳಿಯ ಕಾರ್ಯನಿರ್ವಹಣೆ

ರಾಜ್ಯ ಸರ್ಕಾರವು ರಾಜ್ಯ ಉದ್ಯೋಗ ಖಾತರಿ ಪರಿಷತ್ತನ್ನು (ಎಸ್ಇಜಿಸಿ) ಸ್ಥಾಪಿಸಬೇಕು ಎಂದು ಎಂ.ಜಿ.ಎನ್.ಆರ್.ಇ.ಜಿ.ಎ ಷರತ್ತು ವಿಧಿಸಿತ್ತು, ಅದು ಯೋಜನೆಯ ಅನುಷ್ಠಾನ, ಮೌಲ್ಯಮಾಪನ ಮತ್ತು ಮೇಲ್ವಿಚಾರಣೆಯ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು, ರಾಜ್ಯ ಶಾಸಕಾಂಗಕ್ಕೆ ಮಂಡಿಸಬೇಕಾದ ಯೋಜನೆಯ ವಾರ್ಷಿಕ ವರದಿಯನ್ನು ಸಿದ್ಧಪಡಿಸುವುದು ಇತ್ಯಾದಿಗಳ ಜವಾಬ್ದಾರಿಯನ್ನು ಹೊಂದಿತ್ತು. ಎಸ್ಇಜಿಸಿಯ ಸಭೆಗಳ ಸಮಯ, ಸ್ಥಳ ಮತ್ತು ಕಾರ್ಯವಿಧಾನಕ್ಕೆ ಸಂಬಂಧಿಸಿದ ಮಾನದಂಡಗಳನ್ನು (ಅಂತಹ ಸಭೆಗಳಲ್ಲಿನ ಕೋರಂ ಸೇರಿದಂತೆ) ರಾಜ್ಯ ಸರ್ಕಾರವು ಸೂಚಿಸಬೇಕು ಎಂದು ಕಾಯಿದೆಯ ಸೆಕ್ಷನ್ 12(2) ಷರತ್ತು ವಿಧಿಸಿತ್ತು. ಎಸ್ಇಜಿಸಿ ತನ್ನ ಕರ್ತವ್ಯಗಳು ಮತ್ತು ಕಾರ್ಯಗಳನ್ನು ನಿರ್ವಹಿಸುವಲ್ಲಿ ಸಹಾಯ ಮಾಡಲು ಎಸ್ಇಜಿಸಿ ನಾಲ್ಕು[43] ಉಪ-ಸಮಿತಿಗಳನ್ನು ಹೊಂದಿರಬೇಕು ಎಂದು ಕರ್ನಾಟಕ ಎಸ್ಇಜಿಸಿ ನಿಯಮಗಳು, 2006 ನಿಗದಿಪಡಿಸುತ್ತದೆ.

ರಾಜ್ಯ ಸರ್ಕಾರವು ಎಸ್ಇಜಿಸಿಯನ್ನು ರಚಿಸಿದ್ದರೂ, ಎಸ್ಇಜಿಸಿ ಸಭೆ ಸೇರಬೇಕಾದ ಮಧ್ಯಂತರವನ್ನು ಅದು ಸೂಚಿಸಿರಲಿಲ್ಲ ಎಂಬುದನ್ನು ದಾಖಲೆಗಳ ಪರಿಶೀಲನೆಯು ತೋರಿಸಿತು. ಹೀಗೆ, ಎಸ್ಇಜಿಸಿ ಅರಚನಾತ್ಮಕ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿತ್ತು. 2019–20ರಿಂದ 2023–24ರ ಅವಧಿಯಲ್ಲಿ, ಎಸ್ಇಜಿಸಿ ಕೇವಲ ಒಂದು ಬಾರಿ (ಜೂನ್ 2020) ಸಭೆ ಸೇರಿತ್ತು. ಅಂತೆಯೇ, ನಾಲ್ಕು ಉಪ ಸಮಿತಿಗಳಲ್ಲಿ ಯಾವುದೂ 2019–20 ರಿಂದ 2023–24 ರ ಅವಧಿಯಲ್ಲಿ ಯಾವುದೇ ಸಭೆಯನ್ನು ನಡೆಸಿಲ್ಲ. ಅಲ್ಲದೆ, 2019–20ರಿಂದ 2023–24ರ ಅವಧಿಯಲ್ಲಿ ಯೋಜನೆಯ ವಾರ್ಷಿಕ ವರದಿಗಳನ್ನು ರಾಜ್ಯ ಶಾಸಕಾಂಗದ ಮುಂದೆ ಮಂಡಿಸಿರಲಿಲ್ಲ.

ಇದು ಕಾಯಿದೆಯ ನಿಬಂಧನೆಗಳನ್ನು ಮತ್ತು ಗ್ರಾಮೀಣಾಭಿವೃದ್ಧಿ ಸಚಿವಾಲಯದ ನಿರ್ದೇಶನಗಳನ್ನು ಉಲ್ಲಂಘಿಸಿದಂತಾಗಿತ್ತು. ಅಲ್ಲದೆ, ಅತ್ಯುನ್ನತ ಮಟ್ಟದಲ್ಲಿ ಯೋಜನೆಯ ಉದ್ದೇಶಿತ ಮೇಲ್ವಿಚಾರಣೆ ಮತ್ತು ಚಾಲನೆಯ ಕೇವಲ ಕಾಟಾಚಾರದ ಕ್ರಮವಾಗಿದ್ದು ಶಾಸಕಾಂಗಕ್ಕೆ ಕಾರ್ಯಾಂಗದ ಉತ್ತರದಾಯಿತ್ವವನ್ನು ಕಡಿಮೆ ಮಾಡುವ ಕ್ರಮವಾಗಿತ್ತು.

ಎಸ್ಇಜಿಸಿಯನ್ನು ಪುನರ್ ರಚಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ರಾಜ್ಯ ಸರ್ಕಾರ ತಿಳಿಸಿತು (ಮೇ 2025).

**ಶಿಫಾರಸು–16: ಅಧಿನಿಯಮ/ಮಾರ್ಗಸೂಚಿಗಳಲ್ಲಿ ನಿಗದಿಪಡಿಸಿರುವಂತೆ ಎಸ್ ಇಜಿಸಿಯನ್ನು ಪುನರ್ ರಚಿಸಬೇಕು ಮತ್ತು ನಿಗದಿತ ಕಾರ್ಯಗಳನ್ನು ನಿರ್ವಹಿಸಬೇಕು**

### 6.2 ರಾಜ್ಯ ಜಾಗೃತ ಕೋಶದ ರಚನೆ ಮತ್ತು ಅದರ ಕಾರ್ಯನಿರ್ವಹಣೆ

ಕಾಯಿದೆಯ ಅನುಷ್ಠಾನದಲ್ಲಿನ ಅಕ್ರಮಗಳನ್ನು ಪೂರ್ವಭಾವಿಯಾಗಿ ಪತ್ತೆಹಚ್ಚಲು ಮತ್ತು ಸಾಮಾಜಿಕ ಲೆಕ್ಕಪರಿಶೋಧನೆಯ ಸಮಯದಲ್ಲಿ ಗುರುತಿಸಲ್ಪಟ್ಟ ಅಕ್ರಮಗಳು ಮತ್ತು ದುರುಪಯೋಗಗಳನ್ನು ಪತ್ತೆಮಾಡಿ ತಪ್ಪಿತಸ್ಥರಿಗೆ ಶಿಕ್ಷೆಯಾಗುವುದನ್ನು ಮತ್ತು ದುರುಪಯೋಗಪಡಿಸಿಕೊಂಡ ಹಣವನ್ನು ಸರಿಯಾಗಿ ವಸೂಲಿ ಮಾಡುವುದನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ರಾಜ್ಯಗಳು ಮೂರು ಹಂತದ ಜಾಗೃತ ಕಾರ್ಯವಿಧಾನ ವ್ಯವಸ್ಥೆ ಮಾಡಬೇಕು ಎಂದು ಕಾರ್ಯಾಚರಣೆಯ ಮಾರ್ಗಸೂಚಿ, 2013ರ ಕಂಡಿಕೆ 13.6.1 ನಿಗದಿಪಡಿಸುತ್ತದೆ.

---

[43] ಆದ್ಯತೆಯ ಕಾಮಗಾರಿಗಳ ಸಮಿತಿ, ಅಧಿನಿಯಮದ ಷರತ್ತು 1 (x) ರ ಅಡಿಯಲ್ಲಿ ಪ್ರಸ್ತಾವನೆಗಳನ್ನು ಅಂತಿಮಗೊಳಿಸುವ ಸಮಿತಿ, ಹಣಕಾಸು ಮತ್ತು ಲೆಕ್ಕಪರಿಶೋಧನಾ ಸಮಿತಿ ಮತ್ತು ವೇತನ ಮತ್ತು ಕಾರ್ಮಿಕ ಮಾನದಂಡಗಳ ಸಮಿತಿ

ರಾಜ್ಯ ಮಟ್ಟದಲ್ಲಿ ಯಾವುದೇ ಜಾಗೃತ ಕೋಶವನ್ನು ರಚಿಸಿರಲಿಲ್ಲ ಎಂಬುದನ್ನು ದಾಖಲೆಗಳ ಪರಿಶೀಲನೆಯಿಂದ ಗಮನಿಸಲಾಯಿತು. ಇದಲ್ಲದೆ, ಲೆಕ್ಕಪರಿಶೋಧನಾ ಅವಧಿಯಲ್ಲಿ (2019–20ರಿಂದ 2023–24) ಆಯ್ದ ಜಿಲ್ಲೆಗಳಲ್ಲಿ ಮತ್ತು ಗ್ರಾಮ ಪಂಚಾಯಿತಿಗಳಲ್ಲಿ ಅಗತ್ಯವಾದ ಜಾಗೃತ ಕೋಶಗಳು/ ಜಾಗೃತಿ ಮತ್ತು ಮೇಲ್ವಿಚಾರಣಾ ಸಮಿತಿಯನ್ನು ರಚಿಸಿರಲಿಲ್ಲ.

ಯಾವುದೇ ಜಾಗೃತ ಕೋಶ ಇಲ್ಲದಿದ್ದರೂ, ಎಂ.ಜಿ.ಎನ್.ಆರ್.ಇ.ಜಿ.ಎಸ್ ಅನುಷ್ಠಾನದ ಬಗ್ಗೆ ಸ್ವೀಕರಿಸಿದ ದೂರುಗಳನ್ನು ನೋಡಿಕೊಳ್ಳಲು ಆಯುಕ್ತರ ಕಛೇರಿಯಲ್ಲಿ ಪ್ರತ್ಯೇಕ ವಿಭಾಗವಿದೆ ಎಂದು ಇಲಾಖೆ ತಿಳಿಸಿತು (ನವೆಂಬರ್ 2024). ಒದಗಿಸಿದ ಮಾಹಿತಿಯ ಪ್ರಕಾರ, 2019–20ರಿಂದ 2023–24ರ ಅವಧಿಯಲ್ಲಿ ಸ್ವೀಕರಿಸಿದ 14,945 ದೂರುಗಳಲ್ಲಿ 1,034 ದೂರುಗಳು ವಿಲೇವಾರಿಗಾಗಿ ಬಾಕಿ ಉಳಿದಿದ್ದವು. ಜಾಗೃತ ಕೋಶದ ಉದ್ದೇಶವು ಕೇವಲ ದೂರುಗಳನ್ನು ಪಡೆಯುವುದಕ್ಕಿಂತ ದೊಡ್ಡದಾಗಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಯೋಜನೆಯ ಅನುಷ್ಠಾನದಲ್ಲಿ ಅಕ್ರಮಗಳನ್ನು ಪತ್ತೆಹಚ್ಚುವ ಉದ್ದೇಶವನ್ನು ಅದು ಹೊಂದಿತ್ತು.

ಜಾಗೃತ ಕೋಶವನ್ನು ರಚಿಸುವ ಪ್ರಸ್ತಾಪವನ್ನು ಎಸ್ಇಜಿಸಿ ಮುಂದೆ ಮಂಡಿಸಲಾಗುವುದು ಮತ್ತು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ರಾಜ್ಯ ಸರ್ಕಾರ ತಿಳಿಸಿತು (ಮೇ 2025).

## 6.3 ಗುಣಮಟ್ಟ ನಿರ್ವಹಣಾ ಕಾರ್ಯವಿಧಾನದಲ್ಲಿನ ನ್ಯೂನತೆಗಳು

### *6.3.1 ರಾಜ್ಯ ಗುಣಮಟ್ಟ ನಿರ್ವಹಣೆ*

ರಾಜ್ಯದ ಪ್ರತಿ ಜಿಲ್ಲೆಗೆ ರಾಜ್ಯ ಗುಣಮಟ್ಟ ಪರಿವೀಕ್ಷಕರನ್ನು (ಎಸ್.ಕ್ಯೂಎಂ) ಮತ್ತು ನಿರ್ದೇಶಕ (ಕ್ಯೂಎಂ) ಎಂದು ನಿಯೋಜಿಸಲಾದ ಕನಿಷ್ಠ ಅಧೀಕ್ಷಕ ಎಂಜಿನಿಯರ್ ಗಳ (ಎಸ್.ಇ) ಶ್ರೇಣಿಯ ನೋಡಲ್ ಅಧಿಕಾರಿಯನ್ನು ಹೊಂದಿದ ರಾಜ್ಯ ಗುಣಮಟ್ಟ ಮೇಲ್ವಿಚಾರಣಾ ಘಟಕವನ್ನು ರಚಿಸಬೇಕು ಎಂದು ಕಾರ್ಯಾಚರಣಾ ಮಾರ್ಗಸೂಚಿಗಳು, 2013ರ ಕಂಡಿಕೆ–14.7 ನಿಗದಿಪಡಿಸುತ್ತದೆ.

ರಾಜ್ಯ ಗುಣಮಟ್ಟ ಮೇಲ್ವಿಚಾರಣಾ ಘಟಕದ ರಚನೆಗೆ ಸಂಬಂಧಿಸಿದ ನಿಬಂಧನೆಗಳನ್ನು ಅನುಸರಿಸದಿರುವುದನ್ನು ಮತ್ತು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಿದಂತೆ ಪರೀಕ್ಷಾ–ತನಿಖೆ ನಡೆಸಿದ ಯಾವುದೇ ಜಿಲ್ಲೆಗಳಲ್ಲಿ ಕನಿಷ್ಠ ಶೇಕಡಾ 10ರಷ್ಟು ಕಾಮಗಾರಿಗಳನ್ನು ಪರಿಶೀಲಿಸುವ ಗುರಿಗಳನ್ನು ಸಾಧಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

1. 18 ಜೂನ್ 2020ರ ಸರ್ಕಾರದ ಆದೇಶದ ಪ್ರಕಾರ, ಹುದ್ದೆಗೆ ನಿಯೋಜಿಸಲಾದ ಕಾರ್ಯಗಳೊಂದಿಗೆ ನಿರ್ದೇಶಕರ (ಕ್ಯೂಎಂ) ಹುದ್ದೆಯನ್ನು ಮುಖ್ಯ ಕಾರ್ಯಾಚರನಾ ಅಧಿಕಾರಿ (ಸಿಒಒ) ಎಂದು ಮರು ನಾಮಕರಣಗೊಳಿಸಲಾಯಿತು. ಜೂನ್ 2020ರಿಂದ ಕನಿಷ್ಠ ಎಸ್ಇ ಶ್ರೇಣಿಯ ನಿರ್ದೇಶಕರನ್ನು (ಕ್ಯೂಎಂ) ನೇಮಕ ಮಾಡುವ ಅಗತ್ಯ ಷರತ್ತನ್ನು ಖಚಿತಪಡಿಸಿಕೊಂಡಿರಲಿಲ್ಲ ಎಂಬುದನ್ನು ಸಿಒಒ ಹುದ್ದೆಯ ಅಧಿಕಾರಕ್ಕೆ ಸಂಬಂಧಿಸಿದ ವಿವರಗಳು ತೋರಿಸಿದವು.

2. ಕಾರ್ಯಾಚರಣಾ ಮಾರ್ಗಸೂಚಿಗಳು ಯಾವುದೇ ಎಸ್ ಕ್ಯೂಎಂ ಗೆ ಅವರ ತವರು ಜಿಲ್ಲೆಯನ್ನು ಹಂಚಿಕೆ ಮಾಡಬಾರದು ಎಂದು ಷರತ್ತು ವಿಧಿಸುತ್ತವೆ (ಕಂಡಿಕೆ–14.8). ಇದಕ್ಕೆ ಪ್ರತಿಯಾಗಿ, **ಅನುಬಂಧ–6.1**ರಲ್ಲಿ ವಿವರಿಸಿರುವಂತೆ, ಒಂಬತ್ತು ಎಸ್.ಕ್ಯೂಎಮ್ ಗಳಿಗೆ ಅವರ ತವರು ಜಿಲ್ಲೆಗಳನ್ನು ಹಂಚಿಕೆ ಮಾಡಲಾಗಿತ್ತು.

3. ಎಎಂಸಿ ಪ್ರಕಾರ, ನೋಂದಾಯಿತ ತಾಂತ್ರಿಕ ಅಧಿಕಾರಿಗಳು ಪ್ರತಿ ಜಿಲ್ಲೆಯಲ್ಲಿ ಎಂಜಿಎನ್ಆರ್ ಇಜಿಎಸ್ ಅಡಿಯಲ್ಲಿ ಕಾರ್ಯಗತಗೊಳಿಸಲಾದ ಕನಿಷ್ಠ ಶೇಕಡಾ 10ರಷ್ಟು ಕಾಮಗಾರಿಗಳನ್ನು ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಾಡಬೇಕು. ಈ ಶೇಕಡಾ 10ರಷ್ಟು ಕಾಮಗಾರಿಗಳಲ್ಲಿ ಕಚ್ಚಾ (ಭೂಮಿ) ಕಾಮಗಾರಿಗಳಿಗೆ ಕನಿಷ್ಟ ₹5 ಲಕ್ಷ ಮತ್ತು ಅದಕ್ಕಿಂತ ಹೆಚ್ಚಿನ ವೆಚ್ಚ ಹಾಗೂ ಪಕ್ಕಾ (ಕಲ್ಲು) ಕಾಮಗಾರಿಗಳಿಗೆ ₹10 ಲಕ್ಷ ಮತ್ತು ಅದಕ್ಕಿಂತ ಹೆಚ್ಚಿನ ವೆಚ್ಚವನ್ನು ಭರಿಸಿರಬೇಕು. ಪ್ರತಿ

ಕಾಮಗಾರಿಯ ಮೇಲ್ವಿಚಾರಣೆಯನ್ನು ನಿರ್ಮಾಣದ ಸಮಯದಲ್ಲಿ ಮತ್ತು ಪೂರ್ಣಗೊಂಡ ನಂತರ, ಹೀಗೆ ಎರಡು ಹಂತಗಳಲ್ಲಿ ಮಾಡಬೇಕು.

ಆದರೆ, 2019–20ರಿಂದ 2023–24ರ ಅವಧಿಯಲ್ಲಿ ಪರೀಕ್ಷಾ–ತನಿಖೆ ನಡೆಸಿದ ಯಾವುದೇ ಜಿಲ್ಲೆಗಳಲ್ಲಿ ಈ ಗುರಿಗಳನ್ನು ಸಾಧಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. 2020–21ರಿಂದ 2023–24ರ ಅವಧಿಯಲ್ಲಿ 274ರಿಂದ 599ವರೆಗಿನ ಕಾಮಗಾರಿಗಳ ಗುರಿಗಳ ಪೈಕಿ, ಕೇವಲ 39ರಿಂದ (ಶೇಕಡಾ 7) 236 ಕಾಮಗಾರಿಗಳನ್ನು (ಶೇಕಡಾ 45) ಮಾತ್ರ ಎಸ್ಕ್ಯೂಎಂಗಳು ಪರಿಶೀಲಿಸಿದ್ದರು. 2019–20ನೇ ಅವಧಿಯಲ್ಲಿ ಯಾವುದೇ ಕಾಮಗಾರಿಗಳನ್ನು ಪರಿಶೀಲಿಸಿರಲಿಲ್ಲ. ಇದಲ್ಲದೆ, ಕಾಮಗಾರಿಗಳ ಮೇಲ್ವಿಚಾರಣೆ/ತಪಾಸಣೆಯನ್ನು ಎರಡು ಬಾರಿ ಪರಿಶೀಲಿಸಲು ಯೋಜಿಸಲಾಗಿದ್ದರೂ ಕೇವಲ ಒಂದು ಬಾರಿ ಮಾತ್ರ ಮಾಡಲಾಗಿತ್ತು. ವರ್ಷವಾರು ವಿವರಗಳನ್ನು **ಅನುಬಂಧ–6.2**ರಲ್ಲಿ ನೀಡಲಾಗಿದೆ.

ತಪಾಸಣೆಯಲ್ಲಿನ ಕೊರತೆಯ ಹೊರತಾಗಿ, ಎಸ್ಕ್ಯೂಎಂ ಆಕ್ಷೇಪಣೆಗಳಿಗೆ ಪ್ರತಿಯಾಗಿ ಪರೀಕ್ಷಾ–ತನಿಖೆ ನಡೆಸಿದ ಈ ಜಿಲ್ಲೆಗಳಲ್ಲಿ ವಸೂಲಾತಿಯ ಶೇಕಡಾವಾರು ಪ್ರಮಾಣವು ತುಂಬಾ ಕಡಿಮೆಯಿದ್ದಿತು. ₹26.33 ಲಕ್ಷಗಳ ಪ್ರಸ್ತಾವಿತ ವಸೂಲಾತಿಗೆ ಪ್ರತಿಯಾಗಿ, ವಶಪಡಿಸಿಕೊಂಡ ಮೊತ್ತವು ₹1.87 ಲಕ್ಷವಾಗಿತ್ತು ಮತ್ತು ಉಳಿದ ₹24.46 ಲಕ್ಷಗಳನ್ನು (ಶೇಕಡಾ 93) ಇನ್ನೂ ವಸೂಲು ಮಾಡಬೇಕಿದೆ (ನವೆಂಬರ್ 2024).

4. 2013ರ ಕಾರ್ಯಾಚರಣಾ ಮಾರ್ಗಸೂಚಿಗಳ ಕಂಡಿಕೆ 14.8 ಮತ್ತು 14.9ರ ಪ್ರಕಾರ, ಸ್ವೀಕರಿಸಿದ ಎಸ್ ಕ್ಯೂಎಮ್ ಅರ್ಜಿಗಳ ಪಟ್ಟಿ, ಅವರ ಪರಿಚಯ ಪತ್ರಗಳು, ಆಯ್ಕೆಯಾದ ವ್ಯಕ್ತಿಗಳು ಮತ್ತು ಹಂಚಿಕೆಯಾದ ಜಿಲ್ಲೆಗಳನ್ನು ಎನ್‌ಆರ್ ಇಜಿಎ ಸಾಫ್ಟ್ ನಲ್ಲಿ ಹಾಕಬೇಕು ಮತ್ತು ಮಾಡಿದ ಅವಲೋಕನಗಳು ಮತ್ತು ಕೈಗೊಂಡ ಕ್ರಮಗಳ ಜೊತೆಗೆ ಭೇಟಿ ನೀಡಿದ ಕಾಮಗಾರಿಗಳ ವಿವರಗಳನ್ನು (ಎಸ್ ಕ್ಯೂಎಮ್ ಪ್ರಕಾರ) ಸಹ ಅಪ್ ಲೋಡ್ ಮಾಡಬೇಕು.

   ಆದರೆ ಅಂತಹ ಯಾವುದೇ ವಿವರಗಳನ್ನು ಎನ್‌ಆರ್ ಇಜಿಎ ಸಾಫ್ಟ್ ನಲ್ಲಿ ಅಪ್ ಲೋಡ್ ಮಾಡಿರಲಿಲ್ಲ. ಇದು ಎಸ್‌ಕ್ಯೂಎಂಗಳ ನೇಮಕಾತಿಯಲ್ಲಿ ಮತ್ತು ಅವುಗಳ ಚಟುವಟಿಕೆಗಳಲ್ಲಿ ಉತ್ತರದಾಯಿತ್ವ ಮತ್ತು ಪಾರದರ್ಶಕತೆಯನ್ನು ಖಚಿತಪಡಿಸುವ ಉದ್ದೇಶದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ

ಎಸ್‌ಕ್ಯೂಎಂಗಳಿಗೆ ತವರು ಜಿಲ್ಲೆಗಳ ಹಂಚಿಕೆ ಮಾಡುವುದನ್ನು ನಿಲ್ಲಿಸಲಾಗಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಮೇ 2025) ಮತ್ತು ಇತರ ಅವಲೋಕನಗಳನ್ನು ಅನುಸರಿಸುವುದಾಗಿ ಭರವಸೆ ನೀಡಿತು.

### *6.3.2 ಜಿಲ್ಲಾ ಗುಣಮಟ್ಟ ಪರಿವೀಕ್ಷಕರ ನೇಮಕಾತಿ ಮಾಡದಿರುವುದು*

ಎಎಂಸಿ, 2019–20ರ ಕಂಡಿಕೆ 7.12.1ರ ಪ್ರಕಾರ, ಜಿಲ್ಲಾ ಗುಣಮಟ್ಟ ಮೇಲ್ವಿಚಾರಣೆ (ಡಿಕ್ಯೂಎಂ) ಕೋಶ ಅಸ್ತಿತ್ವದಲ್ಲಿರಬೇಕು ಮತ್ತು ಅದರಲ್ಲಿ ಕಾರ್ಯನಿರ್ವಾಹಕ ಎಂಜಿನಿಯರ್/ಸೂಪರಿಂಟೆಂಡೆಂಟ್ ಎಂಜಿನಿಯರ್ ಅಡಿಯಲ್ಲಿ ನಿವೃತ್ತ ಸಹಾಯಕ ಎಂಜಿನಿಯರ್ ಮತ್ತು ಅದಕ್ಕಿಂತ ಹೆಚ್ಚಿನ ಪ್ರವರ್ಗದ 10 ರಿಂದ 15 ತಾಂತ್ರಿಕ ಅಧಿಕಾರಿಗಳನ್ನು ಹೊಂದಿದ ಸಮಿತಿಯಿರಬೇಕು. ಯೋಜನೆಯಡಿ ಕಾರ್ಯಗತಗೊಳಿಸಿದ ಕನಿಷ್ಠ ಶೇಕಡಾ 10ರಷ್ಟು ಕಾಮಗಾರಿಗಳನ್ನು ಈ ಅಧಿಕಾರಿಗಳು ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಾಡಬೇಕಾಗಿತ್ತು.

2019–20ರಿಂದ 2023–24ರ ಅವಧಿಯಲ್ಲಿ ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ ಡಿಕ್ಯೂಎಂಗಳನ್ನು ನೇಮಕ ಮಾಡಿರಲಿಲ್ಲ (2020–21ರ ವರ್ಷಕ್ಕೆ ಕಲಬುರಗಿ, ಶಿವಮೊಗ್ಗ ಮತ್ತು ತುಮಕೂರು ಹೊರತುಪಡಿಸಿ) ಎಂಬುದನ್ನು ಇಲಾಖೆ ಸಲ್ಲಿಸಿದ ದಾಖಲೆಗಳ ಪರಿಶೀಲನೆಯಿಂದ ತಿಳಿದುಬಂದಿತು. ಇದಲ್ಲದೆ, ಕಾಮಗಾರಿಗಳ ಪರಿಶೀಲನೆಗೆ ಸಂಬಂಧಿಸಿದ ವಿವರಗಳು ಆಯಾ ಡಿಕ್ಯೂಎಂಗಳೊಂದಿಗೆ ಲಭ್ಯವಿರಲಿಲ್ಲ.

ಆದ್ದರಿಂದ, ಡಿಕ್ಯೂಎಂಗಳನ್ನು ನೇಮಿಸದ ಕಾರಣ, ಗುಣಮಟ್ಟ ಅಥವಾ ಸತ್ಯಾಸತ್ಯತೆಯನ್ನು ಖಚಿತಪಡಿಸಿಕೊಳ್ಳಲು ಕಾಮಗಾರಿಗಳ ಅಗತ್ಯ ಪರಿಶೀಲನೆಯನ್ನು ಮಾಡಿರಲಿಲ್ಲ. ಹೀಗೆ, ಗುಣಮಟ್ಟ ನಿರ್ವಹಣಾ ಕಾರ್ಯವಿಧಾನದ ಅನುಪಸ್ಥಿತಿ ಇದ್ದಿತು.

ಎಲ್ಲಾ ಜಿಲ್ಲೆಗಳಲ್ಲಿ ಡಿಕ್ಯೂಎಂ ನೇಮಕ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ರಾಜ್ಯ ಸರ್ಕಾರ ತಿಳಿಸಿತು (ಮೇ 2025).

## 6.4 ಸಾಮಾಜಿಕ ಲೆಕ್ಕಪರಿಶೋಧನೆ

ಎಂಜಿಎನ್‌ಆರ್.ಇಜಿಎಸ್ ನ ಒಂದು ನವೀನ ಲಕ್ಷಣವೆಂದರೆ ಅದು 'ಸಾಮಾಜಿಕ ಲೆಕ್ಕಪರಿಶೋಧನೆ'ಯನ್ನು ಒಂದು ನಿರಂತರ ಸಾರ್ವಜನಿಕ ಜಾಗರೂಕತೆಯ ಸಾಧನವಾಗಿ ಸಾಂಸ್ಥಿಕಗೊಳಿಸಿತು (ಸೆಕ್ಷನ್ 17). ಸಾಮಾಜಿಕ ಲೆಕ್ಕಪರಿಶೋಧನೆಯನ್ನು ಪ್ರಾಥಮಿಕ ಮಧ್ಯಸ್ಥಗಾರರ ಸಕ್ರಿಯ ಪಾಲ್ಗೊಳ್ಳುವಿಕೆಯೊಂದಿಗೆ ಸಮುದಾಯದಿಂದ ಕಾರ್ಯಕ್ರಮ/ಯೋಜನೆಯ ಅನುಷ್ಠಾನ ಮತ್ತು ಅದರ ಫಲಿತಾಂಶಗಳ ಪರಿಶೀಲನೆ ಎಂದು ವಿವರಿಸಬಹುದು. ಅಧಿಕೃತ ದಾಖಲೆಗಳನ್ನು ವಾಸ್ತವತೆಗಳೊಂದಿಗೆ ಹೋಲಿಸುವ ಮೂಲಕ ಮತ್ತು ಪರಿಶೀಲನಾ ಅಭ್ಯಾಸದಲ್ಲಿ ಸಮುದಾಯದ ಭಾಗವಹಿಸುವಿಕೆಯೊಂದಿಗೆ ಮತ್ತು ಪರಿಶೀಲನೆಯ ಅವಲೋಕನಗಳನ್ನು ಸಾರ್ವಜನಿಕ ವೇದಿಕೆಯಲ್ಲಿ ಗಟ್ಟಿಯಾಗಿ ಓದುವ ಮೂಲಕ ಇದನ್ನು ಮಾಡಲಾಗುತ್ತದೆ. ಮೌಖಿಕ ಸಾಕ್ಷ್ಯಗಳು ಮತ್ತು ಸಂಗತಿಗಳನ್ನು ಸಾರ್ವಜನಿಕರಿಂದ ಪಡೆಯಲಾಗುತ್ತದೆ ಮತ್ತು ಅಧಿಕೃತ ದಾಖಲೆಗಳೊಂದಿಗೆ ಹೋಲಿಸಲಾಗುತ್ತದೆ.

ಕಾಯಿದೆಯ ಸೆಕ್ಷನ್ 32ರಡಿಯಲ್ಲಿನ ಅಧಿಕಾರವನ್ನು ಚಲಾಯಿಸಿ, ರಾಜ್ಯ ಸರ್ಕಾರವು (ಜನವರಿ 2012) ಕರ್ನಾಟಕದಲ್ಲಿ ಎಂಜಿಎನ್‌ಆರ್.ಇಜಿಎ ಯೋಜನೆಯ ಸಾಮಾಜಿಕ ಲೆಕ್ಕಪರಿಶೋಧನಾ ನಿಯಮಗಳ (2011) ಅನುಷ್ಠಾನವನ್ನು ಅಧಿಸೂಚಿಸಿತು (ಕರ್ನಾಟಕ ಸಾಮಾಜಿಕ ಲೆಕ್ಕಪರಿಶೋಧನಾ ನಿಯಮಗಳು). ರಾಜ್ಯದಲ್ಲಿ ಎಂಜಿಎನ್‌ಆರ್ ಇಜಿಎಸ್ ನ ಸಾಮಾಜಿಕ ಲೆಕ್ಕಪರಿಶೋಧನೆಯನ್ನು ನಡೆಸಲು ಕರ್ನಾಟಕ ಸೊಸೈಟಿಗಳ ನೋಂದಣಿ ಅಧಿನಿಯಮ, 1960ರ ಅಡಿಯಲ್ಲಿ ಎಂಜಿಎನ್‌ಆರ್ ಇಜಿಎಸ್ ಅಧಿನಿಯಮದಡಿಯಲ್ಲಿ ನಿಗದಿಪಡಿಸಿರುವಂತೆ, ಇನ್ನು ಮುಂದೆ ಸಾಮಾಜಿಕ ಲೆಕ್ಕಪರಿಶೋಧನಾ ಘಟಕ (ಎಸ್ ಎಯು), ಎಂದು ಕರೆಯಲಾಗುವ ಸಾಮಾಜಿಕ ಲೆಕ್ಕಪರಿಶೋಧನಾ ನಿರ್ದೇಶನಾಲಯವನ್ನು ನೋಂದಾಯಿಸಲಾಗಿದೆ. ಕರ್ನಾಟಕದ ಎಸ್‌ಎಯುನ ಸಾಂಸ್ಥಿಕ ರಚನೆಯನ್ನು **ಅನುಬಂಧ–6.3**ರಲ್ಲಿ ನೀಡಲಾಗಿದೆ.

ಕರ್ನಾಟಕದಲ್ಲಿ ಎಸ್‌ಎಯುನ ಕಾರ್ಯನಿರ್ವಹಣೆಗೆ ಸಂಬಂಧಿಸಿದ ಲೆಕ್ಕಪರಿಶೋಧನಾ ಅವಲೋಕನಗಳು ಈ ಕೆಳಗಿನಂತಿವೆ:

### *6.4.1 ಎಸ್‌ಎಯು ನಿರ್ದೇಶಕರ ನೇಮಕದಲ್ಲಿ ನಿಯಮಗಳ ಉಲ್ಲಂಘನೆ*

ಕರ್ನಾಟಕ ಸಾಮಾಜಿಕ ಲೆಕ್ಕಪರಿಶೋಧನಾ ನಿಯಮಗಳ ಪ್ರಕಾರ, ನಿವೃತ್ತ ಅಖಿಲ ಭಾರತ ಸೇವಾ ವ್ಯಕ್ತಿ/ ರಾಜ್ಯ ಸೇವೆಯ ನಿವೃತ್ತ ಆಯ್ಕೆ ದರ್ಜೆಯ ನಾಗರಿಕ ಸೇವಾ ವ್ಯಕ್ತಿ ಎಸ್ ಎಯ ಮುಖ್ಯಸ್ಥರಾಗಿರಬೇಕು. ಇದಲ್ಲದೆ, ಎಸ್‌ಎಯು ನಿರ್ದೇಶಕರ ಆಯ್ಕೆಯ ಮಾನದಂಡಗಳಿಗೆ ಸಂಬಂಧಿಸಿದಂತೆ 29 ಜೂನ್ 2020ರ ಗ್ರಾಮೀಣಾಭಿವೃದ್ಧಿ ಸಚಿವಾಲಯ ಭಾರತ ಸರ್ಕಾರದ ಪತ್ರವು, ಇತರ ವಿಷಯಗಳ ಜೊತೆಗೆ, ಸತತ ಮೂರು ಜಾಹೀರಾತುಗಳ ನಂತರವೂ ಸಾಮಾಜಿಕ ಲೆಕ್ಕಪರಿಶೋಧನೆಗಾಗಿ ನಿರ್ದೇಶಕರನ್ನು ನೇಮಕ ಮಾಡಲು ರಾಜ್ಯಕ್ಕೆ ಸಾಧ್ಯವಾಗದಿದ್ದರೆ, ಅದು ರಾಜ್ಯ ಸರ್ಕಾರದ ಅಧಿಕಾರಿಯನ್ನು ಪ್ರತಿನಿಯೋಜನೆ ಆಧಾರದ ಮೇಲೆ (ಪೂರ್ಣ ಸಮಯ) ಸಾಮಾಜಿಕ ಲೆಕ್ಕಪರಿಶೋಧನಾ ನಿರ್ದೇಶಕರನ್ನಾಗಿ ನೇಮಿಸಬಹುದು ಎಂದು ನಿಗದಿಪಡಿಸಿತ್ತು. ಆದರೆ, ಅವರ ಅಧಿಕಾರಾವಧಿಯು ಕನಿಷ್ಠ ಒಂದು ವರ್ಷ ಅವಧಿಯದ್ದಾಗಿರಬೇಕು ಆದರೆ ಮೂರು ವರ್ಷಗಳನ್ನು ಮೀರಬಾರದು.

ಲೆಕ್ಕಪರಿಶೋಧನಾ ಅವಧಿಯಲ್ಲಿ (2019–20ರಿಂದ 2023–24), ರಾಜ್ಯ ಸರ್ಕಾರವು (ಫೆಬ್ರವರಿ 2023 ಮತ್ತು ಸೆಪ್ಟೆಂಬರ್ 2023) ಸರಿಯಾದ ಪ್ರಕ್ರಿಯೆಯನ್ನು, ಅಂದರೆ ಮೂರು ಜಾಹೀರಾತುಗಳನ್ನು

ಆಹ್ವಾನಿಸದೆ, ಅನುಸರಿಸದೆ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳನ್ನು[44] ನಿರ್ದೇಶಕರನ್ನಾಗಿ ನೇಮಿಸಿತ್ತು. ಇದಲ್ಲದೆ, ಈ ನಿರ್ದೇಶಕರ ಅಧಿಕಾರಾವಧಿಯು ಕಡ್ಡಾಯವಾಗಿದ್ದ ಒಂದು ವರ್ಷದ ಅವಧಿಗಿಂತ ಕಡಿಮೆ ಇದ್ದಿತು. ಇದು ಅಕ್ರಮವಾಗಿತ್ತು ಮತ್ತು ಎಸ್‌ಎಯುನ ಸ್ವಾತಂತ್ರ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ.

ಸಾಮಾಜಿಕ ಲೆಕ್ಕಪರಿಶೋಧನಾ ಆಡಳಿತವನ್ನು ಸರಿಪಡಿಸಲು ಐಎಎಸ್ ಅಧಿಕಾರಿಗಳನ್ನು ನೇಮಿಸುವ ನಿರ್ಧಾರವನ್ನು ಸರ್ಕಾರ ತೆಗೆದುಕೊಂಡಿದೆ ಎಂದು ಇಲಾಖೆ ಉತ್ತರಿಸಿತು (ನವೆಂಬರ್ 2024). ವ್ಯವಸ್ಥೆಯು ಪೂರ್ಣಗೊಂಡ ನಂತರ, ನಿವೃತ್ತ ಅಧಿಕಾರಿಯನ್ನು ಎಸ್‌ಎಯು ನಿರ್ದೇಶಕರನ್ನಾಗಿ ನೇಮಿಸಲು ಕ್ರಮ ಕೈಗೊಳ್ಳಲಾಗುವುದು. ಆದರೂ, ಅಂತಹ ಕ್ರಮವು ಗ್ರಾಮೀಣಾಭಿವೃದ್ಧಿ ಸಚಿವಾಲಯ ನಿಗದಿಪಡಿಸಿದ ಮಾನದಂಡಗಳನ್ನು ನಿರ್ಲಕ್ಷಣೆಯಾಗಿತ್ತು ಎಂಬುದು ವಾಸ್ತವಾಂಶವಾಗಿದೆ. ಇದಲ್ಲದೆ, ಒಂದು ವರ್ಷದ ಕಡ್ಡಾಯ ಅವಧಿಗಿಂತ ಕಡಿಮೆ ಅವಧಿಯ ಲೆಕ್ಕಪರಿಶೋಧನಾ ಅವಲೋಕನಕ್ಕೆ ಪ್ರತಿಕ್ರಿಯೆಯಿರಲಿಲ್ಲ.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ಅಭಿಪ್ರಾಯವನ್ನು ಒಪ್ಪಿಕೊಂಡಿತು (ಮೇ 2025) ಮತ್ತು ಅದು ಮರುಕಳಿಸದಂತೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿತು.

### *6.4.2 ಸಿಬ್ಬಂದಿ ಕೊರತೆ*

ರಾಜ್ಯ ಸಂಪನ್ಮೂಲ ವ್ಯಕ್ತಿಗಳು (ಎಸ್‌ಆರ್.ಪಿಗಳು)/ರಾಜ್ಯ ಕಾರ್ಯಕ್ರಮ ವ್ಯವಸ್ಥಾಪಕರು, ಸಹಾಯಕ ಕಾರ್ಯಕ್ರಮ ವ್ಯವಸ್ಥಾಪಕರು, ಪ್ರಾದೇಶಿಕ ಕಾರ್ಯಕ್ರಮ ವ್ಯವಸ್ಥಾಪಕರು, ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕರು, ತಾಲ್ಲೂಕು ಕಾರ್ಯಕ್ರಮ ವ್ಯವಸ್ಥಾಪಕರು ಮುಂತಾದವರನ್ನು ಒಳಗೊಂಡ ಸ್ವತಂತ್ರ ಸಿಬ್ಬಂದಿ ರಚನೆಯನ್ನು ಎಸ್ ಎಯು ಹೊಂದಿರಬೇಕು.

ರಾಜ್ಯ/ಜಿಲ್ಲೆ/ತಾಲ್ಲೂಕು ಮಟ್ಟದಲ್ಲಿ ಮಂಜೂರಾದ 412 ಸಿಬ್ಬಂದಿಗೆ ಪ್ರತಿಯಾಗಿ, 318 ಜನರು ಕೆಲಸ ಮಾಡುತ್ತಿದ್ದರು, ತತ್ಪರಿಣಾಮವಾಗಿ 94 ಜನರ ಕೊರತೆಯಿರುವುದನ್ನು (ಶೇಕಡಾ 23) ಎಸ್‌ಎಯು ಒದಗಿಸಿದ ಮಾಹಿತಿ (ಆಗಸ್ಟ್ 2024) ತೋರಿಸಿತು. ರಾಜ್ಯ ಮಟ್ಟದಲ್ಲಿ ಸಹಾಯಕ ಕಾರ್ಯಕ್ರಮ ವ್ಯವಸ್ಥಾಪಕರು, ಕಚೇರಿ ಸಹಾಯಕರು, ಯುವ ವೃತ್ತಿಪರರು, ಜಿಲ್ಲಾ ಮಟ್ಟದಲ್ಲಿ ಪ್ರಾದೇಶಿಕ ಕಾರ್ಯಕ್ರಮ ವ್ಯವಸ್ಥಾಪಕರು ಮತ್ತು ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಕಾರ್ಯಕ್ರಮ ವ್ಯವಸ್ಥಾಪಕರ ಹುದ್ದೆಗಳಲ್ಲಿ ಹೆಚ್ಚಿನ ಕೊರತೆಯಿರುವುದು ಕಂಡುಬಂದಿತು. ಸಾಮಾಜಿಕ ಲೆಕ್ಕಪರಿಶೋಧನೆಯ ಸಮಯದಲ್ಲಿ (ಕಾರ್ಯಾಚರಣಾ ಮಾರ್ಗಸೂಚಿಗಳು, 2013ರ ಕಂಡಿಕೆ–13.2.3) ಆಸ್ತಿ ಗುಣಮಟ್ಟದ ಮೌಲ್ಯಮಾಪನಕ್ಕೆ ಅನುಕೂಲ ವಾಗುವಂತೆ ಎಸ್‌ಎಯು ಅಗತ್ಯವಾದ ಗುಣಮಟ್ಟ ಪರಿವೀಕ್ಷಕರನ್ನು ಹೊಂದಿರಲಿಲ್ಲ. ಹೀಗೆ, ಅಗತ್ಯ ಸಿಬ್ಬಂದಿಯ ನಿಯೋಜನೆಯಲ್ಲಿನ ಕೊರತೆ/ಅಸಮರ್ಪಕತೆಯು ಪರಿಣಾಮಕಾರಿ ಸಾಮಾಜಿಕ ಲೆಕ್ಕಪರಿಶೋಧನೆಗೆ ಅಡ್ಡಿಯಾಗಿತ್ತು.

ಅಗತ್ಯತೆ ಮತ್ತು ಹಣದ ಲಭ್ಯತೆಯ ಆಧಾರದ ಮೇಲೆ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ರಾಜ್ಯ ಸರ್ಕಾರ ಭರವಸೆ ನೀಡಿತು (ಮೇ 2025).

### *6.4.3 ಸಾಮಾಜಿಕ ಲೆಕ್ಕಪರಿಶೋಧನಾ ಘಟಕಕ್ಕೆ ಹಣಕಾಸು*

ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ವರ್ಷಕ್ಕೆ ಎರಡು ಬಾರಿಯಾದರೂ ಸಾಮಾಜಿಕ ಲೆಕ್ಕಪರಿಶೋಧನೆ ನಡೆಸಲು ಪ್ರಸ್ತಾವಿತ ಆಯವ್ಯಯವನ್ನು ಸಿದ್ಧಪಡಿಸುವ ಜವಾಬ್ದಾರಿಯನ್ನು ಎಸ್ ಎಯು ನಿರ್ದೇಶಕರು ಹೊಂದಿರಬೇಕು. ಆಡಳಿತಾತ್ಮಕ ವೆಚ್ಚಕ್ಕಾಗಿ ರಾಜ್ಯದ ಅರ್ಹತೆಯಾದ ಶೇಕಡಾ 6ರಲ್ಲಿ ಶೇಕಡಾ 0.5ರಷ್ಟನ್ನು ರಾಜ್ಯದ ಸಾಮಾಜಿಕ ಲೆಕ್ಕಪರಿಶೋಧನೆಗೆ ಮೀಸಲಿಡಬೇಕು. ಎಸ್‌ಎಯು ರಾಜ್ಯ, ಜಿಲ್ಲೆ, ಬ್ಲಾಕ್

---

[44] ಶ್ರೀ ನಳಿನಿ ಅತುಲ್, ಐಎಎಸ್ (13.02.2023 ರಿಂದ 17.08.2023), ಶ್ರೀ ಪ್ರದೀಪ್ ಪಿ., ಐಎಎಸ್ (15.09.2023 ರಿಂದ 28.06.2024).

ಮತ್ತು ಗ್ರಾಮ ಮಟ್ಟದಲ್ಲಿ ತನ್ನ ಸಂಪನ್ಮೂಲ ವ್ಯಕ್ತಿಗಳಿಗೆ ನೇರವಾಗಿ ಸಂಬಳ/ಗೌರವಧನವನ್ನು ಪಾವತಿಸಬೇಕು (ಗ್ರಾಮೀಣಾಭಿವೃದ್ಧಿ ಸಚಿವಾಲಯ ನಿಗದಿಪಡಿಸಿದ ಮಾನದಂಡಗಳಿಗೆ ಒಳಪಟ್ಟಿರುತ್ತದೆ).

2019–20ರಿಂದ 2023–24ರವರೆಗಿನ ಅವಧಿಗೆ ಒಟ್ಟು ಸ್ವೀಕಾರಾರ್ಹ ಮೊತ್ತವಾದ ₹134.04 ಕೋಟಿಗೆ[45] ಪ್ರತಿಯಾಗಿ, ಭಾರತ ಸರ್ಕಾರವು ₹51.10 ಕೋಟಿಗಳನ್ನು ಬಿಡುಗಡೆ ಮಾಡಿರುವುದನ್ನು ಒದಗಿಸಿದ ಮಾಹಿತಿಯ ಪರಿಶೀಲನೆಯು ತೋರಿಸಿತು. ಹೀಗಾಗಿ, ಎಸ್ಎಯು ಗೆ ಶೇಕಡಾ 62ರಷ್ಟು ಕಡಿಮೆ ಹಣವನ್ನು ಬಿಡುಗಡೆ ಮಾಡಲಾಗಿತ್ತು.

ಎಂ.ಜಿ.ಎನ್.ಆರ್.ಇ.ಜಿ.ಎಸ್ ಆಯುಕ್ತರ ಕಚೇರಿಯಿಂದ (₹22.97 ಕೋಟಿ)/ಹದಿನೈದನೇ ಹಣಕಾಸು ಆಯೋಗದ ಅನುದಾನದಿಂದ (₹7.74 ಕೋಟಿ) ಮುಂಗಡಗಳನ್ನು ಪಡೆದು 2021–22ರಿಂದ ಸಾಮಾಜಿಕ ಲೆಕ್ಕಪರಿಶೋಧನೆಯನ್ನು ಒಂದು ಸುತ್ತಿಗೆ[46] ಸೀಮಿತಗೊಳಿಸುವ ಮೂಲಕ ವೆಚ್ಚವನ್ನು ನಿರ್ವಹಿಸಲಾಗಿತ್ತು. ವಿವರಗಳನ್ನು **ಅನುಬಂಧ–6.4**ರಲ್ಲಿ ನೀಡಲಾಗಿದೆ. ಹೀಗೆ, ಸಾಮಾಜಿಕ ಲೆಕ್ಕಪರಿಶೋಧನೆಯ ಸ್ವಾತಂತ್ರ್ಯವನ್ನು ಖಚಿತಪಡಿಸಿಕೊಳ್ಳಲು ಅನುಸರಿಸಬೇಕಾದ ಪೂರ್ವಾಪೇಕ್ಷಿತಗಳಲ್ಲಿ ಒಂದನ್ನು ಅನುಸರಿಸಿರಲಿಲ್ಲ.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ಅಭಿಪ್ರಾಯವನ್ನು ಒಪ್ಪಿಕೊಂಡಿತು ಮತ್ತು ಎಸ್ಎಯು ಭಾರತ ಸರ್ಕಾರಕ್ಕೆ ನಿಧಿ ಪ್ರಸ್ತಾವನೆಗಳನ್ನು ಸಲ್ಲಿಸಬೇಕು ಎಂದು ತಿಳಿಸಿತು (ಮೇ 2025).

### *6.4.4 ಹಣ ಬಿಡುಗಡೆಯಲ್ಲಿ ವಿಳಂಬ ಮತ್ತು ಬಡ್ಡಿ ಪಾವತಿಸದಿರುವುದು*

ರಾಜ್ಯದಲ್ಲಿ ಸಾಮಾಜಿಕ ಲೆಕ್ಕಪರಿಶೋಧನೆಯನ್ನು ನಡೆಸಲು ಕೇಂದ್ರದ ನೆರವನ್ನು ಬಿಡುಗಡೆ ಮಾಡಲು ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯವು ಕಾಲಕಾಲಕ್ಕೆ ಮಂಜೂರಾತಿ ಆದೇಶಗಳನ್ನು ಹೊರಡಿಸಿತ್ತು. ಅದರ ಸ್ವೀಕೃತಿಯ ನಂತರ, ರಾಜ್ಯ ಸರ್ಕಾರವು ಈ ಹಣವನ್ನು 15 ದಿನಗಳಲ್ಲಿ ಸಾಮಾಜಿಕ ಲೆಕ್ಕಪರಿಶೋಧನಾ ಬ್ಯಾಂಕ್ ಖಾತೆಗೆ ವರ್ಗಾಯಿಸಬೇಕಾಗಿತ್ತು. ಭಾರತ ಸರ್ಕಾರದ ಸೂಚನೆಯಂತೆ, ರಾಜ್ಯ ಸರ್ಕಾರವು ಹಣವನ್ನು ಬಿಡುಗಡೆ ಮಾಡುವಲ್ಲಿ ವಿಳಂಬ ಮಾಡಿದರೆ ವಾರ್ಷಿಕ ಶೇಕಡಾ 12ರ ದರದಲ್ಲಿ (2019–20, 2020–21 ಮತ್ತು 2023–24ರ ವರ್ಷಕ್ಕೆ) ಬಡ್ಡಿಯನ್ನು ಪಾವತಿಸಬೇಕಿತ್ತು.

2019–20ರಿಂದ 2023–24ರ ಅವಧಿಯಲ್ಲಿ ಬಿಡುಗಡೆಯಾದ ₹44.61 ಕೋಟಿಗಳಲ್ಲಿ (2020–21ರ ₹6.50 ಕೋಟಿಗಳ ಹೊಂದಾಣಿಕೆಯ ನಂತರ) ರಾಜ್ಯ ಸರ್ಕಾರವು ₹37.06 ಕೋಟಿಗಳನ್ನು (ಶೇಕಡಾ 83) 21ರಿಂದ 112 ದಿನಗಳ ವ್ಯಾಪ್ತಿಯ ವಿಳಂಬದೊಂದಿಗೆ ಬಿಡುಗಡೆ ಮಾಡಿರುವುದನ್ನು ದಾಖಲೆಗಳ ಪರಿಶೀಲನೆಯು ತೋರಿಸಿತು. ಆದರೆ, ರಾಜ್ಯ ಸರ್ಕಾರವು ₹43.76 ಲಕ್ಷ ಬಡ್ಡಿಯನ್ನು ಪಾವತಿಸಿರಲಿಲ್ಲ (**ಅನುಬಂಧ–6.5** ರಲ್ಲಿ ವಿವರಿಸಲಾಗಿದೆ).

ಹಣವನ್ನು ಬಿಡುಗಡೆ ಮಾಡುವಲ್ಲಿನ ವಿಳಂಬಕ್ಕೆ ಕೋವಿಡ್–19 ಸಾಂಕ್ರಾಮಿಕ ರೋಗ, ತಾಂತ್ರಿಕ ಸಮಸ್ಯೆಗಳು ಇತ್ಯಾದಿಗಳನ್ನು ರಾಜ್ಯ ಸರ್ಕಾರ ಅಧ್ಯಾರೋಪಿಸಿತು (ಮೇ 2025). ಆದರೆ, ಮಂಜೂರಾತಿ ಆದೇಶಗಳಲ್ಲಿ ನಿಗದಿಪಡಿಸಿದ ಷರತ್ತುಗಳನ್ನು ಪಾಲಿಸಿರಲಿಲ್ಲ ಎಂಬುದು ವಾಸ್ತವಾಂಶವಾಗಿದೆ.

### *6.4.5 ಅಸ್ವೀಕಾರಾರ್ಹ ವೆಚ್ಚ*

ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಇಲಾಖೆ, 30 ಅಕ್ಟೋಬರ್ 2017 ರ ಪತ್ರದ ಮೂಲಕ ಎಸ್ಎಯುಗೆ ಬಿಡುಗಡೆ ಮಾಡಲಾದ ನಿಧಿಯಡಿಯಲ್ಲಿ ಅನುಮತಿಸಲಾಗದ ಸಾಮಗ್ರಿಗಳನ್ನು ಒಳಗೊಂಡ ಪಟ್ಟಿಯನ್ನು ಬಿಡುಗಡೆ ಮಾಡಿತ್ತು. ಇತರ ಸಾಮಗ್ರಿಗಳ ಜೊತೆಗೆ ವಾಹನಗಳ ಖರೀದಿ ಮತ್ತು ನಿರ್ವಹಣೆ, ಹವಾನಿಯಂತ್ರಣಗಳ ಖರೀದಿ ಸೇರಿದಂತೆ ಭರಿಸುವ ವೆಚ್ಚವನ್ನು ಈ ಪಟ್ಟಿಯಲ್ಲಿ ಸೇರಿಸಲಾಗಿತ್ತು.

---

[45] ಎಂ.ಜಿ.ಎನ್.ಆರ್.ಇ.ಜಿ.ಎಸ್ ವೆಚ್ಚದ ಶೇಕಡಾ 0.5

[46] ಸಾಮಾಜಿಕ ಲೆಕ್ಕಪರಿಶೋಧನಾ ನಿಯಮಗಳು ಗ್ರಾಮ ಪಂಚಾಯಿತಿಯಲ್ಲಿ ಪ್ರತಿ ಆರು ತಿಂಗಳಿಗೊಮ್ಮೆ ಒಂದು ಸುತ್ತಿನ ಸಾಮಾಜಿಕ ಲೆಕ್ಕಪರಿಶೋಧನೆಯನ್ನು ಸೂಚಿಸುತ್ತವೆ.

ಅನುಮತಿಸಲಾಗದ ವಸ್ತುಗಳ ಮೇಲೆ ₹10.51 ಲಕ್ಷಗಳನ್ನು[47] ಅಕ್ರಮವಾಗಿ ವೆಚ್ಚ ಮಾಡಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು.

ರಾಜ್ಯ ಸರ್ಕಾರವು (ಮೇ 2025) ಲೆಕ್ಕಪರಿಶೋಧನಾ ಅಭಿಪ್ರಾಯವನ್ನು ಒಪ್ಪಿಕೊಂಡಿತು ಮತ್ತು ಯಾವುದೇ ಸ್ವೀಕಾರಾರ್ಹವಲ್ಲದ ವೆಚ್ಚವನ್ನು ತಪ್ಪಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ತಿಳಿಸಿತು.

### *6.4.6 ಸಾಮಾಜಿಕ ಲೆಕ್ಕಪರಿಶೋಧನೆ ನಡೆಸುವಲ್ಲಿ ಕೊರತೆ*

ಕಾರ್ಯಾಚರಣಾ ಮಾರ್ಗಸೂಚಿಗಳು, 2013ರ ಕಂಡಿಕೆ 13.1.1(ii) ಪ್ರಕಾರ, ಎಲ್ಲಾ ಅಂಶಗಳ ಕಡ್ಡಾಯ ಪರಿಶೀಲನೆಯನ್ನು ಒಳಗೊಂಡಿರುವ ಸಾಮಾಜಿಕ ಲೆಕ್ಕಪರಿಶೋಧನಾ ಪ್ರಕ್ರಿಯೆಯನ್ನು ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಕನಿಷ್ಠ ಆರು ತಿಂಗಳಿಗೊಮ್ಮೆ ನಡೆಸಬೇಕು.

ಲೆಕ್ಕಪರಿಶೋಧನೆಗೆ ಒದಗಿಸಿದ ಮಾಹಿತಿಯ ಪ್ರಕಾರ, 2019–20ರಿಂದ 2023–24ರ ಅವಧಿಯಲ್ಲಿ ಸಾಮಾಜಿಕ ಲೆಕ್ಕಪರಿಶೋಧನೆ ನಡೆಸುವಲ್ಲಿ ಕೊರತೆಯು ಶೇಕಡಾ 1ರಿಂದ 57ರ ವರೆಗೆ ವ್ಯಾಪ್ತಿಯಲ್ಲಿದ್ದಿತು ಎಂಬುದನ್ನು ಗಮನಿಸಲಾಯಿತು (**ಕೋಷ್ಟಕ–6.1**ರಲ್ಲಿ ವಿವರಿಸಲಾಗಿದೆ).

**ಕೋಷ್ಟಕ 6.1: ಸಾಮಾಜಿಕ ಲೆಕ್ಕಪರಿಶೋಧನೆ ನಡೆಸುವಲ್ಲಿ ಕೊರತೆ**

| ವರ್ಷ | ಒಟ್ಟು ಗ್ರಾಮ ಪಂಚಾಯಿತಿಗಳ ಸಂಖ್ಯೆ | ಬಾಕಿ ಇರುವ ಸಾಮಾಜಿಕ ಲೆಕ್ಕಪರಿಶೋಧನೆಯ ಸಂಖ್ಯೆ (ಗುರಿ) | ನಡೆಸಿದ ಸಾಮಾಜಿಕ ಲೆಕ್ಕಪರಿಶೋಧನೆ | ಕೊರತೆ | ಕೊರತೆಯ ಶೇಕಡಾವಾರು |
|---|---|---|---|---|---|
| 2019–20 | 6021 | 12042 | 11932 | 110 | 1 |
| 2020–21 | 6014 | 12028 | 8958 | 3070 | 26 |
| 2021–22 | 5989 | 11978 | 5964 | 6014 | 50 |
| 2022–23 | 5956 | 11912 | 5930 | 5982 | 50 |
| 2023–24 | 5951 | 11902 | 5154 | 6748 | 57 |

**ಮೂಲ: ಎಸ್‌ಎಯು, ಕರ್ನಾಟಕ ಒದಗಿಸಿದ ಮಾಹಿತಿ**

ಕ್ರೋಢೀಕೃತ ಸಾಮಾಜಿಕ ಲೆಕ್ಕಪರಿಶೋಧನಾ ವರದಿಗಳ ವಿಮರ್ಶೆಯು ಕಾರ್ಯಗತಗೊಳಿಸದ ಕಾಮಗಾರಿಗಳಿಗೆ ಮಾಡಿದ ಪಾವತಿಗಳು, ಹೆಚ್ಚುವರಿ ಪಾವತಿಗಳು, ಅನರ್ಹ ವ್ಯಕ್ತಿಗಳಿಗೆ ಮಾಡಿದ ಪಾವತಿಗಳು; ಅನುಮತಿಸಲಾಗದ ಕಾಮಗಾರಿಗಳಿಗೆ ಮಾಡಿದ ಪಾವತಿಗಳು ಮುಂತಾದ ಪ್ರಕರಣಗಳನ್ನು ಸಂಶೋಧನೆಗಳು ಒಳಗೊಂಡಿದ್ದವು ಎಂಬುದನ್ನು ತೋರಿಸಿತು. ಹೀಗೆ, ಸಾಮಾಜಿಕ ಲೆಕ್ಕಪರಿಶೋಧನೆಯು ಯೋಜನೆಯ ಅನುಷ್ಠಾನದಲ್ಲಿ ಅನೇಕ ಅಕ್ರಮಗಳನ್ನು ಎತ್ತಿ ತೋರಿಸುತ್ತಿತ್ತು ಮತ್ತು ಇವುಗಳಲ್ಲಿ ಹೆಚ್ಚಿನವು ನಿರಂತರ ಅಕ್ರಮಗಳಾಗಿದ್ದವು. ಆದ್ದರಿಂದ, ಸಾಮಾಜಿಕ ಲೆಕ್ಕಪರಿಶೋಧನೆ ನಡೆಸುವಲ್ಲಿನ ಕೊರತೆಯು ಈ ನವೀನ ಕಾರ್ಯವಿಧಾನದ ಮೂಲಕ ಯೋಜನೆಯ ಅನುಷ್ಠಾನವನ್ನು ಬಲಪಡಿಸುವ ಅವಕಾಶವನ್ನು ಕಳೆದುಕೊಂಡಂತಾಯಿತು.

ರಾಜ್ಯ ಸರ್ಕಾರ ಮತ್ತು ಕರ್ನಾಟಕದ ಎಸ್‌ಎಯು ನಿರ್ದೇಶಕರು ವಾಸ್ತವಾಂಶಗಳನ್ನು ಒಪ್ಪಿಕೊಂಡರು ಮತ್ತು (ಅಕ್ಟೋಬರ್ 2024 ಮತ್ತು ಮೇ 2025) ಹಣವನ್ನು ಬಿಡುಗಡೆ ಮಾಡದಿರುವುದು ಕೊರತೆಗೆ ಪ್ರಮುಖ ಕಾರಣವೆಂದು ಉಲ್ಲೇಖಿಸಿದರು. ಸಾಮಾಜಿಕ ಲೆಕ್ಕಪರಿಶೋಧನೆಯು ಅಂಚಿನಲ್ಲಿರುವ ಮತ್ತು ಬಡ ಗುಂಪುಗಳಿಗೆ ಅನುಕೂಲ ನೀಡಿದ್ದರಿಂದ, ಸ್ಥಳೀಯ ಆಡಳಿತದಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ಉತ್ತೇಜಿಸಲು ಅದರ ಆರೋಗ್ಯಕರ ಕಾರ್ಯನಿರ್ವಹಣೆ ಅಗತ್ಯವಾಗಿತ್ತು.

[47] ₹0.52 ಲಕ್ಷ (ಏರ್ ಕಂಡೀಷನರ್) + ₹6.01 ಲಕ್ಷ (ವಾಹನ ನಿರ್ವಹಣೆ) + ₹3.98 ಲಕ್ಷ (ನವೀಕರಣ)

### *6.4.7 ದಾಖಲೆಗಳ ಪಡೆಯುವಿಕೆ ಮತ್ತು ಲಭ್ಯತೆ*

ಎಂ.ಜಿ.ಎನ್.ಆರ್.ಇ.ಜಿ.ಎಸ್ ಅಡಿಯಲ್ಲಿ ದಾಖಲೆಗಳು ಮತ್ತು ಚಟುವಟಿಕೆಗಳ ಸ್ವತಂತ್ರ ಪರಿಶೀಲನೆ ಮತ್ತು ಪರಿಶೀಲನೆಗಾಗಿ, ದಾಖಲೆಗಳ ಪಡೆಯುವಿಕೆ ಮತ್ತು ಲಭ್ಯತೆಯ ಜೊತೆಗೆ ಮಾಡಿದ ವಿತರಣೆ ವಿವರಗಳು, ನೇಮಕಗೊಂಡ ಕಾರ್ಮಿಕರ ಸಂಖ್ಯೆ ಮತ್ತು ಬಳಸಿದ ಸಾಮಗ್ರಿಗಳ ವಿವರಗಳು ವಿವಿಧ ಹಂತಗಳಲ್ಲಿ ಕಾರ್ಯಗತಗೊಳಿಸಲಾಗುತ್ತಿರುವ ಕಾಮಗಾರಿಗಳ ಗುಣಮಟ್ಟವನ್ನು ನಿರ್ಣಯಿಸುವ ಪ್ರಾಥಮಿಕ ಹಂತವಾಗಿದೆ. ಕರ್ನಾಟಕ ಸಾಮಾಜಿಕ ಲೆಕ್ಕಪರಿಶೋಧನಾ ನಿಯಮಗಳ ನಿಯಮ VIII ಮತ್ತು 2013ರ ಕಾರ್ಯಾಚರಣಾ ಮಾರ್ಗಸೂಚಿಗಳ ಕಂಡಿಕೆ–13ರ ನಿಬಂಧನೆಗಳು, ಹಿಂದಿನ ಸಾಮಾಜಿಕ ಲೆಕ್ಕಪರಿಶೋಧನೆಗಳ ಮೇಲೆ ಕ್ರಮ ಕೈಗೊಂಡ ವರದಿ ಸೇರಿದಂತೆ ಎಲ್ಲಾ ಅನುಷ್ಠಾನ ಏಜೆನ್ಸಿಗಳ ಅಗತ್ಯ ಮಾಹಿತಿ ಮತ್ತು ದಾಖಲೆಗಳನ್ನು ಅಗತ್ಯ ನಮೂನೆಗಳಲ್ಲಿ ಸರಿಯಾಗಿ ಸಂಗ್ರಹಿಸಿ ಗ್ರಾಮಸಭೆಯ ನಿಗದಿತ ಸಭೆಯ ದಿನಾಂಕಕ್ಕಿಂತ ಕನಿಷ್ಠ ಹದಿನೈದು ದಿನಗಳ ಮುಂಚಿತವಾಗಿ ಸಾಮಾಜಿಕ ಲೆಕ್ಕಪರಿಶೋಧನೆಯನ್ನು ನಡೆಸಲು ಅನುಕೂಲವಾಗುವಂತೆ ಛಾಯಾಚಿತ್ರ ಪ್ರತಿಗಳೊಂದಿಗೆ ಎಸ್ಎಯುಗೆ ಒದಗಿಸಬೇಕು ಎಂದು ಷರತ್ತು ವಿಧಿಸುತ್ತದೆ.

ಹೆಚ್ಚಿನ ಸಂಖ್ಯೆಯ ಪ್ರಕರಣಗಳಲ್ಲಿ ಸಾಮಾಜಿಕ ಲೆಕ್ಕಪರಿಶೋಧನೆಗೆ ದಾಖಲೆಗಳನ್ನು ಹಾಜರುಪಡಿಸದಿರುವುದನ್ನು ಮಾಹಿತಿಯ ಪರಿಶೀಲನೆಯು ತೋರಿಸಿತು. 2019–20ರಿಂದ 2023–24ರ ಅವಧಿಯಲ್ಲಿ ಪರಿಶೀಲಿಸಬೇಕಾದ ₹17,064.53 ಕೋಟಿಗಳಲ್ಲಿ, ದಾಖಲೆಗಳ ಕೊರತೆಯಿಂದಾಗಿ ಒಟ್ಟು ₹8,264.39 ಕೋಟಿ (ಶೇಕಡಾ 48) ವೆಚ್ಚವನ್ನು ಎಸ್ಎಯು ಪರಿಶೀಲಿಸಲಿಲ್ಲ (ವಿವರಗಳನ್ನು **ಅನುಬಂಧ–6.6**ರಲ್ಲಿ ನೀಡಲಾಗಿದೆ).

ಸಾಮಾಜಿಕ ಲೆಕ್ಕಪರಿಶೋಧನೆಗೆ ಇಷ್ಟು ದೊಡ್ಡ ಪ್ರಮಾಣದಲ್ಲಿ (ಶೇಕಡಾ 48) ದಾಖಲೆಗಳನ್ನು ಹಾಜರುಪಡಿಸದಿರುವುದು ನಿಗದಿಪಡಿಸಿದ ನಿಬಂಧನೆಗಳನ್ನು ಅನುಸರಿಸದಿರುವುದನ್ನು ಸೂಚಿಸುತ್ತದೆ ಮತ್ತು ಪರಿಶೀಲನಾ ಕಾರ್ಯವಿಧಾನಕ್ಕೆ ಅಡ್ಡಿಯಾಗಿದೆ. ತತ್ಪರಿಣಾಮವಾಗಿ, ಯೋಜನೆಯ ಸಮರ್ಪಕ ಅನುಷ್ಠಾನದಲ್ಲಿ ಅನುಸರಣೆಯ ವ್ಯಾಪ್ತಿಯ ಬಗ್ಗೆ ಸಮಂಜಸವಾದ ಭರವಸೆಯನ್ನು ಪಡೆಯಲು ಸಾಧ್ಯವಾಗಲಿಲ್ಲ.

ಸಾಮಾಜಿಕ ಲೆಕ್ಕಪರಿಶೋಧನೆಗೆ ತಪ್ಪದೆ ದಾಖಲೆಗಳನ್ನು ಒದಗಿಸಲು ಎಲ್ಲಾ ಕಾರ್ಯಕ್ರಮ ಅಧಿಕಾರಿಗಳಿಗೆ ಅಗತ್ಯ ನಿರ್ದೇಶನಗಳನ್ನು ನೀಡಲಾಗುವುದು ಮತ್ತು ಅದರ ಅನುಸರಣೆಯನ್ನು ನಿಯಮಿತವಾಗಿ ಮೇಲ್ವಿಚಾರಣೆ ಮಾಡಲಾಗುವುದು ಎಂದು ರಾಜ್ಯ ಸರ್ಕಾರ ತಿಳಿಸಿತು (ಮೇ 2025).

### *6.4.8 ಸಾಮಾಜಿಕ ಲೆಕ್ಕಪರಿಶೋಧನೆಯ ಅನುಸರಣೆ*

ಸೂಚಿಸಿದ ಅವಲೋಕನಗಳ ಮೇಲೆ ಕಾಲಮಿತಿಯ ಅನುಸರಣಾ ಕ್ರಮ ಇಲ್ಲದಿದ್ದರೆ ಸಾಮಾಜಿಕ ಲೆಕ್ಕಪರಿಶೋಧನೆಯು ಪೂರ್ಣಗೊಳ್ಳುವುದಿಲ್ಲ. ಸಾಮಾಜಿಕ ಲೆಕ್ಕಪರಿಶೋಧನೆಯ ಅವಲೋಕನಗಳ ಮೇಲೆ ಅನುಸರಣಾ ಕ್ರಮ ತೆಗೆದುಕೊಳ್ಳಲು ರಾಜ್ಯ ಸರ್ಕಾರವು ಜವಾಬ್ದಾರವಾಗಿರಬೇಕು ಎಂದು ಕಾರ್ಯಾಚರಣಾ ಮಾರ್ಗಸೂಚಿಗಳು, 2013ರ ಕಂಡಿಕೆ–13.4.4 ಕಡ್ಡಾಯಗೊಳಿಸುತ್ತದೆ. ಸಾಮಾಜಿಕ ಲೆಕ್ಕಪರಿಶೋಧನೆ ನಡೆಸಿದ ಆರು ತಿಂಗಳೊಳಗೆ ವ್ಯವಸ್ಥಿತ ಅನುಸರಣಾ ಕ್ರಮ, ದುರುಪಯೋಗಪಡಿಸಿಕೊಂಡ ಮೊತ್ತದ ವಸೂಲಾತಿ ಮತ್ತು ಅಕ್ರಮಗಳ ಬಗ್ಗೆ ಶಿಸ್ತು/ಕ್ರಿಮಿನಲ್ ಕ್ರಮವನ್ನು ಪೂರ್ಣಗೊಳಿಸಬೇಕು ಎಂದು ಎಂಜಿಎನ್ಆರ ಇಜಿಎ ಅನುಸೂಚಿ–1ರ ಕಂಡಿಕೆ–25(ಸಿ)(ix) ಕಡ್ಡಾಯಗೊಳಿಸುತ್ತದೆ. ಈ ನಿಟ್ಟಿನಲ್ಲಿ, ಸಾಮಾಜಿಕ ಲೆಕ್ಕಪರಿಶೋಧನಾ ಅವಲೋಕನಗಳಿಗೆ ಸಂಬಂಧಿಸಿದಂತೆ ಮೊತ್ತವನ್ನು ವಸೂಲಿ ಮಾಡಲು ರಾಜ್ಯ ಸರ್ಕಾರವು ಮಾರ್ಗಸೂಚಿಗಳನ್ನು ಜಾರಿಗೊಳಿಸಿತು (ಜನವರಿ 2020). ಪಾವತಿಗೆ ಜವಾಬ್ದಾರರಾಗಿರುವ ಅಧಿಕಾರಿಗಳು/ಸಿಬ್ಬಂದಿ ಹಾಗೂ ಹೊರಗುತ್ತಿಗೆ ನೌಕರರು ಮತ್ತು ಚುನಾಯಿತ ಪ್ರತಿನಿಧಿಗಳಿಂದ, ಅವರು ಜವಾಬ್ದಾರರಾಗಿರುವ ಮಟ್ಟಿಗೆ, ಹಣವನ್ನು ವಸೂಲಿ ಮಾಡಬಹುದು ಎಂಬುದನ್ನು ಸಹ ಕಡ್ಡಾಯಗೊಳಿಸಲಾಗಿದೆ.

### i) ಸಾಮಾಜಿಕ ಲೆಕ್ಕಪರಿಶೋಧನಾ ಅವಲೋಕನಗಳ ಇತ್ಯರ್ಥದಲ್ಲಿ ಬಾಕಿ ಇರುವುದು

ಎಂಐಎಸ್ ದತ್ತಾಂಶದ ಪ್ರಕಾರ, ಲೆಕ್ಕಪರಿಶೋಧನಾ ಅವಧಿಯಲ್ಲಿ (2019–20ರಿಂದ 2023–24) ಸಾಮಾಜಿಕ ಲೆಕ್ಕಪರಿಶೋಧನಾ ವರದಿಗಳಲ್ಲಿ ₹5,275.88 ಕೋಟಿ ಮೌಲ್ಯದ ಒಟ್ಟು 3,55,393 ಅವಲೋಕನಗಳನ್ನು (**ಅನುಬಂಧ–6.7**ರಲ್ಲಿ ವಿವರಿಸಲಾಗಿದೆ) ಸಲ್ಲಿಸಲಾಗಿದೆ. ಇದರಲ್ಲಿ 79,284 (ಶೇಕಡಾ 22) ಹಣಕಾಸಿನ ದುರುಪಯೋಗಕ್ಕೆ (₹187.38 ಕೋಟಿ) ಮತ್ತು 2,16,108 (ಶೇಕಡಾ 61) ಹಣಕಾಸಿನ ವಿಚಲನಕ್ಕೆ (₹4,449.44 ಕೋಟಿ) ಸಂಬಂಧಿಸಿದ ಪ್ರಕರಣಗಳು ಸೇರಿದ್ದವು.

ರಾಜ್ಯ ಮಟ್ಟದಲ್ಲಿ ಸಾಮಾಜಿಕ ಲೆಕ್ಕಪರಿಶೋಧನಾ ಅವಲೋಕನಗಳ ಇತ್ಯರ್ಥದಲ್ಲಿ ಬಾಕಿ ಇರುವ ಸ್ಥಿತಿಯನ್ನು ಕೆಳಗಿನ **ಕೋಷ್ಟಕ–6.2**ರಲ್ಲಿ ನೀಡಲಾಗಿದೆ:

**ಕೋಷ್ಟಕ 6.2: ರಾಜ್ಯದಲ್ಲಿ ಸಾಮಾಜಿಕ ಲೆಕ್ಕಪರಿಶೋಧನೆಯ ಅವಲೋಕನಗಳು ಬಾಕಿ ಇರುವ ಸ್ಥಿತಿಗತಿ**

**(ಸಂಖ್ಯೆಗಳಲ್ಲಿ)**

| ವರ್ಷ | ವರದಿಯಾದ ಒಟ್ಟು ಪ್ರಕರಣಗಳು | ಅಪ್ ಲೋಡ್ ಮಾಡಲಾದ ಎಟಿಆರ್ | ಬಾಕಿ ಇರುವ ಎಟಿಆರ್ (ಪ್ರಕರಣಗಳು) | | | | ಮುಕ್ತಾಯ ಗೊಳಿಸಿದ ಪ್ರಕರಣಗಳು | ಎಸ್‌ಆರ್‌ಪಿಯಲ್ಲಿ ಬಾಕಿ ಇರುವ ಪ್ರಕರಣಗಳು |
|---|---|---|---|---|---|---|---|---|
| | | | ಕಾರ್ಯಕ್ರಮ ಅಧಿಕಾರಿ | ಡಿಪಿಸಿ | ಆಯುಕ್ತರು | ಒಟ್ಟು (%) | | |
| 2019–20 | 53099 | 23808 | 29268 | 22 | 1 | 29291(**55**) | 7315 | 16493 |
| 2020–21 | 36599 | 13731 | 22861 | 6 | 1 | 22868(**62**) | 4499 | 9232 |
| 2021–22 | 90087 | 24035 | 66048 | 3 | 1 | 66052(**73**) | 6271 | 17764 |
| 2022–23 | 64573 | 14868 | 49698 | 4 | 3 | 49705(**77**) | 5047 | 9821 |
| 2023–24 | 111035 | 15007 | 96018 | 7 | 3 | 96028(**86**) | 7790 | 7217 |
| **Total** | **355393** | **91449** | **263893** | **42** | **9** | **263944(74)** | **30922** | **60527** |

**ಮೂಲ: ಎಂಐಎಸ್ ವರದಿಗಳು 9.3.1 ಮತ್ತು 9.3.2 ದಿನಾಂಕ 04.11.2024 ಡಿಪಿಸಿ – ಜಿಲ್ಲಾ ಕಾರ್ಯಕ್ರಮ ಸಂಯೋಜಕ**

ಈ ಕೆಳಗಿನ ಅಂಶಗಳನ್ನು ಗಮನಿಸಲಾಯಿತು

ಅ) 3,55,393ರಲ್ಲಿ 91,449 ಅವಲೋಕನಗಳಿಗೆ ಮಾತ್ರ ಕ್ರಮ ಕೈಗೊಂಡ ವರದಿಗಳನ್ನು (ಎಟಿಆರ್) ಅಪ್ ಲೋಡ್ ಮಾಡಲಾಗಿದೆ ಮತ್ತು 2,63,944 (ಶೇಕಡಾ 74) ಪ್ರಕರಣಗಳು ಸರಿಪಡಿಸುವ ಕ್ರಮಕ್ಕಾಗಿ ಬಾಕಿ ಉಳಿದಿದ್ದವು. ವರ್ಷವಾರು ಬಾಕಿ ಪ್ರಕರಣಗಳು ಶೇಕಡಾ 55ರಿಂದ (2019–20) 86ರ (2023–24) ವ್ಯಾಪ್ತಿಯಲ್ಲಿದ್ದಿತು.

ಆ) ಕ್ರಮ ಕೈಗೊಂಡ ವರದಿಗಳನ್ನು ಅಪ್ ಲೋಡ್ ಮಾಡಿದ 91,449 ಅವಲೋಕನಗಳಲ್ಲಿ, ಸಾಮಾಜಿಕ ಲೆಕ್ಕಪರಿಶೋಧನಾ ಸಂಪನ್ಮೂಲ ವ್ಯಕ್ತಿಗಳು (ಎಸ್‌ಆರ್‌ಪಿಗಳು) 30,922 ಪ್ರಕರಣಗಳನ್ನು ಮುಕ್ತಾಯಗೊಳಿಸಿದ್ದರು ಮತ್ತು ಉಳಿದ 60,527 ಪ್ರಕರಣಗಳು (ಶೇಕಡಾ 66) ಅಂತಿಮ ಇತ್ಯರ್ಥಕ್ಕಾಗಿ ಎಸ್‌ಆರ್‌ಪಿಗಳಲ್ಲಿ ಬಾಕಿ ಉಳಿದಿದ್ದವು. ಈ ಬಾಕಿಯಿರುವ ಪ್ರಕರಣಗಳು ಒಂದರಿಂದ ಐದು ವರ್ಷಗಳ ವ್ಯಾಪ್ತಿಯಲ್ಲಿದ್ದಿತು.

ಇ) ಎಸ್‌ಆರ್‌ಪಿಗಳು ಪ್ರಕರಣಗಳನ್ನು ಇತ್ಯರ್ಥಪಡಿಸದ ಪರಿಣಾಮವಾಗಿ, ಒಟ್ಟು ಬಾಕಿ ಇರುವ ಪ್ರಕರಣಗಳ ಸಂಖ್ಯೆ 3,24,471 ಆಗಿತ್ತು, ಅಂದರೆ 2019–20ರಿಂದ 2023–24ರ ಅವಧಿಯಲ್ಲಿ ಎತ್ತಿದ 3,55,393 ಅವಲೋಕನಗಳಲ್ಲಿ ಶೇಕಡಾ 91ರಷ್ಟು ಇನ್ನೂ ಬಾಕಿ ಉಳಿದಿದ್ದವು (ಅಕ್ಟೋಬರ್ 2024).

ಈ) ತಾಲ್ಲೂಕು ಮಟ್ಟದ ತಾತ್ಕಾಲಿಕ ಸಮಿತಿಯಲ್ಲಿ ಪ್ರಕರಣಗಳ ಬಗ್ಗೆ ನಿರ್ಧಾರ ಬಂದ ನಂತರ, ಪ್ರಕರಣಗಳನ್ನು ಇತ್ಯರ್ಥಪಡಿಸಲು/ಮುಕ್ತಾಯಗೊಳಿಸಲು ಗ್ರಾಮಸಭೆಯು ಅಂತಿಮ ಪ್ರಾಧಿಕಾರವಾಗಿತ್ತು. ಆದರೆ, ಗ್ರಾಮಸಭೆಯಲ್ಲಿ ಇತ್ಯರ್ಥಗೊಂಡ/ಮುಕ್ತಾಯಗೊಂಡ ಪ್ರಕರಣಗಳ ಸಂಖ್ಯೆ ಮತ್ತು ಅದಕ್ಕನುಗುಣವಾದ ಹಣದ ಮೌಲ್ಯದ ಬಗ್ಗೆ ಸಾರ್ವಜನಿಕ ಡೊಮೇನ್ ನಲ್ಲಿ (ಎಂಐಎಸ್) ಯಾವುದೇ ವರದಿ ಅಥವಾ ಇಲಾಖೆಯೊಂದಿಗೆ ಯಾವುದೇ ವಿಶ್ವಾಸಾರ್ಹ ದತ್ತಾಂಶ ಇರಲಿಲ್ಲ.

ಹೀಗೆ, ಲೆಕ್ಕಪರಿಶೋಧನಾ ಅವಲೋಕನಗಳ ಇತ್ಯರ್ಥದಲ್ಲಿ ಬಾಕಿ ಇರುವುದು ಮತ್ತು ಕೈಗೊಂಡ ಕ್ರಮದ ಲೆಕ್ಕಪರಿಶೋಧನೆಯ ಮೇಲ್ವಿಚಾರಣೆಯ ಕೊರತೆಯು ಸಾಮಾಜಿಕ ಲೆಕ್ಕಪರಿಶೋಧನಾ ಉದ್ದೇಶಗಳಿಗೆ ಹಾನಿಕಾರಕವಾಗಿದೆ.

### ii) ದುರುಪಯೋಗಪಡಿಸಿಕೊಂಡ ಮೊತ್ತದ ವಸೂಲಿ

ಪ್ರತಿಯೊಬ್ಬ ಜಿಲ್ಲಾ ಕಾರ್ಯಕ್ರಮ ಸಂಯೋಜಕರು ಅಥವಾ ಅವರ ಪರವಾಗಿ ಯಾವುದೇ ಅಧಿಕಾರಿಯು ದುರುಪಯೋಗ ಅಥವಾ ಅನುಚಿತವಾಗಿ ಬಳಸಿಕೊಂಡ ಹಣವನ್ನು ವಸೂಲಿ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ಸಾಮಾಜಿಕ ಲೆಕ್ಕಪರಿಶೋಧನಾ ನಿಯಮಗಳ ನಿಯಮ VIII(3)(ಸಿ) ಷರತ್ತು ವಿಧಿಸುತ್ತದೆ.

ಆದರೆ, 2019–20ರಿಂದ 2023–24ರ ಅವಧಿಯಲ್ಲಿ ಸಾಮಾಜಿಕ ಲೆಕ್ಕಪರಿಶೋಧನೆಯಲ್ಲಿ ಸೂಚಿಸಲಾದ ₹187.38 ಕೋಟಿ (79,284 ಪ್ರಕರಣಗಳು) ದುರುಪಯೋಗಪಡಿಸಿಕೊಂಡ ಮೊತ್ತದಲ್ಲಿ, ₹75.30 ಕೋಟಿ (ಶೇಕಡಾ 40) ಮೌಲ್ಯದ 27,115 ಪ್ರಕರಣಗಳಿಗೆ ಸಂಬಂಧಿಸಿದಂತೆ ಕ್ರಮ ಕೈಗೊಂಡ ವರದಿಗಳು ಬಾಕಿ ಉಳಿದಿದ್ದವು (ನವೆಂಬರ್ 2024) ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. (**ಕೋಷ್ಟಕ–6.3**). ಕ್ರಮ ಕೈಗೊಂಡ ವರದಿಗಳನ್ನು ಒದಗಿಸಿದ ₹112.08 ಕೋಟಿ ಮೌಲ್ಯದ ದುರುಪಯೋಗ ಪ್ರಕರಣಗಳಿಗೆ ಸಂಬಂಧಿಸಿದಂತೆ, ₹90.14 ಕೋಟಿ (ಶೇಕಡಾ 80) ಮೊತ್ತವನ್ನು ಯಾವುದೇ ವಸೂಲಾತಿಯಿಲ್ಲದೆ ಇತ್ಯರ್ಥಪಡಿಸಲಾಗಿತ್ತು, ಅಂದರೆ ಅಪ್ ಲೋಡ್ ಮಾಡಿದ ಕ್ರಮ ಕೈಗೊಂಡ ವರದಿಯ ಪ್ರಕಾರ ಮೊತ್ತವನ್ನು ವಸೂಲು ಮಾಡಲಾಗುವುದಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದು ಸಾಮಾಜಿಕ ಲೆಕ್ಕಪರಿಶೋಧನಾ ಪ್ರಕ್ರಿಯೆಯನ್ನು ದುರ್ಬಲಗೊಳಿಸುವುದರಿಂದ ಕಳವಳದ ವಿಷಯವಾಗಿತ್ತು.

**ಕೋಷ್ಟಕ–6.3: ರಾಜ್ಯ ಮಟ್ಟದಲ್ಲಿ ಹಣಕಾಸು ದುರುಪಯೋಗ ವಸೂಲಾತಿ ವರದಿಯ ವಿವರಗಳು**

**(₹ ಕೋಟಿಯಲ್ಲಿ)**

| ವರ್ಷ | ಎಸ್ ಎಯು ವರದಿ ಮಾಡಿದ ದುರುಪಯೋಗದ ಪ್ರಕರಣಗಳು | | ಅಪ್ ಲೋಡ್ ಮಾಡಿದ ಎಟಿಆರ್ ಗಳು (ನಿರ್ಧರಿಸಿದ ಪ್ರಕರಣಗಳು) | | ಎಟಿಆರ್ ಬಾಕಿ ಇರುವ ಪ್ರಕರಣಗಳ ಮೊತ್ತ (%) | ನಿರ್ಧರಿಸಿದ ಪ್ರಕರಣಗಳಲ್ಲಿ, ವಸೂಲಿ ಮಾಡಬೇಕಾದ ಮೊತ್ತ | ವಸೂಲಿ ಮಾಡದ ಮೊತ್ತ ಅಂದರೆ ವಸೂಲಾತಿ ಇಲ್ಲದೆ ಇತ್ಯರ್ಥಗೊಂಡ ಪ್ರಕರಣಗಳು (%) | ವಸೂಲಿ ಮಾಡಿದ ಮೊತ್ತ |
|---|---|---|---|---|---|---|---|---|
| | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | | | | |
| 2019–20 | 14,710 | 60.58 | 12,954 | 49.17 | 11.41 (**19**) | 7.90 | 41.26 (**84**) | 7.43 |
| 2020–21 | 7,915 | 32.87 | 6,916 | 27.40 | 5.47 (**17**) | 3.85 | 23.54 (**86**) | 3.72 |
| 2021–22 | 16,747 | 23.28 | 14,388 | 16.19 | 7.09 (**30**) | 4.34 | 11.85 (**73**) | 4.12 |
| 2022–23 | 12,306 | 17.53 | 9,707 | 11.42 | 6.11 (**35**) | 2.60 | 8.82 (**77**) | 2.55 |
| 2023–24 | 27,606 | 53.13 | 8,204 | 7.90 | 45.22 (**85**) | 3.24 | 4.66 (**59**) | 2.91 |
| **ಒಟ್ಟು** | **79,284** | **187.38** | **52,169** | **112.08** | **75.30 (40)** | **21.94** | **90.14 (80)** | **20.73** |

**ಮೂಲ: ಎಂಐಎಸ್ ದತ್ತಾಂಶ (ಆರ್9.2.6– ಹಣಕಾಸು ದುರುಪಯೋಗ ವಸೂಲಾತಿ ವರದಿ) ದಿನಾಂಕ 04.11.2024**

ಎಂಐಎಸ್ ದತ್ತಾಂಶದ ಪ್ರಕಾರ ವಸೂಲಿ ಮಾಡಬಹುದಾದ ₹21.94 ಕೋಟಿಗಳಲ್ಲಿ, ₹20.73 ಕೋಟಿ ಮೊತ್ತವನ್ನು ವಸೂಲಿ ಮಾಡಲಾಗಿದೆ ಎಂದು ತೋರಿಸಲಾಗಿದೆ (ನವೆಂಬರ್ 2024). ಹೀಗೆ, ಶೇಕಡಾವಾರು ವಸೂಲಾತಿ ಶೇಕಡಾ 94 ಎಂದು ಹೇಳಲಾಗಿದ್ದು, ಇದು ತಪ್ಪಾಗಿತ್ತು ಮತ್ತು ದಾರಿತಪ್ಪಿಸುವಂತಿದೆ, ಏಕೆಂದರೆ ಗಮನಾರ್ಹ ಸಂಖ್ಯೆಯ ಪ್ರಕರಣಗಳನ್ನು ವಸೂಲಿ ಮಾಡದೆ ಮುಕ್ತಾಯಗೊಳಿಸಲಾಗಿತ್ತು ಮತ್ತು ಅದಕ್ಕೆ ಸಂಬಂಧಿಸಿದ ವಿವರಗಳು ಲಭ್ಯವಿರಲಿಲ್ಲ.

ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ, ವಸೂಲಿ ಮಾಡಿದ ಮೊತ್ತದ ಪಾವತಿಯನ್ನು ವೀಕ್ಷಿಸುವ ಯಾವುದೇ ವ್ಯವಸ್ಥೆ ಅಸ್ತಿತ್ವದಲ್ಲಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು ಮತ್ತು ಕೆಳಗೆ ವಿವರಿಸಿದಂತೆ, ವಸೂಲಾತಿಯನ್ನು ಖಚಿತಪಡಿಸಿಕೊಳ್ಳದೇ ಅವಲೋಕನಗಳನ್ನು ಮುಕ್ತಾಯಗೊಳಿಸಿದ ಪ್ರಕರಣಗಳಿದ್ದವು:

- ಯಲಬುರ್ಗಾ– ಎಂಐಎಸ್ ನಲ್ಲಿ ₹3.82 ಲಕ್ಷಗಳನ್ನು ವಸೂಲಿ ಮಾಡಲಾಗಿದೆ ಎಂದು ತೋರಿಸಲಾಗಿದ್ದರೆ ವಾಸ್ತವಿಕವಾಗಿ ವಸೂಲು ಮಾಡಿದ್ದು ಕೇವಲ ₹0.06 ಲಕ್ಷವಾಗಿತ್ತು. ಯಲಬುರ್ಗಾ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಹಕ ಅಧಿಕಾರಿಯವರು ಲೆಕ್ಕಪರಿಶೋಧನಾ ಅವಲೋಕನವನ್ನು ಒಪ್ಪಿಕೊಂಡರು ಮತ್ತು ಇದನ್ನು ಕಣ್ತಪ್ಪಿನಿಂದ ಮಾಡಲಾಗಿದೆ ಎಂದು ತಿಳಿಸಿದರು (ಆಗಸ್ಟ್ 2024).
- ಮಂಡ್ಯ – ಹಣಕಾಸಿನ ದುರುಪಯೋಗಕ್ಕೆ ಸಂಬಂಧಿಸಿದ 10 ಅವಲೋಕನಗಳನ್ನು ತಾತ್ಕಾಲಿಕ ಸಮಿತಿ ಮತ್ತು ಎಸ್‌ಆರ್ ಗಳಲ್ಲಿ ಮುಕ್ತಾಯಗೊಳಿಸಿದ್ದರೂ ಸಹ ಸಂಬಂಧಿತ ₹98,788 ಗಳನ್ನು ಸಂಬಂಧಪಟ್ಟ ಬ್ಯಾಂಕ್ ಖಾತೆ/ಖಜಾನೆಗೆ ಜಮೆ ಮಾಡಿರಲಿಲ್ಲ (**ಅನುಬಂಧ–6.8**ರಲ್ಲಿ ವಿವರಿಸಲಾಗಿದೆ).

  ಮಂಡ್ಯ ಜಿಲ್ಲೆಯಲ್ಲಿ ಸಾಮಾಜಿಕ ಲೆಕ್ಕಪರಿಶೋಧನಾ ಅವಲೋಕನೆಗಳನ್ನು ಮುಕ್ತಾಯಗೊಳಿಸಲು ಚಲನ್ ಗಳನ್ನು ತಿದ್ದಿರುವ ಮತ್ತು ಕೆಳಗೆ ವಿವರಿಸಿದಂತೆ, ಎರಡು ವಿಭಿನ್ನ ಅವಲೋಕನಗಳನ್ನು ಮುಕ್ತಾಯಗೊಳಿಸಲು ಒಂದೇ ಚಲನ್ ಅನ್ನು ಬಳಸಿದ ಪ್ರಕರಣವಿದ್ದಿತು:

**ನಿದರ್ಶನಗಳು**

1. ಬೇವಿನಹಳ್ಳಿ ಗ್ರಾಮ ಪಂಚಾಯಿತಿ, ಮಂಡ್ಯ ತಾಲ್ಲೂಕು – ಪ್ರಕರಣ ಸಂಖ್ಯೆ. KN–ISSUE–63391. ಅನುಸರಣಾ ವರದಿಯೊಂದಿಗೆ ಲಗತ್ತಿಸಲಾದ ಚಲನ್ ಸಂಖ್ಯೆ CR0620085300025777 ₹11,214 ಮೊತ್ತವನ್ನು ತೋರಿಸಿತ್ತು ಮತ್ತು ತಾತ್ಕಾಲಿಕ ಸಮಿತಿಯು ಈ ಪ್ರಕರಣವನ್ನು ಮುಕ್ತಾಯಗೊಳಿಸಲು ಶಿಫಾರಸು ಮಾಡಿತು (07 ಡಿಸೆಂಬರ್ 2021). ಖಜಾನೆ–2 ಪೋರ್ಟಲ್ ನಲ್ಲಿ ಚಲನ್ ಪರಿಶೀಲನೆಯು ನಿಜವಾದ ಚಲನ್ ಮೊತ್ತವು ಕೇವಲ ₹214 ಎಂದು ತೋರಿಸಿತು. ಹೀಗೆ, ಚಲನ್ ಅನ್ನು ತಿದ್ದುವ ಮೂಲಕ ತಪ್ಪಾದ ಮೊತ್ತವನ್ನು ವಸೂಲಿ ಮಾಡಲಾಗಿದೆ ಎಂದು ತೋರಿಸಲಾಗಿತ್ತು.
2. ಮಂಡ್ಯ ಗ್ರಾಮಾಂತರ ಗ್ರಾಮ ಪಂಚಾಯಿತಿ, ಮಂಡ್ಯ ತಾಲ್ಲೂಕು–₹43,517ರ ಚಲನ್ ಸಂಖ್ಯೆ: MG1022085300001115 ಎರಡು ವಿಭಿನ್ನ ಅವಲೋಕನಗಳ ವಿರುದ್ಧ ವಸೂಲಿ ಮಾಡಿದ ಮೊತ್ತವೆಂದು ತೋರಿಸಲಾಗಿದತ್ತು (KN–ISSUE–97001 ಮತ್ತು KN–ISSUE–236360). ತಾತ್ಕಾಲಿಕ ಸಮಿತಿಯು ತನ್ನ ಸಭೆಗಳಲ್ಲಿ (ಅನುಕ್ರಮವಾಗಿ 22 ಜೂನ್ 2023 ಮತ್ತು 06 ಅಕ್ಟೋಬರ್ 2023) ಇದನ್ನು ಒಪ್ಪಿಕೊಂಡಿತು ಮತ್ತು ₹43,517 ಮೊತ್ತವನ್ನು ಒಮ್ಮೆ ಮಾತ್ರ ರವಾನಿಸಲಾಗಿದ್ದರೂ ಎರಡೂ ಅವಲೋಕನಗಳನ್ನು ಮುಕ್ತಾಯಗೊಳಿಸಲಾಯಿತು.

- ಮದ್ದೂರು – 11 ಪ್ರಕರಣಗಳಲ್ಲಿ ವಸೂಲಿಗಾಗಿ ₹49,891 ಗಳ ಡಿಡಿಗಳನ್ನು ಸಲ್ಲಿಸಲಾಗಿತ್ತು. ಈ ಡಿಡಿಗಳನ್ನು ಮರುಮೌಲ್ಯೀಕರಣಕ್ಕಾಗಿ ಬ್ಯಾಂಕ್ (ಸೆಪ್ಟೆಂಬರ್ 2023ರಿಂದ ಫೆಬ್ರವರಿ 2024ರವರೆಗೆ) ಹಿಂತಿರುಗಿಸಿತು, ಆದರೆ ಇಲ್ಲಿಯವರೆಗೆ (ಸೆಪ್ಟೆಂಬರ್ 2024) ಮರುಮೌಲ್ಯೀಕರಿಸಲಾಗಿಲ್ಲ. ವಿವರಗಳನ್ನು **ಅನುಬಂಧ–6.9**ರಲ್ಲಿ ನೀಡಲಾಗಿದೆ.
- ತಿಪಟೂರು–ಜಮಾ ಮಾಡಲಾಗಿದೆ ಎಂದೆ ಹೇಳಲಾದ ₹85,564 ಗಳನ್ನು ಬ್ಯಾಂಕ್ ಖಾತೆಯಲ್ಲಿ ಪತ್ತೆ ಮಾಡಲಾಗಲಿಲ್ಲ.
- ತುರುವೇಕೆರೆ – ಬ್ಯಾಂಕ್ ಖಾತೆಯಲ್ಲಿ ₹32,561ಗಳನ್ನು ಪತ್ತೆ ಮಾಡಲಾಗಲಿಲ್ಲ.

ಹೀಗೆ, ಮೇಲೆ ಗಮನಿಸಿದಂತೆ ಇತ್ಯರ್ಥಪಡಿಸಿದ ದುರುಪಯೋಗದ ಪ್ರಕರಣಗಳಿಗೆ ಸಂಬಂಧಿಸಿದ ದತ್ತಾಂಶಕ್ಕೆ ಸಂಬಂಧಿಸಿದಂತೆ ಯಾವುದೇ ಭರವಸೆಯನ್ನು ಪಡೆಯಲು ಸಾಧ್ಯವಾಗಲಿಲ್ಲ. ಅಲ್ಲದೆ, ಆರ್ಥಿಕ ದುರುಪಯೋಗದ ಪ್ರಕರಣಗಳಲ್ಲಿ ಹೊಣೆಗಾರರಾದಅಧಿಕಾರಿಗಳ ವಿರುದ್ಧ ಕೈಗೊಂಡ ಕ್ರಮದ ವಿವರಗಳನ್ನು ಇಲಾಖೆ ಒದಗಿಸಲಿಲ್ಲ.

### iii) ದುರುಪಯೋಗ ಪ್ರಕರಣಗಳ ವರದಿಯಲ್ಲಿ ಹೊಂದಾಣಿಕೆಯಿಲ್ಲದಿರುವುದು

ಕರ್ನಾಟಕ ಸಾಮಾಜಿಕ ಲೆಕ್ಕಪರಿಶೋಧನಾ ನಿಯಮಗಳ ನಿಯಮ IXರ ಪ್ರಕಾರ, ತಾಲ್ಲೂಕು ಸಾಮಾಜಿಕ ಲೆಕ್ಕಪರಿಶೋಧನಾ ಸಂಪನ್ಮೂಲ ವ್ಯಕ್ತಿಯು ಸಾಮಾಜಿಕ ಲೆಕ್ಕಪರಿಶೋಧನಾ ವರದಿಗಳನ್ನು ಎಂಐಎಸ್ ನಲ್ಲಿ ಇಂದೀಕರಿಸಬೇಕು.

2019–20ರಿಂದ 2022–23ರ ಅವಧಿಗೆ ಹಣಕಾಸಿನ ದುರುಪಯೋಗ ವರ್ಗದಡಿಯಲ್ಲಿ ಎಂಐಎಸ್ ನಲ್ಲಿ (04.11.2024) ಅಪ್ ಲೋಡ್ ಮಾಡಲಾದ ಮೊತ್ತವು ₹134.26 ಕೋಟಿಗಳಾಗಿದ್ದರೆ, ಅದೇ ಅವಧಿಯ ಸಾಮಾಜಿಕ ಲೆಕ್ಕಪರಿಶೋಧನೆಯ ವಾರ್ಷಿಕ ವರದಿಗಳ ಪ್ರಕಾರ ದುರುಪಯೋಗಪಡಿಸಿಕೊಂಡ ಮೊತ್ತವು ₹194.10 ಕೋಟಿಗಳಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಹೀಗೆ, ₹59.84 ಕೋಟಿಯನ್ನು ಕಡಿಮೆ ವರದಿ ಮಾಡಿದ್ದರಿಂದ ಸಾಮಾಜಿಕ ಲೆಕ್ಕಪರಿಶೋಧನಾ ಸಂಪನ್ಮೂಲ ವ್ಯಕ್ತಿಗಳು (ಎಸ್ ಎಆರ್ ಪಿಗಳು) ಎಂಐಎಸ್ ನಲ್ಲಿ ಅಪ್ ಲೋಡ್ ಮಾಡಲಾದ ಅವಲೋಕನಗಳ ನಿಖರತೆಯನ್ನು ಖಚಿತಪಡಿಸಿಕೊಳ್ಳಲಿಲ್ಲ.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ಅಭಿಪ್ರಾಯಗಳನ್ನು ಒಪ್ಪಿಕೊಂಡಿತು (ಮೇ 2025) ಮತ್ತು (i) ಕ್ರಮ ಕೈಗೊಂಡ ವರದಿಗಳನ್ನು ಅಪ್ಲೋಡ್ ಮಾಡಲು ಮತ್ತು ಬಾಕಿ ಇರುವ ಪ್ರಕರಣಗಳನ್ನು ಕಡಿಮೆ ಮಾಡಲು ಅಗತ್ಯ ಕ್ರಮ ಕೈಕೊಳ್ಳಲಾಗುವುದು (ii) ಸಂಬಂಧಪಟ್ಟ ಅಧಿಕಾರಿಗಳಿಂದ ವಸೂಲಾತಿಯಲ್ಲಿನ ವ್ಯತ್ಯಾಸಗಳಿಗೆ ವಿವರಣೆಯನ್ನು ಕೇಳಲಾಗುವುದು ಮತ್ತು (iii) ವರದಿಯಲ್ಲಿನ ಅಸಾಂಗತ್ಯಗಳನ್ನು ಮರುಹೊಂದಾಣಿಕೆ ಮಾಡಲಾಗುವುದು ಎಂದು ತಿಳಿಸಿತು.

### 6.4.9 ಏಕಕಾಲೀನ ಸಾಮಾಜಿಕ ಲೆಕ್ಕಪರಿಶೋಧನೆಯನ್ನು ನಡೆಸದಿರುವುದು

ಕಾಯಿದೆಯ ಅನುಸೂಚಿ–1ರ ಕಂಡಿಕೆ–25(ಬಿ) ಮತ್ತು ಎಎಂಸಿ, 2019–20ರ ಕಂಡಿಕೆ–10.1.12ರಲ್ಲಿ ಪ್ರತಿ ತಿಂಗಳು ಎಲ್ಲಾ ಕೆಲಸಗಳಿಗೆ ಏಕಕಾಲಿಕ ಸಾಮಾಜಿಕ ಲೆಕ್ಕಪರಿಶೋಧನೆ ನಡೆಸಬೇಕು ಎಂದು ಷರತ್ತು ವಿಧಿಸಲಾಗಿದೆ. ಈ ಉದ್ದೇಶಕ್ಕಾಗಿ, ಸ್ವಸಹಾಯ ಗುಂಪುಗಳು, ಗ್ರಾಮ ಸಾಮಾಜಿಕ ಲೆಕ್ಕಪರಿಶೋಧಕರು, ಗ್ರಾಮ ಮೇಲ್ವಿಚಾರಣಾ ಸಮಿತಿಗಳು ಮತ್ತು ಇತರ ಗ್ರಾಮ ಮಟ್ಟದ ಸಂಸ್ಥೆಗಳು ವಾರದ ನಿಗದಿತ ದಿನದಂದು ಗ್ರಾಮ ಪಂಚಾಯಿತಿಯಲ್ಲಿ ಮಾಡಿದ ಕೆಲಸಗಳು ಮತ್ತು ಮಾಡಿದ ವೆಚ್ಚಗಳ ಎಲ್ಲಾ ದಾಖಲೆಗಳನ್ನು ಪರಿಶೀಲಿಸುವ ಹಕ್ಕನ್ನು ಹೊಂದಿರುತ್ತವೆ. ದಾಖಲೆಗಳ ಪ್ರತಿಗಳನ್ನು ಅಗತ್ಯವಿರುವಲ್ಲಿ ಕಾರ್ಯಕ್ರಮ ಅಧಿಕಾರಿ ಕಡಿಮೆ ವೆಚ್ಚದಲ್ಲಿ ಒದಗಿಸುತ್ತಾರೆ. ಪ್ರತಿ ಗ್ರಾಮಸಭೆಯು ಐದು ಎಂಜಿಎನ್ಆರ್ ಇಜಿಎಸ್ ಕಾರ್ಮಿಕರನ್ನು ಒಳಗೊಂಡ ಗ್ರಾಮ ಮೇಲ್ವಿಚಾರಣಾ ಸಮಿತಿಯನ್ನು (ವಿಎಂಸಿ) ಆಯ್ಕೆ ಮಾಡುತ್ತದೆ.

2019–20ರಿಂದ 2023–24ರ ಅವಧಿಯಲ್ಲಿ ಪರೀಕ್ಷಾ–ತನಿಖೆ ನಡೆಸಿದ ಯಾವುದೇ ಜಿಲ್ಲಾ ಪಂಚಾಯಿತಿಗಳಲ್ಲಿ ವಿಎಂಸಿಯನ್ನು ರಚನೆ ಮಾಡಿರಲಿಲ್ಲ ಅಥವಾ ಏಕಕಾಲೀನ ಸಾಮಾಜಿಕ ಲೆಕ್ಕಪರಿಶೋಧನೆಯನ್ನು ನಡೆಸಿರಲಿಲ್ಲ ಎಂಬುದನ್ನು ದಾಖಲೆಗಳ ಪರಿಶೀಲನೆಯು ತೋರಿಸಿತು.

ಭವಿಷ್ಯದಲ್ಲಿ ಯೋಜನೆಯ ಏಕಕಾಲೀನ ಲೆಕ್ಕಪರಿಶೋಧನೆಯನ್ನು ನಡೆಸಲು ಕ್ರಮ ಕೈಗೊಳ್ಳಲಾಗುವುದು ಎಂದು ರಾಜ್ಯ ಸರ್ಕಾರ ತಿಳಿಸಿತು (ಮೇ 2025).

**ಫಲಾನುಭವಿ ಸಮೀಕ್ಷೆಯ ಫಲಿತಾಂಶಗಳು**: ಸಮೀಕ್ಷೆಯ ಪ್ರಕಾರ, ತಮ್ಮ ಗ್ರಾಮಗಳಲ್ಲಿ ನಡೆಸಿದ ಸಾಮಾಜಿಕ ಲೆಕ್ಕಪರಿಶೋಧನೆಯ ಬಗ್ಗೆ 193 ಫಲಾನುಭವಿಗಳಿಗೆ (48 ಶೇಕಡಾ) ತಿಳಿದಿರಲಿಲ್ಲ. ಕೇವಲ 126 ಫಲಾನುಭವಿಗಳು (ಶೇಕಡಾ 32) ಸಾಮಾಜಿಕ ಲೆಕ್ಕಪರಿಶೋಧನಾ ವರದಿಗಳನ್ನು ಗ್ರಾಮಸಭೆ ಸಭೆಗಳಲ್ಲಿ ಚರ್ಚಿಸಲಾಗಿದೆ ಎಂದು ಹಾಗು ಕೇವಲ 25 ಫಲಾನುಭವಿಗಳು (ಶೇಕಡಾ 6) ಮಾತ್ರ ಸಾಮಾಜಿಕ ಲೆಕ್ಕಪರಿಶೋಧನೆ ಮತ್ತು ಅದರ ವರದಿಗಳಿಂದ ತೃಪ್ತರಾಗಿದ್ದೇವೆ ಎಂದು ತಿಳಿಸಿದರು.

**ಶಿಫಾರಸು–17: ಎಂಜಿಎನ್ಆರ್ ಇಜಿಎಸ್ ಅಡಿಯಲ್ಲಿ ಸಾಮಾಜಿಕ ಲೆಕ್ಕಪರಿಶೋಧನೆಯನ್ನು ಅದರ ಸ್ವಾತಂತ್ರ್ಯವನ್ನು ಖಚಿತಪಡಿಸುವ ಮತ್ತು ಸಾಕಷ್ಟು ಆರ್ಥಿಕ ಮತ್ತು ಮಾನವ ಸಂಪನ್ಮೂಲಗಳನ್ನು ಒದಗಿಸುವ ಮೂಲಕ ಬಲಪಡಿಸಬೇಕು**

## 6.5 ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಮೇಲ್ವಿಚಾರಣಾ ಸಮಿತಿಗಳು (ಡಿಐಎಸ್ಎಚ್ಎಗಳು) ಮತ್ತು ರಾಜ್ಯ ಮಟ್ಟದ ದಿಶಾ ಸಮಿತಿಗಳ ರಚನೆ

ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಜಾಗೃತ ಮತ್ತು ಮೇಲ್ವಿಚಾರಣಾ ಸಮಿತಿಗಳನ್ನು ಡಿಐಎಸ್ಎಚ್ಎಗಳೊಂದಿಗೆ ಬದಲಾಯಿಸುವಂತೆ ಎಲ್ಲಾ ರಾಜ್ಯಗಳಿಗೆ ಗ್ರಾಮೀಣಾಭಿವೃದ್ಧಿ ಸಚಿವಾಲಯ (ಜೂನ್ 2016) ನಿರ್ದೇಶನ ನೀಡಿತು. ವೆಚ್ಚದ ಗುಣಮಟ್ಟವನ್ನು ಖಚಿತಪಡಿಸುವ ಉದ್ದೇಶಗಳನ್ನು ಈಡೇರಿಸಲು, ವಿಶೇಷವಾಗಿ ಭಾರತ ಸರ್ಕಾರದ ವಿವಿಧ ಕಾರ್ಯಕ್ರಮಗಳ ಅಡಿಯಲ್ಲಿ ಖರ್ಚು ಮಾಡುವ ಸಾರ್ವಜನಿಕ ನಿಧಿಯನ್ನು ಉತ್ತಮಗೊಳಿಸುವ ಸಂದರ್ಭದಲ್ಲಿ; ಅಭಿವೃದ್ಧಿ ಸಮನ್ವಯವನ್ನು ಸುಧಾರಿಸುವುದು ಮತ್ತು ನಿಗದಿತ ಕಾರ್ಯವಿಧಾನಗಳಿಗೆ ಅನುಗುಣವಾಗಿ ಕಾರ್ಯಕ್ರಮಗಳ ಅನುಷ್ಠಾನದ ಮೇಲ್ವಿಚಾರಣೆ ಮಾಡುವುದು; ಮತ್ತು ವಿವಿಧ ಕಾರ್ಯಕ್ರಮಗಳ ಸಮನ್ವಯ ಮತ್ತು ಒಮ್ಮುಖವನ್ನು ಉತ್ತೇಜಿಸಲು ಈ ಸಮಿತಿಗಳನ್ನು ರಚಿಸಲಾಗಿತ್ತು. ಈ ಸಮಿತಿಗಳು ಮೇಲ್ವಿಚಾರಣೆ ಮಾಡುವ ಯೋಜನೆಗಳಲ್ಲಿ ಎಂಜಿಎನ್ಆರ್ ಇಜಿಎಸ್ ಒಂದಾಗಿದ್ದಿತು. ಈ ಸಮಿತಿಗಳನ್ನು ರಾಜ್ಯ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ರಚಿಸಬೇಕಾಗಿತ್ತು. ಮಾರ್ಗದರ್ಶಿ ಸೂತ್ರಗಳ ಪ್ರಕಾರ (ಜೂನ್ 2018) ರಾಜ್ಯ ಮಟ್ಟದ ಸಮಿತಿಯು ಪ್ರತಿ ಆರು ತಿಂಗಳಿಗೊಮ್ಮೆ ಸಭೆ ಸೇರಬೇಕು ಮತ್ತು ಜಿಲ್ಲಾ ಮಟ್ಟದ ಸಮಿತಿಗಳು ಪ್ರತಿ ತ್ರೈಮಾಸಿಕಕ್ಕೊಮ್ಮೆ ಸಭೆ ಸೇರಬೇಕು.

ಒದಗಿಸಿದ ಮಾಹಿತಿಯ ಪ್ರಕಾರ, ರಾಜ್ಯ ಮಟ್ಟದ ಸಮಿತಿಯನ್ನು ಜನವರಿ 2020ರಲ್ಲಿ ರಚಿಸಲಾಯಿತು ಮತ್ತು ಲೆಕ್ಕಪರಿಶೋಧನಾ ಅವಧಿಯಲ್ಲಿ (2019–20ರಿಂದ 2023–24) 10 ಸಭೆಗಳ ಗುರಿಗೆ ಪ್ರತಿಯಾಗಿ ಅದು ಕೇವಲ ಒಂದು ಸಭೆಯನ್ನು (05 ಆಗಸ್ಟ್ 2022) ಮಾತ್ರ ನಡೆಸಿತ್ತು. ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ ದಿಶಾ ಸಮಿತಿ ಸಭೆಗಳನ್ನು ನಡೆಸುವಲ್ಲಿ ಶೇಕಡಾ 20ರಿಂದ 70ರವರೆಗಿನ ವ್ಯಾಪ್ತಿಯ ಕೊರತೆ ಇದ್ದಿತು. **ಅನುಬಂಧ–6.10**ರಲ್ಲಿ ವರ್ಷವಾರು ವಿವರಗಳನ್ನು ನೀಡಲಾಗಿದೆ.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ಅಭಿಪ್ರಾಯವನ್ನು ಒಪ್ಪಿಕೊಂಡಿತು (ಮೇ 2025) ಮತ್ತು ಸೂಚಿಸಿದಂತೆ ದಿಶಾ ಸಭೆಗಳನ್ನು ನಡೆಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ತಿಳಿಸಿತು.

## 6.6 ಕುಂದುಕೊರತೆ ನಿವಾರಣಾ ಕಾರ್ಯವಿಧಾನ

ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಯ ಯಾವುದೇ ದೂರನ್ನು ಎದುರಿಸಲು ರಾಜ್ಯ ಸರ್ಕಾರವು ಪ್ರತಿ ಹಂತದಲ್ಲೂ ಸೂಕ್ತ ಕುಂದುಕೊರತೆ ಪರಿಹಾರ ಕಾರ್ಯವಿಧಾನಗಳನ್ನು ನಿರ್ಧರಿಸಬೇಕು ಎಂದು ಎಂಜಿಎನ್ಆರ್ ಇಜಿಎಸ್ ಸೆಕ್ಷನ್ 19ರ ಅನುಸಾರವಾಗಿ ಕಾರ್ಯಾಚರಣಾ ಮಾರ್ಗಸೂಚಿ 2013ರ ಕಂಡಿಕೆ 13.13.1 ಷರತ್ತು ವಿಧಿಸಿದೆ. ಗ್ರಾಮ ಮಟ್ಟದಲ್ಲಿ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿ, ತಾಲ್ಲೂಕು ಮಟ್ಟದಲ್ಲಿ ಕಾರ್ಯಕ್ರಮ ಅಧಿಕಾರಿ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕಾರ್ಯಕ್ರಮ ಸಂಯೋಜಕರು ಮತ್ತು ರಾಜ್ಯ ಮಟ್ಟದಲ್ಲಿ ಎಂಜಿಎನ್ಆರ್ ಇಜಿಎಸ್ ಆಯುಕ್ತರು ಕುಂದುಕೊರತೆ ನಿವಾರಣಾ ಅಧಿಕಾರಿಗಳಾಗಿರುತ್ತಾರೆ. ಎಲ್ಲಾ ಕುಂದುಕೊರತೆಗಳನ್ನು ವಿಚಾರಣೆ ನಡೆಸಿ ಏಳು ದಿನಗಳಲ್ಲಿ ಕ್ರಮ ಕೈಗೊಳ್ಳಬೇಕು.

ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು:

1. ರಾಜ್ಯ ಮಟ್ಟದಲ್ಲಿ, ದೂರುದಾರರ ಹೆಸರು ಮತ್ತು ವಿಳಾಸವನ್ನು ಒಳಗೊಂಡಿರುವ ದೂರು ರಿಜಿಸ್ಟರ್ ಅನ್ನು 2021–22ರವರೆಗೆ ನಿರ್ವಹಿಸಿರಲಿಲ್ಲ. 2022ರಲ್ಲಿ ಇ–ಫೈಲ್ ನಿರ್ವಹಣೆಯ ಪರಿಚಯವು ಎಲ್ಲಾ ಸಂಬಂಧಿತ ವಿವರಗಳನ್ನು ಸೇರಿಸಲು ಕಾರಣವಾಯಿತು.

2. 2019–20ರಿಂದ 2023–24ರ ಅವಧಿಯಲ್ಲಿ ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ 1,373 ದೂರುಗಳು ಬಂದಿದ್ದವು. ಈ ಪೈಕಿ 1,285 ದೂರುಗಳನ್ನು ವಿಲೇವಾರಿ ಮಾಡಲಾಗಿತ್ತು ಮತ್ತು 88 ದೂರುಗಳು ಬಾಕಿ ಉಳಿದಿದ್ದವು (ಅಕ್ಟೋಬರ್ 2024). ದೂರು ರಿಜಿಸ್ಟರ್ ಗಳನ್ನು ನಿರ್ವಹಿಸಿರಲಿಲ್ಲ ಮತ್ತು ದೂರು ರಿಜಿಸ್ಟರ್ ಗಳ ಅನುಪಸ್ಥಿತಿಯಲ್ಲಿ, ದೂರುಗಳನ್ನು ದಾಖಲಿಸದಿರುವ ಸಾಧ್ಯತೆಯನ್ನು ತಳ್ಳಿಹಾಕಲು ಸಾಧ್ಯವಿಲ್ಲ.

3. ವಿಲೇವಾರಿಯ ಪ್ರಗತಿಯನ್ನು ಪರಿಶೀಲಿಸಲು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿ ನೇತೃತ್ವದ ಅಗತ್ಯ ಸಮಿತಿಯನ್ನು ಮಂಡ್ಯ ಜಿಲ್ಲೆಯನ್ನು ಹೊರತುಪಡಿಸಿ ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ ರಚಿಸಿರಲಿಲ್ಲ (ಕರ್ನಾಟಕ ಕುಂದುಕೊರತೆ ನಿವಾರಣಾ ನಿಯಮಗಳ ನಿಯಮ 9).

4. ಕರ್ನಾಟಕ ಕುಂದುಕೊರತೆ ಪರಿಹಾರ ನಿಯಮಗಳ ನಿಯಮ 10ರಡಿಯಲ್ಲಿ ಕಡ್ಡಾಯವಾಗಿದ್ದರೂ ಸಹ ಕುಂದುಕೊರತೆ ಪರಿಹಾರದ ಮಾಸಿಕ ವರದಿಗಳನ್ನು ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳು ರಾಜ್ಯ ಸರ್ಕಾರಕ್ಕೆ ಅಥವಾ ರಾಜ್ಯ ಸರ್ಕಾರವು ಸಚಿವಾಲಯಕ್ಕೆ ಒದಗಿಸಿರಲಿಲ್ಲ.

5. ನಿಯಮ 11ರಡಿಯಲ್ಲಿ ನಿಗದಿಪಡಿಸಿರುವಂತೆ ಪರೀಕ್ಷಾ–ತನಿಖೆ ನಡೆಸಿದ ಯಾವುದೇ ಜಿಲ್ಲೆಗಳು ಯಾವುದಾದರೊಂದು ಸ್ಥಳೀಯ ಪತ್ರಿಕೆಗಳಲ್ಲಿ ದೂರುಗಳ ಸ್ಥಿತಿಯ ಬಗ್ಗೆ ಬಹಿರಂಗಪಡಿಸಿರಲಿಲ್ಲ.

6. ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ 15 ದಿನಗಳಲ್ಲಿ ಕುಂದುಕೊರತೆಗಳನ್ನು ಪರಿಹರಿಸದಿದ್ದರೆ ಮುಂದಿನ ಉನ್ನತ ಮಟ್ಟಕ್ಕೆ ದೂರು ನೀಡುವ ವ್ಯವಸ್ಥೆ ಇರಲಿಲ್ಲ.

7. ಫಲಾನುಭವಿ ಸಮೀಕ್ಷೆಯ ಸಮಯದಲ್ಲಿ, 138 ಫಲಾನುಭವಿಗಳು (ಶೇಕಡಾ 35) ತಮ್ಮ ಕುಂದುಕೊರತೆಗಳನ್ನು ಯಾರೊಂದಿಗೆ ಬಗೆಹರಿಸಿಕೊಳ್ಳಬೇಕು ಎಂಬುದರ ಬಗ್ಗೆ ತಮಗೆ ತಿಳಿದಿರಲಿಲ್ಲ ಎಂದು ತಿಳಿಸಿದರು.

ರಾಜ್ಯ ಮಟ್ಟದಲ್ಲಿ ದೂರು ರಿಜಿಸ್ಟರ್ ಅನ್ನು ನಿರ್ವಹಿಸದ ಬಗ್ಗೆ ಲೆಕ್ಕಪರಿಶೋಧನಾ ಅವಲೋಕನವನ್ನು ರಾಜ್ಯ ಸರ್ಕಾರ ಒಪ್ಪಿಕೊಂಡಿತು (ಮೇ 2025). ಆದರೆ, ಉನ್ನತ ಮಟ್ಟದ ಸಮಿತಿಯನ್ನು ರಚಿಸದಿರುವುದು, ಜಿಲ್ಲಾ ಮಟ್ಟದಲ್ಲಿ ದೂರು ರಿಜಿಸ್ಟರ್ ಗಳನ್ನು ನಿರ್ವಹಿಸದಿರುವುದು, ದೂರುಗಳ ಸ್ಥಿತಿಯನ್ನು ಬಹಿರಂಗಪಡಿಸದಿರುವುದು ಮುಂತಾದ ಇತರ ಲೆಕ್ಕಪರಿಶೋಧನಾ ಅವಲೋಕನಗಳಿಗೆ ಯಾವುದೇ ಪ್ರತಿಕ್ರಿಯೆ ಇರಲಿಲ್ಲ.

### 6.7 ಸಾರ್ವಜನಿಕ ತನಿಖಾಧಿಕಾರಿ

ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದ ಕುಂದುಕೊರತೆಗಳ ತ್ವರಿತ ಪರಿಹಾರಕ್ಕಾಗಿ ರಾಜ್ಯ ಸರ್ಕಾರವು ಎಲ್ಲಾ ಜಿಲ್ಲೆಗಳಲ್ಲಿ ಸಾರ್ವಜನಿಕ ತನಿಖಾಧಿಕಾರಿ ಕಛೇರಿಯನ್ನು ಸ್ಥಾಪಿಸಬೇಕು ಎಂದು ಕಾರ್ಯಾಚರಣಾ ಮಾರ್ಗಸೂಚಿಗಳು, 2013ರ ಕಂಡಿಕೆ–13.14 ಕಡ್ಡಾಯಗೊಳಿಸಿದೆ.

2019–20ರಿಂದ 2023–24ರ ಅವಧಿಯಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಸಾರ್ವಜನಿಕ ತನಿಖಾಧಿಕಾರಿಗಳನ್ನು ನೇಮಕ ಮಾಡಲಾಗಿದೆ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆದರೆ, ಈ ಕೆಳಗಿನ ನ್ಯೂನತೆಗಳಿಂದ ಕುಂದುಕೊರತೆಗಳ ಪರಿಹಾರವನ್ನು ತ್ವರಿತಗೊಳಿಸುವ ಉದ್ದೇಶವನ್ನು ಸೋಲಿಸಿದಂತಾಯಿತು:

- 10 ಮಾರ್ಚ್ 2017ರ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಆದೇಶದ ಪ್ರಕಾರ, ಎಂಜಿಎನ್ಆರ್ ಇಜಿಎಸ್ ಕಾರ್ಮಿಕರು ಮತ್ತು ಇತರರಿಂದ ದೂರು ಸ್ವೀಕರಿಸಲು ಮತ್ತು ಅಂತಹ ದೂರುಗಳನ್ನು ಪರಿಗಣಿಸಲು ಮತ್ತು ದೂರುಗಳನ್ನು ಸ್ವೀಕರಿಸಿದ ದಿನಾಂಕದಿಂದ 30 ದಿನಗಳೊಳಗೆ ಐತೀರ್ಪುಗಳನ್ನು ಹೊರಡಿಸುವ ಅಧಿಕಾರವನ್ನು ಸಾರ್ವಜನಿಕ ತನಿಖಾಧಿಕಾರಿ ಹೊಂದಿರುತ್ತಾರೆ.

  2023–24ನೇ ಸಾಲಿನ ವಾರ್ಷಿಕ ಪ್ರಗತಿ ವರದಿಯ ಪ್ರಕಾರ, ರಾಜ್ಯದಲ್ಲಿ ಸಾರ್ವಜನಿಕ ತನಿಖಾಧಿಕಾರಿಗಳು 2,715 ದೂರುಗಳನ್ನು ಇತ್ಯರ್ಥ ಮಾಡಬೇಕಾಗಿತ್ತು. ಅದಕ್ಕೆ ಪ್ರತಿಯಾಗಿ, 1,118 ದೂರುಗಳನ್ನು ವಿಲೇವಾರಿ ಮಾಡಲಾಗಿತ್ತು ಮತ್ತು 1,597 ದೂರುಗಳು (ಶೇಕಡಾ 59) ಬಾಕಿ ಉಳಿದಿದ್ದವು (ಜುಲೈ 2024). ಶಿವಮೊಗ್ಗ ಹೊರತುಪಡಿಸಿ ಪರೀಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ 2,255 ದೂರುಗಳ ಪೈಕಿ 362[48] (ಶೇಕಡಾ 17) ದೂರುಗಳು ಬಾಕಿ ಉಳಿದಿದ್ದವು.

[48] ಕಾಲಬುರಗಿ – 63, ಕೊಪ್ಪಳ – 103, ಮಂಡ್ಯ – 63 ಮತ್ತು ತುಮಕೋರು – 133

ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ ಬಾಕಿ ಇರುವ 362 ದೂರುಗಳ ಪೈಕಿ 340 ದೂರುಗಳು (ಶೇಕಡಾ 94) ನಿಗದಿತ 30 ದಿನಗಳಿಗಿಂತ ಹೆಚ್ಚು ಕಾಲ ಬಾಕಿ ಉಳಿದಿದ್ದವು. ಅವುಗಳಲ್ಲಿ ಒಂದು ವರ್ಷಕ್ಕೂ ಹೆಚ್ಚು ಕಾಲ ಇತ್ಯರ್ಥಕ್ಕೆ ಬಾಕಿ ಉಳಿದಿದ್ದ 165 ದೂರುಗಳು (ಶೇಕಡಾ 46) ಸೇರಿದ್ದವು. ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ ₹476.19 ಲಕ್ಷದಲ್ಲಿ ₹386.60 ಲಕ್ಷ (81 ಶೇಕಡಾ) ಪ್ರಶಸ್ತಿ ಮೊತ್ತವನ್ನು ಇನ್ನೂ ವಸೂಲು ಮಾಡಬೇಕಿರುವುದರಿಂದ (ಮಾರ್ಚ್ 2024) ಸಾರ್ವಜನಿಕ ತನಿಖಾಧಿಕಾರಿ ಐತೀರ್ಪುಗಳ ಮೇಲೆ ಕೈಗೊಂಡ ಕ್ರಮವನ್ನು ಮೇಲ್ವಿಚಾರಣೆ ಮಾಡುವ ವ್ಯವಸ್ಥೆಯು ಪರಿಣಾಮಕಾರಿಯಾಗಿರಲಿಲ್ಲ. ಹೀಗೆ, ಕುಂದುಕೊರತೆಗಳ ಪರಿಹಾರವನ್ನು ತ್ವರಿತಗೊಳಿಸುವ ಉದ್ದೇಶವನ್ನು ಸಾಧಿಸಲಾಗಲಿಲ್ಲ.

- ಕಂಡಿಕೆ 13.4ರ ಪ್ರಕಾರ, ಸಾರ್ವಜನಿಕ ತನಿಖಾಧಿಕಾರಿ ಅವರ ಐತೀರ್ಪುಗಳಿಂದ ಬಾಧಿತರಾದ ಯಾವುದೇ ವ್ಯಕ್ತಿಗಳ ಪ್ರಕರಣವನ್ನು ಪರಿಗಣಿಸಲು ರಾಜ್ಯ ಸರ್ಕಾರವು ಮೂವರು ಸದಸ್ಯರ ಮೇಲ್ಮನವಿ ಪ್ರಾಧಿಕಾರವನ್ನು ಸ್ಥಾಪಿಸಬೇಕು. ಅಂತಹ ಪ್ರಕರಣಗಳನ್ನು ಮೇಲ್ಮನವಿ ಪ್ರಾಧಿಕಾರವು ಎರಡು ತಿಂಗಳ ಅವಧಿಯೊಳಗೆ ಇತ್ಯರ್ಥ ಮಾಡಬೇಕು.

  2019–20ರಿಂದ 2023–24ರ ಅವಧಿಯಲ್ಲಿ ಸ್ವೀಕರಿಸಿದ 626 ಅರ್ಜಿಗಳಲ್ಲಿ (ಮೇಲ್ಮನವಿಗಳು) ಮೇಲ್ಮನವಿ ಪ್ರಾಧಿಕಾರವು 208 ಪ್ರಕರಣಗಳನ್ನು ಇತ್ಯರ್ಥ ಮಾಡಿದ್ದರೆ, 418 ಪ್ರಕರಣಗಳು (ಶೇಕಡಾ 67) ಇತ್ಯರ್ಥಕ್ಕೆ ಬಾಕಿ ಉಳಿದಿದ್ದವು (ಸೆಪ್ಟೆಂಬರ್ 2024) ಎಂದು ಇಲಾಖೆ ಒದಗಿಸಿದ ಮಾಹಿತಿ ತಿಳಿಯಪಡಿಸಿತು. ಐದು ವರ್ಷಗಳ ಅವಧಿಯಲ್ಲಿ ಬಾಕಿ ಇರುವ ಅರ್ಜಿಗಳು (ಮೇಲ್ಮನವಿಗಳು) ಶೇಕಡಾ 16ರಿಂದ ಶೇಕಡಾ 83ರ ವ್ಯಾಪ್ತಿಯಲ್ಲಿದ್ದವು. ಇದರಿಂದಾಗಿ ಮೇಲ್ಮನವಿ ಪ್ರಾಧಿಕಾರವನ್ನು ಸ್ಥಾಪಿಸಿದ ಉದ್ದೇಶವನ್ನೇ ಸೋಲಿಸಲಾಯಿತು (**ಅನುಬಂಧ–6.11**).

- ಮಾರ್ಗದರ್ಶಿ ಸೂತ್ರಗಳ ಪ್ರಕಾರ, ಎಂ.ಜಿ.ಎನ್.ಆರ್.ಇ.ಜಿ.ಎಸ್‌ಗೆ ಸಂಬಂಧಿತ ದಾಖಲೆಗಳನ್ನು ಎಂಐಎಸ್ ಮಾಡ್ಯೂಲ್ ಗಳಲ್ಲಿ (ವರದಿ ಸಂಖ್ಯೆ ಆರ್20–ಒಂಬುಡ್ಸ್ ಪರ್ಸನ್ ವರದಿ) ಅಪ್ ಲೋಡ್ ಮಾಡುವುದು ಮತ್ತು ಅವು ಸಾರ್ವಜನಿಕರಿಗೆ ಸುಲಭವಾಗಿ ಲಭ್ಯವಾಗುವಂತೆ ನೋಡಿಕೊಳ್ಳುವುದು ಸಾರ್ವಜನಿಕ ತನಿಖಾಧಿಕಾರಿಯ ಜವಾಬ್ದಾರಿಯಾಗಿತ್ತು. ಆದೇಶಗಳ ವಿವರಗಳನ್ನು ಎಂ.ಜಿ.ಎನ್.ಆರ್.ಇ.ಜಿ.ಎಸ್ ವೆಬ್ ಸೈಟಿನಲ್ಲಿ ಸಹ ಹಾಕಬೇಕಾಗಿತ್ತು.

  ಆದಾಗ್ಯೂ, ರಾಜ್ಯದ ಯಾವುದೇ ಸಾರ್ವಜನಿಕ ತನಿಖಾಧಿಕಾರಿ ಎಂಐಎಸ್ ನಲ್ಲಿ ಅಗತ್ಯ ವಿವರಗಳನ್ನು ಅಪ್ ಲೋಡ್ ಮಾಡಿರಲಿಲ್ಲವೆಂಬುದನ್ನು ಗಮನಿಸಲಾಯಿತು. ಸಕ್ರಿಯಗೊಳಿಸುವ ಮಾಡ್ಯೂಲ್ ಗಳ ಲಭ್ಯತೆಯ ಹೊರತಾಗಿಯೂ, ಮಾಹಿತಿಯನ್ನು ಸಕ್ರಿಯವಾಗಿ ಬಹಿರಂಗಪಡಿಸಲು ವಿಫಲವಾದದ್ದು, ಯೋಜನೆಯ ಅನುಷ್ಠಾನದಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ಖಚಿತಪಡಿಸುವ ಉದ್ದೇಶಗಳನ್ನು ವಿಫಲಗೊಳಿಸಿತು.

- ಸಾರ್ವಜನಿಕ ತನಿಖಾಧಿಕಾರಿ ಇತ್ಯರ್ಥಗೊಳಿಸಿದ ಪ್ರಕರಣಗಳ ಸಾರಾಂಶ ವರದಿ ಮತ್ತು ಐತೀರ್ಪಿನ ಮೇಲೆ ತೆಗೆದುಕೊಂಡ ಕ್ರಮವನ್ನು ರಾಜ್ಯ ನೋಡಲ್ ಇಲಾಖೆಯ ಕಾರ್ಯದರ್ಶಿ ತನ್ನ ಸಭೆಯಲ್ಲಿ ಎಸ್.ಇಜಿಸಿಗೆ ವರದಿ ಮಾಡಬೇಕು ಮತ್ತು ನೋಡಲ್ ಇಲಾಖೆಯ ವಾರ್ಷಿಕ ವರದಿಯ ಭಾಗವೂ ಆಗಿರಬೇಕು ಎಂದು ಒಂಬುಡ್ಸ್ ಪರ್ಸನ್ ಅವರಿಗೆ ನೀಡಿದ ಸೂಚನೆಯ ಕಂಡಿಕೆ 14.3 ಮತ್ತು 14.4ರಲ್ಲಿ ನಿರ್ದಿಷ್ಟಪಡಿಸಲಾಗಿದೆ.

  2019–20ರಿಂದ 2023–24 ರವರೆಗಿನ ಯಾವುದೇ ವರ್ಷಗಳಲ್ಲಿ ಸಾರ್ವಜನಿಕ ತನಿಖಾಧಿಕಾರಿ ಇತ್ಯರ್ಥಗೊಳಿಸಿದ ಪ್ರಕರಣಗಳ ಸಾರಾಂಶ ವರದಿ ಮತ್ತು ಐತೀರ್ಪಿನ ಮೇಲೆ ತೆಗೆದುಕೊಂಡ ಕ್ರಮವನ್ನು ಆರ್.ಡಿಪಿಆರ್ ಕಾರ್ಯದರ್ಶಿ ಎಸ್.ಇಜಿಸಿಗೆ ಸಲ್ಲಿಸಿರಲಿಲ್ಲ.

- ಸಮೀಕ್ಷೆ ನಡೆಸಿದ 400 ಫಲಾನುಭವಿಗಳ ಪೈಕಿ 260 ಫಲಾನುಭವಿಗಳಿಗೆ (ಶೇಕಡಾ 65) ಕುಂದುಕೊರತೆ ಪರಿಹಾರಕ್ಕಾಗಿ ಜಿಲ್ಲಾ ಮಟ್ಟದಲ್ಲಿ ಸಾರ್ವಜನಿಕ ತನಿಖಾಧಿಕಾರಿ ನೇಮಿಸಿರುವ ಬಗ್ಗೆ ತಿಳಿದಿರಲಿಲ್ಲ.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ಅವಲೋಕನಗಳನ್ನು ಒಪ್ಪಿಕೊಂಡಿತು ಮತ್ತು ದೂರುಗಳನ್ನು ವಿಲೇವಾರಿ ಮಾಡಲು ಮತ್ತು ಅಗತ್ಯ ಸಲ್ಲಿಕೆಗಳು/ವರದಿಗಳನ್ನು ಸಲ್ಲಿಸಲು ಅಗತ್ಯವಿರುವ ಸೂಚನೆಗಳನ್ನು ನೀಡಲಾಗುವುದು ಎಂದು ತಿಳಿಸಿತು (ಮೇ 20225).

## 6.8 ಕಾಮಗಾರಿಗಳ ಫಲಿತಾಂಶದ ದೃಷ್ಟಿಕೋನ

ಎಎಂಸಿ, 2019–20ರ ಕಂಡಿಕೆ–7.1.4 ಮತ್ತು 7.12.2ರ ಪ್ರಕಾರ, ಯಾವುದೇ ಕೆಲಸವನ್ನು ಅನುಮೋದನೆಗಾಗಿ ಗ್ರಾಮಸಭೆ/ವಾರ್ಡ್ ಸಭೆಯ ಮುಂದೆ ಇಡುವ ಮೊದಲು 'ನಿರೀಕ್ಷಿತ' ಫಲಿತಾಂಶಗಳನ್ನು ಅಳೆಯುವ ಮೂಲಕ ಪ್ರತಿ ಕೆಲಸದ ಉತ್ಪಾದಕತೆ/ಫಲಿತಾಂಶವನ್ನು ಕಟ್ಟುನಿಟ್ಟಾಗಿ ಮೇಲ್ವಿಚಾರಣೆ ಮಾಡಬೇಕು ಮತ್ತು ನೈಜ ಫಲಿತಾಂಶಗಳನ್ನು ಅಳೆಯದೆ ಮುಕ್ತಾಯಗೊಳಿಸಬಾರದು.

ಎಎಂಸಿಯ ನಿಬಂಧನೆಗಳಿಗೆ ಪ್ರತಿಯಾಗಿ, ಪರೀಕ್ಷಾ–ತನಿಖೆ ನಡೆಸಿದ ಯಾವುದೇ ಕಾಮಗಾರಿಗಳಲ್ಲಿ ನಿರೀಕ್ಷಿತ/ನೈಜ ಫಲಿತಾಂಶಗಳನ್ನು ಉಲ್ಲೇಖಿಸಿರಲಿಲ್ಲ. ತತ್ಪರಿಣಾಮವಾಗಿ, ಪಂಚಾಯಿತಿಗಳ ದಕ್ಷತೆ ಮತ್ತು ಗ್ರಾಮೀಣ ಆರ್ಥಿಕತೆ/ಪರಿಸರದ ಮೇಲೆ ಎಂ.ಜಿ.ಎನ್.ಆರ್.ಇ.ಜಿ.ಎಸ್‌ನ ದೀರ್ಘಕಾಲೀನ ಧನಾತ್ಮಕ ಪರಿಣಾಮಗಳನ್ನು ಅಳೆಯುವುದು ಕಾರ್ಯಸಾಧ್ಯವಾಗಲಿಲ್ಲ.

ಕಾಮಗಾರಿಗಳ ನಿರೀಕ್ಷಿತ/ನೈಜ ಫಲಿತಾಂಶಗಳನ್ನು ಒದಗಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ರಾಜ್ಯ ಸರ್ಕಾರ ತಿಳಿಸಿತು (ಮೇ 2025).

## 6.9 ಪರಿಣಾಮದ ಮೌಲ್ಯಮಾಪನ

ಎಂ.ಜಿ.ಎನ್.ಆರ್.ಇ.ಜಿ.ಎಸ್‌ನಲ್ಲಿ ತೊಡಗಿರುವ ಕಾರ್ಮಿಕರು ಹೆಚ್ಚಾಗಿ ಬಡವರಾಗಿದ್ದರು ಮತ್ತು ಎಂ.ಜಿ.ಎನ್.ಆರ್.ಇ.ಜಿ.ಎಸ್ ಗ್ರಾಮೀಣ ಜನರಿಗೆ ಕೃಷಿಯೇತರ ಋತುಗಳಲ್ಲಿ ಮತ್ತು ಬರದಂತಹ ನೈಸರ್ಗಿಕ ವಿಪತ್ತುಗಳಲ್ಲಿ ಆದಾಯವನ್ನು ಒದಗಿಸುವುದರಿಂದ ಹೆಚ್ಚಿನ ಮಹತ್ವವನ್ನು ಪಡೆದುಕೊಂಡಿತು. ಅಗತ್ಯವಿರುವ ಕುಟುಂಬಗಳು ಹಳ್ಳಿಯಲ್ಲಿ ಕನಿಷ್ಠ 100 ದಿನಗಳವರೆಗೆ ಉದ್ಯೋಗ ಪಡೆಯುವುದನ್ನು ಖಚಿತಪಡಿಸಿಕೊಳ್ಳುವ ಮೂಲಕ ಗ್ರಾಮೀಣ ಜನರ ಜೀವನದ ಗುಣಮಟ್ಟದಲ್ಲಿ ಗಮನಾರ್ಹ ಸುಧಾರಣೆಯನ್ನು ತರಲು ಎಂ.ಜಿ.ಎನ್.ಆರ್.ಇ.ಜಿ.ಎಸ್ ಅನ್ನು ವಿನ್ಯಾಸಗೊಳಿಸಲಾಗಿತ್ತು. ಈ ಕೆಳಗಿನ ವಿಶಾಲ ನಿಯತಾಂಕಗಳ ಮೇಲೆ ಮಾಡಲಾಯಿತು ವೈಯಕ್ತಿಕ ಕುಟುಂಬಗಳ ಮೇಲಿನ ಪರಿಣಾಮವನ್ನು ನಿರ್ಣಯಿಸುವ ಪ್ರಯತ್ನ ಮಾಡಲಾಯಿತು.:

- ವಲಸೆಯನ್ನು ತಪ್ಪಿಸುವುದು;
- ಈ ಹಿಂದೆ ಕುಟುಂಬಗಳು ಬಳಸುತ್ತಿದ್ದ ಅನಗತ್ಯ ಕೆಲಸಗಳನ್ನು ತ್ಯಜಿಸುವುದು;
- ಮಕ್ಕಳನ್ನು ಶಾಲೆಗೆ ಕಳುಹಿಸಲು ಹೆಚ್ಚಿದ ಅವಕಾಶಗಳು;
- ಗ್ರಾಮದಲ್ಲಿ ಉಪಯುಕ್ತ/ಬಾಳಿಕೆ ಬರುವ ಸ್ವತ್ತುಗಳ ಸೃಷ್ಟಿ; ಮತ್ತು
- ಜೀವನೋಪಾಯ ಮತ್ತು ಕುಟುಂಬದ ಆದಾಯದಲ್ಲಿ ಸುಧಾರಣೆ.

ಸಮೀಕ್ಷೆಯ ಸಮಯದಲ್ಲಿ ದೃಢೀಕರಿಸಿದಂತೆ ವೈಯಕ್ತಿಕ ಕುಟುಂಬಗಳ ಮೇಲೆ ಎಂಜಿಎನ್‌ಆರ್ ಇಜಿಎಸ್ ನ ಪ್ರಭಾವವನ್ನು **ನಕ್ಷೆ–6.2**ರಲ್ಲಿ ನೀಡಲಾಗಿದೆ.

**ನಕ್ಷೆ–6.2: ಎಂಜಿಎನ್ಆರ್ಇಜಿಎಸ್ ಪರಿಣಾಮದ ಮೌಲ್ಯಮಾಪನ**




**ಮೂಲ: ಫಲಾನುಭವಿಗಳ ಸಮೀಕ್ಷೆ**

ಯೋಜನೆಯ ಅತಿದೊಡ್ಡ ಸಕಾರಾತ್ಮಕ ಫಲಿತಾಂಶವೆಂದರೆ ವಲಸೆಯನ್ನು ಕಡಿಮೆ ಮಾಡುವುದು, ಏಕೆಂದರೆ ಕೆಲಸಕ್ಕಾಗಿ ಇತರ ಸ್ಥಳಗಳಿಗೆ ವಲಸೆ ಹೋಗುವುದನ್ನು ತಪ್ಪಿಸಲು ಈ ಯೋಜನೆಯು ಸಹಾಯ ಮಾಡಿದೆ ಎಂದು ಶೇಕಡಾ 75ರಷ್ಟು ಫಲಾನುಭವಿಗಳು ಭಾವಿಸಿದ್ದಾರೆ. ಈ ಯೋಜನೆಯು ಈ ಹಿಂದೆ ಕೈಗೊಂಡ ಅನಗತ್ಯ ಕೆಲಸಗಳನ್ನು ತ್ಯಜಿಸಲು ಸಹಾಯ ಮಾಡಿದೆ ಎಂದು ಶೇಕಡಾ 70ರಷ್ಟು ಫಲಾನುಭವಿಗಳು ತಿಳಿಸಿದರು ಮತ್ತು ಶೇಕಡಾ 66ರಷ್ಟು ಫಲಾನುಭವಿಗಳು ಈ ಯೋಜನೆಯು ಮನೆಯ ವಯಸ್ಕರಿಗೆ ಸಾಕಷ್ಟು ಉದ್ಯೋಗವನ್ನು ಒದಗಿಸಿದೆ ಎಂದು ಮಾಹಿತಿ ನೀಡಿದ್ದರು. ಇದು ಮಕ್ಕಳನ್ನು ಕೆಲಸದಲ್ಲಿ ತೊಡಗಿಸಿಕೊಳ್ಳುವುದನ್ನು ತಪ್ಪಿಸಿ ಶಾಲೆಗೆ ಹೋಗಲು ಅನುವು ಮಾಡಿಕೊಟ್ಟಿದೆ.

ಆದರೆ, ಗ್ರಾಮೀಣ ಕುಟುಂಬಗಳ ಜೀವನೋಪಾಯವನ್ನು ಸುಧಾರಿಸುವ ಮತ್ತು ಉಪಯುಕ್ತ/ಬಾಳಿಕೆ ಬರುವ ಸ್ವತ್ತುಗಳನ್ನು ರಚಿಸುವ ತನ್ನ ಮುಖ್ಯ ಗುರಿಗಳನ್ನು ಸಾಧಿಸುವಲ್ಲಿ ಈ ಯೋಜನೆಯು ಹಿಂದುಳಿದಿತ್ತು ಎಂದು ಸಮೀಕ್ಷೆಯು ತೋರಿಸಿತು. ಸಮೀಕ್ಷೆಯ ಪ್ರಕಾರ, ಕೇವಲ ಶೇಕಡಾ 7ರಷ್ಟು ಫಲಾನುಭವಿಗಳು ಜೀವನೋಪಾಯ/ಕುಟುಂಬದ ಆದಾಯದಲ್ಲಿ ಗಮನಾರ್ಹ ಸುಧಾರಣೆಯನ್ನು ಅನುಭವಿಸಿದ್ದರೆ, ಕೇವಲ ಶೇಕಡಾ 9ರಷ್ಟು ಫಲಾನುಭವಿಗಳು ಎಂ.ಜಿ.ಎನ್.ಆರ್.ಇ.ಜಿ.ಎಸ್ ಹೆಚ್ಚಿನ ಪ್ರಮಾಣದಲ್ಲಿ ಉಪಯುಕ್ತ/ಬಾಳಿಕೆ ಬರುವ ಸ್ವತ್ತುಗಳನ್ನು ಸೃಷ್ಟಿಸಲು ಕಾರಣವಾಗಿದೆ ಎಂದು ಮಾಹಿತಿ ನೀಡಿದ್ದರು.

ಪರಿಣಾಮದ ಮೌಲ್ಯಮಾಪನದಲ್ಲಿ ಕಂಡುಬಂದ ಸಮಸ್ಯೆಗಳನ್ನು ಸುಧಾರಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ರಾಜ್ಯ ಸರ್ಕಾರ ತಿಳಿಸಿತು (ಮೇ 2025).

### 6.10 ಇಲಾಖೆಯಿಂದ ಉತ್ತಮ ಉಪಕ್ರಮಗಳು

**ಯೋಜನೆ** –ರಾಜ್ಯ ಸರ್ಕಾರವು ಆಂತರಿಕವಾಗಿ ಒಂದು ಕಾರ್ಯಯೋಜನೆ ತಂತ್ರಾಂಶವನ್ನು (ಎಂಡ್ 2 ಎಂಡ್ ಕಾರ್ಯಯೋಜನೆ ಮಾಡ್ಯೂಲ್) ಅಭಿವೃದ್ಧಿಪಡಿಸಿತು, ಇದು ಬೇಡಿಕೆಯ ಅರ್ಜಿಗಳ ಸಂಖ್ಯೆಯನ್ನು ಮೇಲ್ವಿಚಾರಣೆ ಮಾಡಲು, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳಿಂದ ಕಾರ್ಯ ಯೋಜನೆಗಳ ಸಮಯೋಚಿತ ಅನುಮೋದನೆ, ಕಾಮಗಾರಿಗಳ ಪೂರ್ವ–ಮಾಪನವನ್ನು ಸೆರೆಹಿಡಿಯಲು ರಾಜ್ಯಕ್ಕೆ ಅನುವು ಮಾಡಿಕೊಟ್ಟಿದೆ. 2025–26ನೇ ಸಾಲಿನ ಕಾರ್ಯ ಯೋಜನೆಯನ್ನು ಈ ಮಾಡ್ಯೂಲ್ ಮೂಲಕ ಸಿದ್ಧಪಡಿಸಲಾಗಿದೆ.

**ಪಾರದರ್ಶಕತೆ ಮತ್ತು ಉತ್ತರದಾಯಿತ್ವ** –ಕಾರ್ಯಗತಗೊಳಿಸಿದ ಮತ್ತು ಸಾಮಗ್ರಿ ಪಾವತಿಗಾಗಿ ಬಾಕಿ ಉಳಿದಿರುವ ಎಲ್ಲಾ ಕಾಮಗಾರಿಗಳ ತಪಾಸಣಾ ವರದಿಗಳನ್ನು ದಾಖಲಿಸಲು ರಾಜ್ಯವು ಆಂತರಿಕ ತಾಕ್ಷಣಿಕ ತಂತ್ರಾಂಶವನ್ನು ಅಭಿವೃದ್ಧಿಪಡಿಸಿದೆ. ಹೊಸ ವ್ಯವಸ್ಥೆಯು 01.01.2024ರಿಂದ ಕಾರ್ಯನಿರ್ವಹಿಸುತ್ತಿದೆ ಮತ್ತು ಇದು (i) ಸಾಮಾಜಿಕ ಲೆಕ್ಕಪರಿಶೋಧನೆಗೆ ದಾಖಲೆಗಳನ್ನು ಹಾಜರುಪಡಿಸದಿರುವುದನ್ನು ಪರಿಹರಿಸುವುದು (ii) ಸಾಮಗ್ರಿ ನಿಧಿಗಳ ಸಮಾನ ವಿತರಣೆಯನ್ನು ಖಚಿತ ಪಡಿಸುವುದು ಮತ್ತು (iii)

ಹೆಚ್ಚು ಪರಿಣಾಮಕಾರಿ ಅನುಷ್ಠಾನ ಮತ್ತು ನಿಧಿಗಳ ಉತ್ತಮ ಬಳಕೆಯ ಮೇಲೆ ಸಕಾರಾತ್ಮಕ ಪರಿಣಾಮಗಳನ್ನು ತೋರಿಸಿದೆ.

**ಮಸ್ಟರ್ ರೋಲ್ ಗಳು** – ರಾಜ್ಯವು 01.08.2024ರಿಂದ ಪ್ರಾಯೋಗಿಕ ಆಧಾರದ ಮೇಲೆ ರಾಷ್ಟ್ರೀಯ ಸಂಚಾರಿ ಮೇಲ್ವಿಚಾರಣಾ ವ್ಯವಸ್ಥೆ (ಎನ್ಎಂಎಂಎಸ್) ಫೋಟೋ ಲೆಕ್ಕಪರಿಶೋಧನೆಯನ್ನು ಜಾರಿಗೆ ತಂದಿತು, ಇದರಲ್ಲಿ ಛಾಯಾಚಿತ್ರಗಳನ್ನು ರಾಜ್ಯ ಸ್ಥಳೀಯ ಸರ್ವರ್ನಲ್ಲಿ ಬ್ಯಾಕಪ್ ಮಾಡಲಾಗುತ್ತಿತ್ತು ಮತ್ತು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಛಾಯಾಚಿತ್ರಗಳನ್ನು ಲೆಕ್ಕಪರಿಶೋಧನೆ ಮಾಡಲು ಮೀಸಲಾದ ಸಿಬ್ಬಂದಿ ಇದ್ದರು. ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳು ಮತ್ತು ಇತರ ಅನುಷ್ಠಾನ ಏಜೆನ್ಸಿಗಳು ಫ್ಲ್ಯಾಗ್ ಮಾಡಿದ ಎನ್.ಎಂ.ಆರ್.ಗಳಿಗೆ ಪ್ರತಿಕ್ರಿಯೆ ನೀಡಲು ಸೌಲಭ್ಯವನ್ನು ಒದಗಿಸಲಾಗಿದೆ. ಇದು ಉತ್ತರದಾಯಿತ್ವವನ್ನು ಹೆಚ್ಚಿಸಲು ಮತ್ತು ಪ್ರಕ್ರಿಯೆಗಳನ್ನು ಸುವ್ಯವಸ್ಥಿತಗೊಳಿಸಲು ಸಹಾಯ ಮಾಡಿದೆ.

**ಬೆಂಗಳೂರು**

02 FEB 2026

**(ಅಶೋಕ್ ಸಿನ್ಹಾ)**

**ಪ್ರಧಾನ ಮಹಾಲೇಖಾಪಾಲರು (ಲೆಕ್ಕಪರಿಶಧನೆ–II),**

**ಕರ್ನಾಟಕ**

**ಮೇಲುರುಜು ಮಾಡಲಾಗಿದೆ**

ನವದೆಹಲಿ

19 FEB 2026

**(ಕೆ. ಸಂಜಯ ಮೂರ್ತಿ)**

**ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು**

# ಅನುಬಂಧಗಳು

**ಅನುಬಂಧ–1.1**

**(ಕಂಡಿಕ 1.3ರಲ್ಲಿ ಉಲ್ಲೇಖಿಸಲಾಗಿದೆ)**

**ಎಂಜಿಎನ್‌ಆರ್‌ಇಜಿಎಸ್ ಅನುಷ್ಠಾನಕ್ಕಾಗಿ ವಿವಿಧ ಹಂತಗಳಲ್ಲಿ ಸಾಂಸ್ಥಿಕ ಕಾರ್ಯವಿಧಾನ ಮತ್ತು ಪಾತ್ರಗಳು ಮತ್ತು ಜವಾಬ್ದಾರಿಗಳು**

| ಹಂತ | ನಿಯೋಜಿತ ಅಧಿಕಾರಿಗಳು | ಪಾತ್ರಗಳು ಮತ್ತು ಜವಾಬ್ದಾರಿಗಳು |
|---|---|---|
| ರಾಜ್ಯ | ಅಪರ ಮುಖ್ಯ ಕಾರ್ಯದರ್ಶಿ (ಎಸಿಎಸ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ (ಆರ್ ಡಿಪಿಆರ್) ಇಲಾಖೆ | ರಾಜ್ಯ ಕಾರ್ಯಕ್ರಮ ಸಂಯೋಜಕರಿಗೆ (ಎಸ್ ಪಿಸಿ) ಮಾರ್ಗದರ್ಶನ ಮತ್ತು ಬೆಂಬಲವನ್ನು ಒದಗಿಸುತ್ತಾರೆ, ನಿಯಮಗಳು, ಯೋಜನೆಗಳನ್ನು ರೂಪಿಸುತ್ತಾರೆ ಮತ್ತು ಯೋಜನೆಯನ್ನು ಕಾರ್ಯಗತಗೊಳಿಸುತ್ತಾರೆ. |
| | ಆಯುಕ್ತರು, ಎಂಜಿಎನ್‌ಆರ್‌ಇಜಿಎಸ್ ಎಸ್ ಪಿಸಿ ಯಾಗಿ ಕಾರ್ಯನಿರ್ವಹಿಸುತ್ತಾರೆ | ಯೋಜನೆಯ ಪರಿಣಾಮಕಾರಿ ಅನುಷ್ಠಾನ ಮತ್ತು ಒಟ್ಟಾರೆ ಪರಿಶೀಲನೆ ಮತ್ತು ಮೇಲ್ವಿಚಾರಣೆಗಾಗಿ ಜಿಲ್ಲಾ ಕಾರ್ಯಕ್ರಮ ಸಂಯೋಜಕರು (ಡಿಪಿಸಿ) ಮತ್ತು ಇತರ ಸಂಬಂಧಿ ಇಲಾಖೆಗಳೊಂದಿಗೆ ಸಮನ್ವಯ ಮಾಡುವುದು |
| | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಎಂಜಿಎನ್‌ಆರ್‌ಇಜಿಎಸ್ | ಯೋಜನೆಯ ಒಟ್ಟಾರೆ ಅನುಷ್ಠಾನ ಮತ್ತು ಮೇಲ್ವಿಚಾರಣೆಯಲ್ಲಿ ಆಯುಕ್ತರಿಗೆ ಸಹಾಯ ಮಾಡುವುದು. |
| ಜಿಲ್ಲೆ | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ), ಜಿಲ್ಲಾ ಪಂಚಾಯತ್, ಜಿಲ್ಲಾ ಕಾರ್ಯಕ್ರಮ ಸಂಯೋಜಕರಾಗಿ (ಡಿಪಿಸಿ) ನೇಮಿಸಲಾಗಿದೆ | ಜಿಲ್ಲೆಯಲ್ಲಿ ಯೋಜನೆಯ ಒಟ್ಟಾರೆ ಸಮನ್ವಯ ಮತ್ತು ಅನುಷ್ಠಾನಕ್ಕೆ ಜವಾಬ್ದಾರರಾಗಿರುತ್ತಾರೆ ಮತ್ತು ಕಾಯ್ದೆಯ ಪ್ರಕಾರ ಎಲ್ಲಾ ಶಾಸನಬದ್ಧ ಜವಾಬ್ದಾರಿಗಳನ್ನು ನಿರ್ವಹಿಸುತ್ತಾರೆ;<br>ಗ್ರಾಮ ಪಂಚಾಯಿತಿ ಮತ್ತು ಇತರ ಆಡಳಿತ ಇಲಾಖೆಗಳ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುತ್ತಾರೆ. |
| | ಉಪ ಕಾರ್ಯದರ್ಶಿ, ಜಿಲ್ಲಾ ಪಂಚಾಯಿತಿ | ಯೋಜನೆಯ ಅನುಷ್ಠಾನದಲ್ಲಿ ಡಿಪಿಸಿಗೆ ಸಹಾಯ ಮಾಡುವುದು. ತಾಲ್ಲೂಕು ಪಂಚಾಯಿತಿ/ಗ್ರಾಮ ಪಂಚಾಯಿತಿ ಮತ್ತು ಹೊರಗುತ್ತಿಗೆ ಸಿಬ್ಬಂದಿಯ ಕಾರ್ಯಕ್ಷಮತೆಯನ್ನು ಪರಿಶೀಲಿಸುವುದು ಮತ್ತು ಆಯುಕ್ತರಿಗೆ ಸಾಪ್ತಾಹಿಕ ವರದಿಯನ್ನು ಸಲ್ಲಿಸುವುದು; ಪಾವತಿಗಳನ್ನು ಮಾಡಲು ಬ್ಯಾಂಕುಗಳು ಮತ್ತು ರಾಜ್ಯ ಸರ್ಕಾರಗಳ ನಡುವೆ ಸಮನ್ವಯ ಮತ್ತು ಯೋಜನೆಗೆ ಸಂಬಂಧಿಸಿದ ಯಾವುದೇ ಸಮಸ್ಯೆಯನ್ನು ಸಿಇಒ ಮತ್ತು ರಾಜ್ಯ ಸರ್ಕಾರದ ಮುಂದೆ ತರುವುದು |
| | ಅಪರ ಜಿಲ್ಲಾ ಕಾರ್ಯಕ್ರಮ ಸಂಯೋಜಕ (ಎಡಿಪಿಸಿ) | ಜಿಲ್ಲೆಯಲ್ಲಿ ಯೋಜನೆಯ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡುವಲ್ಲಿ ಸಿಇಒಗೆ ಸಹಾಯ ಮಾಡುವುದು;<br>ಕಾರ್ಯಯೋಜನೆ ಮತ್ತು ವಿವಿಧ ವರದಿಗಳನ್ನು ಸಿದ್ಧಪಡಿಸುವಲ್ಲಿ ಮತ್ತು ಸಮಯೋಚಿತವಾಗಿ ಸಲ್ಲಿಸುವಲ್ಲಿ ತಾಲೂಕು ಪಂಚಾಯಿತಿ/ಗ್ರಾಮ ಪಂಚಾಯಿತಿಯೊಂದಿಗೆ ಸಮನ್ವಯ ಸಾಧಿಸುವುದು;<br>ಸಿಇಒ ಮೂಲಕ ಜಿಲ್ಲಾ ಮಟ್ಟದಲ್ಲಿ ದೂರುಗಳನ್ನು ವಿಲೇವಾರಿ ಮಾಡುವ ಜವಾಬ್ದಾರಿ;<br>ಸಾಮಾಜಿಕ ಲೆಕ್ಕಪರಿಶೋಧನಾ ವೇಳಾಪಟ್ಟಿಯನ್ನು ರೂಪಿಸುವಲ್ಲಿ ಮೇಲ್ವಿಚಾರಣೆ ಮತ್ತು ಸಮನ್ವಯ, ಜಿಲ್ಲಾ ಗುಣಮಟ್ಟ ವ್ಯವಸ್ಥಾಪಕರು, ಜಿಲ್ಲಾ ಪಂಚಾಯಿತಿ ಲೋಕಪಾಲರು, ರಾಜ್ಯ ಲೋಕಪಾಲರು ಮತ್ತು ಮೇಲ್ಮನವಿ ಪ್ರಾಧಿಕಾರದ ವರದಿಗಳಲ್ಲಿ ಸೂಚಿಸಲಾದ ಸಾಮಾಜಿಕ ಲೆಕ್ಕಪರಿಶೋಧನಾ ಆಕ್ಷೇಪಣೆಗಳು ಮತ್ತು ವಸೂಲಾತಿಗಳಿಗೆ ಸಂಬಂಧಿಸಿದಂತೆ ತಾಲ್ಲೂಕು ತಾತ್ಕಾಲಿಕ ಸಮಿತಿಯು ಕೈಗೊಂಡ ಕ್ರಮಗಳ ಮೇಲ್ವಿಚಾರಣೆ ಮತ್ತು ಮೇಲ್ವಿಚಾರಣೆಯಲ್ಲಿ ಸಹಾಯ ಮಾಡುವುದು ಮತ್ತು ಅಗತ್ಯ ವರದಿಗಳನ್ನು ಆಯುಕ್ತರಿಗೆ ಸಲ್ಲಿಸುವುದು |
| ಬ್ಲಾಕ್/ ತಾಲೂಕು | ಕಾರ್ಯಕ್ರಮ ಅಧಿಕಾರಿ (ಪಿಒ) ಎಂದು ನಿಯೋಜಿಸಲಾದ ಕಾರ್ಯನಿರ್ವಾಹಕ ಅಧಿಕಾರಿ, ಟಿಪಿ | ಬ್ಲಾಕ್ ಮಟ್ಟದಲ್ಲಿ ಯೋಜನೆಯ ಪರಿಣಾಮಕಾರಿ ಅನುಷ್ಠಾನವನ್ನು ಖಚಿತಪಡಿಸುವುದು; ಕೆಲಸದೊಂದಿಗೆ ಬೇಡಿಕೆಯನ್ನು ಹೊಂದಿಸುವ ಜವಾಬ್ದಾರಿ ಮತ್ತು ಎಡಿಪಿಸಿಯೊಂದಿಗೆ ಸಮನ್ವಯ ಸಾಧಿಸುವುದು ಹಾಗೂ ಕಾರ್ಮಿಕ ಆಯವ್ಯಯ ದತ್ತಾಂಶವನ್ನು ಕ್ರೋಢೀಕರಿಸುವುದು; ವೇತನದ ಸಮಯೋಚಿತ ಮತ್ತು ಸಾಪ್ತಾಹಿಕ ಪಾವತಿಯನ್ನು ಖಚಿತಪಡಿಸಿಕೊಳ್ಳುವುದು;<br>ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಎಂಜಿನಿಯರ್ ಗಳು, ನಿರ್ವಹಣಾ ಮಾಹಿತಿ ವ್ಯವಸ್ಥೆ (ಎಂಐಎಸ್) ಸಂಯೋಜಕರು, ತಾಲ್ಲೂಕು ಸಹಾಯಕ ನಿರ್ದೇಶಕರೊಂದಿಗೆ ಸಾಪ್ತಾಹಿಕ ಪರಿಶೀಲನಾ ಸಭೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳುವುದು; |

| ಹಂತ | ನಿಯೋಜಿತ ಅಧಿಕಾರಿಗಳು | ಪಾತ್ರಗಳು ಮತ್ತು ಜವಾಬ್ದಾರಿಗಳು |
|---|---|---|
| | | ಗ್ರಾಮ ಪಂಚಾಯಿತಿಯಲ್ಲಿ ಕಾಮಗಾರಿಗಳ ಮಾಸಿಕ ಪರಿಶೀಲನೆ. |
| | ಸಹಾಯಕ ನಿರ್ದೇಶಕ (ಎಡಿ) | ಯೋಜನೆಯ ಅನುಷ್ಠಾನದ ಪೂರ್ಣ ಸಮಯದ ಪರಿಶೀಲನೆಯಲ್ಲಿ ಪಿಒಗೆ ಸಹಾಯ ಮಾಡುವುದು;<br>ಮಸ್ಟರ್ ರೋಲ್ ಗಳ ಮೇಲ್ವಿಚಾರಣೆ ಮತ್ತು ತಯಾರಿಕೆ ಮತ್ತು ಸಾಪ್ತಾಹಿಕ ವೇತನ ಪಾವತಿಯನ್ನು ಖಚಿತಪಡಿಸುವುದು;<br>ತಾಂತ್ರಿಕ ಸಂಯೋಜಕರೊಂದಿಗೆ ಕೆಲಸಗಳ ಮಾಪನ, ಕೆಲಸದ ಆದೇಶಗಳು, ವೇತನ ಆದೇಶಗಳು, ನಾಮಮಾತ್ರದ ಮಸ್ಟರ್ ರೋಲ್ ಗಳು (ಎನ್ಎಮ್ಆರ್) ಇತ್ಯಾದಿಗಳನ್ನು ಎಮ್ಐಎಸ್‌ನಲ್ಲಿ ಅಪ್ ಲೋಡ್ ಮಾಡುವುದು ಮತ್ತು ಮಾಸಿಕ 10 ಗ್ರಾಮ ಪಂಚಾಯಿತಿಗಳ ಕಾಮಗಾರಿಗಳ ಕಡತಗಳ ಪರಿಶೀಲನೆ |
| ಗ್ರಾಮ ಪಂಚಾಯಿತಿ (ಜಿಪಿ) | ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಪಿಡಿಒ), ಗ್ರಾಮ ಪಂಚಾಯಿತಿ | ಕಾರ್ಮಿಕ ಬಜೆಟ್ ಮತ್ತು ವಾರ್ಷಿಕ ಕಾರ್ಯ ಯೋಜನೆಗಳನ್ನು ತಯಾರಿಸಲು ಗ್ರಾಮ ಸಭೆ ಮತ್ತು ವಾರ್ಡ್ ಸಭೆಗಳನ್ನು ನಡೆಸುವುದು ಮತ್ತು ಅನುಮೋದನೆಗಾಗಿ ಕಾರ್ಯಕ್ರಮ ಅಧಿಕಾರಿಗೆ ಸಲ್ಲಿಸುವುದು ಸೇರಿದಂತೆ ಗ್ರಾಮ ಪಂಚಾಯಿತಿಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ಹೊಂದಿರುವುದು;<br>ಜಾಬ್ ಕಾರ್ಡ್ ಗಾಗಿ ಅರ್ಜಿಗಳನ್ನು ಸ್ವೀಕರಿಸುವುದು ಮತ್ತು ಅವುಗಳನ್ನು ನೀಡುವುದು;<br>ಎಲ್ಲಾ ಕೆಲಸದ ಬೇಡಿಕೆಗೆ ಇ–ಎನ್ಎಂಆರ್ ನೀಡುವುದು, ಎಂಐಎಸ್ ನಲ್ಲಿ ಅಪ್ ಲೋಡ್ ಮಾಡುವುದು, ಕಾಮಗಾರಿಯ ಪ್ರಗತಿಯ ಮೇಲ್ವಿಚಾರಣೆ ಮತ್ತು ಹಣ ವರ್ಗಾವಣೆ ಆದೇಶಗಳ (ಎಫ್ ಟಿಒಗಳು) ಉತ್ಪಾದನೆ;<br>ಕಾಮಗಾರಿ ಸ್ಥಳದಲ್ಲಿ ಮೂಲಭೂತ ಸೌಲಭ್ಯಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವುದು |
